50
ಸಂಚಿಕೆ

ಸಾಹಿತ್ಯ ದಾಸೋಹ – ೨೨೬

ಜುಲೈ 2024 08.06.2024ರ ದಾಸೋಹದ ಬರಹಗಳ ಸಂಕಲನ



ಎಚ್.ವಿ. ಗೋಪಿನಾಥ್ ಅವರ
ಹಾಸ್ಯ ಬರಹಗಳ ಕೃತಿ ಲೋಕಾರ್ಪಣೆ



ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಪುಟ ತೆರೆಯುವ ಮುನ್ನ . . .

ಆತ್ಮೀಯರೆ,

ಸಾಹಿತ್ಯ ದಾಸೋಹ 226ರ ಸಂಚಿಕೆಯನ್ನು ತಮಗೆ ಸಮರ್ಪಿಸುತ್ತಿದ್ದೇವೆ. ಇದು ಸಾಹಿತ್ಯ ದಾಸೋಹದ 50ನೆಯ ಸಂಚಿಕೆ ಎಂಬುದು ಹೆಮ್ಮೆಯ ವಿಷಯ. ನಮ್ಮ ಸಾಹಿತ್ಯ ದಾಸೋಹದ ಪರಂಪರೆ ಆರಂಭವಾಗಿ ಮುಂದಿನ ತಿಂಗಳಿಗೆ 25 ವರ್ಷಗಳಾಗಲಿವೆ. ಆದರೆ ದಾಸೋಹದಲ್ಲಿ ಪ್ರಸ್ತುತಪಡಿಸಿದ ಎಲ್ಲ ಬರಹಗಳು ಹಾಗೂ ಅಧ್ಯಕ್ಷರ ಅನಿಸಿಕೆಗಳನ್ನು ಪಿಡಿಎಫ್ ಪುಸ್ತಕ ರೂಪದಲ್ಲಿ ದಾಖಲಿಸಲು ನಾಲ್ಕು ವರ್ಷಗಳ ಹಿಂದೆ ಸ್ವಯಂಪ್ರೇರಿತರಾಗಿ ಆರಂಭಿಸಿದವರು ಶ್ರೀ ಎಚ್.ಎಲ್. ಗುರುಪ್ರಸಾದ್. ನಂತರ ಈ ಪರಂಪರೆಯನ್ನು ಮುಂದವರಿಸಿದವರು ಶ್ರೀ ಗುರುರಾಜ ಶಾಸ್ತ್ರಿ ಮತ್ತು ಶ್ರೀ ಎಸ್.ಶೃಂಗೇಶ್ವರ ಶರ್ಮ ಅವರು. ಅವರೆಲ್ಲರಿಗೂ ನಮ್ಮ ವಂದನೆಗಳು. ಸಾಹಿತ್ಯ ದಾಸೋಹದ ಎಲ್ಲ ಸಂಚಿಕೆಗಳೂ ನಮ್ಮ ವೇದಿಕೆಯ ಜಾಲತಾಣದಲ್ಲಿ ಲಭ್ಯವಿವೆ.

ದಾಸೋಹದ ಅಧ್ಯಕ್ಷತೆ ವಹಿಸಿ, ಪ್ರಸ್ತುತಪಡಿಸಿದ ಎಲ್ಲ ಲೇಖನಗಳ ಬಗ್ಗೆ ತಮ್ಮ ಅನಿಸಿಕೆಗಳನ್ನು ದಾಖಲಿಸಿದ ಶ್ರೀಮತಿ ಮಾನಸ ಕೆ.ಕೆ. ಅವರಿಗೂ, ಎಲ್ಲಾ ದಾಸೋಹಿಗಳಿಗೂ, ವೀಕ್ಷಕರಿಗೂ, ನಮ್ಮ ಎಲ್ಲ ಕಾರ್ಯಕ್ರಮಗಳನ್ನು ನಿರ್ವಹಿಸುವಲ್ಲಿ ಸಹಕರಿಸಿದ ಎಲ್ಲರಿಗೂ ವಂದನೆಗಳು.

ಸಂಚಾಲಕ ಸಮಿತಿ
ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ, ಬೆಂಗಳೂರು
14.06.2024

ದಾಸೋಹದ ಪುಟಗಳಲ್ಲಿ . . .

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ವೇದಿಕೆ

ಸಾಹಿತ್ಯ ದಾಸೋಹ – 226

ಕಾರ್ಯಕ್ರಮ ವರದಿ: ರಾಧಿಕಾ ವಿ. ಗುಜ್ಜರ್

08.06.2024, ಶನಿವಾರದಂದು ಇಳಿ ಮಧ್ಯಾಹ್ನ 3.40ಕ್ಕೆ ಸರಿಯಾಗಿ ಜೂನ್ ತಿಂಗಳ ನೋಡಿಯೋ ಸಾಹಿತ್ಯ ದಾಸೋಹ ಕಾರ್ಯಕ್ರಮವು ಗೂಗಲ್ ಮೀಟ್ ತಂತ್ರಜ್ಞಾನದ ಮುಖೇನ ಆರಂಭವಾಯಿತು.

ದಾಸೋಹದ ಸಾರಥ್ಯ ನಿರ್ವಹಿಸಿದ ಶ್ರೀ ಕೆ.ಎನ್.ಮಹಾಬಲ ಅವರು ಎಲ್ಲರಿಗೂ ಸ್ವಾಗತ ಕೋರಿ, ಸಾಹಿತ್ಯ ದಾಸೋಹದ ಅಧ್ಯಕ್ಷತೆ ವಹಿಸಿದ ಶ್ರೀಮತಿ. ಮಾನಸ. ಕೆ. ಕೆ. ಅವರ ಪರಿಚಯ ನೀಡಿದರು.

ಸಂಚಾಲಕ ಸಮಿತಿಯ ಪರವಾಗಿ ಪ್ರಾಸ್ತಾವಿಕ ಮಾತುಗಳನ್ನಾಡಿದ ಶ್ರೀ ಬೆಂ.ಶ್ರೀ.ರವೀಂದ್ರ ಅವರು–

- ಇಂದಿನ ಸಭೆಯು, ನೋಡಿಯೋ ಸಾಹಿತ್ಯ ದಾಸೋಹ ವೇದಿಕೆಯಲ್ಲಿ ಗೂಗಲ್ ಮೀಟ್ ಮೂಲಕ ನೆರವೇರುತ್ತಿರುವ 50ನೆಯ ಕಾರ್ಯಕ್ರಮ ಎಂದು ಹರ್ಷ ವ್ಯಕ್ತಪಡಿಸಿದರು.
- ಇದು ಶ್ರೀ.ಕೆ.ಎನ್.ಮಹಾಬಲ ಅವರ ಸಾರಥ್ಯದ 50ನೆಯ ಸಾಹಿತ್ಯ ದಾಸೋಹವೂ ಆಗಿದೆ. ಪ್ರತಿ ಬಾರಿಯೂ ಹೊಸ ಹೊಸ ಪ್ರತಿಭೆಗಳು ಸಾಹಿತ್ಯ ದಾಸೋಹದ ಅಧ್ಯಕ್ಷತೆ ವಹಿಸುತ್ತಿರುವುದು ಹೆಮ್ಮೆಯ ವಿಷಯ ಎಂದು ಹೇಳಿ. ಅದಕ್ಕಾಗಿ ಶ್ರಮಿಸುತ್ತಿರುವ ಶ್ರೀ ಮಹಾಬಲರ ಪ್ರಯತ್ನ ಗಳನ್ನು ಶ್ಲಾಘಿಸಿದರು.



- ಮೇ ತಿಂಗಳಿನಲ್ಲಿ ನಡೆದ 'ಎಚ್ಚೆಸ್ಕೆ ಬೆಳಕು–9' ಕಾರ್ಯಕ್ರಮವನ್ನು ಯಶಸ್ವಿಯಾಗಿಸಿದ ಎಲ್ಲರಿಗೂ ಧನ್ಯವಾದಗಳನ್ನು ಸಮರ್ಪಿಸಿದರು.
- ವೇದಿಕೆಯು ಮುಂಬರುವ ದಿನಗಳಲ್ಲಿ ಹಮ್ಮಿಕೊಂಡಿರುವ ವಿವಿಧ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿ, ಜೂನ್ 29ರಂದು ವೇದಿಕೆಯ ಹಿರಿಯ ಲೇಖಕ ಶ್ರೀ ಎಚ್.ವಿ. ಗೋಪಿನಾಥ್ ಅವರ ಹಾಸ್ಯ ಬರಹಗಳ ಸಂಕಲನ ಹಾಗೂ ಜುಲೈಯಲ್ಲಿ ಶ್ರೀಮತಿ ಜಿ.ವಿ.ನಿರ್ಮಲ ಮತ್ತು ಶ್ರೀಮತಿ ಸುಧಾ ಅವರ ವಿವಿಧ ಬರಹಗಳ ಸಂಕಲನ ಲೋಕಾರ್ಪಣೆ ಗೊಳ್ಳಲಿದೆ. ಶ್ರೀ ಗುರುರಾಜ ಶಾಸ್ತ್ರಿಯವರು ಸಣ್ಣ ಕಥಾ ಶ್ರಾವಣದ ಕಥೆಗಳ ಸಂಕಲನದ ಪ್ರಕಟಣೆಯ ತಯಾರಿ ನಡೆಸಿದ್ದು, ಈ ಕೃತಿಯೂ ಸದ್ಯದಲ್ಲಿಯೇ ಬಿಡುಗಡೆಯಾಗಲಿದೆ ಎಂದರು.
- ಆರ್ಯಭಟ ಪ್ರಶಸ್ತಿ ಪಡೆದ ನಮ್ಮ ವೇದಿಕೆಯ ಸದಸ್ಯೆ ಶ್ರೀಮತಿ ಸತ್ಯವತಿ ಮೂರ್ತಿ ಅವರನ್ನು ಅಭಿನಂದಿಸಿದರು.

ಶ್ರೀ ಶೃಂಗೇಶ್ವರ ಶರ್ಮ ಅವರು ರೂಪಿಸಿದ ಮೇ ತಿಂಗಳ ಸಾಹಿತ್ಯ ದಾಸೋಹ–225ರ ಪಿಡಿಎಫ್ ಸಂಚಿಕೆಯ ಸಾಂಕೇತಿಕ ಬಿಡುಗಡೆಯನ್ನು ಶ್ರೀ ಗುರುರಾಜ ಶಾಸ್ತ್ರಿ ಅವರು ಸಂಪನ್ನಗೊಳಿಸಿದರು.

ಸಂಜೆ 4.05ಕ್ಕೆ ಸಾಹಿತ್ಯ ದಾಸೋಹದ ಪ್ರಸ್ತುತಿಗಳು ಆರಂಭವಾದವು. ಒಟ್ಟು 25 ಲೇಖಕರು ತಮ್ಮ ಸ್ವರಚಿತ ಬರಹಗಳ ಪ್ರಸ್ತುತಿಗಾಗಿ ಹೆಸರು ನೋಂದಾಯಿಸಿದ್ದು, ಆ ಪೈಕಿ 22 ದಾಸೋಹಿಗಳು ತಮ್ಮ ಪ್ರಸ್ತುತಿಗಳನ್ನು ವಾಚಿಸಿದರು.

ನಂತರ ಅಧ್ಯಕ್ಷರಾದ ಶ್ರೀಮತಿ ಮಾನಸ ಕೆ.ಕೆ. ಅವರು ಪ್ರತಿಯೊಂದು ಪ್ರಸ್ತುತಿಯ ಅವಲೋಕನವನ್ನು ಮಾಡಿ, ವಿವರವಾಗಿ ವಿಶ್ಲೇಷಿಸಿ, ತಮ್ಮ ಮೌಲಿಕ ಹಾಗೂ ಪ್ರೋತ್ಸಾಹದಾಯಕ ಅನಿಸಿಕೆಗಳನ್ನು ದಾಖಲಿಸಿ ಅಧ್ಯಕ್ಷ ಸ್ಥಾನದ ಜವಾಬ್ದಾರಿಗೆ ಸಂಪೂರ್ಣ ನ್ಯಾಯ ಒದಗಿಸಿದರು.

ಕೊನೆಯಲ್ಲಿ ಶ್ರೀಮತಿ ರಾಧಿಕಾ ವಿ. ಗುಜ್ಜರ್ ಅವರು ವಂದನಾರ್ಪಣೆ ಸಲ್ಲಿಸುವ ಮೂಲಕ ಜೂನ್ ತಿಂಗಳ ನೋಡಿಯೋ ಸಾಹಿತ್ಯ ದಾಸೋಹವು ಮುಕ್ತಾಯವಾಯಿತು.

ಸಾಹಿತ್ಯ ದಾಸೋಹ–225 ನಿರ್ವಹಿಸಿದವರು:

~ ಸಾಹಿತ್ಯ ದಾಸೋಹದ ಸಾರಥ್ಯ : ಕೆ. ಎನ್. ಮಹಾಬಲ
~ ಜಿ ಮೀಟ್ ಆತಿಥ್ಯ : ರಾಧಿಕಾ ವಿ ಗುಜ್ಜರ್
~ ವಿಡಿಯೋ ಮುದ್ರಣ : ಗುರುರಾಜ ಶಾಸ್ತ್ರಿ
~ ಸಾಹಿತ್ಯ ದಾಸೋಹ 225– ಮಾಸಿಕ ವಿದ್ಯುನ್ಮಾನ ಸಂಚಿಕೆ (ಪಿಡಿಎಫ್) : ಎಸ್. ಶೃಂಗೇಶ್ವರ ಶರ್ಮ

ದಾಸೋಹದ ಸಂಪೂರ್ಣ ಕಾರ್ಯಕ್ರಮವನ್ನು ವೇದಿಕೆಯ ಯುಟ್ಯೂಬ್ ಹಾಗೂ ಜಾಲತಾಣದಲ್ಲಿ ವೀಕ್ಷಿಸಬಹುದು.

***

ತಿಂಗಳ ಬೆಳಕು - 5

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ವೇದಿಕೆ

"ದಾಸ ಸಾಹಿತ್ಯ ಜ್ಞಾನನಿಧಿ ಅಂಬಾಬಾಯಿ"

ಉಪನ್ಯಾಸಕರು: ಡಾ. ಶಾಂತಾ ನಾಗರಾಜ್

ಕಾರ್ಯಕ್ರಮ ವರದಿ: ಹು.ವಾ. ಶ್ರೀಪ್ರಕಾಶ್

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ಆಶ್ರಯದಲ್ಲಿ ಐದನೆಯ 'ತಿಂಗಳ ಬೆಳಕು' ಕಾರ್ಯಕ್ರಮ ದಿನಾಂಕ 22, ಜೂನ್ 2024ರಂದು ಶನಿವಾರ ಸಂಜೆ 5.30ಕ್ಕೆ ಆರಂಭವಾಯಿತು. ನೋಡಿಯೋ ಸಾಹಿತ್ಯ ದಾಸೋಹ ಅಂತರ್ಜಾಲ ವೇದಿಕೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಾ. ಶಾಂತಾ ನಾಗರಾಜ್ ಅವರು 'ದಾಸ ಸಾಹಿತ್ಯ ಜ್ಞಾನನಿಧಿ ಅಂಬಾಬಾಯಿ' ಎಂಬ ವಿಷಯದ ಬಗ್ಗೆ ಮಾತನಾಡಿದರು.

'ತಿಂಗಳ ಬೆಳಕು' ಕಾರ್ಯಕ್ರಮದ ಸಂಚಾಲಕರಾದ ಶ್ರೀ ರವಿ ಕುಸುಬಿಯವರು ಪ್ರಾಸ್ತಾವಿಕ ಮಾತುಗಳನ್ನಾಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಶ್ರೀಮತಿ ರೇಣುಕಾ ದೇಸಾಯಿಯವರು ಎಲ್ಲರನ್ನೂ ಸ್ವಾಗತಿಸಿ, ಡಾ॥ ಶಾಂತಾ ನಾಗರಾಜ್‌ರವರನ್ನು ಪರಿಚಯಿಸಿದರು.



ನಂತರ ಮಾತನಾಡಿದ ಶಾಂತಾ ನಾಗರಾಜ್ ಅವರು ಇತಿಹಾಸದ ಪುಟ ಸೇರಿದ ತಮ್ಮ ದೊಡ್ಡಮ್ಮ ಅಂಬಾ ಬಾಯಿಯವರ ಬದುಕಿನ ರೋಚಕ ಕತೆ ಮತ್ತು ದಾಸ ಸಾಹಿತ್ಯಕ್ಕೆ ಅವರ ಕೊಡುಗೆಯನ್ನು ವೀಕ್ಷಕರ ಮುಂದೆ ತೆರೆದಿಟ್ಟರು.

ದಾಸ ಸಾಹಿತ್ಯ ಅಂದರೆ ದೇವರನಾಮಗಳು ಮತ್ತು ಇವು ಇರುವುದು ಹಾಡಿ ಜನಪ್ರಿಯಗೊಳಿಸಲು ಮಾತ್ರ ಎಂಬ ಭಾವನೆ ಇದೆ. ದೇವರನಾಮಗಳು ಓದುವ ಕವನ ಗಳಾಗಲು ಸಾಧ್ಯವಿದೆ. ದಾಸ ಸಾಹಿತ್ಯದ ಬಗ್ಗೆ ವಿವಿಧ ಕ್ಷೇತ್ರಗಳ ದೊಡ್ಡ ದೊಡ್ಡ ವಿದ್ವಾಂಸರು ಸಂಶೋಧನೆ ಮಾಡಿದ್ದಾರೆ. ಡಾ॥ ರಾ. ಸತ್ಯನಾರಾಯಣ ಎಂಬ ಸಂಸ್ಕೃತ ಸಂಗೀತ ವಿದ್ವಾಂಸರು ದಾಸ ಸಾಹಿತ್ಯಕ್ಕೆ ಪುರಂದರರ ಕೊಡುಗೆ ಬಗ್ಗೆ ಬರೆಯುತ್ತಾ, ಇವರ ಕೀರ್ತನೆಗಳು ಕನ್ನಡ ಭಾಷೆಯನ್ನು ರಾಜನ ಆಸ್ಥಾನದಿಂದ ಸಾಮಾನ್ಯರೆಡೆಗೆ ತಂದಿತು. ಹರಿದಾಸರು ಆಸ್ಥಾನ ಸಂಗೀತವನ್ನು ಸಾಮಾನ್ಯರೆಡೆಗೆ ತಂದು ಮನಸ್ಸಿನ ನೆಮ್ಮದಿಯನ್ನು ಭಗವಂತನ ಸ್ಮರಣೆಯಿಂದ ಹೇಗೆ ಪಡೆಯಬಹುದು ಎಂಬ ಅರಿವು ಮೂಡಿಸಿದ್ದಾರೆ. ವಚನ ಸಾಹಿತ್ಯ ಹೇಗೆ ವಿಶ್ವಸಂಸ್ಥೆಯಲ್ಲಿ

ಪ್ರಸಿದ್ಧವಾಗಿದೆಯೋ ಹಾಗೆಯೇ ಹರಿದಾಸ ಸಾಹಿತ್ಯವೂ ಎಲ್ಲರನ್ನೂ ಮುಟ್ಟಬೇಕಾಗಿದೆ ಎನ್ನುತ್ತಾ ಶ್ರೀಮತಿ ಶಾಂತಾ ನಾಗರಾಜ್ ಅವರು ತಮ್ಮ ಉಪನ್ಯಾಸವನ್ನು ಆರಂಭಿಸಿದರು.



ಡಾ. ಶಾಂತಾ ನಾಗರಾಜ್

ಎಂ.ಎ., ಪಿಹೆಚ್‌ಡಿ ಪದವಿಗೆ ಪಾತ್ರರಾಗಿರುವ ಡಾ.ಶಾಂತಾ ನಾಗರಾಜ್, ಹರಿದಾಸಿನಿ, ಜ್ಞಾನನಿಧಿ ಅಂಬಾಬಾಯಿಯವರ ಜೀವನ ಚರಿತ್ರೆಯ ಬಗ್ಗೆ ಮಹಾ ಪ್ರಬಂಧ ರಚಿಸಿ ಡಾಕ್ಟರೇಟ್ ಗಳಿಸಿದ್ದಾರೆ. ಪ್ರಸನ್ನ ಆಪ್ತ ಸಲಹಾ ಕೇಂದ್ರದಲ್ಲಿ ಕೌನ್ಸೆಲಿಂಗ್ ತರಬೇತಿ ಕೋರ್ಸ್ ಮತ್ತು ನಿಮ್ಹಾನ್ಸ್‌ನ ಸೈಕಿಯಾಟ್ರಿ ಸೋಷಿಯಲ್ ವಿಭಾಗದಿಂದ ಎರಡು ಅಡ್ವಾನ್ಸ್ ಕೋರ್ಸ್ ಮಾಡಿದ್ದು, ಇಪ್ಪತ್ತೈದು ವರ್ಷಗಳಿಂದ ಆಪ್ತ ಸಲಹಾ ಕ್ಷೇತ್ರದಲ್ಲಿ ಉಚಿತ ಸೇವೆ ನೀಡುತ್ತಿದ್ದಾರೆ. ವೃತ್ತಿಯಲ್ಲಿ ಪದವಿ ಕಾಲೇಜಿನ ಉಪನ್ಯಾಸಕಿಯಾಗಿದ್ದು, ಹವ್ಯಾಸಿ ಪತ್ರಕರ್ತೆಯೂ ಆಗಿರುವ ಇವರು 'ಕುಮುದಾ' ಮಾಸಪತ್ರಿಕೆಯ ಸಂಪಾದಕಿಯಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ಸಾಹಿತ್ಯ ಕ್ಷೇತ್ರಕ್ಕೆ ಡಾ. ಶಾಂತಾ ನಾಗರಾಜ್ ಅವರ ಕೊಡುಗೆ ಅಪಾರ. 1963ರಿಂದ ಬರವಣಿಗೆ ಪ್ರಾರಂಭ. ಕಳೆದ ಅರವತ್ತು ವರ್ಷಗಳಲ್ಲಿ ಇವರ ಕಥೆ, ಕವನ, ಪ್ರವಾಸ ಕಥನಗಳು ಕನ್ನಡದ ಎಲ್ಲಾ ದಿನ, ವಾರ ಮತ್ತು ಮಾಸಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಈವರೆಗೆ ಇಪ್ಪತ್ತೆಂಟು ಪುಸ್ತಕಗಳು ಪ್ರಕಟವಾಗಿದ್ದು, ಮನೋವಿಜ್ಞಾನವನ್ನು ಆಧರಿಸಿ ರಚಿಸಿದ ಐದು ಪುಸ್ತಕಗಳಲ್ಲಿ ಮೂರು ಪುಸ್ತಕಗಳು ಏಳು ಬಾರಿ ಮರುಮುದ್ರಣಗೊಂಡಿವೆ. ಇವರು ಬರೆದ ಸಣ್ಣ ಕಥೆಯೊಂದು ಮಂಗಳೂರು ವಿಶ್ವವಿದ್ಯಾಲಯದ ಪದವಿ ತರಗತಿಯ ಪಠ್ಯದಲ್ಲಿ ಸೇರ್ಪಡೆಗೊಂಡಿದ್ದರೆ, 'ಸ್ವ ಉದ್ಯೋಗ ತೆರೆದ ಹೆಬ್ಬಾಗಿಲು' ಪುಸ್ತಕ ಕುವೆಂಪು ವಿಶ್ವವಿದ್ಯಾಲಯದ ಪದವಿ ತರಗತಿಗೆ ಹಾಗೂ ಇತರ ಕೆಲವು ಬರಹಗಳು ಮಂಗಳೂರು ಹಾಗೂ ಗುಲ್ಬರ್ಗಾ ವಿಶ್ವವಿದ್ಯಾಲಯಗಳಲ್ಲಿ ಪಠ್ಯವಾಗಿವೆ.

ಡಾ. ಶಾಂತಾ ನಾಗರಾಜ್ ಅವರ ಸೇವಾ ಮನೋಭಾವ ಹಾಗೂ ಬರಹಗಳಿಗಾಗಿ ಬಂದ ಪ್ರಶಸ್ತಿ ಪುರಸ್ಕಾರಗಳು, ಹಲವಾರು. 2011ರಲ್ಲಿ ಇವರ ಒಂದು ಅನುವಾದಿತ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ 'ವರ್ಷದ ಅತ್ಯುತ್ತಮ ಕೃತಿ' ಪುರಸ್ಕಾರ. 2013ರಲ್ಲಿ ಕರ್ನಾಟಕ ಲೇಖಕಿಯರ ಸಂಘದಿಂದ 'ವಿಶೇಷ ಲೇಖಕಿ' ಪುರಸ್ಕಾರ. 2015ರಲ್ಲಿ ಜೀವಮಾನ ಸಾಧನೆಗೆ ನೀಡುವ 'ಬನಶಂಕರಮ್ಮ ದತ್ತಿ ನಿಧಿ' ಬಹುಮಾನ. ಧವಳ ಮಹಿಳಾ ವೇದಿಕೆಯಿಂದ 'ನಾರೀರತ್ನ' ಪ್ರಶಸ್ತಿ. ಗುಣವೃತ್ತ ವೇದಿಕೆಯಿಂದ ಪ್ರಶಸ್ತಿಗಳು ಇವರಿಗೆ ಸಂದಿವೆ. ಹಲವು ಸಂಘ ಸಂಸ್ಥೆಗಳಿಂದ ಸನ್ಮಾನ, ಗೌರವಗಳಿಗೂ ಇವರು ಭಾಜನರಾಗಿದ್ದಾರೆ.

ಹೀಗೆ ಬಹುಮುಖ ಪ್ರತಿಭೆಯ ಡಾ. ಶಾಂತಾ ನಾಗರಾಜ್ ಅವರು ನಮ್ಮ ವೇದಿಕೆಯ 'ತಿಂಗಳ ಬೆಳಕು' ಕಾರ್ಯಕ್ರಮದಲ್ಲಿ ಪಾಲ್ಗೊಂಡು, 'ಹರಿದಾಸಿನಿ, ಜ್ಞಾನನಿಧಿ ಶ್ರೀಮತಿ ಅಂಬಾಬಾಯಿಯವರ ಬಗ್ಗೆ ಉಪನ್ಯಾಸ ನೀಡಲಿರುವುದು ಹೆಮ್ಮೆಯ ವಿಷಯ.

***

ಅಂಬಾಬಾಯಿಯವರು 1902ರಲ್ಲಿ ಬಡ ಕುಟುಂಬವೊಂದರಲ್ಲಿ ಜನಿಸಿದರು. ಮನೆಯಲ್ಲಿದ್ದ ಅಜ್ಜಿ ರುಕ್ಮಿಣಿಬಾಯಿ ಅವರಿಂದ ಬಾಲ್ಯದಲ್ಲೇ ದೇವರನಾಮಗಳನ್ನು ಕಲಿತರು. ಇವರಿಗೆ ಅಗಾಧ ಪ್ರತಿಭೆ, ಅಪಾರ ನೆನಪಿನ ಶಕ್ತಿ ಅನಕ್ಷರಸ್ಥ ಅಜ್ಜಿಯಿಂದ ಬಂದ ಬಳುವಳಿ. ಹಾಡಿನ ಅಜ್ಜಿ ಎಂದೇ ಖ್ಯಾತರಾದ ಅವರಿಗೆ ಸುಮಾರು 3500 ದೇವರನಾಮಗಳು ಬಾಯಿಪಾಠವಾಗಿದ್ದುವಂತೆ. ಅಂಬಾಬಾಯಿಗೆ ಕಂಠಸಿರಿ ಇತ್ತು, ಎಲ್ಲಾ ಹಾಡುಗಳೂ ಬರುತ್ತಿದ್ದವು.

ಹೆಣ್ಣುಮಕ್ಕಳಿಗೆ ಶಾಲೆಗಳು ನಿಷಿದ್ಧವಿದ್ದ ಆ ಕಾಲದಲ್ಲಿ ಅಂಬಾಬಾಯಿಯವರು ನಾಲ್ಕನೇ ತರಗತಿವರೆಗೆ ಓದಿದರು. ನಾಲ್ಕು ವರ್ಷಕ್ಕೇ ಕುಮಾರವ್ಯಾಸ ಭಾರತ ಓದುತ್ತಿದ್ದರು. ಮನೆಯಲ್ಲಿ ಸಾಹಿತ್ಯದ ವಾತಾವರಣವಿತ್ತು. ಕುಮಾರವ್ಯಾಸನಿಂದ ಪ್ರಭಾವಿತರಾಗಿ ಕುಸುಮ ಷಟ್ಪದಿಯಲ್ಲಿ ಬರೆಯತೊಡಗಿದರು.

ಆಗಿನ ಕಾಲದ ಪದ್ಧತಿಯಂತೆ ಅಂಬಾಬಾಯಿಯವರಿಗೆ ಬಾಲ್ಯವಿವಾಹ. ಹತ್ತನೇ ವರ್ಷದಲ್ಲಿ ಸಿರಿವಂತ ಕುಟುಂಬದ ಹನುಮಂತಾಚಾರ್ಯ ಎಂಬ ಹುಡುಗನ ಜೊತೆ ಮದುವೆ. 12ನೇ ವಯಸ್ಸಿನಲ್ಲಿ ಗರ್ಭಪಾತ. 13 ವರ್ಷ ತುಂಬುವುದರೊಳಗೆ ಪ್ಲೇಗ್ ಎಂಬ ಮಾರಣಾಂತಿಕ ಖಾಯಿಲೆಯಿಂದ ತಂದೆ ಮತ್ತು ಗಂಡ ಇಬ್ಬರೂ ತೀರಿಕೊಂಡರು. ನಂತರ ಅವರಿಗೆ ಅಂದಿನ ಕಾಲದ ಧೋರಣೆಯಂತೆ ಕೇಶಮುಂಡನ ಮಾಡಿ, ಕೆಂಪು ಸೀರೆ ಉಡಿಸಿ ತವರಿಗೆ ಕಳಿಸಲಾಯಿತು. ಮನೆಯ ಮೂಲೆಯಲ್ಲಿ ಇರಬೇಕಾಗಿತ್ತು. ವೈಧವ್ಯ ಪ್ರಾಪ್ತಿಯಾದರೂ ಕುಸಿಯದ ಅಂಬಾಬಾಯಿ ಯವರು ತಮ್ಮ 12ನೇ ವಯಸ್ಸಿನಿಂದ 29ನೇ ವಯಸ್ಸಿನವರೆಗೆ ಹೆಚ್ಚು ಹೆಚ್ಚು ಓದಿದರು. ಹತ್ತಿರದ ನೆಂಟರನ್ನೆಲ್ಲಾ ಚೆನ್ನಾಗಿ ಪರಿಚಯ ಮಾಡಿಕೊಂಡು ಅವರಿಗೆ ಉಪಕರಿಸುವಂತಹ ಕಾಯಕಗಳಿಗೆ ತಮ್ಮನ್ನು ಮೀಸಲಾಗಿರಿಸಿಕೊಂಡು ಜನಜನಿತರಾದರು. ಬಂಧುಗಳ ಮನೆಗಳಲ್ಲಿ ಬಾಣಂತನವೇ ಮುಂತಾದ ಚಾಕರಿ ಮಾಡುತ್ತಿದ್ದರು.

ಅಂಬಾಬಾಯಿಯವರು ಕ್ರಮೇಣ ಸಾಹಿತ್ಯ ಭಾಷೆಯನ್ನು ತಮ್ಮದಾಗಿಸಿಕೊಂಡರು. ಅವರ 29ನೇ ವಯಸ್ಸಿನಲ್ಲಿ ದೇವರಾಯನದುರ್ಗದ ದಾಸ ಶ್ರೇಷ್ಠ ಸುಬ್ರಾಯದಾಸರು ಈಕೆಯ ಮೊಗದ ಲಕ್ಷಣವನ್ನು ಕಂಡು ಅಂಕಿತ ಕೊಟ್ಟು ಬರೆಯಲು ಹೇಳಿದರು. ಈಕೆಗೆ ಧೈರ್ಯ ಬಂತು. ಗುರುಗಳಲ್ಲಿ ತಂದೆಯನ್ನೂ, ದೇವರನ್ನೂ ಕಂಡರು, ಗುರುಗಳ ಬಗ್ಗೆ ಹಲವು ದೇವರನಾಮಗಳನ್ನು ಬರೆದಿದ್ದಾರೆ. ಆರಂಭದಲ್ಲಿ ಅಂಜಿಕೆಯಿಂದಲೇ ಕೀರ್ತನೆಗಳನ್ನು ಬರೆದರು. ಇವರ ಭಾಷಾ ಸಂಪತ್ತು ಕಂಡ ಗುರುಗಳು ಆಶೀರ್ವದಿಸಿದರು. ಗುರುಗಳ ಮುಖಾಂತರ ಸಂಸ್ಕೃತ ಸಾಹಿತ್ಯವನ್ನು ಅರಿಯಲು ಸಾಧ್ಯವಾಯಿತು. ಗುರುಗಳ ಪ್ರವಚನಕ್ಕೆ ಇವರು ತಪ್ಪದೇ ಹೋಗುತ್ತಿದ್ದರು. ಗುರುಗಳು ಪಾರಮಾರ್ಥಿಕ ಚಂದ್ರೋದಯ ಎಂಬ ಮಾಸಪತ್ರಿಕೆ ಆರಂಭಿಸಿ ಪತ್ರಿಕೆಯನ್ನು ಮನೆಮನೆಗೆ ಕೊಂಡುಹೋಗಿ ಕೊಟ್ಟು ಜ್ಞಾನ ಪ್ರಸಾರ ಮಾಡುತ್ತಿದ್ದರು. ಅಂಬಾಬಾಯಿಯವರು ರಚಿಸಿದ ಹಲವು ಕೀರ್ತನೆಗಳು ಈ ಪತ್ರಿಕೆಯಲ್ಲಿ ಪ್ರಕಟವಾದವು.

ಅಂಬಾಬಾಯಿಯವರು ಅನೇಕ ಪ್ರಥಮಗಳಿಗೆ ನಾಂದಿ ಹಾಡಿದ್ದಾರೆ. ಇವರು ನಾನೂರಕ್ಕೂ ಹೆಚ್ಚು ದೇವರನಾಮ ಗಳನ್ನು ಬರೆದಿದ್ದು, ಇವರ ಕೀರ್ತನೆಗಳು ಅಕ್ಷರ ಮಾಧ್ಯಮದಲ್ಲಿ ಮುದ್ರಣವಾದವು.

1936ರಲ್ಲಿ ಕನ್ನಡದಲ್ಲಿ ಕುಸುಮ ಷಟ್ಪದಿಯಲ್ಲಿ ರಾಮಾಯಣ ಮಹಾಕಾವ್ಯ ಬರೆದ ಇವರನ್ನು ಮೊದಲ ಮಹಾಕವಿಯತ್ರಿ ಎನ್ನಬಹುದು. 1938ರಲ್ಲಿ ತಮ್ಮ 36ನೇ ವಯಸ್ಸಿನಲ್ಲಿ ಮೊಟ್ಟಮೊದಲು ಏಕಾಂಗಿಯಾಗಿ 88 ದಿನ ಹರಿದಾಸ ಕೀರ್ತನೆ ಹಾಡುತ್ತಾ ಊರೂರು ತಿರುಗಿ ಪ್ರಸಾರ ಮಾಡಿದರು. ಸಂಚಾರದ ವೇಳೆ ದೇವಸ್ಥಾನ ಜಗಲಿ ಮನೆ

ಎಲ್ಲೆಂದರಲ್ಲಿ ಇದ್ದು, ಪರಿಚಿತರ ಮನೆಗಳಿಗೆ ಹೋಗಿ ಕೀರ್ತನೆಗಳನ್ನು ಪ್ರಸಾರ ಮಾಡುತ್ತಾ ಹೋದರು. ತಮಗಾದ ಕಷ್ಟಗಳನ್ನು ಎಂದೂ ಹೇಳಿಕೊಳ್ಳಲಿಲ್ಲ. ಎಲ್ಲವೂ ಶ್ರೀಕೃಷ್ಣ ಚಿತ್ತ ಎಂದುಕೊಳ್ಳುತ್ತಿದ್ದರು.

ವಿಷ್ಣುತೀರ್ಥರೆಂಬ ಯತಿಗಳು ಮಧ್ವಾಚಾರ್ಯರ ಅಪ್ಪಣೆಯ ಮೇರೆಗೆ ಭಾಗವತ ಸಾರೋದ್ಧಾರವನ್ನು 500 ಶ್ಲೋಕ ಗಳಲ್ಲಿ ಚಿಕ್ಕದಾಗಿ ಬರೆದರು. ಗುರುಗಳು ಇದನ್ನು ಕನ್ನಡದಲ್ಲಿ ಪ್ರವಚನ ಮಾಡಿ ಅರ್ಥೈಸಿದಾಗ ಅಂಬಾಬಾಯಿಯವರು ಅದನ್ನು ಸಾಮಾನ್ಯರಿಗೂ ಅರ್ಥವಾಗುವ ಹಾಗೆ ಕನ್ನಡದಲ್ಲಿ ರಚಿಸಿದರು. ಇದು ಕನ್ನಡದಲ್ಲಿ ಬಂದ ಭಾಗವತ ಸಾರೋದ್ಧಾರದ ಪ್ರಥಮ ಪುಸ್ತಕ.

ಅಂಬಾಬಾಯಿಯವರು ಶ್ರೀನಿವಾಸ ಕಲ್ಯಾಣ, ಪ್ರಹ್ಲಾದ ಚರಿತ್ರೆ ಮುಂತಾದ ದೀರ್ಘ ಕೃತಿಗಳನ್ನು ಬರೆದಿದ್ದಾರೆ. ಆಗಿನ ಕಾಲದ ಇಷ್ಟವಾದ ಛಂದಸ್ಸು. ತ್ರಿಪದಿಗಳನ್ನು ಹಾಡುವುದು ಹೆಂಗಳೆಯರಿಗೆ ತುಂಬಾ ಪ್ರಿಯವಾಗಿತ್ತು.

ಅಂಬಾಬಾಯಿಯವರು ತಮ್ಮ ಪ್ರವಾಸದ ಡೈರಿ ಬರೆದಿದ್ದು, ಅದರಲ್ಲಿ ದಿನಾಂಕಗಳನ್ನು ಗುರುತು ಮಾಡಿದ್ದಾರೆ. ಹರಿದಾಸ ಸಂಘಗಳನ್ನು ಕಟ್ಟುತ್ತಾ ಹೋಗಿದ್ದಾರೆ. ಆಕೆಯ ಬದುಕು ರೋಚಕ. ಭಾಷೆಯ ಮೇಲಿನ ಹಿಡಿತ, ವಿಫುಲ ಪದ ಸಂಪತ್ತು, ಅಪಾರ ಪ್ರತಿಭೆ ಇದ್ದ ಇವರ ಕೃತಿಗಳು ಸುಲಲಿತವಾಗಿ ಓದಿಸಿಕೊಂಡು ಹೋಗುತ್ತವೆ. ಇವರಿಗೆ ಸಂಗೀತವೂ ಬರುತ್ತಿತ್ತು ಮತ್ತು ಅದು ಇವರಿಗೆ ಹೆಚ್ಚಿನ ಶಕ್ತಿ ಕೊಟ್ಟಿತು.

ಡಾ॥ ಸತ್ಯವತಿಯವರು ದೇಶ ವಿದೇಶಗಳಲ್ಲಿ ಅಂಬಾಬಾಯಿಯವರ ಕೀರ್ತನೆಗಳನ್ನು ಹಾಡಿದ್ದಾರೆ. ಇವರ ಬಗ್ಗೆ ಕಮ್ಮಟಗಳನ್ನು ಮಾಡುತ್ತಿದ್ದಾರೆ. ಹೀಗೆ ಅಂಬಾಬಾಯಿ ಇನ್ನೂ ಜನಮಾನಸದಲ್ಲಿ ಉಳಿದಿದ್ದಾರೆ.

ಹೀಗೆ ದಾಸ ಸಾಹಿತ್ಯ ಜ್ಞಾನನಿಧಿ ಅಂಬಾಬಾಯಿಯವರ ಬಗ್ಗೆ ಸಾಕಷ್ಟು ವಿಷಯ ತಿಳಿಸಿದ ಡಾ ಶಾಂತಾ ನಾಗರಾಜ್ ರವರು ತಮ್ಮ ಉಪನ್ಯಾಸವನ್ನು ಮುಕ್ತಾಯಗೊಳಿಸಿದ ನಂತರ ಸಭಿಕರೊಡನೆ ಸಂವಾದ ಕಾರ್ಯಕ್ರಮ ನಡೆಯಿತು.

ಕೊನೆಯಲ್ಲಿ ಶ್ರೀ ಹು ವಾ ಶ್ರೀಪ್ರಕಾಶ್‌ರವರು ವಂದನಾರ್ಪಣೆ ಮಾಡಿದರು

***



ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ವೇದಿಕೆ

ಗೋಪಿನಾಥ್ ಎಚ್.ವಿ. ಅವರ ಹಾಸ್ಯ ಕೃತಿ

'ಸಂಸಾರದಲ್ಲಿ ಸಿಹಿ ಕಹಿ'

ಬಿಡುಗಡೆ ಸಮಾರಂಭ

ಕಾರ್ಯಕ್ರಮ ವರದಿ: ಹು.ವಾ. ಶ್ರೀಪ್ರಕಾಶ್

ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯ ಹಿರಿಯ ಸದಸ್ಯ ಶ್ರೀ ಗೋಪಿನಾಥ್ ಎಚ್.ವಿ. ಅವರ ಮೊದಲ ಹಾಸ್ಯ ಸಾಹಿತ್ಯ ಕೃತಿ 'ಸಂಸಾರದಲ್ಲಿ ಸಿಹಿ ಕಹಿ' ಬಿಡುಗಡೆ ಸಮಾರಂಭ ದಿನಾಂಕ 29ನೆಯ ಜೂನ್ 2024ರಂದು ಬಿ ಎಂ ಶ್ರೀ ಪ್ರತಿಷ್ಠಾನದ ಸಭಾಂಗಣದಲ್ಲಿ ನಡೆಯಿತು.

ಶ್ರೀಮತಿ ಮಾಲತಿ ಶ್ರೀನಿವಾಸನ್ರವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಶ್ರೀ ಗುರುರಾಜ ಶಾಸ್ತ್ರಿಯವರು ವೇದಿಕೆಯಲ್ಲಿ ಉಪಸ್ಥಿತರಿರುವರನ್ನು ಪರಿಚಯಿಸಿ ಎಲ್ಲರನ್ನೂ ಸ್ವಾಗತಿಸಿದರು. ಶ್ರೀ ಕೆ.ಎನ್. ಮಹಾಬಲ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಪುಸ್ತಕ ಬಿಡುಗಡೆ ಮಾಡಿದರು.

ಕೃತಿಯ ಲೇಖಕ ಶ್ರೀ ಗೋಪಿನಾಥ್ರವರು ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ, ನನ್ನ ಬಹುತೇಕ ಬರಹಗಳು ನನ್ನ ಪತ್ನಿ ಗೀತಾಳಿಂದ ಪ್ರೇರಿತವಾಗಿದ್ದು, ಈ ಕೃತಿಯನ್ನು ಕಳೆದ ವರ್ಷ ಇಹಲೋಕ ತ್ಯಜಿಸಿದ ಆಕೆಗೆ ಅರ್ಪಿಸಿದ್ದೇನೆ ಎಂದರು. ಜುಲೈ 1ರಂದು ನಮ್ಮ 48ನೇ ವಿವಾಹ ವಾರ್ಷಿಕೋತ್ಸವ. ಪ್ರತಿ ವರ್ಷ ಆಕೆಗೆ ನಾನು ಏನಾದರೂ ಉಡುಗೊರೆ ನೀಡುತ್ತಿದ್ದೆ. ಮದುವೆಗೂ ಎರಡು ವರ್ಷ ಮೊದಲೇ ಗೆಳತಿಯಾಗಿದ್ದ ಅವಳ ನನ್ನ ಒಡನಾಟದ 50ನೆಯ ವರ್ಷದ ಸವಿನೆನಪಲ್ಲಿ ಈ ಪುಸ್ತಕವನ್ನು ಅವಳ ನೆನಪಿಗೆ ಕೊಡುವುದು ತುಂಬಾ ಗೌರವ ಎಂದು ಭಾವಿಸುವೆ ಎಂದರು.



ನನ್ನ ಪ್ರಕಾರ ಬರಹಗಾರನಾಗಬೇಕಾದರೆ ಲವ್ ಮಾಡಬೇಕು. ಲವ್ ಮಾಡಿದರೆ ಮನಸ್ಸಿನ ತುಂಬಾ ಭಾವನೆಗಳು ಬರುತ್ತವೆ. ನನ್ನ ಭಾವನೆಗಳನ್ನೆಲ್ಲಾ ಬರೆದು ನಾನೇ ಓದಿ ಆನಂದಿಸಿ ಆಕೆಗೆ ಪ್ರೇಮಪತ್ರ ಕೊಡುತ್ತಿದ್ದೆ. ಅವಳು ನನ್ನ ಕೈ ಹಿಡಿದಳು ಎಂದು ಗೋಪಿನಾಥ್ ಅವರು ಪತ್ನಿಯನ್ನು ಸ್ಮರಿಸಿದರು. ಈವರೆಗೆ ನಾನು ಸುಮಾರು ನಾನೂರಕ್ಕೂ ಹೆಚ್ಚು ಹಾಸ್ಯ ಬರಹಗಳನ್ನು ಬರೆದಿದ್ದು, ಗೆಳೆಯರಲ್ಲಿ ಮತ್ತು ವಾಟ್ಸಾಪ್



ವೇದಿಕೆಯಲ್ಲಷ್ಟೇ ಹಂಚಿಕೊಳ್ಳುತ್ತಿದ್ದೆ. 'ಸಂಸಾರದಲ್ಲಿ ಸಿಹಿ ಕಹಿ' ನನ್ನ ಮೊದಲನೆಯ ಪ್ರಕಟಿತ ಕೃತಿಯಾಗಿದ್ದು, ಇದು ಒಟ್ಟು 35 ಲೇಖನಗಳನ್ನು ಒಳಗೊಂಡಿದೆ ಎಂದು ತಿಳಿಸಿದರು. ಕೃತಿ ರಚನೆ ಹಾಗೂ ಬಿಡುಗಡೆಗೆ ಸಹಕರಿಸಿದ ಎಲ್ಲರನ್ನೂ ಸ್ಮರಿಸಿ ವಂದಿಸಿದರು.

ಪುಸ್ತಕದ ಕುರಿತು ಮಾತಾಡಿದ ಸಾಹಿತಿ ಶ್ರೀ ಜಿ.ವಿ.ಅರುಣರವರು ಈ ಕೃತಿ ಮದುವೆಯಾದ ಗಂಡಹೆಂಡತಿಯರಿಗೆ ಉತ್ತಮ ಕೈಪಿಡಿಯಾಗುತ್ತದೆ. ಕೃತಿಯಲ್ಲಿ ಮೂರು ವಿಶೇಷಗಳಿವೆ. ಮೊದಲನೆಯದು ಜಗಳ ಮಾಡಬೇಕು ಅನಿಸಿದಾಗ ಪ್ರಾರಂಭಿಸುವುದು ಹೇಗೆ, ಎರಡನೆಯದು ಇನ್ನೊಬ್ಬರು ಪ್ರಾರಂಭಿಸಿದ ಜಗಳವನ್ನು ನಮ್ಮ ಕಡೆ ಮಾಡಿಕೊಳ್ಳುವುದು ಹೇಗೆ ಮತ್ತು ಮೂರನೆಯದಾಗಿ ಪರಸ್ಪರ ಮಾತುಗಳಲ್ಲಿ ನಾವು ಸೋಲುತ್ತಿದ್ದರೆ ದಿಕ್ಕು ತಪ್ಪಿಸುವುದು ಹೇಗೆ ಎಂಬುದು ಈ ಪುಸ್ತಕ ಓದಿದರೆ ಚೆನ್ನಾಗಿ ಅರ್ಥವಾಗುತ್ತದೆ ಎಂದು ಹಾಸ್ಯಮಯವಾಗಿ ಹೇಳಿದರು. ಇಲ್ಲಿನ ಬರಹಗಳು ಗಂಡಹೆಂಡಿರ ಜಗಳ ಉಂಡು ಮಲಗುವ ತನಕ ಎಂಬ ಮುಖ್ಯ ಸೂತ್ರ ಆಧರಿಸಿವೆ. ಅನುಭವಸ್ಥ ಗೃಹಸ್ಥರೊಬ್ಬರ ಹೇಳಿಕೆ, ಮಾರ್ಗದರ್ಶನಗಳನ್ನು ಈ ಕೃತಿಯಲ್ಲಿ ಕಾಣಬಹುದು ಎಂದ ಅವರು ಕೆಲವು ಲೇಖನಗಳ ಸಾಲುಗಳನ್ನು ಉದಾಹರಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಹಾಸ್ಯ ಬರಹಗಾರ ಶ್ರೀ ಎಂ. ಎಸ್. ನರಸಿಂಹ ಮೂರ್ತಿಯವರು ಎಂದಿನಂತೆ ತಮ್ಮ ಹಾಸ್ಯ ಚಟಾಕಿಗಳಿಂದ ಸಭೆಯನ್ನು ನಗಿಸುತ್ತ, ಗೋಪಿನಾಥ್ ಅವರ ಲೇಖನಗಳಲ್ಲಿ ತಮಗೆ ಮೆಚ್ಚುಗೆಯಾದ ಕೆಲವು ಅಂಶಗಳನ್ನು ಹೇಳಿ ಗೋಪಿನಾಥರ ಬರವಣಿಗೆಯ ಬಗ್ಗೆ ತಮ್ಮ ಮೆಚ್ಚುಗೆ ಸೂಚಿಸಿದರು. ಕೃತಿಯಲ್ಲಿ ಮೂಡಿಬಂದ ಪತಿ–ಪತ್ನಿಯರ ನಡುವಣ ಕೆಲವು ರಸಮಯ ಪ್ರಸಂಗಗಳನ್ನು ಉದಾಹರಿಸಿ, ಇವರು ನಿಜಕ್ಕೂ ಅಪರೂಪದ ದಂಪತಿಗಳು ಎಂದರು. ಗೋಪಿನಾಥ್ ತಮ್ಮ ಬರಹಗಳಲ್ಲಿ ಹಾಸ್ಯದ ಪಂಚ್‌ಗಳನ್ನು ನೀಡುವಲ್ಲಿ ಯಶಸ್ವಿಯಾಗಿದ್ದಾರೆ. ಗಂಡಹೆಂಡಿರ ನಡುವಿನ ಸಂಭಾಷಣೆಯ ಶೈಲಿ ಎಲ್ಲರಿಗೂ ಇಷ್ಟವಾಗುತ್ತವೆ. ಕೆಲವು ಲೇಖನಗಳಲ್ಲಿ ಸುಂದರ ಸಂದೇಶವನ್ನೂ ಕೊಟ್ಟಿದ್ದಾರೆ ಎಂದು ಹೇಳಿದರು.



ಪುಸ್ತಕ ಬಿಡುಗಡೆ ಕಾರ್ಯಕ್ರಮ- ಸ್ವಾಗತ ಗೀತೆ

ಜೂನ್ಮಳೆಯ ನಗೆ ಬೆಳೆ


ಬಂತೋ ಬಂತೋ ಗೋಪಣ್ಣನ ಗಾಡಿ
ಹೊತ್ತಿಹುದು ಸಿಹಿ ಕಹಿ ಸಂ ಸಾರಬುತ್ತಿ
ಸಿಹಿ ರುಚಿ ಕಹಿ ರುಚಿ ಸಿಕಹಿ ಕಸಿಹಿಯೋ
ಬಗೆ ವಗರೋ ತರತರವೋ ರುಚಿ ಗುತ್ತಿ

ಹಾಸ್ಯದ ಹೊನಲು ನೋವಿನ ಸವರು
ಬೇರಾರೂ ಇಲ್ಲವೋ ಅವರೂ ಇವರು
ಇರುವರು ಇಬ್ಬರೇ ಜನುಮದ ಜೋಡಿ
ನಿತ್ಯದ ನಡೆನುಡಿ ನಗುವಿನ ಗಡಿಬಿಡಿಯೋ

ಬನ್ನಿರಿ ಬನ್ನಿರಿ ಈ ಶನಿವಾರದ ಬೆಳಗಿಗೆ
ಹತ್ತೂಮುವ್ವತ್ತರ ಹರುಷದ ಸಮಯಕೆ
ಅರುಣರು ಹಂಚುವ ಹೊತ್ತಿಗೆ ಹೂರಣ
ಎಂಎಸ್‌ಎನ್ ಕಟ್ಟುವ ನಗೆ ನಗೆ ತೋರಣ

ಇಪ್ಪತ್ತೊಂಬರ ಬೆಳಗು ಗೋಪಿಯ ಬೆರಗು
ಜೂನ್ಮಳೆ ಮುಂಗಾರು ಬಂಗಾರದ ಹನಿಯು
ಸಸಕಸ ವೇದಿಕೆಯ ಮಳೆ ಸಿಹಿ ಕಹಿ ಬೆಳೆಯು
ಹಂಚುವ ಗೋಪಿ ಸವಿಯುವ ಬನ್ನಿರಿ ಬನ್ನಿರಿ

– ಬೆಂಶ್ರೀ, ಬೆಂಗ್ಳೂರು



ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಅವರ ಮಕ್ಕಳು ಸಹ ಸಕ್ರಿಯವಾಗಿ ಭಾಗವಹಿಸಿರುವುದು ಸಂತಸ ತಂದಿದೆ ಎಂದು ಹೇಳಿ ಗೋಪಿನಾಥ್, ಅವರ ಮಕ್ಕಳು ಹಾಗೂ ಕುಟುಂಬವರ್ಗದವರನ್ನೂ ಶ್ರೀ ನರಸಿಂಹ ಮೂರ್ತಿಯವರು ಅಭಿನಂದಿಸಿದರು.

'ಸಂಸಾರದಲ್ಲಿ ಸಿಹಿ ಕಹಿ' ಪುಸ್ತಕದ ಪ್ರಕಾಶಕರಾದ ಸ್ನೇಹ ಬುಕ್ ಹೌಸ್‌ನ ಶ್ರೀ ಪರಶಿವಪ್ಪರವರು ಮಾತನಾಡಿ ಉತ್ತಮ ಕೃತಿಗಳಿಗೆ ಓದುಗರು ಯಾವಾಗಲೂ ಇದ್ದೇ ಇರುತ್ತಾರೆ. ಹೊಸ ಲೇಖಕರನ್ನು ಪ್ರೋತ್ಸಾಹಿಸುವುದು ಹಾಗೂ ಪ್ರತಿವರ್ಷ ಒಂದು ಸಾವಿರ ಹೊಸ ಕನ್ನಡ ಓದುಗರನ್ನು ಸೃಷ್ಟಿಸುವುದು ಇಂದಿನ ಅಗತ್ಯವಾಗಿದೆ ಎಂದು ಹೇಳಿ, ಸಮನ್ವಯ ಸಮಿತಿ ವೇದಿಕೆಯ ನಿರಂತರ ಸಾಹಿತ್ಯಕ ಚಟುವಟಿಕೆಗಳನ್ನು ಪ್ರಶಂಸಿಸಿದರಲ್ಲದೆ, ವೇದಿಕೆಯ ಹಲವು ಸದಸ್ಯರ ಕೃತಿಗಳನ್ನು ತಮ್ಮ ಪ್ರಕಾಶನದಿಂದ ಹೊರತರಲು ಅವಕಾಶ ದೊರೆತುದಕ್ಕಾಗಿ ವೇದಿಕೆಗೆ ಕೃತಜ್ಞತೆಗಳನ್ನು ಅರ್ಪಿಸಿದರು.



ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಪುಸ್ತಕವನ್ನು ಬಿಡುಗಡೆ ಮಾಡಿದ ಶ್ರೀ ಕೆ.ಎನ್. ಮಹಾಬಲರವರು ಮಾತನಾಡಿ, ನಿಕಟವಾದ ಭಾವನಾತ್ಮಕ ಬಾಂಧವ್ಯ ಹೊಂದಿದ್ದ ಗೀತಾ ಅವರು ಇತ್ತೀಚೆಗೆ ಗೋಪಿನಾಥ್ ಅವರ ಭಾವ ಪ್ರಪಂಚದಿಂದ ದೂರವಾಗಿದ್ದರೂ ಆ ನೆನಪುಗಳಲ್ಲಿ ತಮ್ಮ ಬರವಣಿಗೆ ಕಾಯಕವನ್ನು ಗೋಪಿನಾಥ್‌ರವರು ಅದೇ ಉತ್ಸಾಹದಿಂದ ಮುಂದುವರೆಸಿದ್ದಾರೆ. ಇವರ ಬರಹಗಳು ಕನ್ನಡದ ಪ್ರಸಿದ್ಧ ಹಾಸ್ಯ ಲೇಖಕಿ ಟಿ.ಸುನಂದಮ್ಮನವರು ಸೃಷ್ಟಿಸಿದ ಹಾಸ್ಯ ಪಾತ್ರಗಳಾದ ಮೈಲಾರಿ ಹಾಗೂ ಸರಸುವನ್ನು ಜ್ಞಾಪಕಕ್ಕೆ ತಂದರೆ ಆಶ್ಚರ್ಯವಿಲ್ಲ. ಗೀತಾ ಅವರ ನೆನಪು ಅಮರವಾಗಲಿ, ಗೋಪಿನಾಥ್ ಅವರ ಬರವಣಿಗೆಗೆ ಸದಾ ಸ್ಫೂರ್ತಿ ನೀಡಲಿ ಎಂದು ಹಾರೈಸಿ ಗೋಪಿನಾಥ ಅವರನ್ನು ಅಭಿನಂದಿಸಿದರು.

ಶ್ರೀ ರವಿಕುಸುಬಿಯವರು ಕಾರ್ಯಕ್ರಮ ನಿರ್ವಹಣೆ ಮಾಡಿದರು. ಶ್ರೀಮತಿ ರೇಣುಕಾ ದೇಸಾಯಿಯವರು ಕೊನೆಯಲ್ಲಿ ಎಲ್ಲರಿಗೂ ವಂದಿಸಿದರು.

***

ಕವಿ ಮನ

ನನ್ನದಾ..?

ಫಲವತ್ತಾದ ಒಂದು ಭೂಮಿ ಕೊಂಡೆ
ನನ್ನದೆಂದು ಹಿಗ್ಗಿ ಮೆರೆದೆ
ಮುಂದೊಂದು ದಿನ ಭೂಮಿ ಇಂತೆಂತು
ನೀ ಇನ್ನು ನಂದೇ!

ಒಂದು ಬೀಜ ನೆಟ್ಟು ನೀರೆರೆದೆ
ದೊಡ್ಡ ಮರವಾದಾಗ ಹಿಗ್ಗಿ ಮೆರೆದೆ
ಮರವೆಂದಿತು ನಾ ನಿನ್ನಿಂದಲ್ಲ,
ನೀ ನನ್ನ ಆಶ್ರಯಿಸಿರುವುದಲ್ಲ!

ಒಂದು ಆಕಳನ್ನು ಕಟ್ಟಿ ಹಿತ್ತಲಲ್ಲಿ
ನಾ ಸಾಕಿರುವೆನೆಂದು ಮೆರೆದೆ
ಹಸುವೆಂದಿತು ನನ್ನ ಕರುವಿನ ಹಾಲ
ನಿನಗೆರೆದು ನಾ ನಿನ್ನ ಸಾಕಿದ್ದಲ್ಲ!

ದಾನದಿಂದ ಪುಣ್ಯ ಸಂಪಾದಿಸಿ
ನಾನೇ ಭಕ್ತನೆಂದು ಮೆರೆದೆ
ಭಗವಂತನೆಂದ ಎಲ್ಲವನು
ನಿನಗೆ ಕೊಟ್ಟವನು ನಾನೇಯಲ್ಲ!

ಹೇ ಮನುಜ ನಿನ್ನಿಂದಲೇ ಎಲ್ಲ
ಎಂದು ಹಿರಿ ಹಿರಿ ಹಿಗ್ಗಬೇಡ
ಪ್ರಕೃತಿಯ ಮುಂದೆ, ದೇವನ ಕೃಪೆ
ಇಲ್ಲದೆ ನೀ ಶೂನ್ಯ! ನೋಡ

– ಸ್ನೇಹ ಶಶಿಧರ್
05.06.2024

ಕವಿ ಮನ

ಸರ್ವಜ್ಞ

ನೀ ಯಾರು ಏನು ಎಲ್ಲಿಂದ ಬಂದೆ
ನಿನ್ನಪ್ಪ ಯಾರು ನಿನ್ನಮ್ಮ ಯಾರು
ಯಾವೂರು ನಿಂದು ಸರ್ವಜ್ಞ

ಎಂದಿದ್ದೆ ನೀನು ಹೇಗಿದ್ದೆ ನೀನು
ಎಲ್ಕಲಿತೆ ನೀನು ಏನ್ಕಲಿತೆ ನೀನು
ಬರೆದೆ ನೀ ಹೇಗೆ ಸರ್ವಜ್ಞ

ಯಾವ್ಶಾಲಿ ನಿಂದು ಎಷ್ಟ್ಕಲಿತೆ ನೀನು
ಮೂರ್ಸಾಲಿನಲೇಕೆ ನೀ ಬರೆದೆ
ನಿನ್ನ ನೀ ಕರೆದೆ ಸರ್ವಜ್ಞ

ರನ್ನ ಜನ್ನರನು ಅರಿತಿದ್ದಿಯೇನು
ಪಂಪ ಕಾವ್ಯವನು ಓದಿದ್ದಿಯೇನು
ಯಾರ ಹೆಸರಿಲ್ಲವೇಕೆ ಸರ್ವಜ್ಞ

ಲಲಿತ ಪದಗಳಲಿ ಬರೆದೆ
ಸಂಸ್ಕೃತವ ಬಳಸದೇ ಬರೆದೆ
ಅಚ್ಚ ಕನ್ನಡದಚ್ಚು ಸರ್ವಜ್ಞ

ಹಿಂದಾರು ಇರಲಿಲ್ಲ ಮುಂದೆ ಬರಲಿಲ್ಲ
ಮಂದಿ ಮುಂದೆ ತಂದರು ನಿನ್ನ
ಇಂದು ನಾ ಕೇಳುವೆ ಸರ್ವಜ್ಞ

ರೂಪಕವುಂಟು ಯಮಕವುಂಟು
ಉಪಮೆ ದೃಷ್ಟಾಂತಗಳುಂಟು
ಅಲಂಕಾರ ಸಂಭೂತ ಸರ್ವಜ್ಞ

ನಿನ್ನ ನುಡಿಮುತ್ತುಗಳನೆಂತು ಹೇಳಲಿ
ಹೊಳೆಯದೆನಗೆ ಏನಂತ ಬಣ್ಣಿಸಲಿ
ಕನ್ನಡದ ರತ್ನ ನೀ ಸರ್ವಜ್ಞ

ನಾ ಅಜ್ಞ ನೀ ಪ್ರಾಜ್ಞ ವಿಜ್ಞಾನಭೂಷಿತನು
ಸುಜ್ಞಾನಿ ನೀನು ಯಾಜ್ಞಿಕನು ನೀನು
ತಜ್ಞಕವಿ ನೀನು ಸರ್ವಜ್ಞ

ಅಂಬರದಾಚೆಯ ಅಂದವ ತಂದೆ
ಸಾಗರದೊಳಗಿನ ನಿಧಿಯನು ತಂದೆ
ಆರಾಧಕನು ನಾನಿನ್ನ ಸರ್ವಜ್ಞ

– ಎಸ್ ಮಂಜುನಾಥ್ (ಹಿಮನಾಥ)
12.06.2024

ಕವಿ ಮನ

ಅಪ್ಪ

ಸಂಗಾತಿಯ ಗರ್ಭದಿ ಕೂಸಿನ ಅಂಕುರವಾದ ದಿನ
ಪಿತನ ಪಾಲಿಗದು ಆನಂದದ ಸುದಿನ
ತಂದೆಯಾಗುವೆನೆಂದು ಸಂತಸದಿ ಸಂಭ್ರಮಿಸುವನು
ತನ್ನಷ್ಟು ಸುಖಿ ಯಾರಿಲ್ಲವೆಂದು ಹೆಮ್ಮೆಯಲಿ ಬೀಗುವನು.

ಉದರದಿ ಮಗುವನು ಹೊತ್ತ ಪತ್ನಿಯ ಆರೈಕೆ
ಮಾಡುವನು, ಜೋಪಾನ ಮಾಡುವನು ಕಣ್ಣ ರೆಪ್ಪೆಯಂತೆ.
ಕ್ಷಣಗಳೆಣಿಸುವನು ಮಗುವಿನ ಆಗಮನಕೆ
ಕಾಯುವನು ಆ ದಿನವ ಚಾತಕ ಪಕ್ಷಿಯಂತೆ.

ಚಡಪಡಿಸುವನು ಆತಂಕದಿ
ಮಗು ಧರೆಗವತರಿಸುವ ದಿನ
ಪುಳಕಗೊಳ್ಳುವನು, ಸಂತಸದಿ
ಮೊದಲ ಸ್ಪರ್ಶಕ್ಕೆ ಮುದ್ದು ಕಂದನ.

ಮಗುವಿನ ಆಟ ಪಾಠಗಳಲ್ಲಿ
ಕೆಲಸದ ಒತ್ತಡ ಮರೆಯುವನು,
ಕಂದನ "ಅಪ್ಪ" ಎನ್ನುವ ತೊದಲು
ನುಡಿಗೆ ರೋಮಾಂಚನಗೊಳ್ಳುವನು.

ಮಕ್ಕಳ ಆಸೆ ಅವಶ್ಯಕತೆಯ ಪೂರೈಸಲು
ಹಗಲಿರುಳು ದಣಿಯದೆ ದುಡಿಯುವನು
ಸಂಪಾದನೆಯ ಬಹು ಪಾಲನು ಕೂಡಿಡುವನು
ಮಕ್ಕಳ ವಿದ್ಯಾಭ್ಯಾಸ, ಮದುವೆಗೆಂದು ಕಾಪಿಡುವನು.

ಮಗಳ ಮದುವೆಯ ಸಂಭ್ರಮದಿ ಮಾಡುವನು
ಜೀವನದ ಸಮಸ್ತ ಗಳಿಕೆಯ ವ್ಯಯಿಸುವನು
ಮಗಳನ್ನು ಅಗಲಲಾರದೇ ಮನಸಲೇ ಮರುಗುವನು
ಅವಳು ನೋಯುವಳೆಂದು ತುಟಿಯಲಿ ನಗುವರಳಿಸುವನು.

ಬೆಳೆದು ಅಪ್ಪನಾಗುವ ಮಗನಿಗೆ ಮಾದರಿ ಇವನು
ಮುದ್ದು ಮಗಳ ಜೀವನದ ಮಹಾನಾಯಕನು
ಇಂತಹ ಧೀಮಂತ ವ್ಯಕ್ತಿಯ ವರ್ಣಿಸಲು
ನನ್ನಲ್ಲಿಯ ಶಬ್ದ ಭಂಡಾರ ಸಾಲುವುದೇನು??

– ಅನಿತಾ ಪೈ
19.06.2024

ಕವಿ ಮನ

ಇಳಿದು ಹೋಗಿದ್ದಾನೆ, ಮುದುಕ

ಇದೇ ಈಗ
ಆ ರಸ್ತೆಯಿಂದ ಕವಲೊಡೆದ
ಕಾಲುದಾರಿಯ ಹಿಡಿದು ಸಾಗಿ
ಕಾಣದಾಗಿದ್ದಾನೆ ಮುದುಕ
ತುಸು ಬಾಗಿದ ಬೆನ್ನು ನಿಧಾನ ನಡೆಯಲ್ಲಿ
ಹೆಗಲ ಮೇಲೆ ಇದ್ದಿರಬೇಕು ಒಂದು ಹಸಿಬೆ

ದೊಡ್ಡ ರಸ್ತೆಯಲ್ಲ ಅದು
ಎತ್ತಿನ ಗಾಡಿಗಳು ತಿರುಗಾಡಿ ಸವೆದ
ಯಾವುದೋ ಕಾಲದ ಕಚ್ಚಾರಸ್ತೆ
ಹೊಲದಿಂದ ಮನೆಗೆ ಬೆಳೆ ಸಾಗಿಸಲು
ಊರಿಂದ ಹೊಲಕ್ಕೆ ಗೊಬ್ಬರ
ಗೋಡು ಹೊಡೆಯಲು ಬಳಸಿದ್ದು

ಅಪರಿಚಿತನಲ್ಲ ಅವನು ಹೆದ್ದಾರಿಗೆ
ನೆಲ ಜಲ ವಾಯು ಮಾರ್ಗಗಳೂ
ಪರಿಚಿತವಂತೆ ಅವನಿಗೆ
'ದೇಶವನ್ನೇ ಸುತ್ತಿದವ' ಎನ್ನುತ್ತಾರೆ

'ಮತ್ತೆ– ಈ ಊರಿಗೆ ಹೇಗೆ ಬಂದ' ಎನ್ನುವಿರಾ?
ಅವನು ಎಂದೋ ಒಲಿದ ಅವಳಿಗೆ
ಈ ಊರು ಎಂಥದೋ ಸಂಬಂಧವಂತೆ
ಯಾವ ಕುಡಿಗೆ ಎಲ್ಲಿ ಎಂಥ ತಳುಕೋ
ಬಲ್ಲವರು ಯಾರು
'ಹೌದೇ, ಈಗೆಲ್ಲಿ ಅವಳು'
ಕಾಲನೆಳೆದ ಯಾವುದೋ ಗೆರೆಗುಂಟ
ನಡೆದು ಕಾಣದಾಗಿರಬೇಕು
ಪೆನ್ಸಿಲ್‌ನಿಂದ ಎಳೆದ ಗೆರೆಯನ್ನು ರಬ್ಬರು
ಅಳಿಸಿದರೂ ಅಸ್ಪಷ್ಟ ಗುರುತು ಉಳಿದಂತೆ
ಎದೆಯಲ್ಲಿ – ಮಾಯದೆ

ಸಾಗಿದ್ದಾನೆ ಮುದುಕ
ಬೇಣವನ್ನು ಸೀಳಿ ಹೊಲದ ಬದುವಿನಗುಂಟ
ಸಾಗಿ ಆಚೆಗಿನ ಕಾಡಿನಲ್ಲಿ ಮಾಯವಾಗುವ
ಕಾಲುದಾರಿಯ ಹಿಡಿದು

ಚಿಂತೆ ಬೇಡ – ಕಾಡಿನ ಒಡಲಲ್ಲೂ ಕಾಲುದಾರಿಗೆ
ಸಿಕ್ಕಿ ಯಾವುದೋ ಜಾಡು
ತಲುಪಿಸಬಹುದು ಇನ್ನೊಂದೇ ತಾವಿಗೆ
ದಣಿದ ಮೈಗೆ ಬಿಸಿನೀರು ಹಸಿದ ಒಡಲಿಗೆ ಅನ್ನ
ಕಾದಿದ್ದೀತು

'ಅಯ್ಯೋ ಒಬ್ಬಂಟಿ, ಮುದುಕ' ಎನ್ನುವಿರಾ
ಒಬ್ಬಂಟಿ ಅಲ್ಲ–
ವೇ ನಾವು ನೀವು ಅವರು
ನಿನ್ನೆ ಇಂದು ನಾಳೆಯ

ಮುದುಕರು

– ಡಾ ಗೋವಿಂದ ಹೆಗ್ಡೆ
26.06.2024


[ಹಸಿಬೆ (ನಾ)= (<ದೇ. ಪಸುಂಬೆ)
ಒಂದು ಬಗೆಯ ಚೀಲ, ಇಬ್ಭಾಗದ ಚೀಲ]

ಪುಸ್ತಕ ಪರಿಚಯ

'ಸಕ್ಕರೆ ಮಿಠಾಯಿ' – ನೀತಿ ಕಥೆಗಳು

(ಲೇಖಕಿ: ಟಿ ಆರ್ ಉಷಾರಾಣಿ)

– ಪೂರ್ಣಿಮಾ ಭಗವಾನ್



ಶ್ರೀಮತಿ ಟಿ.ಆರ್.ಉಷಾರಾಣಿ ಅವರು ರಚಿಸಿದ 'ಸಕ್ಕರೆ ಮಿಠಾಯಿ' ಸಣ್ಣ ಕತೆಗಳ ಸಂಕಲನವನ್ನು 2024ರ ಮೇ 22ರಂದು ಲೇಖಿಕಾ ಸಾಹಿತ್ಯ ವೇದಿಕೆಯ ಆಶ್ರಯದಲ್ಲಿ ಮೈಸೂರಿನ ಕುವೆಂಪುನಗರದಲ್ಲಿರುವ ಸುರುಚಿ ಮಂದಿರದಲ್ಲಿ ಖ್ಯಾತ ಲೇಖಕಿಯರ ಸಮ್ಮುಖದಲ್ಲಿ, ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್‌ರವರ ಹಸ್ತದಿಂದ ಬಿಡುಗಡೆಯಾಯಿತು. ಮುನ್ನುಡಿಯನ್ನು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಶ್ರೀ ಕಬ್ಬಿನಾಲೆ ವಸಂತ ಭಾರದ್ವಾಜರು ಬರೆದಿದ್ದರೆ, ಬೆನ್ನುಡಿಯನ್ನು 'ವಿಶ್ವವಾಣಿ' ಕನ್ನಡ ದಿನಪತ್ರಿಕೆಯ ಪುರವಣಿ ವಿಭಾಗದ ಮುಖ್ಯ ಉಪಸಂಪಾದಕ ಹಾಗೂ ಸಾಹಿತಿ ಶ್ರೀ ಶಶಿಧರ ಹಾಲಾಡಿ ಅವರು ಬರೆದಿದ್ದಾರೆ.

ಶ್ರೀಮತಿ ಟಿ.ಆರ್. ಉಷಾರಾಣಿಯವರು ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಲ್ಲಿ ತಮ್ಮ ವೃತ್ತಿಜೀವನ ಆರಂಭಿಸಿ, ಪ್ರಸಕ್ತ ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಹಲವಾರು ವರ್ಷಗಳಿಂದ ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಅವರು ಬರೆದಿರುವ ಕೆಲವು ಹಾಸ್ಯ ಪ್ರಬಂಧಗಳು ಇ-ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಸಹೋದ್ಯೋಗಿಗಳಿಗಾಗಿ ವಿಶೇಷವಾಗಿ ರಚಿಸಿದ ಕಿರುಹಾಸ್ಯ ಪ್ರಹಸನಗಳನ್ನು ರಂಗಪ್ರಸ್ತುತಿಗೊಳಿಸಲಾಗಿದೆ. ಉಷಾರವರು ಪ್ರವೃತ್ತಿಯಿಂದ ಕಥೆಗಾರ್ತಿ. ರಂಗಭೂಮಿ, ಕಿರುತೆರೆಯಲ್ಲಿ ನಟನೆ, ಇವರ ನೆಚ್ಚಿನ ಹವ್ಯಾಸಗಳು. ಇವರ ಸಣ್ಣ ಕಥೆಗಳು ಸುಧಾ, ತರಂಗ, ಮಯೂರ ಮುಂತಾದ ಪ್ರಸಿದ್ಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಮಂಜು ಮುಸುಕಿದ ಕನಸು ಇವರ ಮೊದಲ ಕಥಾಸಂಕಲನ.

ಉಷಾರವರ ಎರಡನೆಯ ಕೃತಿ 'ಸಕ್ಕರೆ ಮಿಠಾಯಿ' ಒಟ್ಟು 40 ಸಣ್ಣ ನೀತಿಕಥೆಗಳನ್ನು ಹೊಂದಿದೆ. ಇಬ್ಬರು ಮೊಮ್ಮಕ್ಕಳ ಇಷ್ಟಕ್ಕೆ ಅನುಗುಣವಾಗಿ ಕಥೆಗಳನ್ನು ಹೆಣೆದು ಪ್ರತಿದಿನವೂ ಕಥೆ ಹೇಳುವ, ಕೇಳುವ ಹವ್ಯಾಸ ಮುಂದುವರೆಸಿ, ಅವುಗಳನ್ನೆಲ್ಲ ಕೂಡಿಟ್ಟು ಅಂದವಾಗಿ ಕಥಾಸಂಕಲನದ ರೂಪದಲ್ಲಿ ಹೊರತಂದಿದ್ದಾರೆ. ಸಕ್ಕರೆ ಮಿಠಾಯಿಯಲ್ಲಿರುವ ಕಥೆಗಳು ಒಂದಕ್ಕಿಂತಲೂ ಒಂದು ವಿಭಿನ್ನ. ಕಥೆಗಳು ಒಂದಲ್ಲ ಒಂದು ನೀತಿಯನ್ನು ಹೊಂದಿವೆ. ವೈವಿಧ್ಯಮಯ ಕಥೆಗಳನ್ನು ಒಳಗೊಂಡಿರುವ 'ಸಕ್ಕರೆ ಮಿಠಾಯಿ' ಈ ಕಥಾಸಂಕಲನಕ್ಕೆ ಒಂದು ರೀತಿಯಲ್ಲಿ ಅನ್ವರ್ಥನಾಮ. ಸಕ್ಕರೆಯಿಂದ ತಯಾರಿಸಿದ ಮಿಠಾಯಿ ಬಾಯಿಯಲ್ಲಿ ಹಾಕಿಕೊಂಡಾಗ ಹೇಗೆ ತಾನಾಗಿಯೇ ಕರಗಿ ಹೋಗುತ್ತದೆಯೋ ಅದೇ ರೀತಿ ಸಕ್ಕರೆ ಮಿಠಾಯಿ ಪುಸ್ತಕವನ್ನು ಒಮ್ಮೆ ಕೈಯಲ್ಲಿ ಹಿಡಿದರೆ ಸಾಕು, ಅದರಲ್ಲಿರುವ

ಸಕ್ಕರೆ ಮಿಠಾಯಿ
(ಸಣ್ಣ ಕತೆಗಳ ಸಂಕಲನ)
ಲೇಖಕಿ: ಟಿ.ಆರ್. ಉಷಾರಾಣಿ
ಮಹಿಮಾ ಪ್ರಕಾಶನ, ಮೈಸೂರು
ಪ್ರಕಟಣೆ: 2023; ಬೆಲೆ: ರೂ. 300

ಕಥೆಗಳು ತಾವಾಗಿಯೇ ಓದಿಸಿಕೊಂಡು ಹೋಗುತ್ತವೆ. ಕಥಾ ವಿಷಯಕ್ಕೆ ಪೂರಕವಾದ ರೇಖಾಚಿತ್ರಗಳು/ಚಿತ್ರಗಳು ಮಕ್ಕಳ ಕುತೂಹಲವನ್ನು ಮತ್ತಷ್ಟು ಹೆಚ್ಚಿಸುತ್ತವೆ. ನೀತಿಭೋಧಕವಾದ ಕಥೆಗಳು ಮಕ್ಕಳಿಗೆ ಜೀವನಕೌಶಲ್ಯವನ್ನು ಕಲಿಸುವ ನಿಟ್ಟಿನಲ್ಲಿ ಹಾಗೂ ದೇಶಭಕ್ತಿಯನ್ನು ಮೂಡಿಸಿ ಅವರನ್ನು ಸುಸಂಸ್ಕೃತರನ್ನಾಗಿ ಬೆಳೆಸುವ ನಿಟ್ಟಿನಲ್ಲಿ ಕತೆಗಳು ಸಹಕಾರಿಯಾಗಿವೆ.

ಕಸದಿಂದ ರಸವನ್ನು ತಯಾರಿಸಿ ಅದಕ್ಕೆ ಜೀವ ತುಂಬಿ ಸಹಜವಾಗಿ ಅರಳುವ ಕಲೆಗೆ ಪ್ರೋತ್ಸಾಹ ನೀಡಬೇಕು. ಪ್ರಯತ್ನಪೂರ್ವಕವಾಗಿ ಅದನ್ನು ಕಸಿದುಕೊಳ್ಳಬಾರದು ಎನ್ನುವ ಸಕ್ಕರೆ ಬೊಂಬೆ. ಅಹಂಕಾರದ ಮದ ಏರಿದಾಗ ಕಣ್ಣು ಮಂಜಾಗಿ ಎಲ್ಲವೂ ಅಸ್ಪಷ್ಟವಾಗಿ ಗೋಚರಿಸುತ್ತದೆ. ಕೇವಲ ವಿದ್ಯೆ ಇದ್ದರೆ ಸಾಲದು ಜೊತೆಯಲ್ಲಿ ವಿನಯವೂ ಇರಬೇಕು ಎನ್ನುವ ಮಾಯಾ ಕನ್ನಡಿ. ಉದ್ಯೋಗಾಕಾಂಕ್ಷಿಗಳಾಗಿ ವಲಸೆ ಹೋದರೂ ಸಹ ಅಲ್ಲಿಯ ಪರಿಸರ, ಪರಿಸ್ಥಿತಿಗಳಿಗೆ ಹೊಂದಿಕೊಂಡು ಸಾಧನೆ ಮಾಡಬೇಕು ಎನ್ನುವ ಪರಿವರ್ತನೆ. ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡಬೇಕು ಎಂಬುದನ್ನು ತಿಳಿಸುವ ಗೆಳೆಯರ ಬಾಂಧವ್ಯ. ಹೀಗೆ ತಿಳಿಸುತ್ತಾ ಹೋದರೆ ಮತ್ತಷ್ಟು ಬರೆಯುತ್ತಾ ಹೋಗಬಹುದು. ಪುಸ್ತಕದಲ್ಲಿರುವ ರಸಾಸ್ವಾದನೆಯನ್ನು ಪೂರ್ತಿಯಾಗಿ ಸವಿಯಲು ಸಕ್ಕರೆ ಮಿಠಾಯಿಯನ್ನೇ ಓದಬೇಕು.

ಕಥೆಯ ಪಾತ್ರಗಳ, ಊರುಗಳ ಹೆಸರುಗಳು ಮಕ್ಕಳ ಕಲ್ಪನಾ ಶಕ್ತಿಯ ಜೊತೆಯಲ್ಲಿ ವ್ಯಕ್ತಿತ್ವ ವಿಕಸನಕ್ಕೆ ದಾರಿ ಮಾಡಿಕೊಡುತ್ತವೆ. ಮಾಡಲು ಅಸಾಧ್ಯ ಎಂದುಕೊಂಡ ಕಾರ್ಯವನ್ನು ಸಾಧಿಸಲು ಕೆಲವೊಮ್ಮೆ ಪವಾಡ ಶಕ್ತಿಯು ಸಹಾಯ ಮಾಡುತ್ತದೆ ಎನ್ನುವ ಭಾವ ಮಕ್ಕಳ ಕುತೂಹಲವನ್ನು ಗರಿಗೆದರಿಸುತ್ತದೆ. ಕಾಲ್ಪನಿಕ, ವೈಜ್ಞಾನಿಕ, ಮನೋವೈಜ್ಞಾನಿಕ, ವೈಚಾರಿಕ, ರಮ್ಯಾದ್ಭುತ ಕಲ್ಪನೆಗಳಿಂದ ಕೂಡಿರುವ ಕಥೆಗಳ ಜೊತೆಗೆ ಸಮಕಾಲೀನ, ಪರಿಸರ ಕಾಳಜಿಯ ಕತೆಗಳು ಓದುಗರಲ್ಲಿ ಜಾಗೃತಿ ಮೂಡಿಸಿ, ಚಿಂತನೆಗೆ ತೊಡಗಿಸುತ್ತವೆ.

ಒಟ್ಟಾರೆಯಾಗಿ ಹೇಳುವುದಾದರೆ ಇಂದಿನ ಗ್ಯಾಡ್ಜೆಟ್ ಯುಗದಲ್ಲಿ ತುಸು ಹೊತ್ತಾದರೂ ಮಕ್ಕಳ ಮನವನ್ನು ಬೇರೆಡೆಗೆ ಸೆಳೆದು ಹಿಡಿದು ನಿಲ್ಲಿಸುವ ಸಂಗ್ರಹಯೋಗ್ಯ ಪುಸ್ತಕ 'ಸಕ್ಕರೆ ಮಿಠಾಯಿ'. ಕಥೆಗಳನ್ನು ಹೇಳುವ, ಕೇಳುವ ಸೊಗಸನ್ನು ಅನುಭವಿಸಿಯೇ ಅರಿಯಬೇಕು. ಶಿಶುಸಾಹಿತ್ಯಕ್ಕೆ ಹೊಸದೊಂದು ಕೊಡುಗೆ ನೀಡಿರುವ ಉಷಾರವರಿಗೆ ಅಭಿನಂದನೆಗಳು. ಕನ್ನಡ ಸಾಹಿತ್ಯ ಲೋಕದಲ್ಲಿ ಅವರು ಮತ್ತಷ್ಟು ರಾರಾಜಿಸಲಿ ಎಂದು ಹಾರೈಸುತ್ತೇನೆ.

***

ಸವಿಯದಿರು ಸವಿತ

– ಸ್ನೇಹ ಶಶಿಧರ್

“ಮಗನನ್ನು ಕರೆದುಕೊಂಡು ಬಂದ್ಯೇನೆ?” ಮುಖವನ್ನು ಕಮಲದಂತೆ ಅರಳಿಸಿ ನಗು ಹಂಚುತ್ತಾ ಸವಿತಾ ಆಂಟೀ ಕೇಳಿದರು. “ಅರೆ! ಆಂಟೀ, ನೀವೇನು ಇಲ್ಲಿ, ಅನಿ ಮದುವೆಯಾಗಿ ಇನ್ನೂ ಎರಡು ಮೂರು ವರ್ಷವಾಗಿರಬಹುದು ಅಲ್ವಾ?” ಎಂದು ಆಶ್ಚರ್ಯದಿಂದ ಕೇಳಿದೆ. “ಹೂ ಕಣೆ. ನನ್ನ ಓರ್ಗಿತ್ತಿ ಮೊಮ್ಮಗನನ್ನು ಕರೆದುಕೊಂಡು ಹೋಗಲು ಬಂದಿದ್ದೇವೆ” ಎಂದರು. ಜಪದಕಟ್ಟೆಯ ಶ್ರೀ ಮಠದಲ್ಲಿ ಬೇಸಿಗೆಯಲ್ಲಿ ನಡೆಯುವ ವಟು ಶಿಕ್ಷಣ ಶಿಬಿರದ ಸಮಾರೋಪ ಸಮಾರಂಭದಲ್ಲಿ ನಾನು ಅವರನ್ನು ಇಪ್ಪತ್ತು ವರ್ಷಗಳ ಬಳಿಕ ಭೇಟಿಯಾದದ್ದು.

ಆಂಟಯ ಪತಿ ದ್ವಾರಕಾನಾಥ್ ನಮ್ಮ ತಂದೆಯ ಸಹೋದ್ಯೋಗಿ. ಅವರ ಕುಟುಂಬದವರೆಲ್ಲ ಸಹೃದಯವಂತರು. ಯಾವಾಗಲೂ ನಗುತ್ತಿರುವ ದಂಪತಿಗಳು. ನೋಡಿದ ಕೂಡಲೇ ಇಷ್ಟವಾಗುವಂತಹ ವ್ಯಕ್ತಿತ್ವ. ನಮ್ಮ ಅಜ್ಜಿ ಅಂದರೆ ಅಮ್ಮನ ಅಮ್ಮ ತೀರಿಕೊಂಡಾಗ ನನ್ನ ತಂಗಿ ಹಾಗೂ ನನ್ನನ್ನು ಮನೆಯಲ್ಲಿ ಇಟ್ಟುಕೊಂಡು ನೋಡಿಕೊಂಡವರು. ರುಚಿ ರುಚಿಯಾಗಿ ಅಡುಗೆ ಮಾಡಿ ನಮಗೆ ಕೆಲ ದಿನಗಳ ಕಾಲ ಅಮ್ಮನನ್ನು ಮರೆಸಿದ ಅನ್ನಪೂರ್ಣೇಶ್ವರೀ ನಮ್ಮ ಸವಿತ ಆಂಟೀ.

ಇವರಿಗೆ ಒಬ್ಬ ಗಂಡು ಮಗ. ಮುದ್ದಾಗಿ ಬೆಣ್ಣೆ ಕೃಷ್ಣನಂತೆ ಕಾಣುತ್ತಿದ್ದ ಕಂದ. ಅವರ ಪುಟ್ಟ ಸಂಸಾರಕ್ಕೆ ಬರ ಸಿಡಿಲು ಬಡಿದಂತೆ ಬಂದದ್ದು ಕಾನ್ಸರ್ ಎಂಬ ಮಹಾಮಾರಿ. ಆ ಮಗು ‘ಅನಿ’ ಎರಡು ವರ್ಷ ತುಂಬಿದಾಗ ಗೊತ್ತಾಗಿದ್ದು ಅವನಿಗೆ ಕಾನ್ಸರ್ ಎಂದು. ಏನು ಅರಿಯದ ಹಸುಗೂಸು. ಅಯ್ಯೋ ಎಂದು ತಲೆ ಮೇಲೆ ಕೈ ಹೊತ್ತುಕೂರುವ ಪರಿಸ್ಥಿತಿಯಲ್ಲಿ ಧೃತಿಗೆಡದೆ ಎದುರಿಸಿದ್ದರು ಸವಿತಾ ಆಂಟೀ.

ದ್ವಾರ್ಕಿ ಅಂಕಲ್‌ಗೆ ಕೆಲಸಕ್ಕೆ ತೊಂದರೆಯಾಗದಂತೆ ಮೈಸೂರಲ್ಲಿ ಸಂಸಾರ ತೂಗಿಸಿಕೊಂಡು, ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆಯಲ್ಲಿ ಮಗುವಿಗೆ ಚಿಕಿತ್ಸೆ ಕೊಡಿಸಿ ಎಲ್ಲವನ್ನೂ ಅಚಲವಾಗಿ ನಿಭಾಯಿಸಿದ್ದರು ಸವಿತಾ ಆಂಟೀ. ಕೆಲವೇ ವರ್ಷಗಳಲ್ಲಿ ಅನಿಯ ಆರೋಗ್ಯ ಸುಧಾರಿಸಿತು. ಅವನು ನಮ್ಮೆಲ್ಲರ ರೀತಿ ಸಾಮಾನ್ಯ ಜೀವನ ನಡೆಸಲು ಆರಂಭಿಸಿದ. ಅವನು ಖಾಯಿಲೆಯಿಂದ ಜಯ ಸಾಧಿಸಿದ ಎನ್ನುವ ಬದಲು, ಅವನ ತಾಯಿ ಅವನನ್ನು ಗೆಲ್ಲಿಸಿದರು ಎಂದರೆ ತಪ್ಪಲ್ಲ.

ದ್ವಾರ್ಕಿ ಅಂಕಲ್ ನಿವೃತ್ತಿಯಾದ ನಂತರ ಬೆಂಗಳೂರಿಗೆ ಶಿಫ್ಟ್ ಆದರೆಂದು ಸಾಮಾಜಿಕ ಜಾಲತಾಣದಿಂದ ತಿಳಿದಿತ್ತು. ಆಗಾಗ್ಗೆ ಆಂಟೀಯ ನಗುವ ಕಾಣಲು ಅವರ ಫೇಸ್ಬುಕ್ ಪೇಜ್ ನೋಡುತ್ತಿದ್ದೆ. ಆಂಟೀಯ ತಂದೆ ಶತಾಯುಷಿ. ವಯಸ್ಸಾದರೂ ಚಿರಯುವಕರು. 95ನೇ ವಯಸ್ಸಿನಲ್ಲಿ ಮತಗಟ್ಟೆಗೆ ಹೋಗಿ ಮತ ಚಲಾಯಿಸಿ ಯುವಕರನ್ನು ನಾಚಿಸಿದ ವ್ಯಕ್ತಿ. ಅವರ ಕಡೆಯ ದಿನಗಳಲ್ಲಿ ಆಂಟೀಯ ಸೇವೆಯಿಂದಾಗಿ ಅವರು ಹಾಗೆ ಸಮರ್ಥ ವೃದ್ಧಾಪ್ಯ ನಡೆಸಲು ಕಾರಣ. ಅವರು ಮೊನ್ನೆ ಮೊನ್ನೆ ಕೊನೆಯುಸಿರು ಎಳೆದರೆಂದು ಫೇಸ್ಬುಕ್ ಮೂಲಕ ತಿಳಿಯಿತು. ಸಂತಾಪ ಸೂಚಿಸಿದೆವು.

ಕೆಲವು ವರ್ಷಗಳ ಹಿಂದೆ ಅನಿಯ ಮದುವೆಯ ಛಾಯಾಚಿತ್ರಗಳು ಕಂಡವು. ನಾವು ಅಭಿನಂದನೆ ಸೂಚಿಸಿದೆವು. ಹೇಗೋ ನಮ್ ಹುಡುಗ ಸೆಟ್ಲ್ ಆದ ಎಂದು ಸಮಾಧಾನಗೊಂಡೆವು. ಇದಾಗಿ ಒಂದೆರಡು ವರ್ಷ ಕಳೆಯುವಷ್ಟರಲ್ಲಿ ಇನ್ನೊಮ್ಮೆ ಅವನ ಮದುವೆಯ ಛಾಯಾಚಿತ್ರಗಳು ಕಂಡವು. ಬಹುಶಃ ಫೇಸ್ಬುಕ್ ಮೆಮೋರಿ ಎಂದು ಸುಮ್ಮನಾಗಬೇಕೆನಿಸಿತು. ಆದರೆ ಹುಡುಗಿ ಬೇರೆ ತರಹ ಕಾಣುತ್ತಿದ್ದಾಳಲ್ಲ. ಕುತೂಹಲ ಹೆಚ್ಚಾಗಿ, ಸಾಮಾಜಿಕ ಜಾಲತಾಣ ಹೆಕ್ಕಿ ನೋಡಿದರೆ, ಹೌದು! ಅನಿಗೆ ಎರಡನೆಯ ಮದುವೆ!

‘‘ಹೇಗಿದ್ದೀರಾ ಆಂಟೀ? ಆರೋಗ್ಯ? ಆರಾಮಾ?’’ ಎಂದು ಕೇಳಿದೆ. ‘‘ನಾನು ಚೆನ್ನಾಗಿದ್ದೀನಿ ಕಣೆ’’ ಎಂದರು. ‘‘ಸೊಸೆ ಓಕೆನಾ?’’ ಎಂದೆ. ನನಗೆ ತಿಳಿಯದೆ ಬಂದ ಪ್ರಶ್ನೆಗೆ ಹೇಗೆ ಸ್ಪಂದಿಸುತ್ತಾರೋ, ನನಗೆ ಬೇಕಿತ್ತಾ, ಎಂದು ನಾಲಿಗೆ ಕಚ್ಚಿಕೊಂಡೆ. ಆದರೆ ಅವರು, ‘‘ಹೂ ಕಣೆ! ಈವಾಗ ಒಳ್ಳೆಯ ಹುಡುಗಿ ಸಿಕ್ಕಿದ್ದಾಳೆ. ಮೊದಲು ಒಂದು ವರ್ಷ ತುಂಬಾ ಕಷ್ಟ ಆಯಿತು’’ ಎಂದರು. ಎರಡನೆಯ ಮದುವೆ ವಿಚಾರ ಸ್ಪಷ್ಟವಾಯಿತು ಹಾಗೂ ಆಂಟೀ ನನ್ನ ಪ್ರಶ್ನೆಯಿಂದ ಬೇಜಾರು ಮಾಡಿಕೊಂಡಿಲ್ಲ ಎಂದು ನಿಟ್ಟುಸಿರು ಬಿಟ್ಟೆ.

‘‘ಅಂಕಲ್ ಹೇಗಿದ್ದಾರೆ?’’ ಎಂದು ಕೇಳಿದೆ. ‘‘ಶುಗರ್ ಜಾಸ್ತಿಯಾಗಿ ಕಾಲು ತೆಗೆದು ಬಿಟ್ಟಿದ್ದಾರೆ ಕಣೆ. ಸ್ವಲ್ಪ ಆಲ್ಝೈಮರ್ಸ್ ಕೂಡ ಶುರುವಾಗಿದೆ. ಅದಿಕ್ಕೆ ನಾವೆಲ್ಲೂ ಹೋಗಲ್ಲ. ಅನಿ ಎಲ್ಲೂ ಬಿಡಲ್ಲ ನಮ್ಮನ್ನ. ಈಗ ದೇವರ ಸನ್ನಿಧಿ ಮತ್ತು ವಟುಗಳನ್ನ ಕಾಣಲು ಬಂದ್ವಿ’’ ಎಂದರು. ನಿಧಾನವಾಗಿ ಅಂಕಲ್ ಬರುತ್ತಿದ್ದದ್ದು ಕಂಡೆ. ಅರೇ, ಮರದ ಕಾಲು! ಪುನಃ ಆಂಟೀಯನ್ನು ನೋಡಿದೆ. ಮಂದಸ್ಮಿತೆ. ಅಂಕಲ್‌ನ್ನು ಮಾತನಾಡಿಸಲು ತಿರುಗಿದೆ. ಅವರ ಮೊಗದಲ್ಲೂ ಕಾಂತಿ ಚಿಮ್ಮುತ್ತಿತ್ತು. ನನ್ನ ನೋಡಿ ನಗಿಸಿದರು. ‘‘ಏನಮ್ಮ ಚೆನ್ನಾಗಿದ್ದೀಯಾ?’’ ಎಂದರು.

ಆದರ್ಶ ದಂಪತಿಯಂದರೆ ಇವರಿಬ್ಬರೆ. ಜೀವನ ಎಷ್ಟೇ ಸವಾಲೆಸೆದರೂ ಒಬ್ಬರನ್ನೊಬ್ಬರು ಹುರಿದುಂಬಿಸಿ, ಎಲ್ಲೂ ಖಿನ್ನತೆಗೆ ಒಳಗಾಗದೆ, ಸದಾ ಖುಷಿಯನ್ನು ಹಬ್ಬಿಸುವ, ಎಲ್ಲರನ್ನು ಸಂತೋಷದಿಂದ ಕಾಣುವ ಹೃದಯ ವಿರಳ. ‘‘ಸವಿ’’ ಎಂದರೆ ‘‘ಸಿಹಿ’’. ಇನ್ನಾದರೂ ಸವಿತಾ ಆಂಟೀ ಬಾಳಲ್ಲಿ ಸದಾ ಸಿಹಿ ತುಂಬಿರಲಿ ಎಂದು ಆಶಿಸುತ್ತೇನೆ.

***

ಅತ್ತೆಮ್ಮ

- ಗೌರಿ ಭಟ್ಟ

ನನಗೆ ಮದುವೆ ಆದ ಹೊಸತು. ನನ್ನ ಯಜಮಾನರಿಗೆ ಮೈಸೂರಿನಲ್ಲಿ ನೌಕರಿ. ಅಲ್ಲಿ ಹೊಸ ಮನೆ ಇನ್ನೂ ಮಾಡಿರಲಿಲ್ಲ. ಹಾಗಾಗಿ ಸ್ವಲ್ಪ ದಿನಗಳು ಅತ್ತೆ-ಮಾವಂದಿರ ಒಟ್ಟಿಗೆ ಹಳ್ಳಿಯಲ್ಲೇ ಇರಬೇಕಾಗಿ ಬಂತು. ಮದುವೆ ಆದ ಹೊಸದರಲ್ಲಿ ನನಗೆ ಅತ್ತೆ-ಮಾವನವರನ್ನು ನೋಡಿದರೇ ಒಂದು ತರಹದ ಭಯ. ಅವರಿಗೂ ನನ್ನಲ್ಲಿ ಸಲುಗೆ ಇರಲಿಲ್ಲ. ಕ್ರಮೇಣ ಅವರು ತೋರಿಸಿದ ಪ್ರೀತಿ, ಅಕ್ಕರೆ ನನಗೆ ನನ್ನ ಅಪ್ಪ-ಅಮ್ಮನ ಹಂಬಲವನ್ನೂ ಮರೆಸಿತ್ತು. ಈಗ ಅತ್ತೆ, ಮಾವ ಇಬ್ಬರೂ ಇಲ್ಲ. ಆದರೆ ಅವರೊಟ್ಟಿಗೆ ಕಳೆದ ದಿನಗಳನ್ನು ಇಂದಿಗೂ ಮೆಲುಕು ಹಾಕುತ್ತಿರುತ್ತೇನೆ.

ಅದು ಮಾವಿನ ಹಣ್ಣು ಆಗುವ ಕಾಲ. ಗಂಡನ ಮನೆಯ ಅಂಗಳದ ಸುತ್ತಲೂ ಸಾಕಷ್ಟು ಮಾವಿನ ಮರಗಳಿದ್ದವು. ಆಗಾಗ ಮರದಿಂದ ಹಣ್ಣುಗಳು ಬೀಳುತ್ತಿದ್ದವು. ನನ್ನ ಅಮ್ಮನ ಮನೆಯಲ್ಲಿ ಮಾವಿನ ಹಣ್ಣಿಗೆ ಬರ. ನನಗೋ ಮಾವಿನ ಹಣ್ಣು ಅಂದರೆ ಪ್ರಾಣ.

ಒಂದು ದಿನ ಮಾವಿನ ಹಣ್ಣು ಬಿದ್ದ ಶಬ್ದ ಕೇಳಿ ಅತ್ತೆ ಮಾವ ಹುರಿದುಂಬಿಸಿದ್ದಕ್ಕೆ ಬೇಲಿ ಹಾರಿ ಪಕ್ಕದ ಹಿತ್ತಲಿಗೆ ಕಾಲಿಟ್ಟೆ. ಹಣ್ಣು ಕೈಗೆ ಸಿಕ್ಕೇಬಿಟ್ಟಿತು ಅನ್ನುವ ಖುಷಿಯಲ್ಲಿದ್ದೆ. "ಯಾರವರು" ಎಂಬ ಗದರಿದ ದನಿಗೆ ಹೆದರಿಹೋದೆ. ಕಾಲಿನಲ್ಲಿ ಸಣ್ಣ ನಡುಕ, ಬಾಯಲ್ಲಿ ನೀರು ಆರಿಹೋಗಿದೆ, ಎದೆ ಢವಢವ, ಕಿವಿಯೆಲ್ಲಾ ಬಿಸಿ. ನನಗೋ ಪಾಕಿಸ್ತಾನದ ಗಡಿಯಲ್ಲಿರುವ ಭಯಾನಕ ಅನುಭವ.

ನನ್ನ ಕಾಲಿನ ಹತ್ತಿರ ಬಿದ್ದಿರುವ ಮಾವಿನ ಹಣ್ಣಿನ ಒಡತಿ ಪಕ್ಕದ ಮನೆಯ ರಾಧಕ್ಕ ಎದುರಿಗೆ ನಿಂತಿದ್ದರು. "ನಿನ್ನನ್ನು ಕಳಿಸಿದ್ದು ನಿನ್ನ ಅತ್ತೆಯೇ ಇರಬೇಕು. ಆಸೆಬುರುಕಿ ಅವಳು. ನಿಮ್ಮ ಮನೆಯಲ್ಲಿ ಅಷ್ಟೊಂದು ಮಾವಿನ ಹಣ್ಣುಗಳಿದ್ದರೂ ನಮ್ಮ ಮನೆಯ ಹಣ್ಣಿನ ಮೇಲೆ ಕಣ್ಣು ನೋಡು". ದೊಡ್ಡ ಸ್ವರದಲ್ಲಿ ಹೇಳುತ್ತಲೇ ಇದ್ದರು.

"ಅವಳು ನಮ್ಮ ಮನೆಗೆ ಹೊಸಬಳಾದುದರಿಂದ ತಿಳಿಯದೆ ಮಾವಿನ ಹಣ್ಣು ಹೆಕ್ಕಲು ಹೋದಳು. ನಿಮ್ಮ ಮನೆಯದು ಅಂತ ತಿಳಿದಿದ್ದರೆ ಆ ಕೆಲಸ ಮಾಡುತ್ತಿರಲಿಲ್ಲ. ನಮ್ಮ ಮನೆಯಲ್ಲೇ ಕೊಳೆತು ಹೋಗುವಷ್ಟು ಹಣ್ಣಿದೆ. ಬೇರೆಯವರ ಮನೆಯದು ನಮಗೆ ಯಾಕೆ?" ಹಿಂದಿನಿಂದ ನನ್ನ ಅತ್ತೆಯವರೂ ಅಷ್ಟೇ ಗಟ್ಟಿಯಾಗಿ ಹೇಳಿದರು.

"ಗೌರೀ, ನೀನು ಬಂದುಬಿಡು. ಅದು ರಾಧಕ್ಕನ ಮನೆಯದು. ಬಾ ನಮ್ಮ ಮನೆಯ ಮಾವಿನ ಹಣ್ಣನ್ನೇ ತಿನ್ನುವಿಯಂತೆ" ಮಾವನವರೂ ದನಿಗೂಡಿಸಿದರು. ಆದರೆ ರಾಧಕ್ಕ ನಾನು ಮನೆಗೆ ಹೋಗುತ್ತೇನೆ ಅಂದರೆ ಕೇಳಬೇಕಲ್ಲ. ತುಂಬಾ ಪ್ರೀತಿ ಹಾಗೂ ಸಲುಗೆಯಿಂದ ನನ್ನ ಕೈಹಿಡಿದುಕೊಂಡು ಅವರ ಮನೆಗೆ ಕರೆದುಕೊಂಡೇ ಹೋದರು. ನಾನು ಗಾಬರಿಯಿಂದ ಬೆವರುತ್ತಿದ್ದೆ.

"ನೀನು ನನಗೆ ಸಂಬಂಧಿ. ನಿನ್ನ ಆಯಿ ಸುಶೀಲಾ ನನ್ನ ಚಿಕ್ಕಿಯ ಮಗಳೇ. ಅವಳನ್ನು ಎತ್ತಿ ಆಡಿಸಿದ್ದೇನೆ. ನಿನ್ನನ್ನು ನೋಡಿದಾಗ ನನಗೆ ಅವಳ ನೆನಪು ಬಂತು. ನೀನೂ ಅವಳ ಹಾಗೇ ಇದ್ದೀಯ. ನಿನ್ನ ಮಾವ ಅನಂತನೂ ನನಗೆ ಸಂಬಂಧ. ಮೊದಲೆಲ್ಲಾ ಇಲ್ಲಿಗೆ ಬರ್ತಾ ಇದ್ದ. ಈ ಅಕ್ಕನ ಕೈಯ ದೋಸೆ, ಮಾವಿನಹಣ್ಣಿನ ರಸಾಯನ ತಿನ್ನದೇ ಹೋಗ್ತಾನೇ ಇರಲಿಲ್ಲ. ಬಹಳ ಒಳ್ಳೆಯ ಮನುಷ್ಯ. ನಿನ್ನ ಅತ್ತೆ ನೋಡು, ಭಾರೀ ಘಟವಾಣಿ. ಯಾರಿಗೂ ಸೋಲೋ ಹೆಂಗಸೇ ಅಲ್ಲ. ಅವಳಿಗೆ ಆರೂ ಗಂಡು ಸಂತಾನ ನೋಡು. ಅದಕ್ಕೇ ಅಷ್ಟು ಮೆರೆಯುವುದು. ನನಗೆ ಆರೂ ಹೆಣ್ಣು. ನಾನು ಏನು ಮಾಡೋಕಾಗುತ್ತೆ, ದೇವರು ಕೊಟ್ಟಿದ್ದು" ಎಂದು ಅಲವತ್ತುಕೊಳ್ಳುತ್ತಾ, ದೊಡ್ಡದೊಂದು ಕೋಣೆಯ ಬಾಗಿಲು ತೆಗೆದು ತೋರಿಸಿದರು. ಕೋಣೆಯ ತುಂಬೆಲ್ಲಾ ಹುಲ್ಲು ಹಾಸಿದೆ. ಆ ಹಾಸಿನ ಅಡಿಯಲ್ಲಿ ಮಾಣಿಭಟ್ಟ, ಈಶಾಡು, ಕರಿ ಈಶಾಡು, ಪರ್ನಾಲು, ಗುಂಡಪ್ಪ, ಗಿಳಿಸುಂಡಿ..... ಮುಂತಾದ ಮಾವಿನ ಹಣ್ಣುಗಳ ರಾಶಿ. ಮಾವಿನ ಹಣ್ಣುಗಳ ಮೇಳದಂತೆಯೇ ಕಾಣಿಸುತ್ತಿತ್ತು.

ನನಗೆ ತಿನ್ನಲು ಹಣ್ಣುಗಳನ್ನು ಕೊಟ್ಟರು. ಅಲ್ಲದೇ ದೊಡ್ಡ ಚೀಲದ ತುಂಬಾ ಹಣ್ಣು ತುಂಬಿಸಿ ಕೊಟ್ಟರು. "ನಿನ್ನ ಮಾವನವರಿಗೆ ಈಶಾಡು ಹಣ್ಣು ತುಂಬಾ ಇಷ್ಟ. ನಾನು ರಾಧಕ್ಕ ಕೊಟ್ಟಿದ್ದೇನೆ ಅಂತ ಹೇಳು. ಅವನು ತುಂಬಾ ಖುಷಿ ಪಡುತ್ತಾನೆ. ಅವನು ಒಳ್ಳೆಯವನು. ನಿನ್ನ ಅತ್ತೆ ಗಂಡನ ಬಾಯಿಗೆ ಬೀಗ ಹಾಕಿದ್ದಾಳೆ. ಅವನು ಹೆಂಡತಿ ಮುಂದೆ ದೊಡ್ಡ ಉಸಿರಾಡೋದಿಲ್ಲ. ನೀನು ಇದನ್ನೆಲ್ಲಾ ಮನೆಗೆ ಹೋಗಿ ಹೇಳಿದರೂ ನಾನೇನೂ ಹೆದರುವುದಿಲ್ಲ. ನಾನೇನು ನಿನ್ನ ಅತ್ತೆಯ ಹಂಗಿನಲ್ಲಿ ಇಲ್ಲ. ನಿನ್ನ ಆಯಿ ಬಂದರೆ ಕರೆದುಕೊಂಡು ಬಾ" ಎಂದು ಬೀಳ್ಕೊಟ್ಟರು. ತಪ್ಪಿಯೂ ಮಾವಿನ ಹಣ್ಣನ್ನು ಅತ್ತೆಗೆ ಕೊಡುವ ವಿಚಾರ ಹೇಳಲೇ ಇಲ್ಲ.

ಮನೆಗೆ ವಾಪಸ್ಸಾಗುವಾಗ ರಾಧಕ್ಕನಿಗೆ ನಮಸ್ಕಾರ ಮಾಡಿದೆ. ಅವರ ಕಣ್ಣುಗಳಲ್ಲಿ ನೀರಾಡುತ್ತಿತ್ತು. ಒಂದು ತರಹ ಖುಷಿಯಿಂದ ಮಾವಿನ ಹಣ್ಣಿನ ಚೀಲದೊಂದಿಗೆ ಮನೆಗೆ ಬಂದಾಗ, "ಗೌರೀ, ನನ್ನ ಸುದ್ದಿ ಏನು ಹೇಳಿದ್ರೆ ರಾಧಕ್ಕ?" ಎಂದು ಅತ್ತೆ ಕೇಳಿದಾಗ "ಏನಿಲ್ಲ ಅತ್ತೆ" ಅಂತ ಹೇಳಿದೆ. ಅತ್ತೆ ಬಿಡಲಿಲ್ಲ ."ನೀನು ಇಲ್ಲ ಅಂದ್ರೆ ನಾನು ನಂಬುವುದಿಲ್ಲ .ಇಡೀ ಊರಿಗೆ ನನ್ನ ವಿರುದ್ಧ ಠಾಂ ಠಾಂ ಮಾಡ್ತಾಳೆ. ನನಗೆ ಆರು ಗಂಡುಮಕ್ಕಳು ಅಂತ ಹೊಟ್ಟೆಕಿಚ್ಚು ಅವಳಿಗೆ" ಎಂದಾಗ, "ಹಾಗೇನಿಲ್ಲ. ನೀನೇ ಕೆಲವೊಮ್ಮೆ ಕಾಲು ಕೆರ್ಕೊಂಡ್ ಜಗಳಕ್ಕೆ ಹೋಗ್ತೀಯಾ" ಅಂದ ಮಾವನವರು ಮಾವಿನಹಣ್ಣು ತಿನ್ನಲು ಹಿತ್ತಲಿಗೆ ಹೋದರು. "ಅವರೆಲ್ಲಿ ಒಪ್ಪುತ್ತಾರೆ? ಇವರ ಮೈಯಲ್ಲಿ ಹರಿಯುವುದೂ ಅದೇ ರಕ್ತ ತಾನೆ. ನಾನು ಹೊರಗಿನವಳು.. ನಂದೇ ತಪ್ಪು. ಹೌದು ನಾನೇ ಕೆಟ್ಟವಳು". ಅಂದರು ಅತ್ತೆ ಸಿಟ್ಟಿನಿಂದ. ಅತ್ತೆಯೇ ರಾಧಕ್ಕನವರಿಗಿಂತ ಜೋರಿನವರೆಂದೇ ನನಗೆ ಅನ್ನಿಸಿತು.

ಆ ದಿನ ಮಧ್ಯಾಹ್ನ ಊಟಕ್ಕೆ ನನ್ನ ಅಪ್ಪ, ಅಮ್ಮ ಬಂದಿದ್ದರು. ನನ್ನ ಅತ್ತೆ ಬೀಗರಿಗಾಗಿ ಒಳ್ಳೆಯ ಅಡುಗೆಯನ್ನೇ ತಯಾರು ಮಾಡಿದ್ದರು. ಅವರನ್ನೆಲ್ಲಾ ಊಟಕ್ಕೆ ಕೂಡ್ರಿಸಿ ನಾನು ಬಡಿಸುತ್ತಿದ್ದೆ. ಅತ್ತೆಯ ಅಡುಗೆ ಅಂದರೆ ಅದು ನಳಪಾಕವೇ ಸರಿ. ಎಡಗೈಯ್ಯಲ್ಲಿ ಉಪ್ಪು ಹಾಕಿದರೂ ಸರಿಯಾಗೇ ಇರುತ್ತದೆ.

ಎಲ್ಲರೂ ಸುಮ್ಮನೇ ಊಟ ಮಾಡುತ್ತಿದ್ದರು. ಅತ್ತೆ ಮಾಡಿದ ಹೀರೇಕಾಯಿ ಪಲ್ಯ ಘಮಘಮಿಸುತ್ತಿತ್ತು. ಪಲ್ಯ ಬಾಯಲ್ಲಿ ಹಾಕುವಾಗ ಅತ್ತೆ ಹೇಳಿದರು– "ಗೌರಿ, ಪಲ್ಯ ಚೆನ್ನಾಗಿ ಮಾಡಿದ್ದೀಯ ಆದರೆ ಉಪ್ಪು ಹಾಕಲು ಮರೆತಿದ್ದೀಯ" ನನಗೆ ಏನು ಹೇಳಲೂ ತೋಚಲಿಲ್ಲ. ಅಮ್ಮ ನನ್ನ ಮುಖನೋಡಿ ಅರ್ಥ ಮಾಡಿಕೊಂಡರು. ಅಪ್ಪ ಹೇಳಿದರು "ಅವಳಿಗೆ ಅಡುಗೆ ಮಾಡಲು ಅಷ್ಟಾಗಿ ಬರುವುದಿಲ್ಲ, ನೀವೇ ಕಲಿಸಿಕೊಡಿ". ಮಾವನವರು ಹೇಳಿದರು. "ನೀವೇನೂ ಯೋಚನೆ ಮಾಡಬೇಡಿ. ನನ್ನ ಹೆಂಡತಿ ಒಳ್ಳೆಯ ಅಡುಗೆ ಮಾಡುತ್ತಾಳೆ. ಕಲಿಸಿಕೊಡುತ್ತಾಳೆ".

"ಆಹಾ! ಅಡಿಗೆಯಲ್ಲಿನ ಲೋಪವನ್ನು ಎಷ್ಟು ಸುಲಭವಾಗಿ ನನ್ನ ಮೇಲೆ ಹಾಕಿದರು. ಎಷ್ಟು ಜೋರಿದ್ದಾರೆ ಈ ಅತ್ತೆ! ರಾಧಕ್ಕ ಸರಿಯಾಗೇ ಹೇಳಿದ್ದಾರೆ " ಎಂಬ ತೀರ್ಮಾನಕ್ಕೆ ಬಂದೆ.

ಸಾಯಂಕಾಲ ಅಪ್ಪ, ಅಮ್ಮ ಊರಿಗೆ ಹೋಗುವಾಗ ಬಸ್ ಸ್ಟೇಂಡಿನವರೆಗೆ ಬಿಟ್ಟು ಬರಲು ನಾನೂ ಹೋದೆ. ಬೆಳಿಗ್ಗೆ ಅತ್ತೆ ಜೋರೆಂದು ಪಕ್ಕದ ಮನೇಲಿ ರಾಧಕ್ಕ ಹೇಳಿದ್ದು, ಅದಕ್ಕೆ ಸರಿಯಾಗಿ ಪಲ್ಯಕ್ಕೆ ಉಪ್ಪು ಹಾಕದೇ ನನ್ನ ಮೇಲೆ ಗೂಬೆ ಕೂರಿಸಿದ್ದು ಎಲ್ಲಾ ಅವರಿಗೆ ಹೇಳಿದೆ. "ಅತ್ತೆ, ಮಾವನವರಿಗೆ ಇಷ್ಟ ಇಲ್ಲದೇ ನೀನು ರಾಧಕ್ಕನ ಮನೆಗೆ ಹೋಗಿದ್ದು ತಪ್ಪು. ಪಕ್ಕದ ಮನೆಯವರು ಅತ್ತೆ–ಸೊಸೆ ಚಂದವಾಗಿದ್ದರೆ ಸಹಿಸುವುದಿಲ್ಲ" ಅಮ್ಮ ಹೇಳಿದರು.

"ನಿನ್ನ ಅತ್ತೆ, ಲ್ಷಕ್ಮಕ್ಕ, ಜೋರು, ಗಟ್ಟಿಗಿತ್ತಿ ಅಂತ ಎಲ್ಲರೂ ಹೇಳುತ್ತಾರೆ. ಒಬ್ಬ ಗಂಡಸು ಮನೆ, ಮಕ್ಕಳ ಜವಾಬ್ದಾರಿ ತೆಗೆದುಕೊಳ್ಳದಿದ್ದರೆ ಹೆಂಗಸಿಗೆ ಬಹಳ ಕಷ್ಟ. ನಿನ್ನ ಅತ್ತೆಗೆ ಎದೆ ಸೀಳಿದರೆ ನಾಲ್ಕು ಅಕ್ಷರವಿಲ್ಲ. ನಿನ್ನ ಮಾವನವರಿಗೆ ಯಾವುದೇ ಜವಾಬ್ದಾರಿ ಬೇಡ. ಅತ್ತೆಯೇ ಸಾಲ ಸೋಲ ಮಾಡಿ ಮಕ್ಕಳಿಗೆ ಕಲಿಸಿ ದಡ ಸೇರಿಸಿದ್ದಾರೆ. ಕಷ್ಟ ಜೀವಿ. ಯಾರೋ ಹೇಳುತ್ತಾರೆ ಅಂತ ನೀನೂ ಹಾಗೇ ವಿಚಾರ ಮಾಡಬೇಡ. ನೆರೆಹೊರೆಯವರು ಕೆಲವು ಸಲ ಸಂಸಾರದಲ್ಲಿ ಹುಳಿ ಹಿಂಡಲೇ ಇರುವುದು", ಅಪ್ಪ ಹೇಳಿದರು. ಇಬ್ಬರೂ ಬಸ್ಸು ಹತ್ತಿ ಹೋದರು.

ಅತ್ತೆ ಜೋರು ಅಂತಲೇ ನಿರ್ಧಾರಕ್ಕೆ ಬಂದಿದ್ದ ನಾನು ಅಪ್ಪ, ಅಮ್ಮನ ಮಾತಿನಿಂದಾಗಿ ಅತ್ತೆಯವರ ಬಗೆಗಿನ ನನ್ನ ದೃಷ್ಟಿ ಬದಲಿಸಿಕೊಂಡೆ. ಓದಲು, ಬರೆಯಲು ಬಾರದ ನನ್ನ ಅತ್ತೆಯವರ ಮಾತೃ ಹೃದಯದ ಅರಿವಾಯಿತು. ಮುಂದೆ ಆ ಮಹಾತಾಯಿ ನನಗೂ ಪ್ರೀತಿಯ ಕೈತುತ್ತು ಕೊಟ್ಟು ಅತ್ತೆಮ್ಮನಾಗಿದ್ದರು. ಈಗಲೂ ಅವರ ನೆನಪು ಬಂದಾಗಲೆಲ್ಲ ಮನ ಅರಳುತ್ತದೆ, ಕಣ್ಣು ತೇವವಾಗುತ್ತದೆ, ಹೃದಯ ತುಂಬಿ ಬರುತ್ತದೆ.

***

ನಾ ನಿನ್ನ ನೆರಳು

–ಜಿ.ವಿ.ನಿರ್ಮಲ

ನೀ ನನ್ನ ಜೊತೆಗಾರ
ನನ್ನೆಡೆಬಿಡದ ಮಿತ್ರ
ಓ ಬಿಟ್ಟಿರಲಾರೆ ನಿನ್ನ
ನೀನೇ ನನ್ನ ಸರ್ವಸ್ವ

ಬೈಗುರಾತ್ರಿಗಳಲ್ಲಿ
ನಿನ್ನ ಕೈ ಬಿಡಲಾರೆ
ಅರೆಕ್ಷಣ ಮರೆಯಾದರೆ
ಅವಾಂತರಗಳ ಸರಮಾಲೆ

ನಿನ್ನಿಂದಲೇ ಸುಪ್ರಭಾತ
ನೀನೇ ಸುದ್ದಿ ಸರದಾರ
ನೀ ಹಾಡಿದರೇ ಸಂಗೀತ
ನೀನೇ ಬಂಧು ಸಲಹೆಗಾರ

ನನ್ನ ಮಿತ್ರ ಬಳಗದವರು
ನಿನಗೂ ಪರಮಾಪ್ತರು
ಅವರ ಆಗುಹೋಗುಗಳು
ನಿನ್ನ ಅಂಗೈ ಗೆರೆಗಳು

ಆಪ್ತಜನ ಇದ್ದರೂ ದೂರ
ಎನಗಿಲ್ಲ ಚಿಂತೆ ಬೇಸರ
ಕಣ್ಣೆದುರು ತರುವ ಚತುರ
ನೀನಿರುವೆಯಲ್ಲೋ ಜೊತೆಗಾರ

ಸ್ವದೇಶದ ಸಿರಿ ಸಂಪತ್ತುಗಳ
ವಿದೇಶದ ಡೌಲು ವೈಭವಗಳ
ಚಮತ್ಕಾರ ಸಾಲು ಸರಣಿಗಳ
ಚಕ್ಕನೆ ತರುವೆ ಕಣ್ಮುಂದೆಯೆ

ಎಚ್ಚರಿಕೆಯ ಗಂಟೆ ಬಡಿವೆ
ಹೊತ್ತಿಗೆ ಬಡಿದೆಬ್ಬಿಸಿ ಬಿಡುವೆ
ವ್ಯಾಪಾರ ವ್ಯವಹಾರಗಳ ಸಲಿಸೆ
ನಿಭಾಯಿಸಿ ಆಯ್ತೆಂದು ನಗುವೆ

ಎಲ್ಲಡಗಿದ್ದೆಯೊ ಈಸು ದಿನ ಬಂಧುರ
ಸಿಕ್ಕಿರುವೆ ಎನಗೀಗ ಸುಪ್ತ ಸುಂದರ
ನಮ್ಮುಸಿರು ಒಂದಾಯ್ತು ಅತಿ ಮಧುರ
ಅನುಕ್ಷಣದ ಒಡನಾಟ ಅತೀತ ಅಮರ

ನನ್ನ ಅಸ್ತಿತ್ವ ಇಂದು ನಿನ್ನ ಪರಿಭಾಷೆ
ಮಂದಿ ಮಕ್ಕಳಿಗೆ ನೀನೇ ಚಿಂತಾಮಣಿ
ನನ್ನ ಅರಗಿಣಿಯೆ ನಿನಗೆ ನಾ ಚಿರಋಣಿ
ಸ್ವೀಕರಿಸು ನಮಿಸುವೆ ಓ ನನ್ನ ಚರವಾಣಿ

***

ಅಹಂಕಾರದ ಅಳಿವು

– ವಿಠ್ಠಲ ಇಜೇರಿ

ನಂಬಿಕೆ ಎನ್ನುವುದು ಜೀವನದಲ್ಲಿ ಬಹಳ ಮುಖ್ಯ. ಮೂಢನಂಬಿಕೆ ಜೀವನದ ಸಮಾಧಿ. ನಾವೆಷ್ಟೇ ಬಲಶಾಲಿಗಳಾಗಿರಬಹುದು, ಬುದ್ಧಿವಂತರಾಗಿರಬಹುದು, ಚಾಣಾಕ್ಷರಾಗಿರಬಹುದು, ಸುಂದರರಾಗಿರಬಹುದು. ನಮ್ಮ ಮೇಲೆ ನಮಗೆ ನಂಬಿಕೆ ಇಲ್ಲದಿದ್ದರೆ ನಮ್ಮ ವಿಶೇಷಣಗಳೆಲ್ಲ ಗೌಣ, ಅರ್ಥಹೀನ. ಭೂಮಿಯ ಮೇಲೆ ಬದುಕು ನಿಂತಿರುವುದೇ ನಂಬಿಕೆಯ ಮೇಲೆ. ಬೇರೆಯವರು ನಮ್ಮನ್ನು ನಂಬದಿರಬಹುದು, ನಾವು ದೇವರೆಂದು ಗುರುತಿಸುವ ಅತಿಮಾನುಷ ಶಕ್ತಿಯ ಮೇಲಿನ ನಂಬಿಕೆ ಇರಬಹುದು. ಒಟ್ಟಾರೆ ನಂಬಿಕೆ ಎಂಬುದನ್ನು ಕಳೆದುಕೊಂಡ ಕ್ಷಣದಲ್ಲಿ ಮನಸ್ಸು ವಿಲವಿಲ ಒದ್ದಾಡುತ್ತದೆ. ಒಂದು ಹೆಜ್ಜೆಯನ್ನೂ ಮಂದಿಡಲಾರದ ಸ್ಥಿತಿಯನ್ನು ತಲುಪಿಬಿಡುತ್ತದೆ. ಆ ದಾರಿಯಲ್ಲಿ ಅಡ್ಡಿ ಆತಂಕಗಳು ಇರುವುದೇ ಇಲ್ಲ ಅಂತ ಅಲ್ಲ. ಆದರೆ ಗುರಿ ಮುಟ್ಟಿಯೇ ತೀರುತ್ತೇವೆ ಎಂಬ ನಂಬಿಕೆ ಇರುವಾಗ ಉಳಿದ ಸಮಸ್ಯೆಗಳೆಲ್ಲ ನಗಣ್ಯ. ನಂಬಿಕೆ ಎಂಬುದು ನಮ್ಮ ಬಲವಲ್ಲ, ನಮ್ಮ ಪ್ರಯತ್ನಗಳಿಗೆ ಅದು ಬೆಂಬಲ.

ಇದಕ್ಕೆ ಪೂರಕವಾಗಿ ನೈತಿಕತೆಯ ಮಹತ್ವ ಸಾರುವ ಇನ್ನೊಂದು ದಂತ ಕತೆ ಹೀಗಿದೆ.

ಹಿಂದೆ ಚೀನಾ ದೇಶದಲ್ಲಿ ಲಾವೊಜೀ ಎಂಬ ತತ್ವಜ್ಞಾನಿ ಅಂದಿನ ಸಮಾಜದ ನೈತಿಕ ಅಧಃಪತನದಿಂದ ಬೇಸರಗೊಂಡು ಆ ದೇಶವನ್ನೇ ತೊರೆದು ಹೊರಟಿದ್ದ. ಗಡಿಯಲ್ಲಿಯ ಸುಂಕದಕಟ್ಟೆಯವನು ಅವನನ್ನು ಕೂಡಿಸಿ, ಬಿಸಿ ಚಹ ಕುಡಿಸಿ ಮಾತಿಗೆ ತೊಡಗಿದನು. ಲಾವೊಜೀ ದೇಶ ತೊರೆಯುತ್ತಿರುವ ಕಾರಣ ತಿಳಿಸಿದನು. ಆಗ ಸುಂಕದಕಟ್ಟೆಯವನು ಲಾವೋಜಿಯ ಜ್ಞಾನಪೂರ್ಣ ಮಾತುಗಳಿಂದ ಪ್ರಭಾವಿತನಾಗಿ ಅವನಿಗೆ, "ಎಲ್ಲ ಕಾಲದಲ್ಲೂ ಎಲ್ಲ ದೇಶಗಳಲ್ಲೂ ಈ ಒಳ್ಳೆಯವರ ಮತ್ತು ಕೆಟ್ಟವರ ತಾರತಮ್ಯ ಇದ್ದದ್ದೇ. ನೀನು ನಿನ್ನ ಪಾಡಿಗೆ ನಿನ್ನ ಚಿಂತನೆಗಳನ್ನು ಒಂದೆಡೆ ಬರೆದಿಡು" ಎಂದು ಹೇಳಿದ. ಅದರ ಪ್ರತಿಫಲ ಅವನ ಚಿಂತನೆಗಳು 'ದಾವೊಡಿ ಜಿಂಗ್' ಎಂಬ ಪುಸ್ತಕದಲ್ಲಿ ಸಂಗ್ರಹಿಸಲ್ಪಟ್ಟು ಅನೇಕರಿಗೆ ದಾರಿದೀಪವಾಯಿತು. ಈಗ ಈ ತತ್ವಗಳನ್ನು ಒಳಗೊಂಡ ರಾ. ಕೃ. ಮಠದ ಹಿರಿಯ ಯತಿಗಳ ಸಂಗ್ರದಿಂದ ಅಹಂಕಾರದ ಅಳಿವು ಎಂಬ ಕತೆಯನ್ನು ನೋಡೋಣ.

ಷಾ ಇಬ್ರಾಹಿಮ್ ಎಂಬ ಅರಸನು ಬೋಬಾರ್ ಎಂಬ ರಾಜ್ಯವನ್ನು ಆಳುತ್ತಿದ್ದ. ಅವನಿಗೆ ಆಧ್ಯಾತ್ಮದಲ್ಲಿ ಆಸಕ್ತಿ ಇತ್ತು ಮತ್ತು ಸಾಧು ಸಂತರಲ್ಲಿ ನಂಬಿಕೆ ಇತ್ತು. ಬಡಬಗ್ಗರ ಬಗ್ಗೆ ಕರುಣೆ ತೋರುತ್ತಿದ್ದನು ಮತ್ತು ಭಗವಂತನ ಧ್ಯಾನ ಮಾಡಿ ಮೋಕ್ಷಹೊಂದುವ ಅಪೇಕ್ಷೆ ಹೊಂದಿದ್ದನು. ಆದರೆ ಅವನು ರಾಜನಲ್ಲವೇ, ಅವನಿಗೆ ಸಾಕಷ್ಟು ಅನುಕೂಲಗಳಿದ್ದವು. ಹಾಗಾಗಿ ವೈಯಕ್ತಿಕ ಜೀವನದಲ್ಲಿ ಭಯಂಕರ ಭೋಗಿಯಾಗಿದ್ದನು. ಸದಾ ಸುಪ್ಪತ್ತಿಗೆಯ ಮೇಲೆ ಮಲಗುತ್ತಲಿದ್ದನು. ಅಮೋದ ಪ್ರಮೋದಗಳಲ್ಲಿ ಮುಳುಗಿದ್ದನು. ರಾಜನ ಆಪ್ತ ಮಂತ್ರಿ ಇಷ್ಟೊಂದು ಒಳ್ಳೆಯ ಗುಣ ಹೊಂದಿದ ರಾಜ ತನ್ನ ಭೋಗದ ಕಾರಣ ಕೆಟ್ಟ ಹೆಸರು ಹೊಂದಬಹುದು ಎಂದು ಅವರಿಗೊಂದು ಪಾಠ ಕಲಿಸಲು ಮುಂದಾದ.

ಒಂದು ದಿನ ರಾಜ ಅಂತಃಪುರದಲ್ಲಿ ಘಮಘಮಿಸುವ ಹೂವಿನಿಂದ ಆಚ್ಛಾದಿತ ಸುಪ್ಪತ್ತಿಗೆ ಮೇಲೆ ಮಲಗುವ ವೇಳೆಗೆ ಅರಮನೆಯ ಛಾವಣಿ ಮೇಲೆ ಒಂದಿಬ್ಬರು ಓಡಾಡುವ ಶಬ್ದ ಕೇಳಿಬಂತು. ಕೂಡಲೇ ಅರಸ ರಾಜಭಟರನ್ನು ಕರೆದು, ಮೇಲೆ ಅದಾರು ಇದ್ದಾರೋ ಕರೆತನ್ನಿ ಎಂದು ಆಜ್ಞಾಪಿಸಿದ. ಅವರು ಇಬ್ಬರು ಅಮಾಯಕರನ್ನು ಎಳೆದು ತಂದರು. ‘‘ಮೇಲೆ ಅದೇನು ಮಾಡುತ್ತಿರುವಿರಿ" ಎಂದು ರಾಜ ಗದರಿದ. ಅವರು ಹೆದರಲಿಲ್ಲ, ಯಾಕೆಂದರೆ ಅವರಿಗೆ ಮಂತ್ರಿಗಳ ಶ್ರೀರಕ್ಷೆ ಇತ್ತು. ಅವರಿಬ್ಬರೂ "ಪ್ರಭು, ನಾವು ಕಳೆದುಕೊಂಡ ನಾಲ್ಕು ಒಂಟೆಗಳನ್ನು ಹುಡುಕುತ್ತಿದ್ದೇವೆ" ಅಂದರು. ರಾಜನಿಗೆ ನಗು ಬಂತು. "ಎಂಥ ಮೂರ್ಖರಯ್ಯ ನೀವು, ಒಂಟೆಗಳು ಅರಮನೆ ಛಾವಣಿ ಏರುತ್ತವೆಯಾ?’’ ಎಂದು ಕೇಳಿದ. ಅವರಿಬ್ಬರೂ "ಪ್ರಭುಗಳು ಮನ್ನಿಸಬೇಕು, ಭೋಗವಸ್ತುಗಳ ಮಧ್ಯೆ ಭಗವಂತ ದೊರೆಯುವನಾದರೆ ಒಂಟೆಗಳು ಛಾವಣಿ ಏರಿದರೂ ಆಶ್ಚರ್ಯವಿಲ್ಲ" ಅಂದುಬಿಟ್ಟರು.

ಅರಸನಿಗೆ ಒಮ್ಮೆಲೇ ದಿಗ್ಭ್ರಮೆಯಾಯಿತು. ಅದೇ ಕ್ಷಣದಲ್ಲಿ ಎಲ್ಲವನ್ನೂ ತ್ಯಾಗಮಾಡಿ ದೇಶಾಂತರ ಹೊರಟುಬಿಟ್ಟ. ಹಾಗೆ ಹೊರಟವನು ಭಾರತಕ್ಕೆ ಬಂದು, ಕಾಶಿಯಲ್ಲಿ ಸಂತ ಕಬೀರರಲ್ಲಿಗೆ ಬಂದು ತನ್ನ ಹಿನ್ನೆಲೆ ಹೇಳಿಕೊಂಡು, ‘‘ನಿಮ್ಮಲ್ಲಿ ಸೇವೆ ಮಾಡುವ ಅವಕಾಶ ಮಾಡಿಕೊಡಬೇಕು" ಅಂದ. ಕಬೀರರು "ನಾನೇ ಆ ದೇವರ ಸೇವಕ. ನಿಮಗೆ ಹೇಗೆ ಅವಕಾಶ ಒದಗಿಸುವುದು" ಅಂದರೂ, ಷಾ ಇಬ್ರಾಹಿಂ ಅವರೊಡನೆ ಇರಲು ಅನುಮತಿ ಪಡೆದ. ಆರು ವರ್ಷಗಳು ಅವರ ನೇಯ್ಗೆ ಕೆಲಸದಲ್ಲಿ ಸಹಾಯ ಮಾಡಿಕೊಂಡು ವಿಧೇಯನಾಗಿದ್ದ. ಕಬೀರರ ಹೆಂಡತಿ ಗಂಡನಿಗೆ "ರೀ, ಅವರು ಅಷ್ಟೊಂದು ವಿಧೇಯತೆಯಿಂದ ಆರು ವರ್ಷ ಕಳೆದಿದ್ದಾರೆ, ಅವರಿಗೆ ಏನಾದರೂ ಆಧ್ಯಾತ್ಮ ಹೇಳಿಕೊಡಿ" ಎಂದು ಶಿಫಾರಸು ಮಾಡಿದಳು. ಕಬೀರರು, "ಇಲ್ಲ ಇನ್ನೂ ಮನುಷ್ಯ ಪಕ್ವವಾಗಬೇಕು, ಬೇಕಾದರೆ ಪರೀಕ್ಷೆ ಮಾಡು. ನಾಳೆ ಮನೆ ಮೇಲಿಂದ ಅವರ ಮೇಲೆ ಕಸ ಸುರಿದುಬಿಡು, ಅವರ ಪ್ರತಿಕ್ರಿಯೆಯನ್ನು ಗಮನಿಸು" ಎಂದು ಹೇಳಿದರು. ಮರುದಿನ ಆಕೆ ಷಾ ಇಬ್ರಾಹಿಂ ಮೇಲೆ ಕಸ ಸುರಿಯುತ್ತಲೇ, ಅವರು ತಲೆ ಎತ್ತಿ ಕೋಪದಿಂದ "ನಾನೇನಾದರೂ ಈಗಲೂ ರಾಜನಾಗಿದ್ದರೆ ಕಸ ಎಸೆದವರ ಕೈ ಕತ್ತರಿಸುತ್ತಿದ್ದೆ" ಎಂದು ಕೂಗಿದ. ಕಬೀರರು ಹೆಂಡತಿಗೆ ‘‘ಇನ್ನೂ ಕಾಲ ಪಕ್ವವಾಗಿಲ್ಲ" ಎಂದು ನುಡಿದರು.

ಮತ್ತೆ ಆರು ವರ್ಷಗಳು ಕಳೆದವು. ಆಗ ಒಂದು ದಿನ ಕಬೀರರು ಹೆಂಡತಿಗೆ, "ನಾಳೆ ಇಬ್ರಾಹಿಂ ಮೇಲೆ ಕಸ ಸುರಿದು ನೋಡು. ಈಗ ಅವರ ಮನಸ್ಸು ಪಕ್ವವಾಗಿ ಭಗವಂತನಲ್ಲಿ ನೆಲೆ ನಿಂತಿದೆ" ಎಂದು ಹೇಳಿದರು. ಮರುದಿನ ಆಕೆ ಅವರ ಮೇಲೆ ಕಸ ಸುರಿದಳು. ಷಾ ಇಬ್ರಾಹಿಂ ವಿನೀತನಾಗಿ ಆಕಾಶದತ್ತ ತಲೆ ಎತ್ತಿ, "ಭಗವಂತ ಇದಕ್ಕೂ ಹೆಚ್ಚಿನ ಶಿಕ್ಷೆ ಕೊಡು, ಈ ಅಹಂಕಾರ ತುಂಬಿದ ಮನಸ್ಸು ಇದಕ್ಕಿಂತ ಹೆಚ್ಚಿನ ಶಿಕ್ಷೆ ಅನುಭವಿಸಲಿ" ಅಂದರು. ಆಗ ಕಬೀರರು ನಗುತ್ತ, ‘‘ಈಗ ಅವರು ಅಹಂಕಾರ ರಹಿತರಾಗಿದ್ದಾರೆ, ಇನ್ನು ಪಾಠ ಪ್ರಾರಂಭಿಸಬಹುದು" ಎಂದ ಕಬೀರರು, ಮರುದಿನದಿಂದ ಅವನನ್ನು ಶಿಷ್ಯನನ್ನಾಗಿ ಸ್ವೀಕರಿಸಿ ಮಂತ್ರೋಪದೇಶ ನೀಡಿ, ಅಧ್ಯಾತ್ಮಿಕ ಮಾರ್ಗದರ್ಶನ ನೀಡತೊಡಗಿದರು. ಅನಂತರ ಇಬ್ರಾಹಿಂನಿಗೆ, "ಭಗವಂತನ ಕೃಪೆ ನಿನಗಾಗಿದೆ, ಈಗ ನೀನು ಎಲ್ಲಿ ಬೇಕಾದರೂ ಹೋಗಬಹುದು" ಎಂದು ಅಪ್ಪಣೆ ಕೊಡಿಸಿದರು.

ಕಬೀರರಿಂದ ದೀಕ್ಷೆ ಪಡೆದ ಅರಸ ತನ್ನ ರಾಜ್ಯಕ್ಕೆ ಹಿಂದಿರುಗಿದರೂ ಅರಮನೆಗೆ ಹೋಗಲಿಲ್ಲ. ಅಲ್ಲಿಯ ನದಿತಟದಲ್ಲಿ ತನ್ನ ಹರಿದ ಬಟ್ಟೆಯನ್ನು ಚಿಕ್ಕ ಸೂಜಿಯಿಂದ ಹೊಲಿಯುತ್ತ ಕುಳಿತಿದ್ದನು. ಆ ಸಮಯಕ್ಕೆ ಅಲ್ಲಿಗೆ ಕುದುರೆಯ ಮೇಲೆ ಒಬ್ಬ ಮಧ್ಯಮ ವಯಸ್ಕ ಬಂದ. ಅವನು ರಾಜನನ್ನು ಗುರುತಿಸಿ, "ನೀವು ಈ ರಾಜ್ಯದ ರಾಜರಲ್ಲವೇ, ಇಲ್ಲೇಕೆ ಕುಳಿತಿರುವಿರಿ. ನಾನು ನಿಮ್ಮ ಮಕ್ಕಳಿಗೆ ಯುದ್ಧ ವಿದ್ಯೆ ಕಲಿಸಿಕೊಟ್ಟಿದ್ದೇನೆ. ಬನ್ನಿ ಅರಮನೆಗೆ ಹೋಗೋಣ" ಅಂದ.

ರಾಜ ತಾನು ಹೊಲಿಯುತ್ತಿದ್ದ ಸೂಜಿಯನ್ನು ಹರಿಯುವ ನದಿಗೆ ಎಸೆದು, "ಆ ಸೂಜಿಯನ್ನು ತಂದು ಕೊಡುವುದಾದರೆ ನಾನು ಬರುವೆ" ಎಂದು ಹೇಳಿದರು. ಆ ಆಗಂತುಕ "ಸಾಧ್ಯವಿಲ್ಲ ಮಹಾರಾಜಾ, ಬೇಕಿದ್ದರೆ ನಿಮಗೆ ನೂರಾರು ಹೊಸ ಸೂಜಿಗಳನ್ನು ತಂದು ಕೊಡಬಲ್ಲೆ" ಅಂದ. ಇಬ್ರಾಹಿಂ "ಇಲ್ಲ ನನಗೆ ಅದೇ ಸೂಜಿ ಬೇಕು" ಅಂದ. ಆಗ ಆ ಯುವಕ "ಅದ್ಹೇಗೆ ಸಾಧ್ಯ, ನೀರು ರಭಸವಾಗಿ ಹರಿಯುತ್ತಿದೆ". ರಾಜ ನದಿಯತ್ತ ನೋಡಿದ, ಪುಟ್ಟ ಮೀನು ಒಂದು ಬಾಯಲ್ಲಿ ಆ ಸೂಜಿಯನ್ನು ಕಚ್ಚಿ ತಂದು ಅರಸನ ಎದುರು ಹಾಕಿ ನೀರಿಗೆ ಹಾರಿತು. ರಾಜ ಹೇಳಿದ. "ನಾನು ರಾಜನಾಗಿಯೇ ಇದ್ದರೆ ಈ ಕೆಲಸ ಮಾಡಲು ಆಗುತ್ತಿರಲಿಲ್ಲ. ಭಗವಂತನ ದಾಸನಾದರೆ ಎಂತಹ ಕೆಲಸವೂ ಸುಲಭ. ಎಂತಹ ಪವಾಡವೂ ಜರುಗಬಹುದು. ಹೇಗೆ ಕಳೆದುಹೋದ ಸೂಜಿಯನ್ನು ಪಡೆಯಲಾರೆಯೋ, ಹಾಗೆ ಕಳೆದುಹೋದ ಈ ರಾಜನನ್ನು ಮರಳಿ ಪಡೆಯಲಾರೆ. ನಾನೀಗ ಬೇರೆ ರಾಜ್ಯಕ್ಕೆ ಸೇರಿದವನು" ಎಂದು ಹೇಳಿ ಕುದುರೆ ಸವಾರನನ್ನು ಮರಳಿ ಕಳಿಸಿದ.

***

ಪುಸ್ತಕ ಪರಿಚಯ

'ಪುಟಗಳ ನಡುವಣ ನವಿಲುಗರಿ – ಅಭಿಜಾತ ಭಾರತೀಯ ಕಥಾಕಲಾಪ'

ಲೇಖಕ: ಶತಾವಧಾನಿ ಡಾ. ಆರ್. ಗಣೇಶ್

– ನಾಗಮಂಗಲ ಶಾಂತಾ



ಬಹುಭಾಷಾವಿದರಾದ ಶತಾವಧಾನಿಗಳ ಓದಿನ ಆಳ–ಅಗಲಗಳನ್ನು ಅಳೆಯುವುದಿರಲಿ, ಊಹಿಸುವುದೂ ಅಸಾಧ್ಯ. ತಮ್ಮ ನಿಡುಗಾಲದ ಓದಿನ, ವಿಶೇಷವಾಗಿ ಅಭಿಜಾತ ಸಾಹಿತ್ಯದ ಓದಿನ ಹಾದಿಯಲ್ಲಿ ತಮ್ಮೊಳಗನ್ನು ತಟ್ಟಿದ ಅನೇಕ ಸಂದರ್ಭಗಳ, ಪಾತ್ರಗಳ ಸುತ್ತ ಆಗ್ಗಾಗ್ಗೆ ಬರೆದಿದ್ದ ಕಥೆಗಳನ್ನು ಇದೀಗ ಒಟ್ಟುಮಾಡಿ, 'ಪುಟಗಳ ನಡುವಣ ನವಿಲುಗರಿ– ಅಭಿಜಾತ ಭಾರತೀಯ ಕಥಾಕಲಾಪ' ಎಂಬ ಹೆಸರಿನಲ್ಲಿ ಪುಸ್ತಕವಾಗಿಸಿದ್ದಾರೆ. ಇವುಗಳಲ್ಲಿ ಅನೇಕ ಕಥೆಗಳು ನಾಡಿನ ಹೆಸರಾಂತ ವಾರಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಪ್ರಶಸ್ತಿಗಳನ್ನು ಪಡೆದಿವೆ. ಇವೆಲ್ಲವನ್ನೂ ಪುಸ್ತಕವಾಗಿ ಪ್ರಕಟಿಸಿ ಕನ್ನಡದ ಓದುಗರೆಲ್ಲರಿಗೂ ಸಿಗುವಂತೆ ಮಾಡಿರುವುದು ಬೆಂಗಳೂರಿನ 'ವಸಂತ ಪ್ರಕಾಶನ'. ಇದು ೨೦೨೪, ಏಪ್ರಿಲ್ ತಿಂಗಳಲ್ಲಿ ಲೋಕಾರ್ಪಣೆ ಗೊಂಡಿದೆ.

ಪುಸ್ತಕದ ಒಳತಿರುಳನ್ನು ಸವಿಯಲು ಆಹ್ವಾನ ಕೊಡುವಂತೆ ಲಯಬದ್ಧವಾದ ಶೀರ್ಷಿಕೆಯೇ ಬಹಳ ಆಕರ್ಷಕವೂ, ಧ್ವನಿಪೂರ್ಣವೂ ಆಗಿದೆ.

ನಾವೆಲ್ಲಾ ಎಳವೆಯಲ್ಲಿ ನವಿಲುಗರಿಯೊಂದನ್ನು ಪುಸ್ತಕದ ಹಾಳೆಗಳ ಮಧ್ಯೆ ಇಟ್ಟು ಅದು ಮರಿಹಾಕುತ್ತದೆ ಎಂದು ನಂಬಿ ಕಾಯುತ್ತಿದ್ದುದು ನೆನಪಿರಬಹುದು. ಹಾಗೆ ಶತಾವಧಾನಿಗಳು ತಾವು ಓದಿದ ಒಂದೊಂದು ಪುಸ್ತಕದ ನಡುವೆಯೂ ಹಲವು ಕಣ್ಣಿರುವ ನವಿಲುಗರಿಯನ್ನು ಇಡುತ್ತಾ, ಅದು ತನ್ನ ಕಣ್ಣುಗಳಿಂದ ಕಾಣಿಸಿದ, ಸಾಮಾನ್ಯ ಓದುಗರ ಕಣ್ಣಿಗೆ ಕಾಣದ ಹಲವಾರು ಸಂಗತಿಗಳನ್ನು ಇಲ್ಲಿ ಕಥೆಯಾಗಿಸಿ ನಮಗೆ ಕೊಟ್ಟಿದ್ದಾರೆ. ಈ ಕಥೆಗಳು ಬಹುಪಾಲು ಸಂಸ್ಕೃತ ಕಾವ್ಯ–ನಾಟಕಗಳಲ್ಲಿ ಬರುವ ಪ್ರಸಂಗಗಳು ಮತ್ತು ಪಾತ್ರಗಳನ್ನು ಆಧರಿಸಿಕೊಂಡಿವೆ.

ಇಲ್ಲಿಯ ಕಥೆಗಳು ಅನುವಾದದ ಮೂಲಕವಾದರೂ ಸರಿ, ಸಂಸ್ಕೃತದ ಕಾವ್ಯನಾಟಕಗಳ ಸ್ವಲ್ಪ ಪರಿಚಯವಿರುವವರ ನೆನಪುಗಳನ್ನು ಕೆದಕಿ, ಓ ಹೀಗೂ ಇರಬಹುದಾ ಎನ್ನಿಸಿ ಮೈ ಝುಮ್ಮೆನ್ನುವಂತೆ ಮಾಡುತ್ತವೆಯಾದರೆ, ಅವುಗಳ ಪ್ರವೇಶವಿಲ್ಲದಿರುವವರಿಗೆ ಅವುಗಳನ್ನು ಓದುವ ಹಂಬಲ ಮೂಡಿಸುತ್ತವೆ.

ಗಣೇಶರದೇ ಮುನ್ನುಡಿಯಂಥ ಅರಿಕೆಯೂ ಸೇರಿದಂತೆ ೧೯೯ ಪುಟಗಳಿರುವ 'ಪುಟಗಳ ನಡುವಣ ನವಿಲುಗರಿ'– ಈ ಕಥಾ ಸಂಕಲನದಲ್ಲಿ ಒಟ್ಟು ೧೦ ಕಥಾನಕಗಳಿವೆ. ಕೊನೆಯಲ್ಲಿ ಗಣೇಶರ ಗರಡಿಯಲ್ಲಿ ಪಳಗಿದ ತರುಣ ವಿದ್ವಾಂಸ ಬಿ.ಎನ್.ಶಶಿಕಿರಣ ಬರೆದಿರುವ 'ನವಿಲುಗರಿಯ ಸೊಬಗು' ಎಂಬೊಂದು ವಿಶ್ಲೇಷಣಾತ್ಮಕ ಲೇಖನವಿದೆ. ಈ ಲೇಖನವು ಓದುಗರಿಗೆ ಸಂಕಲನದ ಕಥೆಗಳ ಆಂತರ್ಯವನ್ನು ಅರಿಯಲು ಸಹಕಾರಿಯಾಗಿದೆ ಎನ್ನಬಹುದು. ಇದು ಕೊನೆಯಲ್ಲಿ ಇರುವುದು ಸಹ ಬಹಳ ಉಚಿತವಾಗಿದೆ. ಓದುಗರಿಗೆ ಕಥೆಗಳನ್ನು ಕುರಿತಂತೆ ಸ್ವತಂತ್ರವಾದ ಅಭಿಪ್ರಾಯಗಳನ್ನು ರೂಪಿಸಿಕೊಳ್ಳಲು ಅವಕಾಶ ಕೊಟ್ಟಂತಾಗಿದೆ ಎನ್ನಬಹುದು.

ಹತ್ತು ಕಥೆಗಳಲ್ಲಿ ಮೊದಲೆರಡು ಕಥಾನಕಗಳಾದ 'ಸೀತಾ ಸಂದೇಹ', 'ಆತ್ಮಾನಂ ಮಾನುಷಂ ಮನ್ಯೇ'.. ಹೆಸರೇ ಹೇಳುವಂತೆ ರಾಮಾಯಣಕ್ಕೆ ಸಂಬಂಧಿಸಿದ ಕಥಾನಕಗಳಾಗಿವೆ. (ಇಲ್ಲಿ ರಾಮಾಯಣವೆಂದರೆ ಕೇವಲ ವಾಲ್ಮೀಕಿಗಳ ರಾಮಾಯಣ ಮಾತ್ರವಲ್ಲದೆ, ಕಾಳಿದಾಸನ ರಘುವಂಶ, ಭವಭೂತಿಯ ಉತ್ತರರಾಮ ಚರಿತೆ ಮೊದಲಾದ ಹಲವು ಕೃತಿಗಳ ಸಾರವೇ ಅಡಗಿದೆ. ಸ್ವತಃ ಲೇಖಕರೇ ಒಂದೊಂದು ಕಥೆಯ ಕೊನೆಯಲ್ಲಿ ಕಥೆಗೆ ಬೀಜವಾದ ಕಾವ್ಯನಾಟಕಗಳ, ಸಂಗತಿಗಳ ವಿವರಗಳನ್ನು ಕೊಟ್ಟಿದ್ದಾರೆ).

ಸೀತೆಯ ಸಂದೇಹ– ಈ ಕಥಾನಕವು ವಾಲ್ಮೀಕಿಗಳ ಆಶ್ರಮದಲ್ಲಿ ಸೀತೆಯು ತನ್ನ ಬೆಳೆದ ಅವಳಿ ಮಕ್ಕಳ ಜೊತೆ ಇರುತ್ತಿದ್ದ ಕಾಲಘಟ್ಟವನ್ನು ಚಿತ್ರಿಸಿದೆ. ಅಂದರೆ ರಾಮ ಅನತಿ ದೂರದಲ್ಲೇ ಇದ್ದ ಅಯೋಧ್ಯೆಯಲ್ಲಿ ಆಳ್ವಿಕೆ ನಡೆಸುತ್ತಿದ್ದ ಕಾಲ. ಕಥೆ ಆರಂಭವಾಗುವಾಗ ಭಗವಾನ್ ವಾಲ್ಮೀಕಿಗಳು ಆಶ್ರಮವಾಸಿಗಳ ಸಂತೋಷಕ್ಕಾಗಿ ತಾವೇ ಬರೆದ ರಾಮಾಯಣದ 'ಸೀತಾಕಲ್ಯಾಣ'ದ ಭಾಗವನ್ನು ಗಾನವನ್ನು ಲವಕುಶರಿಂದ ಮಾಡಿಸಿ, ತಾವೇ ವ್ಯಾಖ್ಯಾನಿಸುತ್ತಿರುತ್ತಾರೆ. ಅಲ್ಲೇ ಇದ್ದ ಸೀತೆಯೂ ಇದನ್ನು ಕೇಳುತ್ತಿರುತ್ತಾಳೆ. ಸೀತೆಗೆ ಇದು ಲೇಖಕರೇ ಹೇಳುವಂತೆ 'ಅವಳೊಳಗೆ ಹೂತುಹೋಗಿದ್ದ ಹಳೆಯ ಭಗ್ನಭವನದ ಅವಶೇಷಗಳನ್ನು ಮೇಲಕೆತ್ತುವ ಮೀಟುಗೋಲಿ' ನಂತಾಗುತ್ತದೆ.

ಈ ಅವಶೇಷಗಳ ನಡುವೆಯೇ ಬದುಕು ಸಾಗಿಸುತ್ತಿದ್ದ ಸೀತೆಯ ದಿನಚರಿಗಳನ್ನು ಕಥೆಯು ವಿಭಿನ್ನವಾದ ರೀತಿಯಲ್ಲಿ ತೆರೆದಿಡುತ್ತಾ ಹೋಗುತ್ತದೆ. ಇಲ್ಲಿ ಸೀತೆ ತನ್ನ ಮಕ್ಕಳಿಗೆ ಶಸ್ತ್ರವಿದ್ಯೆಯನ್ನೂ ಕಲಿಸುವ ಕ್ಷತ್ರಾಣಿಯೂ ಆಗಿದ್ದಾಳೆ. ತನ್ನದೇ ಕಥೆಯನ್ನು ಪ್ರತಿಮಾಡುವ ಪ್ರತಿಲಿಪಿಕಾರಳೂ ಅಗಿದ್ದಾಳೆ. ಆಶ್ರಮದ ಎಲ್ಲ ಕೆಲಸಗಳಲ್ಲಿ ಕೈಜೋಡಿಸುವ ಸಾಮಾನ್ಯ ಹೆಣ್ಣೂ ಆಗಿದ್ದಾಳೆ. ವಿಧಿಯ ಬರಹದಂತೆ ಬದುಕು ಸಾಗುತ್ತಿರುವಾಗ, ಅಯೋಧ್ಯೆಯಿಂದ ಬಂದ ಸುದ್ದಿ 'ರಾಮನು ಯಜ್ಞದೀಕ್ಷಿತ ನಾಗಿದ್ದಾನೆ'. ಇದು ಸೀತೆಯನ್ನು ಬಹಳ ತಳಮಳಕ್ಕೆ ಈಡುಮಾಡುತ್ತದೆ. ಸಿಡಿಲುಬಡಿದಂತಾಗುತ್ತದೆ. ಏಕೆಂದರೆ ಪತ್ನಿವಿಹೀನನಿಗೆ ಯಜ್ಞಾಧಿಕಾರವಿಲ್ಲ ಎಂಬ ವಿಷಯ ಜನಕನ ಮಗಳಾದ ಸೀತೆಗೆ ಚೆನ್ನಾಗಿ ಗೊತ್ತಿದ್ದ ವಿಷಯವೇ. ಹಾಗಿರಬೇಕಾದರೆ ರಾಮ, ಅದರಲ್ಲೂ ಮಹಾ ಆಚಾರವಂತನಾದ ರಾಮ, ಯಜ್ಞದೀಕ್ಷಿತನಾಗಿದ್ದಾನೆ ಎಂದರೆ? ಅವನಿಗೆ ಮರುವಿವಾಹ... ಊಹಿಸಲೂ ಆಗದ ಸಂದೇಹ ಸೀತೆಯನ್ನು ಬಸವಳಿಯುವಂತೆ ಮಾಡುತ್ತದೆ. ಅದರ ಪರಿಹಾರ ಹೇಗಾಗುತ್ತದೆ? ಸೀತೆಯ ತುಮುಲಗಳೇನು? ಇವೆಲ್ಲವನ್ನೂ ಹಲವಾರು ಕಾವ್ಯ-ನಾಟಕಗಳ

ಬೆಳಕಿನಲ್ಲಿ ತಮ್ಮ ಹೃದಯ ಕಂಡುಕೊಂಡ ಸತ್ಯವನ್ನು ಮನೋಜ್ಞವಾಗಿ ಕಟ್ಟಿಕೊಡುವ ಕಥೆ ಇದು. ಲೋಕ ಏನೇ ಹೇಳಲಿ, ಸೀತಾರಾಮರ ಪರಸ್ಪರ ಪ್ರೇಮ, ವಿಶ್ವಾಸಗಳ ಪರಾಕಾಷ್ಠೆಯನ್ನು ಮನಗಾಣಿಸುವ ಕಥೆ ಇದು ಎನ್ನಬಹುದು.

'ಆತ್ಮಾನಂ ಮಾನುಷಂ ಮನ್ಯೇ...' ವಾಲ್ಮೀಕಿಗಳ ರಾಮಾಯಣದಲ್ಲಿ ರಾಮನೇ ಹೇಳಿರುವ ಮಾತನ್ನೇ ಶೀರ್ಷಿಕೆಯಾಗಿ ಹೊಂದಿರುವ ಕಥೆಯಲ್ಲಿ, ಪಾದುಕಾಕಿರೀಟಿಯಾಗಿ, ಅನಾಯಾಸವಾಗಿ ತನ್ನ ಪಾಲಿಗೆ ಬಂದಿದ್ದ ಕೋಸಲದ ರಾಜ್ಯವನ್ನು ಅನುಭವಿಸದೆ, ತಾನೂ ಕಾಷಾಯವುಟ್ಟು ೧೪ ವರ್ಷಗಳೂ ನಂದಿಗ್ರಾಮದಿಂದ ರಾಜ್ಯವನ್ನು ನೋಡಿಕೊಂಡ ಭರತನಂಥ ಸೋದರನನ್ನು ರಾಮ ಒಂದು ಕ್ಷಣ ಸಂದೇಹಿಸಿದ ಸಂಗತಿಯ ಸುತ್ತ ಹೆಣೆದ ಕಥೆ. ಈ ಕಥೆಯಲ್ಲಿ ಎಲ್ಲ ಪಾತ್ರಗಳು ಮಾಗಿ ಹಣ್ಣಾದ ಪಾತ್ರಗಳು. ತಮ್ಮ ತಮ್ಮ ಗತವನ್ನು ತಡಕಿ ನೋಡುತ್ತಾ ತಪ್ಪು-ಒಪ್ಪುಗಳನ್ನು ಲೆಕ್ಕಹಾಕುತ್ತಾ ಆತ್ಮವಿಮರ್ಶೆ ಮಾಡಿಕೊಳ್ಳುವ ಪರಿ ಸೊಗಸಾಗಿ ಚಿತ್ರಿತವಾಗಿದೆ. ಕೊನೆಯಲ್ಲಿ ಆದಿಕವಿಗಳು ತನ್ನನ್ನು ಎಷ್ಟೇ ಹಾಡಿ ಹೊಗಳಿದರೂ, 'ನಾನು ಕೇವಲ ಒಬ್ಬ ಮನುಷ್ಯ ಮಾತ್ರ' ಅನ್ನೋದೆ ನನಗೆ ಸಲ್ಲುವ ಮಾತು ಎಂದು ರಾಮನೇ ಒಪ್ಪಿಕೊಳ್ಳುವ ಮುಕ್ತಾಯ ರಾಮಾಯಣವನ್ನು ಯಾವ ದೃಷ್ಟಿಯಿಂದ ಓದಬೇಕು ಎನ್ನುವುದಕ್ಕೂ ಒಂದು ಸೂಚನೆಯಾಗಿದೆ ಎನ್ನಬಹುದು.

'ಶತಶೃಂಗ ಪರ್ವತ'- ಈ ಕಥೆಯು ಮಾದ್ರಿ ಮತ್ತು ಪಾಂಡುವಿನ ಕೊನೆಯ ಮಿಲನ ಮತ್ತು ಕಿಂದಮ ಋಷಿಶಾಪದಿಂದ ಪಾಂಡು ಮರಣಿಸುವ ಪ್ರಸಂಗವನ್ನು ಆಧರಿಸಿಕೊಂಡಿದೆ. ಇಲ್ಲಿ ವರ್ಣನೆಗಳ ಚಿತ್ತಾರವಿದೆ. ಶೃಂಗಾರದ ವಿಸ್ತಾರವಿದೆ. ಮುಖ್ಯವಾಗಿ ಎಲ್ಲ ಜೀವಿಗಳಲ್ಲೂ ಬದುಕಿನ ಮೂಲಸೆಲೆಯಾಗಿರುವ ಸಿಸೃಕ್ಷೆ- ಅಂದರೆ ಸೃಷ್ಟಿಸಬೇಕೆಂಬ ತೀವ್ರವಾದ ಹಂಬಲ, ಜಿಜೀವಿಷೆ- ಬದುಕಬೇಕೆಂಬ ಆಸೆಗಳ ನಡುವಿನ ಸಂಘರ್ಷದ ಚಿತ್ರಣವಿದೆ. ಪಾಂಡುವು ಮಾದ್ರಿಯನ್ನು ಕೂಡಿದ್ದಾದರೂ ತನ್ನದೇ ಸಂತಾನ ಬೇಕೆಂಬ ಹಪಹಪಿಗಾಗಿಯೇ. ಮತ್ತು ಸಂತಾನದ ಮೂಲಕ ತಾನು ಚಿರಂಜೀವಿ ಯಾಗುವ ಬಯಕೆಯಿಂದಲೇ. ಮಹಾಭಾರತದ ಈ ಪ್ರಸಂಗವನ್ನು ವಿಭಿನ್ನವಾದ ದೃಷ್ಟಿಕೋನದಿಂದ ನೋಡಿ ಬೆಳೆಸಿರುವ ಕಥೆ ಇದು. ಪಾಂಡುವಿನ ಮರಣಾನಂತರದ ಅನುಭವವನ್ನು ಹೇಳುವ ಕಥೆಯ ಅಂತ್ಯವಂತೂ ಬಹಳ ಮನೋಜ್ಞವಾಗಿದೆ.

'ಗೋಪಿಕೆಯಪತ್ರ'... ಗೋಕುಲವನ್ನು/ಬೃಂದಾವನವನ್ನು ಬಿಟ್ಟು ಮಥುರೆಯ/ಸಮಸ್ತ ಭರತವರ್ಷದ ರಾಜಕಾರಣಕ್ಕೆ ತನ್ನನ್ನು ತೆತ್ತುಕೊಂಡ ಕೃಷ್ಣ ಮತ್ತೆಂದೂ ಬೃಂದಾವನಕ್ಕೆ ಬರುವುದೇ ಇಲ್ಲ. ಆದರೆ ಅಲ್ಲಿನ ಗೋಪಿಕೆಯರಿಗೆ, ತಾವು ವೃದ್ಧರಾದರೂ, ಕೃಷ್ಣನ ರಾಸಿಕ್ಯದಿಂದ ಕೂಡಿದ ಸ್ನೇಹದ ನೆನಪು ಹಸಿಹಸಿ. ಇಲ್ಲಿ ಗೋಕುಲದ ಎಲ್ಲಾ ಗೋಪಿಕೆಯರೆಲ್ಲರ ಪ್ರತಿನಿಧಿಯಾಗಿ ಅನುರಾಗಿಣಿ ಎಂಬ ಗೋಪಿಕೆಯು ತನ್ನೆಲ್ಲಾ ಮನಸ್ಸಿನ ಭಾವನೆಗಳನ್ನು, ಲೋಕದ ರಾಜಕಾರಣದ ಗೋಜು ಪೇಚಿನಲ್ಲಿ ಸಿಕ್ಕಿಕೊಂಡ ಕೃಷ್ಣನ 'ತಲೆತಟ್ಟಿ ಬೆನ್ನುಸವರಿ ನೆಮ್ಮದಿ ನೀಡಬಲ್ಲವರು ಆ ನಿನ್ನ ಪಾಂಡವರೂ ಅಲ್ಲ, ಆ ನಿನ್ನ ಯಾದವರೂ ಅಲ್ಲ; ಹೆಮ್ಮೆಯಿಂದ ಹೇಳುತ್ತೇನೆ ಗೋವಿಂದ! ಈ ಗೊಲ್ಲಿತಿಯರಿಗಷ್ಟೇ

ಅದು ಸಾಧ್ಯ' ಎಂದು ಹೇಳುವ, ಕೊನೆಗೆ ಕೃಷ್ಣನಿಗೆ ನೆಮ್ಮದಿಯ ಸಾವು ಬರಲಿ ಎಂಬ ಹರಕೆಯನ್ನೂ ಹೇಳುವ ಬಲು ಸುಂದರವಾದ ಕಥೆ. ಇಲ್ಲಿನ ಪತ್ರಲೇಖನದ ಕಥಾ ತಂತ್ರವೂ ಮನಸೆಳೆಯುತ್ತದೆ.

'ಬೆಳಕಿನ ಕತ್ತಲೆ' – ವಿರೋಧಾಭಾಸದಂತಿರುವ ಶೀರ್ಷಿಕೆಯೇ ಕುತೂಹಲಕಾರಿಯಾಗಿರುವ ಈ ಕಥೆಯಲ್ಲಿ ನರಕಾಸುರ ವಧೆಯನ್ನು ಸಂಭ್ರಮಿಸುವ ಪರ್ವ ನರಕಚತುರ್ದಶಿಯ ಆಚರಣೆಗೆ ಅಣಿಯಾಗುತ್ತಿದೆ ಕೃಷ್ಣನ ದ್ವಾರಕೆ. ಎಲ್ಲೆಡೆ ಬೆಳಕೋ ಬೆಳಕು. ಆದರೆ ಸತ್ಯಭಾಮೆಯ ಮನಸ್ಸಿನ ತುಂಬಾ ಚಿಂತೆಯ ಕತ್ತಲು. ತುಮುಲದ ಮಬ್ಬು. ಯಾಕೆ? ತನ್ನ ಪತಿ ಶ್ರೀಕೃಷ್ಣನ ಜೊತೆ ಪ್ರಾಗ್ಜ್ಯೋತಿಷಪುರಕ್ಕೆ ನರಕಾಸುರವಧೆಗೆ ಹೋಗಿದ್ದ ಸಂದರ್ಭದ ನೆನಪು. ಅಂದು ನರಕನ ಬಾಣಗಳ ಹತಿಗೆ ಎಚ್ಚರತಪ್ಪಿದ್ದ ಕೃಷ್ಣನ ಕೈಯಿಂದ ಬಿಲ್ಲು ಬಾಣವನ್ನು ತಾನೆ ಎಟುಕಿಸಿಕೊಂಡು ಕೊಂದ ನರಕಾಸುರ ತನ್ನ ಮಗನೇ ಎಂಬ ಸತ್ಯದ ಬೆಳಕು ಅವಳಲ್ಲಿನ ಚಿಂತೆಯ, ನೋವಿನ ಕತ್ತಲಿಗೆ ಕಾರಣವಾಗಿದೆ. ಬುದ್ಧಿ ನರಕನಂತ ಲಂಪಟನನ್ನು ಕೊಂದದ್ದು ಸರಿ ಎಂದು ಒಪ್ಪಿಕೊಳ್ಳುತ್ತಿದೆ. ಆದರೆ ಹೃದಯ ಅಯ್ಯೋ ಹೆತ್ತ ಮಗನನ್ನು ನನ್ನಿಂದಲೇ ವಿಧಿ ಕೊಲ್ಲಿಸಿತಲ್ಲಾ ಎಂದು ಮಮ್ಮಲ ಮರುಗುತ್ತಿದೆ. ಸತ್ಯಭಾಮೆಯು ಅನುಭವಿಸುವ ಬುದ್ಧಿ–ಭಾವಗಳ ತಾಕಲಾಟವನ್ನು ಚಿತ್ರಿಸುತ್ತಿದೆ ಈ ಕಥೆ. ಪ್ರಸಿದ್ಧ ಪೌರಾಣಿಕ ಪ್ರಸಂಗವೊಂದರ ಸುತ್ತ ಹೆಣೆದಿರುವ ಕಥೆಯಲ್ಲಿ ಕೃಷ್ಣನ ಅಷ್ಟಮಹಿಷಿಯರ ಸ್ವಭಾವಗಳು, ಸಂಬಂಧಗಳು ಎಲ್ಲವೂ ಮನಮುಟ್ಟುವಂತೆ ಚಿತ್ರಿತವಾಗಿವೆ.

'ಪ್ರಣಯಪತ್ರಗಳ ಪದರಗಳಲ್ಲಿ' – ಶಾಕುಂತಲ ನಾಟಕದಲ್ಲಿ ಶಕುಂತಲೆ ತನ್ನನ್ನು ವಿವಾಹವಾದ ದುಷ್ಯಂತನು ಹಸ್ತಿನಾವತಿಗೆ ಹೊರಟುಹೋದಾಗ ವಿರಹದಲ್ಲಿದ್ದ ಶಕುಂತಲೆ ತನ್ನ ಸಖಿಯರ ಸಲಹೆಯಂತೆ ಒಂದು ಪ್ರೇಮ ಪತ್ರವನ್ನು ಬರೆಯುತ್ತಾಳೆ. ಅವಳು ಬರೆದ ಪ್ರೇಮಪತ್ರ ಏನಾಯಿತು, ದುಷ್ಯಂತನ ಕೈ ಸೇರಿತೇ? ಆಮೇಲೆ ನಾಟಕದಲ್ಲಿ ಎಲ್ಲೂ ಇದರ ಪ್ರಸ್ತಾಪ ಬರುವುದಿಲ್ಲ. ಈ ಸಂಗತಿಯ ಸುತ್ತ ಹೆಣೆದ ಕಥೆ ಇದು. ಕಲ್ಪನೆಯೇ ಇದಕ್ಕೆ ಜೀವ ಎಂದು ಲೇಖಕರೇ ಹೇಳಿಕೊಂಡಿದ್ದಾರೆ. ಆದರೆ ಕಲ್ಪನೆಯನ್ನು ವಿಸ್ತರಿಸುವಾಗ ಗುಪ್ತಸಾಮ್ರಾಜ್ಯದ ಹಲವಾರು ಐತಿಹಾಸಿಕ ಸಂಗತಿಗಳನ್ನು ಹೆಣೆದಿರುವುದು ಗಮನೀಯವಾಗಿದೆ. ಅಲ್ಲದೆ "ಕಾಳಿದಾಸನನ್ನು, ಗುಪ್ತಯುಗವನ್ನು ಕುರಿತು ಬರೆಯುತ್ತಿರುವ ಕಾದಂಬರಿಯ ಹಾದಿಯಲ್ಲಿ ಇದೊಂದು ಉಪಫಲ ಎಂದು ಲೇಖಕರೇ ಹೇಳಿಕೊಂಡಿದ್ದಾರೆ. ಇಲ್ಲಿ ಬಳಸಿರುವ ಕಥಾ ತಂತ್ರವೂ.. ಕೇಂದ್ರ ಸಾಹಿತ್ಯ ಅಕಾಡಮಿಯ ಒಂದು ಒಂದು ಕಥಾರಚನಾ ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಯೊಬ್ಬರ ಸ್ವರಚಿತ ಕಥೆಯಾಗಿ ಇದನ್ನು ವಾಚನಮಾಡುವ ತಂತ್ರವನ್ನು ಬಳಸಿದ್ದಾರೆ.

'ಶ್ಯಾಮಲ ಶಾರದೆ' – ಇದು ವಿಜ್ಜಿಕೆ, ವಿಜಯಾಂಬಿಕೆ ಎಂದು ಪ್ರಸಿದ್ಧಳಾದ ಇಮ್ಮಡಿ ಪುಲಿಕೇಶಿಯ ಸೊಸೆ. ಚಂದ್ರಾದಿತ್ಯನ ಪತ್ನಿ. ಸಂಸ್ಕೃತದ ಸುಪ್ರಸಿದ್ಧ ಕವಯಿತ್ರಿ. ರಾಜ್ಯಭಾರದಲ್ಲೂ ಕುಶಲೆಯಾಗಿದ್ದವಳು. ಇವಳ ಸುತ್ತ ಹೆಣೆದಿರುವ ಕಥೆ ಇದು. ಈಕೆ ಬಾಣ, ದಂಡಿ, ಶಂಕರಾಚಾರ್ಯರ ಕಾಲದವಳು ಎಂದು ಇತಿಹಾಸದಲ್ಲಿ ಇವರೆಲ್ಲರ ಕಾಲಗಳನ್ನು ಗಮನಿಸಿದಾಗ ತಿಳಿಯಬಹುದಾದ ಸಂಗತಿ. ಈ ಎಳೆಯನ್ನು ಹಿಡಿದು ಈ ಎಲ್ಲರನ್ನೂ ಈ ಕಥೆಯ

ಹಂದರದೊಳಗೆ ತಂದಿರುವುದು ಒಂದು ವಿಶೇಷವಾದ ತಂತ್ರವಾಗಿದೆ. ಇವಳನ್ನು ಶ್ಯಾಮಲ ಶಾರದೆ ಅಂತಾ ಏಕೆ ಕರೆದಿದ್ದಾರೆ? ಕಥೆಯನ್ನು ಓದಿಯೇ ತಿಳಿಯಬೇಕು.

'ವಾರಣಾಸಿಯ ವಾರಾಂಗನೆ' – ಮತ್ತೊಬ್ಬ ಸಂಸ್ಕೃತದ ಶ್ರೇಷ್ಠ ಕವಯಿತ್ರಿ, ಕಾಶ್ಮೀರದ ವಿಕಟನಿತಂಬೆಯ ಬದುಕಿನಲ್ಲಿ ವಿಧಿಯಾಡಿದ ಆಟ, ಅದರಿಂದ ಅವಳ ಬದುಕು ಪಡೆದ ತಿರುವು, ಈ ವಸ್ತುವನ್ನು ವಿಸ್ತರಿಸಿರುವ ಕಥೆ ಇದು. ಪ್ರಖರವಾದ ವೈದುಷ್ಯವಿದ್ದ ವಿಕಟನಿತಂಬೆಗೆ ತನಗೆ ಗೊತ್ತಾಗಿರುವ ಗಂಡು ಮಹಾಮೂರ್ಖ ಅಂತ ಗೊತ್ತಾಗಿ, ಮೂರ್ಖ ಗಂಡನ ಮಡದಿಯಾಗಲೊಲ್ಲದ ಈಕೆ ಮನೆ ತೊರೆದು, ವಾರಣಾಸಿಯನ್ನು ಸೇರಿ ವಾರಾಂಗನೆಯಾದ ಘಟನೆಯ ಸುತ್ತ ಹೆಣೆದಿರುವ ಕಥೆ. ಇಲ್ಲಿ ಕಲ್ಪನೆಯ ಅಂಶವೇ ಅಧಿಕವಾಗಿದೆ.

'ಭವದ ಬಸುರಿನ ಭಾವ' – ಸಂಸ್ಕೃತದ ಮತ್ತೊಬ್ಬ ಶ್ರೇಷ್ಠ ನಾಟಕಕಾರ ಭವಭೂತಿಯು ತನ್ನ ಮಾಗಿದ ಇಳಿವಯಸ್ಸಿನಲ್ಲಿ, ತನ್ನ ಎಳೆಯ ಸಮಕಾಲೀನ ಪ್ರಾಕೃತ ಕವಿ ವಾಕ್ಪತಿರಾಜನೊಂದಿಗೆ ಪ್ರಯಾಣ ಮಾಡಬೇಕಾದ ಸಂದರ್ಭದಲ್ಲಿ ಪರಸ್ಪರರ ಸಂವಾದ ರೂಪದಲ್ಲಿ ತೆರೆದುಕೊಂಡಿರುವ ಭವಭೂತಿಯ ಬದುಕಿನ ಕಥೆ. ಹಿರಿಯ ಕವಿಯನ್ನು ಅವನ ಅಭಿಮಾನಿಯಾದ ಕಿರಿಯ ಕವಿಯೊಬ್ಬ ಮಾತುಕತೆಗೆಳೆದು, ಹಿರಿಯನ ಮನದಲ್ಲಿ ಒಟ್ಟಾಗಿರುವ, ಒತ್ತಾಗಿರುವ ಭವದ ಭಾವಗಳಿಗೆಲ್ಲಾ ಹೊರಹರಿವು ಕೊಡುವಂತೆ ಇದೆ.

(ಈ ಕಥೆಯನ್ನು ಪ್ರಕಟಣೆಗೆ ಪೂರ್ವದಲ್ಲೇ, ನನಗೆ ಓದಿ ಅಭಿಪ್ರಾಯ ತಿಳಿಸಲು ಶತಾವಧಾನಿಗಳು ಕಳುಹಿಸಿದ್ದರು. ಈ ಕಥೆಯನ್ನು ನಾನು ಈ ವೇದಿಕೆಯ ಮೂವರು ಮಿತ್ರರೊಂದಿಗೆ ಆಗ ಓದಿದ ಸಂತೋಷ ನಮ್ಮದು).

ಇನ್ನು ಈ ಕಥೆಗಳ ಭಾಷೆಯ ಭಣಿತಿಯಂತೂ ಗದ್ಯಕಾವ್ಯದ ಮಟ್ಟವನ್ನು ಮುಟ್ಟಿದೆ. ಪರಿಪಕ್ವವಾದ ಅಂತರ್ನೋಟ, ವಿಚಾರಗಳು ಕಥೆಗಳ ಉದ್ದಕ್ಕೂ ಕಂಡುಬರುತ್ತವೆ. ಆಧುನಿಕ ಪರಿಭಾಷೆಯ ಕಥೆಗಳಂತೆ ಇಲ್ಲಿನ ಕಥೆಗಳು ಇಲ್ಲವಾದರೂ, ಜೀವನ್ಮುಖಿಯಾದ ಹಲವು ಸಂಗತಿಗಳನ್ನು ಹಲವು ಪದರುಗಳಲ್ಲಿ ಉಣಬಡಿಸುವ ಇಲ್ಲಿನ ಕಥೆಗಳು ಓದುಗರಿಗೆ ಭಾರತೀಯ ಅಭಿಜಾತ ಸಾಹಿತ್ಯದ ಕಡೆಗೆ ತಿರುಗುವ ಪ್ರೇರಣೆ ಕೊಡುವುದಂತು ಸತ್ಯ.

****

ತೆರೆಯ ಮರೆಯಲ್ಲಿ

'ಮಾವಿನ ಹಣ್ಣೋ, ಮಾವನ ಹೆಣ್ಣೋ...' ಮತ್ತು 'ಖುಕ್ಕಮ್ಮನ ಸಂಸಾರ'

ನಾಟಕಗಳ ಸಿದ್ಧತೆ ಹಾಗೂ ತಾಲೀಮಿನ ಸ್ವಾರಸ್ಯಗಳು!


– ಎಸ್. ಧೀರೇಂದ್ರ

'ಎಚ್ಚೆಸ್ಕೆ ಬೆಳಕು–9' ಕಾರ್ಯಕ್ರಮದಲ್ಲಿ, ಪ್ರಾ.ಎಚ್ಚೆಸ್ಕೆಯವರ ಎರಡು ಪ್ರಬಂಧಗಳನ್ನು ಆಧರಿಸಿ ರೂಪಿಸಿ, ಅಭಿನಯಿಸಿದ ಈ ನಾಟಕಗಳನ್ನು ನೋಡಲು ಬಂದಿದ್ದ ನನ್ನ ನಾಟಕದ ಗುರುಗಳು ಹಾಗೂ 56 ವರ್ಷಗಳ ಆಪ್ತ ಸ್ನೇಹಿತ, ಹಿರಿಯ ಕಲಾವಿದ ಎಂ.ಪಿ. ವೆಂಕಟರಾವ್ ಮತ್ತು ಅವರ ಪತ್ನಿ ಜಾನಕಿ ರಾವ್ ನಾಟಕ ಮುಗಿದ ಮೇಲೆ ಅಭಿನಂದಿಸಿ, ಈ ಪ್ರಬಂಧಗಳನ್ನು ನಾಟಕಕ್ಕೆ ಅಳವಡಿಸುವ ಯೋಚನೆ ನಿನಗೆ ಹೇಗೆ ಬಂತು? ಎಂದು ನೇರವಾಗಿ ಪ್ರಶ್ನಿಸಿದರು.

ಈ ಪ್ರಬಂಧಗಳನ್ನು ಸುಮಾರು ಮೂರು ವರ್ಷಗಳ ಹಿಂದೆ ನಮ್ಮ ಕೆಲವು ಸದಸ್ಯರು ವೇದಿಕೆಯಲ್ಲಿ ವಾಚನ ಮಾಡಿದಾಗ ಅದನ್ನು ಕೇಳಿಸಿಕೊಂಡ ನನಗೆ ಇವುಗಳನ್ನೇಕೆ ನಾಟಕಕ್ಕೆ ರೂಪಾಂತರ ಮಾಡಬಾರದು ಎಂಬ ಯೋಚನೆ ಹೊಳೆಯಿತು. ಕೂಡಲೇ ಗುರುಪ್ರಸಾದ್ ಹಾಲ್ಕುರಿಕೆ ಅವರನ್ನು ಸಂಪರ್ಕಿಸಿ ಆ ಎರಡು ಪ್ರಬಂಧಗಳ ಪಿಡಿಎಫ್ ಕಡತವನ್ನು ಪಡೆದುಕೊಂಡೆ. ಒಂದೆರಡು ಬಾರಿ ಆಮೂಲಾಗ್ರವಾಗಿ ಓದಿಕೊಂಡೆ. ನಾಲ್ಕೈದು ದಿನಗಳಲ್ಲಿ ನಾಟಕ ರೂಪಾಂತರಗಳನ್ನೂ ಸಿದ್ಧಪಡಿಸಿ ಅವುಗಳನ್ನು ಬೆಂ.ಶ್ರೀ.ರವೀಂದ್ರ ಅವರಿಗೂ, ಗುರುಪ್ರಸಾದ್ ಹಾಲ್ಕುರಿಕೆ ಅವರಿಗೂ ವಾಟ್ಸ್ ಆ್ಯಪ್ ಮೂಲಕ ಕಳುಹಿಸಿಕೊಟ್ಟೆ. ಆಮೇಲೆ ಅದನ್ನು ಮರೆತೂಬಿಟ್ಟೆ.

'ಎಚ್ಚೆಸ್ಕೆ ಬೆಳಕು–9' ಇಡೀ ದಿವಸದ ಕಾರ್ಯಕ್ರಮದ ಯೋಜನೆ ಹಮ್ಮಿಕೊಂಡಾಗ ನನಗೆ ಈ ನಾಟಕಗಳ ನೆನಪಾಗಿ, ಈ ನಾಟಕಗಳ ಪ್ರದರ್ಶನಗಳ ಸಾಧ್ಯತೆಯ ಬಗ್ಗೆ ಬೆಂ.ಶ್ರೀ.ರವೀಂದ್ರ ಅವರನ್ನು ಸಂಪರ್ಕಿಸಿದೆ. ಸಾಕಷ್ಟು ಯೋಚನೆ, ಚರ್ಚೆ ಮಾಡಿದ ನಂತರ ಸಮನ್ವಯ ಸಮಿತಿ ಕನ್ನಡವೇ ಸತ್ಯ ಸಂಚಾಲಕ ಸಮಿತಿಯಿಂದ ನಾಟಕ ಪ್ರದರ್ಶನಗಳಿಗೆ ಹಸಿರು ಸಂಕೇತ ದೊರಕಿತು.

ಪ್ರಬಂಧಗಳನ್ನು ನಾಟಕಕ್ಕೆ ಅಳವಡಿಸುವುದು ಬಲು ಕಷ್ಟ. ಹೊಸ ಪಾತ್ರಗಳನ್ನು ಸೃಷ್ಟಿ ಮಾಡಬೇಕಾಗುತ್ತದೆ. ಹೆಚ್ಚಿನ ಸೃಜನಶೀಲತೆ ಮೆರೆಯಬೇಕಾಗುತ್ತದೆ. ಲೇಖಕರು ಪ್ರಬಂಧದಲ್ಲಿ ಬರೆದ ದೃಶ್ಯವನ್ನು ಪ್ರೇಕ್ಷಕರಿಗೆ ಕಟ್ಟಿಕೊಡಬೇಕಾಗುತ್ತದೆ. ಈ ಎಲ್ಲ ಹಿನ್ನೆಲೆಯಲ್ಲಿ ಈಗಾಗಲೇ ಬರೆದ ನಾಟಕಗಳನ್ನು ಮತ್ತೆ ಪರಿಷ್ಕರಿಸಿದೆ. ಖುಕ್ಕಮ್ಮನ ಸಂಸಾರ ನಾಟಕದಲ್ಲಿ ನಮ್ಮ ವೇದಿಕೆಯ ಹಿರಿಯ ಸದಸ್ಯ ಶ್ರೀ ಕೆ.ಆರ್.ಎಸ್. ಮೂರ್ತಿ ಬರೆದ ಹಾಡನ್ನು ಇಲ್ಲಿ ಅಳವಡಿಸಿ, ಅದಕ್ಕೆ ಅವರ ಒಪ್ಪಿಗೆಯನ್ನೂ ಪಡೆದೆ. ಬೆಂ.ಶ್ರೀ.ರವೀಂದ್ರರ ಸಲಹೆಯಂತೆ ನಾಟಕಗಳಲ್ಲಿ ಭಾಗವಹಿಸುವ ಆಸಕ್ತಿ ಉಳ್ಳವರನ್ನು ವೇದಿಕೆಯ ಗುಂಪಿನಲ್ಲಿ ಆಹ್ವಾನಿಸಿದೆ. ನಿಧಾನವಾಗಿ ಹೆಸರುಗಳು ಬರಲಾರಂಭಿಸಿದವು.



ನಾಟಕಗಳ ತಾಲೀಮಿಗೆ ಸಂಬಂಧಪಟ್ಟ ಸಂವಹನೆಗಾಗಿ ಪ್ರತ್ಯೇಕ ವಾಟ್ಸ್‌ಆ್ಯಪ್ ಗುಂಪನ್ನು ರಚಿಸಲಾಯಿತು. ಅದರಲ್ಲಿ ನಾಟಕಗಳ ಪಿಡಿಎಫ್ ಕಡತಗಳನ್ನು ಅಂಟಿಸಿ, ಒಂದೆರಡು ಬಾರಿ ನಾಟಕಗಳನ್ನು ಓದಿಕೊಳ್ಳಿ ಎಂದು ಆಸಕ್ತರಿಗೆ ಸೂಚಿಸಲಾಯಿತು. 12.04.2024ರಂದು ಮೊದಲ ಸಭೆ ನಮ್ಮ ಮನೆಯಲ್ಲಿ ನಡೆಯಿತು. ಅಲ್ಲಿ ನಾಟಕಗಳನ್ನು ಓದಿಸಿ ಪಾತ್ರಗಳನ್ನು ಹಂಚಲಾಯಿತು. ಒಟ್ಟು 13 ಜನ ಬಂದಿದ್ದರು. ಇನ್ನಿಬ್ಬರು ನಂತರ ಬರುವುದಾಗಿ ತಿಳಿಸಿದರು. 15 ಜನರಲ್ಲಿ 6 ಜನ ಮಹಿಳೆಯರು, 9 ಜನ ಪುರುಷರು.

ಎರಡು ದಿನಗಳ ತಾಲೀಮಿನ ನಂತರ ಒಬ್ಬರು ಪಾತ್ರಧಾರಿ ತಾವು ವಿದೇಶಕ್ಕೆ ಹೊರಡುತ್ತಿರುವುದರಿಂದ ತಮಗೆ ನಾಟಕದಲ್ಲಿ ಭಾಗಿಯಾಗಲು ಸಾಧ್ಯವಿಲ್ಲ ಎಂದು ತಿಳಿಸಿದರು. ಇನ್ನಿಬ್ಬರು ಆಸಕ್ತರು ತಮಗೂ ಅನಾನುಕೂಲತೆ ಇರುವುದರಿಂದ ನಾಟಕದಲ್ಲಿ ಅಭಿನಯಿಸುವುದು ಅಸಾಧ್ಯ ಎಂದರು.

ಸುಮಾರು 8 ದಿನಗಳ ಕಾಲ ತಾಲೀಮು ಮಾಡಿದ ನಂತರ ಮತ್ತೊಬ್ಬ ಮಹಿಳಾ ಪಾತ್ರಧಾರಿ, ತಮ್ಮ ಮೈದುನನ ಮಗನ ನಿಶ್ಚಿತಾರ್ಥ ನಾಟಕದ ದಿನದಂದೇ ಇರುವುದರಿಂದ ತಮಗೂ ನಾಟಕದಲ್ಲಿ ಅಭಿನಯಿಸಲು ಸಾಧ್ಯವಿಲ್ಲ ಎಂದು ತಿಳಿಸಿದರು. ಹೀಗಾಗಿ 15 ಜನರ ತಂಡ 11 ಕ್ಕೆ ಇಳಿಯಿತು. ಈಗ ಸ್ವಲ್ಪ ಗಂಭೀರವಾಗಿ ತಾಲೀಮು ಮಾಡಲಾರಂಭಿಸಿದೆವು. ಬರಲು ಸಾಧ್ಯವಿಲ್ಲ ಎಂದು ತಿಳಿಸಿದ ಪಾತ್ರಧಾರಿಗಳನ್ನು ಕೈಬಿಟ್ಟು, ಅವರ ಸಂಭಾಷಣೆಗಳನ್ನು ಸೂಕ್ತ ಪರಿವರ್ತನೆ ಯೊಂದಿಗೆ ಉಳಿದ ಪಾತ್ರಧಾರಿಗಳಿಗೆ ಹಂಚಲಾಯಿತು.

ಇಲ್ಲಿ ಬಹಳ ಮುಖ್ಯವಾದ ಸಂಗತಿಯೆಂದರೆ ಪಾತ್ರಧಾರಿಗಳ ಅನುಪಮ ಶ್ರದ್ಧೆ ಮತ್ತು ಉತ್ಸಾಹ. ಎಲ್ಲರೂ ಹಿರಿಯ ನಾಗರಿಕರೇ! 61 ವರ್ಷದವರಿಂದ ಹಿಡಿದು 79 ವರ್ಷದವರವರೆಗೆ. ಆದರೂ ಉತ್ಸಾಹಭರಿತರಾಗಿ ತಾಲೀಮಿಗೆ ಬರುತ್ತಿದ್ದರು. ಮಲ್ಲೇಶ್ವರಂನಿಂದ, ರಾಜರಾಜೇಶ್ವರಿ ನಗರದಿಂದ, ಬಸವೇಶ್ವರ ನಗರದಿಂದ, ಗಿರಿನಗರದಿಂದ, ಕೋಡಿ ಚಿಕ್ಕನಹಳ್ಳಿಯಿಂದ, ಜೆಪಿ ನಗರದಿಂದ, ಶ್ರೀನಗರದಿಂದ ಹೀಗೆ ಬೆಂಗಳೂರಿನ ನಾನಾ ಪ್ರದೇಶಗಳಿಂದ ಜಯನಗರ ನಾಲ್ಕನೇ ಬ್ಲಾಕಿನಲ್ಲಿರುವ ನಮ್ಮ ಮನೆಗೆ ಅವರ ನಿತ್ಯ ಯಾತ್ರೆ. ಅದರಲ್ಲಿ ಇಬ್ಬರಿಗೆ ಸೋಮವಾರ ಮತ್ತು ಗುರುವಾರ ಸಂಜೆ ಹಳೆಗನ್ನಡದ ತರಗತಿಗಳಿದ್ದವು. ಅದಕ್ಕೆ ಹಾಜರಿ ಅವಶ್ಯವಿದ್ದುದರಿಂದ ಅಂದು ನಾವು ತಾಲೀಮು ಮಾಡುವಂತಿರಲಿಲ್ಲ. ಮತ್ತೊಬ್ಬ ಮುಖ್ಯ ಪಾತ್ರಧಾರಿಗೆ ಬಿಡುವಿಲ್ಲದ ಗಮಕ ವ್ಯಾಖ್ಯಾನದ ಕಾರ್ಯಕ್ರಮಗಳು. ಹೀಗಾಗಿ ಅವರ ಲಭ್ಯತೆಯನ್ನೂ ಪರಿಗಣಿಸಿ ತಾಲೀಮು ಯೋಜಿಸಬೇಕಾಗಿತ್ತು. ಮಳೆ ಗಾಳಿಗಳ ತೊಂದರೆ ಬೇರೆ. ಇವೆಲ್ಲದರ

ನಡುವೆಯೂ ನಮ್ಮ ತಾಲೀಮುಗಳು ನಿರ್ವಿಘ್ನವಾಗಿ ನಡೆದವು. ಇದಕ್ಕೆ ಕಲಾವಿದರ ತುಂಬು ಹೃದಯದ ಸಹಕಾರವೇ ಕಾರಣ.

ಎಷ್ಟೇ ಹಿರಿಯರಾದರೂ ನುರಿತ ಕಲಾವಿದರಾದರೂ, ನಿರ್ದೇಶಕರ ಸೂಚನೆಗಳನ್ನು ವಿಧೇಯತೆಯಿಂದ ಪಾಲಿಸುತ್ತಿದ್ದರು. ಒಂದಾದ ಮೇಲೆ ಇನ್ನೊಂದು ನಾಟಕದ ತಾಲೀಮು. ಅನೇಕ ದಿನ ಒಂದೊಂದು ನಾಟಕದ ಎರಡೆರಡು ತಾಲೀಮುಗಳನ್ನು ಮಾಡುತ್ತಿದ್ದುದುಂಟು. ಸಾಧಾರಣವಾಗಿ ಮಧ್ಯಾಹ್ನ 4.00 ಗಂಟೆಗೆ ಆರಂಭವಾದ ತಾಲೀಮು ಸಂಜೆ 6.00 ಗಂಟೆಯವರೆಗೂ ನಡೆಯುತ್ತಿತ್ತು. ಕಲಾವಿದರು ಬರುವುದರೊಳಗೆ ನಮ್ಮ ಮನೆಯ ಹಜಾರದಲ್ಲಿದ್ದ ಪೀಠೋಪಕರಣಗಳನ್ನು ಗೋಡೆಗೆ ಸೇರಿಸಿ ಸ್ಥಳಾವಕಾಶ ಮಾಡಿಕೊಳ್ಳಬೇಕಾಗಿತ್ತು. ಅದರಂತೆಯೇ ಅವರೆಲ್ಲ ಮನೆಯಿಂದ ತೆರಳಿದ ಮೇಲೆ ಅವುಗಳನ್ನು ಮತ್ತೆ ಸ್ವಸ್ಥಾನಕ್ಕೆ ಸೇರಿಸಬೇಕಾಗಿತ್ತು. ಇದು ದಿನನಿತ್ಯದ ಕಾರ್ಯಕ್ರಮ.

ಕಲಾವಿದರು ರಣಬಿಸಿಲಿನಲ್ಲಿ ಬರುತ್ತಾರೆ ಎಂದು ಅವರಿಗೆ ಮಜ್ಜಿಗೆಯ ಸಮಾರಾಧನೆ. ಒಂದು ನಾಟಕದ ತಾಲೀಮು ಮುಗಿದಾಗ ಆಯಾಸ ಪರಿಹಾರಕ್ಕಾಗಿ ಕಾಫಿ ಸಮಾರಾಧನೆ. ಜೊತೆಗಷ್ಟು ಕುರುಕಲು ತಿಂಡಿಗಳು! ಕೋಡುಬಳೆ, ಚಕ್ಕುಲಿ, ಹುರಿದವಲಕ್ಕಿ ಮಿಶ್ರಣ ಇತ್ಯಾದಿ. ಎರಡನೇ ನಾಟಕದ ತಾಲೀಮು ಮುಗಿದ ಮೇಲೆ ಮತ್ತೊಮ್ಮೆ ಕಾಫಿ ಸಮಾರಾಧನೆ. ಕೆಲವೊಮ್ಮೆ ಮಸಾಲೆ ದೋಸೆ ಸಮಾರಾಧನೆ. ಕೆಲವೊಮ್ಮೆ ಮಜ್ಜಿಗೆಯ ಬದಲಾಗಿ ಮಾವಿನ ಹಣ್ಣಿನ ಜ್ಯೂಸ್! ಒಂದೊಂದು ಸಲ ಮೊಸರೊಡೆ! ನಾಲ್ಕೈದು ದಿನಗಳ ನಂತರ ಒಬ್ಬೊಬ್ಬರಾಗಿ ತಾವೂ ತಿಂಡಿಗಳನ್ನು ತರಲಾರಂಭಿಸಿದರು. ಭಾಕರವಾಡಿ, ಹಾಲುಬಾಯಿ, ಪಕೋಡ, ಚೌಚೌ, ಕೊಬ್ಬರಿ ಮಿಠಾಯಿ ಇತ್ಯಾದಿ. ಬಹುಶಃ ತಾಲೀಮಿಗೆ ತಪ್ಪದೇ ಹಾಜರಿರಲು ಇದೂ ಪ್ರಮುಖ ಕಾರಣ ಎಂದರೆ ತಪ್ಪಲ್ಲ. ಇದು ಎಲ್ಲರಿಗೂ ಸಂತೋಷ ತರುತ್ತಿದ್ದುದೂ ಸುಳ್ಳಲ್ಲ.



ಇಷ್ಟೆಲ್ಲ ಸಮಾರಾಧನೆಗಳ ನಡುವೆ ನಮ್ಮ ತಾಲೀಮೂ ನಡೆಯುತ್ತಿತ್ತು. ಸಮಯ ಹೇಗೋ ಸರಿದು ಹೋಗುತ್ತಿತ್ತು. ಗೊತ್ತೇ ಆಗುತ್ತಿರಲಿಲ್ಲ. ನಮ್ಮ ನಾಟಕದಲ್ಲಿ ಮಾವಿನ ಮರ ಬೇಕಾಗಿತ್ತು. ಅದರ ಕಾಯಿಗಳಿಗೆ ಹೊಡೆಯಲು ಕಲ್ಲುಗಳು ಬೇಕು. ಮಾವಿನ ಹಣ್ಣುಗಳನ್ನು ಅಡೆಹಾಕಲು ಹುಲ್ಲು, ದೋರೆಗಾಯಿ ಮತ್ತು ಮಾಗಿದ ಹಣ್ಣುಗಳು ಬೇಕಿತ್ತು. ತಾಲೀಮಿನಲ್ಲಿ ಅವನ್ನೆಲ್ಲ ಒದಗಿಸುವುದು ಸಾಧ್ಯವಿರಲಿಲ್ಲ. ಕಾಗದದ ಉಂಡೆಗಳನ್ನು ಮಾಡಿ ಅವನ್ನೇ ಕಲ್ಲುಗಳೆಂದು ಎಸೆಯಲು ಹೇಳುತ್ತಿದ್ದೆ. ಇನ್ನಷ್ಟು ಕಾಗದದ ಉಂಡೆಗಳನ್ನು ಮಾವಿನ ಹಣ್ಣುಗಳು ಎಂದು ಭಾವಿಸಿಕೊಂಡು ಉಪಯೋಗಿಸುತ್ತಿದ್ದೆವು. ಎಷ್ಟೇ ಶ್ರದ್ಧೆಯಿಂದ ಇವುಗಳನ್ನು



ಉಪಯೋಗಿಸಿದರೂ ಕಲಾವಿದರಲ್ಲಿ ನಾಟಕದ ದಿನ ರಂಗದ ಮೇಲೆ ಕಂಡಷ್ಟು ಹುಮ್ಮಸ್ಸು ತಾಲೀಮಿನಲ್ಲಿ ಇರಲಿಲ್ಲ! ಏಕೆಂದರೆ ಅಂದು ನಿಜವಾದ ಮಾವಿನ ಹಣ್ಣುಗಳನ್ನೇ ಇಟ್ಟಿದ್ದೆವು. ಮಾವಿನ ಮರದ ದೊಡ್ಡ ಚಿತ್ರವನ್ನೇ ತೂಗು ಹಾಕಿದ್ದೆವು. ನಾಟಕದಲ್ಲಿ ಮಾವಿನ ಹಣ್ಣುಗಳನ್ನು ಚಪ್ಪರಿಸಿ ತಿನ್ನುವಾಗ ಪ್ರೇಕ್ಷಕರ ಬಾಯಲ್ಲೂ ನೀರೂರಿದ್ದು ಸುಳ್ಳಲ್ಲ. ನಿಜವಾದ ಮಾವಿನ ಹಣ್ಣನ್ನೇ ತಿನ್ನಲು ಕೊಡುತ್ತಾರೆ ಎಂದು ತಿಳಿದಿದ್ದರೆ ನಾವೂ ನಾಟಕದಲ್ಲಿ ಅಭಿನಯಿಸಲು ಬರುತ್ತಿದ್ದೆವು ಎಂದು ಅನೇಕರು ಹೇಳಿದ್ದೂ ಸತ್ಯ.

ಋಕ್ಕಮ್ಮನ ಸಂಸಾರ ನಾಟಕದಲ್ಲಿ ಹಲವು ಅಕ್ಷರಗಳನ್ನು ರಂಗದ ಮೇಲಿನ ಪರದೆಯಲ್ಲಿ ಮೂಡಿಸಲು ತಂತ್ರಜ್ಞಾನದ ಸಹಾಯವನ್ನೂ ಪಡೆದೆವು. ಇದು ಪ್ರೇಕ್ಷಕರ ಮನಸ್ಸಿನಲ್ಲಿ ಮೂಡುವ ಗೊಂದಲವನ್ನು ಕಡಿಮೆ ಮಾಡಲು, ಲೇಖಕರ ಆಶಯವನ್ನು ತಲುಪಿಸಲು ಸಹಾಯವಾಯಿತು.

ಇನ್ನು ಕೆಲವೇ ದಿನಗಳಿರುವಾಗ ಮೇ 21ರಂದು ಋಕ್ಕಮ್ಮನ ಪಾತ್ರಧಾರಿ ತಮಗೆ ಇದ್ದಕ್ಕಿದ್ದಂತೆ ಕಣ್ಣಿನ ಸೋಂಕು ಆಗಿ ವಿಪರೀತ ತೊಂದರೆಯಾಗಿದೆ, ವೈದ್ಯರ ಬಳಿ ಸಂಜೆ ಹೋಗುವೆ, ನಾಳೆ ಹೊತ್ತಿಗೆ ಸರಿ ಹೋಗಬಹುದು ಎಂದು ವಾಟ್ಸ್ ಆ್ಯಪ್ ಮೂಲಕ ಸಂದೇಶ ಕಳುಹಿಸಿದರು. ನಾವು ಬದಲಿ ಪಾತ್ರಧಾರಿಗಳನ್ನು ತಯಾರು ಮಾಡಿರಲಿಲ್ಲ. ಅಕಸ್ಮಾತ್, ನಾಳೆ ಸರಿ ಹೋಗದಿದ್ದರೆ ಏನು ಮಾಡುವುದು ಎಂದು ಯೋಚಿಸಿ, ಸಂಜೆ ತಾಲೀಮಿಗೆ ಸೇರಿದಾಗ, ಪುಟ್ಟ ಪಾತ್ರ ಮಾಡುತ್ತಿದ್ದ ಕಲಾವಿದೆಯ ಕೈಯಲ್ಲಿ ಅಂದು ಆ ಪಾತ್ರ ಓದಿಸಿದೆ. ಹಾಗೆಯೇ ಸಂದರ್ಭವನ್ನು ವಿವರಿಸಿ ಆ ಪಾತ್ರಕ್ಕೆ ತಯಾರಾಗಲು ತಿಳಿಸಿದೆ. ಪಾಪ, ಆಕೆ ಅಷ್ಟೇ ಶ್ರದ್ಧೆಯಿಂದ ಇಡೀ ರಾತ್ರಿ, ಹಗಲು ತಯಾರಿ ನಡೆಸಿದರು. ಅದೃಷ್ಟವಶಾತ್ ಮರುದಿನ ಋಕ್ಕಮ್ಮನ ಪಾತ್ರಧಾರಿ ಬಂದರು, ಸಮಸ್ಯೆ ಬಗೆಹರಿದು ಮನಸ್ಸು ನಿರಾಳವಾಯಿತು.

ತಾಲೀಮು ನಡೆಯುವಾಗ ಒಮ್ಮೊಮ್ಮೆ ಸಂಚಾಲಕ ಸಮಿತಿಯ ಬೆಂ.ಶ್ರೀ. ರವೀಂದ್ರ, ಗುರುಪ್ರಸಾದ್ ಹಾಲ್ಕುರಿಕೆ, ಶ್ರವಣ ಕುಮಾರಿ ಅವರೂ ಬಂದು ರಂಗತಾಲೀಮು ವೀಕ್ಷಿಸಿ, ಸೂಕ್ತ ಸಲಹೆಗಳನ್ನು ನೀಡುತ್ತಿದ್ದರು.

ಇಷ್ಟೆಲ್ಲ ಸಿದ್ಧತೆ ಮಾಡಿದ ಮೇಲೆ 26ನೇ ಮೇ 2024ರಂದು ಎರಡೂ ನಾಟಕಗಳು ರಂಗದ ಮೇಲೆ ಬಂದವು. ನೋಡುಗರ ಮನ ಸೆಳೆದವು. ಈ ಯಶಸ್ಸು ಪೂರ್ಣವಾಗಿ ಕಲಾವಿದರಿಗೆ ಮತ್ತು ಪ್ರೇಕ್ಷಕರಿಗೆ ಹಾಗೂ ನೇಪಥ್ಯದಲ್ಲಿ ದುಡಿದವರಿಗೆ ಸಲ್ಲಬೇಕು.

***

ಊರುಗೋಲು

– ರಾಧಿಕಾ ವಿ ಗುಜ್ಜರ್

ಅಜ್ಜನ ನಿಲ್ಲಿಸಿ ನಡೆಸುತ್ತಿತ್ತು
ಆಧಾರವೀಯುತ ಊರುಗೋಲು

ಹೊಳೆಯುವ ಕೆತ್ತನೆಯ ದೇಹ
ಗರುಡನ ಮೂತಿಯ ದೃಢ ಶಿರ
ಕಲಾವಂತ ಮೈಸೂರು ಪೇಟೆಯದದು
ಅಪ್ಪ ತನ್ನಪ್ಪನಿಗೆ ತಂದಿದ್ದದು ಕೋಲು

ಬಿಳಿಯ ಬಟ್ಟೆಯಲಿ ಸುತ್ತಿದ
ಒಡವೆಗಿಂತಲೂ ಜತನದಿಂದ ಆರಿಸಿದ
ಅಜ್ಜನ ಗಾಂಭೀರ್ಯಕ್ಕೊಪ್ಪುವ
ವಿತ್ತದ ಇತಿಮಿತಿ ಮೀರದ ಕೋಲು

ಅದರದೇ ಇರವು ಇರುವ
ಬಾಗದ ಹಿರಿತನದ ಊರುಗೋಲು

ತಾತ ಸವರಿ ನಸುನಗುತ್ತಿದ್ದರು
ಮಗನುಡುಗೊರೆ ಅಪ್ಯಾಯಮಾನವು
ಮಗನಿಗೆಂದು ಮೂರು ಗಾಲಿಯ
ಆಟಿಕೆ ತಂದ ಹಿಂದಿನ ನೆನಪು

ಗಾಲಿಗಳು ಉರುಳಿ ನಡೆಸಿದ್ದವು
ಕೋಲಾದರೆ ಊರಿ ನಿಲ್ಲಿಸಲು

ಮೂರು ಹಂತದ ಇಹದ
ಗಾಲಿಗಳು ಉರುಳುವುದ
ತಡೆದು ನಿಲ್ಲಿಸುವುದಿದು
ವಿರಾಮದ ಊರುಗೋಲು

***

ಬಲ್ಲಿದನಾದ ಬಲ್ಲವ

– ಜಯಂತಿ ಕನ್ನುಕೆರೆ.

ತರಬೇಕು ಬಾಳಿನಲಿ ಮಧುರತೆಯ ಮಿಡಿತ
ಇರಬೇಕು ಇನಿತು ಮಾತಿನಲಿ ಹಿಡಿತ
ಹೊರಬೇಕು ಭಾರವನು ಮಾಡದಲೆ ಕಡಿತ
ಮೀರಬೇಕು ಎಲ್ಲೆಯನು ಸಾಧನೆಯ ಮಾಡುತ.

ನುಡಿದರೆ ಜನಗಳ ನೆನಪಲಿ ಉಳಿಯಲಿ
ನಡೆಯದು ನಾಕು ಮಂದಿಗೆ ಮಾದರಿಯಾಗಲಿ
ಪೊಡಮಡು ಬಲ್ಲವಗೆ ಅರಿವೆಂಬ ಗುರುವಲಿ
ಜಡತೆಯನು ಬದಿಗೊತ್ತಿ ವಿಕಸಿಸು ಜಗದಲಿ.

ಮುತ್ತಂತೆ ವಾಕಿರಲು ಬೇರೇನು ಬೇಕು
ಚಿತ್ತವನು ಕಲಕದಲೆ ಸಹನೆಯ ಸೆಲೆ ಹಾಕು
ಮತ್ತೆರಡು ವಿಷಯಗಳು ಸವಿಯಲು ಸಾಕು
ಹೊತ್ತಿಗೆ ಸಮನಾದ ಗಾದೆಯನು ನೂಕು.

ಒಡಕಲು ಸಂವಾದ ಜಗಳಕೆ ನಾಂದಿ
ಒಡಲೊಳು ಕಹಿಬೇಡ ದೂರುವರು ಮಂದಿ
ಬಡಬಡನೆ ಗಳುಹದಿರು ನೀನಾಗು ಗಾಂಧಿ
ಸುಡುವ ಹೇಳಿಕೆಯೂ ವಿಚಾರಿಸಲು ತಹಬಂದಿ.

ತುಂಬಿದ ಕೊಡವದು ತುಳುಕದು ಎಂದು
ಇಂಬಿರದ ಪದಗಳು ಘಾಸಿಯನೆ ತಂದು
ನಂಬಿದವ ಕೈಬಿಡನು ನಿರ್ಮಲತೆಯ ಹೊಂದು
ಅಂಬಿನಂತೆ ಹೂಡದಿರು ಬಾಯಾಗದದಿರಲಿ ಮುಂದು.

ಸುಂದರ ಬದುಕಿನ ಭಾಷ್ಯವೆ ಹಿತನುಡಿ
ಅಂದದ ಮನೆಗು ಭೂಷಣವು ಜಾಣ್ನುಡಿ
ಎಂದಿಗೂ ಅವಿನಾಶಿ ಹೊಳೆವಂತೆ ಕನ್ನಡಿ
ಕುಂದಿರದ ಬಂಧಕ್ಕೆ ಅದುವೇ ಮುನ್ನುಡಿ.


***

ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ

– ನಾಗರತ್ನ ಚಂದ್ರಶೇಖರ

ಈ ಪ್ರಪಂಚಕ್ಕೆ ಯುದ್ಧಗಳು ಹೊಸದೇನಲ್ಲ. ಯುದ್ಧ ಒಂದು ರೀತಿಯ ಸಾಮೂಹಿಕ ಕೊಲೆ! ಇಲ್ಲಿ ಧರ್ಮ ಅಧರ್ಮಗಳ ಮಾತಿಗಿಂತ ಮನುಷ್ಯನ ಅಧಿಕಾರ ಲಾಲಸೆ, ಶ್ರೇಷ್ಠತೆಯ ಸವಾಲುಗಳೇ ಅಧಿಕ. ವಿಶ್ವ ಜನಸಂಖ್ಯೆಯ ನಿಯಂತ್ರಣವನ್ನು, ಸಮತೋಲನವನ್ನು ಪ್ರಕೃತಿ ತನ್ನದೇ ರೀತಿಯಲ್ಲಿ ಮಾಡುತ್ತಾಳಾದರೂ ಮನುಷ್ಯ ತನ್ನ ದುಷ್ಕೃತ್ಯಗಳಿಂದ ವಿನಾಶದ ನಾನಾ ದಾರಿಗಳನ್ನು ಕಂಡುಹಿಡಿಯುತ್ತಲೇ ಇದ್ದಾನೆ. ಅದರ ಒಂದು ದೊಡ್ಡ ಉದಾಹರಣೆ ಹಿರೋಶಿಮಾ ನಾಗಸಾಕಿಗಳ ಮೇಲೆ ಅಮೆರಿಕವು ಹಾಕಿದ ಅಣುಬಾಂಬ್. ಅದು ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ಬಿಟ್ಟಂತಾಯಿತು.

ಮೊದಲನೇ ಹಾಗೂ ಎರಡನೇ ಮಹಾಯುದ್ಧದ ಪ್ರಭಾವಗಳಿಂದ ಶೀತಲ ಸಮರದ ಪ್ರಾರಂಭದ ಕಾರಣಗಳು ಜರ್ಮನಿಯಿಂದ ಪೋಲೆಂಡ್ ಆಕ್ರಮಣ, ಪರ್ಲ್ ಹಾರ್ಬರ್ ಮೇಲೆ ಜಪಾನಿನ ದಾಳಿ. ಎಲ್ಲಾ ಅಂತಾರಾಷ್ಟ್ರೀಯ ವ್ಯಾಜ್ಯಗಳನ್ನು ಶಾಂತಿಯುತ ಮಾರ್ಗದಿಂದ ಪರಿಹರಿಸಿಕೊಳ್ಳಬೇಕೆಂಬ ಮೊದಲನೆಯ ಮಹಾಯುದ್ಧದ ನಂತರ ಆಗಿದ್ದ ವರ್ಸೈಲ್ ಒಪ್ಪಂದವನ್ನು ಉಲ್ಲಂಘಿಸಿ, ಬಲಪ್ರಯೋಗದಿಂದ ರಾಜ್ಯ ವಿಸ್ತರಣೆಯಲ್ಲಿ ತೊಡಗಿಕೊಂಡ ಜರ್ಮನಿ, ಇಟಲಿ, ಜಪಾನುಗಳನ್ನೆದುರಿಸಿ ಬ್ರಿಟನ್, ಫ್ರಾನ್ಸ್, ಸೋವಿಯತ್ ಒಕ್ಕೂಟ, ಅಮೆರಿಕ ಸಂಸ್ಥಾನಗಳೇ ಮೊದಲಾದ ರಾಷ್ಟ್ರಗಳು ನಡೆಸಿದ ಯುದ್ಧ ಸುಮಾರು ಆರು ವರ್ಷಗಳ ಕಾಲ ವಿಶ್ವವ್ಯಾಪಿಯಾಗಿ, ಅಗಾಧ ಸಾವು ನೋವುಗಳಿಗೆ ಕಾರಣವಾಯಿತು.



ಅರ್ಧ ಸುಟ್ಟ ಕಟ್ಟಡದ ಭಗ್ನಾವಶೇಷ

ಜಪಾನ್ ಪರ್ಲ್ ಹಾರ್ಬರ್ ಮೇಲೆ ಮಾಡಿದ ದಾಳಿಗೆ ಪ್ರತ್ಯುತ್ತರವಾಗಿ ಘೋರ ಶಿಕ್ಷೆಯನ್ನೇ ಅನುಭವಿಸುವಂತಾಯಿತು. ಅವರು ಇದರಿಂದ ಕಲಿತ ಪಾಠ ತಲೆತಲಾಂತರಕ್ಕೂ ನೆನಪಿನಲ್ಲಿ ಉಳಿಯುವಂತಾಗಿದೆ. ನಿಜ, ಇಂದು ಜಪಾನ್ ಸಂಪೂರ್ಣ ಪರಿವರ್ತನೆಯಾಗಿ ಪ್ರಪಂಚಕ್ಕೆ ಮಾದರಿ ಎನಿಸುವಷ್ಟು ತಲೆಯೆತ್ತಿ ನಿಂತಿದೆ. ಇದಕ್ಕಾಗಿ ತೆತ್ತ ಬೆಲೆ ಮಾತ್ರ ಅಪಾರ. ಅಮೆರಿಕಾದ ಹೀನಕೃತ್ಯದಿಂದಾಗಿ ಬೆಂದು ಭಸ್ಮವಾದ ಎರಡು ನಗರಗಳ ಲಕ್ಷಾಂತರ ಜನ, ಪ್ರಾಣಿಪಕ್ಷಿಗಳು, ಕಟ್ಟಡಗಳು ಮಹಾಯುದ್ಧಗಳ ಪೈಶಾಚಿಕ ಯೋಜನೆಗಳಿಗೆ ಸಾಕ್ಷಿಯಾಗಿವೆ.

ಬಾಂಬ್ ಡೊಂ (ಜೆನ್ಬಾಕು) ಎಂದು ಕರೆಯಲಾಗುವ ಒಂದು ಅರ್ಧ ಸುಟ್ಟ ಕಟ್ಟಡದ ಭಗ್ನಾವಶೇಷಗಳನ್ನು ಜಪಾನಿಯರು ಇಂದಿಗೂ ಹಿರೋಷಿಮಾದಲ್ಲಿ ಉಳಿಸಿಕೊಂಡಿದ್ದಾರೆ. 1945ರ ಆಗಸ್ಟ್ 6 ಮತ್ತು 9ರಂದು ಜಪಾನಿನ ಎರಡು ನಗರಗಳ

ಮೇಲಾದ ಪರಮಾಣು ದಾಳಿಯ ಹಲವಾರು ದಾರುಣ ಚಿತ್ರಗಳನ್ನು ಹಿರೋಶಿಮಾ ಪೀಸ್ ಮೆಮೋರಿಯಲ್ ಮ್ಯೂಸಿಯಂನಲ್ಲಿ ಇಡಲಾಗಿದೆ. ಮುಂದಿನ ಪೀಳಿಗೆಯ ಜನರಿಗೆ ಅಣುಬಾಂಬಿನ ಭಯಂಕರ ಪರಿಣಾಮಗಳ ಬಗ್ಗೆ ತಿಳವಳಿಕೆ ಹಾಗೂ ಸಾವು ನೋವಿನ ಪಳೆಯುಳಿಕೆಗಳ ಚಿತ್ರಗಳು ಮೌನವಾಗಿ ಇಲ್ಲಿ ತೆರೆದಿಟ್ಟಿವೆ. ಮಕ್ಕಳ ಸುಟ್ಟು ಕರಕಲಾದ ಆಟಿಕೆಗಳು, ಯೂನಿಫಾರಂಗಳು, ಆಕಾರ ಕಳೆದುಕೊಂಡ ಅನೇಕ ಕಬ್ಬಿಣ ಉಕ್ಕು ಪಿಂಗಾಣಿ ಸಾಮಾನುಗಳ ಹೃದಯವಿದ್ರಾವಕ ದೃಶ್ಯಗಳು ಎಲ್ಲರ ಅಂತರಂಗದಲ್ಲಿ ಎಬ್ಬಿಸುವ ಪ್ರಶ್ನೆ ಒಂದೇ– ಇಂಥ ಯುದ್ಧಗಳು ಬೇಕೆ?

ಹಿರೋಶಿಮಾ

ಹಿರೋಶಿಮಾ ಜಪಾನಿನ ಎರಡನೇ ಸೇನಾ ಕೇಂದ್ರ ಕಾರ್ಯಾಲಯ ಮತ್ತು ಶೇಖರಣಾ ಉಗ್ರಾಣವೂ ಆಗಿತ್ತು. ಸೇನಾ ಪ್ರಾಮುಖ್ಯತೆಯುಳ್ಳ ನಗರವಾಗಿದ್ದರಿಂದ ಅದನ್ನು ಅಮೆರಿಕ ಅಣುಬಾಂಬ್ ಸ್ಫೋಟಿಸಲು ಗುರಿಯಾಗಿ ಆರಿಸಿಕೊಂಡಿತ್ತು. 1945 ಆಗಸ್ಟ್ 6, ಜಪಾನಿಯರಿಗೆ ಅದೊಂದು ಕರಾಳ ದಿನ. 60 ಕೆಜಿ (130ಪೌಂಡ್) ತೂಕವುಳ್ಳ ಯುರೇನಿಯಂ 235 ರಾಸಾಯನಿಕ ಹೊಂದಿದ ಬಂದೂಕು ಮಾದರಿಯ ವಿದಳನ ಶಸ್ತ್ರಾಸ್ತ್ರವಾದ ಗುರುತ್ವದ ಬಾಂಬು ಇದು. ಪೂರ್ವ ನಿರ್ಧಾರಿತ ಆಸ್ಫೋಟನದ ಎತ್ತರಕ್ಕೆ ವಿಮಾನದಿಂದ ಬೀಳಲು ಕೇವಲ 57 ಸೆಕೆಂಡ್ ತೆಗೆದುಕೊಂಡಿತು ಆ ಸ್ಫೋಟದ ಎತ್ತರ 600 ಮೀಟರುಗಳಷ್ಟು ಮೇಲಿತ್ತು. ಎದುರು ಗಾಳಿಯ ಕಾರಣದಿಂದ ಕೊನೆಗಳಿಗೆಯಲ್ಲಿ ಗುರಿ ಇಟ್ಟಿದ್ದ ಐಯೋಯ್ಯೆ ಸೇತುವೆಯಿಂದ 80 ಅಡಿ ಅಂದರೆ 40 ಮೀಟರ್ ಅಂತರದಲ್ಲಿ ತಪ್ಪಿ, ಷಿಯಾ ಸರ್ಜಿಕಲ್ ಕ್ಲಿನಿಕ್ ಮೇಲ್ಭಾಗದಲ್ಲಿ ನೇರವಾಗಿ ಸ್ಫೋಟಗೊಂಡಿತು. ಸುಮಾರು 13 ಕಿಲೋಟನ್ ಟಿ.ಎನ್.ಟಿ.ನಷ್ಟು ಪ್ರಮಾಣಕ್ಕೆ ಸಮನಾದ ಒಂದು ಭಯಂಕರ ಸ್ಫೋಟವನ್ನು ಅದು ಸೃಷ್ಟಿಸಿತು. ಒಂದು ಮೈಲಿಯಷ್ಟು ಹಬ್ಬಿದ ಬೆಂಕಿಯ ಕೆನ್ನಾಲಿಗೆಗಳ ವ್ಯಾಪ್ತಿ ನಗರದ 11 ಕಿಲೋ ಮೀಟರ್‌ವರೆಗೂ ಪ್ರಭಾವಿತವಾಗಿತ್ತು. ಹಿರೋಷಿಮಾದ ಶೇಕಡ 69ರಷ್ಟು ಕಟ್ಟಡಗಳು ಸಂಪೂರ್ಣ ನಾಶವಾಗಿ ಶೇಕಡ ಆರರಿಂದ ಏಳರಷ್ಟು ಕಟ್ಟಡಗಳು ಹಾನಿಗೊಂಡವು.

ಸುಮಾರು 70,000ದಿಂದ 80,000 ಮಂದಿ ತಕ್ಷಣ ಅಸುನೀಗಿದರು. 70,000 ಮಂದಿ ಗಾಯಗೊಂಡರು. ಹೆಚ್ಚಿನವರು ನಗರದ ಮಧ್ಯಭಾಗದಲ್ಲಿ ಇದ್ದರು. ಹೆಚ್ಚು ಕಮ್ಮಿ ಎಲ್ಲಾ ಜೀವವಿರುವ ಮನುಷ್ಯ, ಪ್ರಾಣಿಗಳು ಪಕ್ಷಿಗಳು ಹಾಗೂ ವಸ್ತುಗಳು ಅಕ್ಷರಶಃ ಸುಟ್ಟು ಬೂದಿಯಾಗಿದ್ದವು. ಇದಲ್ಲದೆ 1945ರ ಅಂತ್ಯದ ವೇಳೆಗೆ ಸುಟ್ಟ ಗಾಯಗಳು, ವಿಕಿರಣದ ಪರಿಣಾಮ ಹಾಗೂ ವೈದ್ಯಕೀಯ ಕೊರತೆಯಿಂದ ಉಲ್ಬಣಗೊಂಡ ಸಾವು ನೋವುಗಳ ಅಂದಾಜು 90 ಸಾವಿರದಿಂದ ಒಂದು ಲಕ್ಷ ಆರು ಸಾವಿರದವರೆಗೂ ತಲುಪಿತು. 1950ರ ಹೊತ್ತಿಗೆ ಕ್ಯಾನ್ಸರ್ ಮತ್ತು ಇತರ ದೀರ್ಘಾವಧಿ ಪರಿಣಾಮದಿಂದ ಎರಡು ಲಕ್ಷ ಜನ ಸತ್ತಿದ್ದರು.

ನಾಗಸಾಕಿ

ಅಮೇರಿಕಾ ಇಷ್ಟಕ್ಕೆ ತೃಪ್ತವಾಗದೆ ಮೂರು ದಿನಗಳ ನಂತರ, ಅಂದರೆ 1945 ಆಗಸ್ಟ್ 9ರಂದು ಫ್ಯಾಟ್ ಮ್ಯಾನ್ ಹೆಸರಿನ ಇನ್ನೊಂದು ಪರಮಾಣು ಬಾಂಬನ್ನು ಬೆಳಿಗ್ಗೆ 11 ಗಂಟೆಗೆ ನಾಗಸಾಕಿ ಮೇಲೆ ಸ್ಫೋಟಿಸಿತು. ಸುಮಾರು 6.4 ಕೆಜಿಗಳಷ್ಟಿದ್ದ ಪ್ಲೋಟೋನಿಯಂ 239 ತಿರುಳನ್ನು ಒಳಗೊಂಡಿದ್ದ ಈ ಶಸ್ತ್ರಾಸ್ತ್ರಕ್ಕೆ "ಫ್ಯಾಟ್ ಮ್ಯಾನ್" ಎಂದು ಹೆಸರಿಸಲಾಗಿತ್ತು. ನೆಲದಿಂದ ಮೇಲ್ಭಾಗದಲ್ಲಿ 1540 ಅಡಿ ಎತ್ತರದಲ್ಲಿ ಅದು ಕೇವಲ 42 ಸೆಕೆಂಡುಗಳ ಅಂತರದಲ್ಲಿ



ಶಾಂತಿ ಸ್ಮಾರಕ – ಪಾರಿವಾಳ ಹಿಡಿದ ಬಾಲಕ

ಸ್ಫೋಟಿಸಿತ್ತು. 21 ಕಿಲೋಟನ್ಸ್ ಟಿಎಂಟಿಗೆ ಸಮನಾಗಿತ್ತು .ಅಂದರೆ 88 ಟಿಜೆ. ಇದು 3900 ಡಿಗ್ರಿ ಸೆಲ್ಸಿಯಸ್‌ನಷ್ಟು ಶಾಖವನ್ನು ಉತ್ಪಾದಿಸಿ ಗಂಟೆಗೆ 1,005 ಕಿ.ಮೀ. ಅಂದರೆ 624 ಮೈಲಿ ಕಿಲೋಮೀಟರ್ ವೇಗದ ಬಿರುಗಾಳಿಯ ಸೃಷ್ಟಿಯೊಂದಿಗೆ ಅಪ್ಪಳಿಸಿತ್ತು.

ತಕ್ಷಣಕ್ಕೆ 40,000ದಿಂದ 75,000ದಷ್ಟು ಜನರು ಸಾವು ನೋವುಗಳಿಗೆ ಈಡಾದರೂ, 1945ರ ಅಂತ್ಯದ ವೇಳೆಗೆ ಪರಮಾಣು ಬಾಂಬಿನ ವಿಕಿರಣದ ಪರಿಣಾಮದಿಂದ ಆ ಸಂಖ್ಯೆ 80 ಸಾವಿರಕ್ಕೆ ತಲುಪಿತು. ಒಟ್ಟು ನಾಶದ ವ್ಯಾಪ್ತಿ ಒಂದು ಮೈಲಿಯಷ್ಟಿತ್ತು. ನಗರದ ಉತ್ತರ ಭಾಗದಿಂದ ಎರಡು ಮೈಲಿಗಳಷ್ಟು ದಕ್ಷಿಣದವರೆಗೆ ಬೆಂಕಿಯ ನಾಲಿಗೆ ಚಾಚಿಕೊಂಡಿತ್ತು.

ಹಿರೋಷಿಮಾದ ಬಾಂಬ್ ದಾಳಿಯ ನಂತರ ನಾಗಸಾಕಿಯತ್ತ ಗುಳೆ ಹೊರಟದ್ದ ಅನೇಕರು ದುರಾದೃಷ್ಟಕ್ಕೆ ಅಲ್ಲಿಯೂ ಬಾಂಬ್ ದಾಳಿಗೆ ತುತ್ತಾಗಿದ್ದರು. 15 ಆಗಸ್ಟ್ 1945ರಂದು ಜಪಾನ್ ಮಿತ್ರ ರಾಷ್ಟ್ರಗಳಿಗೆ ಶರಣಾಯಿತು. ಕುಕ್ಕುರದಲ್ಲಿ ನಾಗಸಾಕಿಯ ಬಾಂಬ್ ದಾಳಿಯ ನೆನಪಿಗೆ ಒಂದು ಶಾಂತಿ ಸ್ಮಾರಕ ಹಾಗೂ ಗಂಟೆಯನ್ನು ಈಗಲೂ ನೋಡಬಹುದು. ಜಪಾನ್ ಶರಣಾಗತಿಯ ನಂತರ ಎರಡನೆಯ ವಿಶ್ವ ಯುದ್ಧ ಕೊನೆಗೊಂಡಿತು ಎಂದು ಇತಿಹಾಸ ಹೇಳುತ್ತದೆ. ಆದರೆ ವಿಶ್ವದ ಅನೇಕ ರಾಷ್ಟ್ರಗಳು ಇಂದಿಗೂ ಅಣುಬಾಂಬಿನ ಸಂಗ್ರಹ ಹೊಂದಿದ್ದು ಆಟವಾಡುತ್ತಿವೆ. ಯಾವ ಕ್ಷಣದಲ್ಲಾದರೂ ತಲೆ ಕೆಟ್ಟರೆ ಒಂದು ದೇಶ ಇನ್ನೊಂದರ ಮೇಲೆ ಈ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಲು ತುದಿಗಾಲುಗಳ ಮೇಲೆ ನಿಂತಿದೆ. ವಿಶ್ವ ಶಾಂತಿ ಬಯಸುವವರ ಸೊಲ್ಲಡಗಿದೆ. ಅಣುಬಾಂಬಿನ ಪರಿಣಾಮದ ಭಯಾನಕ ದೃಶ್ಯಗಳನ್ನು ಪ್ರತಿಯೊಬ್ಬರೂ ಮತ್ತೆ ಮತ್ತೆ ನೆನಪಿನಲ್ಲಿಡಬೇಕು. ಮನುಷ್ಯ ತನ್ನ ಸ್ವಾರ್ಥಕ್ಕಾಗಿ ಭೂಮಂಡಲದ ಒಡಲಿಗೆ ಬೆಂಕಿ ಹಚ್ಚುವಷ್ಟು ಪ್ರಬಲನಾಗ ತೊಡಗಿದ್ದಾನೆ.

ಸುಂದರ ಪುಟ್ಟ ದ್ವೀಪ ರಾಷ್ಟ್ರ ಜಪಾನ್ ಇಂದು ಇಡೀ ಜಗತ್ತಿನ ಗಮನ ಸೆಳೆಯುವಷ್ಟು ಪ್ರಗತಿಯ ಮುನ್ನೋಟದಲ್ಲಿದೆ. ಶಾಂತಿ, ಸ್ನೇಹ, ನಮ್ರತೆ, ಬುದ್ಧಿವಂತೆಗಳೇ ಮೂರ್ತಿವೆತ್ತಂತೆ ಬದುಕನ್ನು ಅವರು ಇಂದು ಕಟ್ಟಿಕೊಂಡಿದ್ದಾರೆ. ಬ್ರಹ್ಮಾಸ್ತ್ರವನ್ನು ತಮ್ಮ ಬತ್ತಳಿಕೆಯಲ್ಲಿ ಇಟ್ಟುಕೊಂಡಿರುವ ಮಹಾ ನಾಯಕರುಗಳಿಂದ ಈ ವಿಶ್ವವನ್ನು ಉಳಿಸುವತ್ತ ನಾವು ಗಮನ ಹರಿಸಬೇಕಿದೆ.

***

ದೂರದರ್ಶನದ ಉಗಮ ಮತ್ತು ಇಂದಿನ ಪರಿಣಾಮಗಳು

– ಎಲ್. ಗಿರಿಜಾ ರಾಜ್

ದೂರದರ್ಶನ ಅಥವಾ ಟೆಲಿವಿಷನ್ ಒಬ್ಬ ವಿಜ್ಞಾನಿಯ ಪರಿಶ್ರಮದಿಂದ ರೂಪುಗೊಂಡುದಲ್ಲ. ಅನೇಕ ಸಂಶೋಧಕರು ಕ್ರಮ ಕ್ರಮವಾಗಿ ಸುಧಾರಿತ ರೂಪವನ್ನು ನೀಡುತ್ತ ಹೋದರು. ಬೇರೆ ಬೇರೆ ದೇಶಗಳ ಹಲವು ವಿಜ್ಞಾನಿಗಳ ಶ್ರಮ ಮತ್ತು ಬುದ್ಧಿಶಕ್ತಿಯ ಸಂಗಮದಿಂದ 21ನೇ ಶತಮಾನದಲ್ಲಿ ಸರ್ವಾಂಗ ಸುಂದರವಾಗಿ ಎಲ್ಲರ ಆಕರ್ಷಣೆಯ ಪ್ರಮುಖ ಕೇಂದ್ರವಾಗಿ ದೂರದರ್ಶನ ನಮ್ಮ ಮುಂದೆ ಕುಳಿತಿದೆ. ದೂರ ಇರುವುದನ್ನು ಹತ್ತಿರ ತಂದು ದರ್ಶನ ಮಾಡಿಸುವುದು ದೂರದರ್ಶನ.

ದೂರದರ್ಶನದ ಚರಿತ್ರೆ ಓದಿದಾಗ, ಒಂದು ಜಾನಪದ ಕತೆ ನೆನಪಿಗೆ ಬರುತ್ತದೆ. ಒಬ್ಬನೇ ಗುರುವಿನ ಬಳಿ ಕಲಿತು, ಒಂದೊಂದು ಶಕ್ತಿಯಲ್ಲಿ ಪರಿಣತರಾದ ಮೂವರು ಗೆಳೆಯರು ಅರಣ್ಯವೊಂದರಲ್ಲಿ ಎಲ್ಲಿಯೋ ಬಿದ್ದಿದ್ದ ಒಂದು ಅಸ್ಥಿಪಂಜರಕ್ಕೆ ತಮ್ಮ ಶಕ್ತಿಗಳಿಂದ ಜೀವ ಕೊಡಲು ತೀರ್ಮಾನಿಸುತ್ತಾರೆ. ತಾವು ಕಲಿತ ವಿದ್ಯೆಯ ಮಹಿಮೆಯಿಂದ ಅದಕ್ಕೆ ರಕ್ತಮಾಂಸಗಳನ್ನು ತುಂಬಿ, ಜೀವವನ್ನು ತುಂಬಿ ಪರಿಪೂರ್ಣ ಮಾಡಿದಾಗ ಅದೊಂದು ಅಪ್ರತಿಮ ಸುರಸುಂದರಾಂಗಿಯಾದ ಹೆಣ್ಣಾಗಿ ಮಾರ್ಪಡುತ್ತದೆ.

ದೂರದರ್ಶನದ ಹುಟ್ಟು ಅಥವಾ ಉಗಮದ ಸಮಯದಲ್ಲಿ ಇದನ್ನು ಕುರಿತಾದ ಕಲ್ಪನೆ, ಸಂಶೋಧನೆಯು ತಾಂತ್ರಿಕತೆಯ ಎರಡು ಪ್ರಮುಖ ಹಾದಿಗಳಲ್ಲಿ ಕವಲೊಡೆದಿತ್ತು. ಇದರ ಮೂಲ ಪುರುಷರಾದ ಸಂಶೋಧಕರು ಪಾಲ್ ನಿಪ್ ಕೋವ್‌ನ ರೊಟೇಟಿಂಗ್ ಡಿಸ್ಕ್ ಆಧಾರದ ಮೇಲೆ ಯಾಂತ್ರಿಕತೆಗೆ ಒತ್ತುಕೊಟ್ಟು, ದೂರದರ್ಶನ ರೂಪಿಸುವ ಪ್ರಯತ್ನ ಮಾಡಿರಬಹುದು ಅಥವಾ 1907ರಲ್ಲಿ ಕ್ಯಾಥೋಡ್ ರೇ ಟ್ಯೂಬ್ ಕಂಡುಹಿಡಿದ ಇಂಗ್ಲೀಷ್ ಸಂಶೋಧಕ. ಕ್ಯಾಂಪ್ಬೆಲ್ ಸ್ವಿಂಟನ್ ಮತ್ತು ರಷ್ಯಾದ ವಿಜ್ಞಾನಿ ಬೋರಿಂಗ್ ರೋಸಿಂಗ್ ಇವರ ಆವಿಷ್ಕಾರದ ಆಧಾರದ ಮೇಲೆ ತಂತ್ರಾಂಶಕ್ಕೆ ಒತ್ತುಕೊಟ್ಟು ಟಿವಿಯನ್ನು ಕಂಡು ಹಿಡಿಯಲು ಪ್ರಯತ್ನಿಸಿದಂತೆ ಕಾಣುತ್ತದೆ. ಅದರೆ ಮುಂದೆ ತತ್ರಾಂಶ ಆಧರಿಸಿದ ಟಿ.ವಿ.ಜಾಲ, ಯಾಂತ್ರಿಕತೆಯಿಂದ ರೂಪುಗೊಂಡ ಟಿ.ವಿ. ವ್ಯವಸ್ಥೆಗಿಂತಲೂ ಹೆಚ್ಚು ಸಮರ್ಪಕವಾಗಿ ಕಾರ್ಯನಿರ್ವಹಿಸಿ ಮಾನ್ಯತೆ ಪಡೆಯಿತು.

ಪಾಲ್ ನಿಪ್ ಕೋವ್, ಎ.ಎ. ಕ್ಯಾಂಪ್ ಬೆಲ್, ಬೋರಿಸ್ ರೋಸಿಂಗ್, ಜಾನ್ ಬೇರ್ಡ್, ಫ್ರಾನ್ಸಿಸ್ ಜೆನ್ ಕಿನ್ಸ್, ಕೋಸ್ಮಾ ಜೋರಿಕಿನ್ಸ್, ಫಿಲೋ ಫಾರ್ನ್ ವರ್ತ್, ಲೂಯಿ ಪಾರ್ಕರ್, ಮಾರ್ವಿನ್ ಮಿಡ್ಲ್ ಮಾರ್ಕ್ ಮುಂತಾದ ವಿಜ್ಞಾನಿಗಳು ದೂರದರ್ಶನದ ಇಂದಿನ ರೂಪಕ್ಕೆ ತಮ್ಮ ತಮ್ಮ ಕೊಡುಗೆಗಳನ್ನು ನೀಡಿದ್ದಾರೆ.

ಜೂನ್ 1956ರಲ್ಲಿ ಮೊಟ್ಟ ಮೊದಲು "Lazy bones" ಎಂಬ ಹೆಸರಿನ ಟಿ.ವಿ. ರಿಮೋಟ್ ನಿಯಂತ್ರಕ ಅಮೇರಿಕಾದ ಮನೆಯೊಂದನ್ನು ಪ್ರವೇಶಿಸಿತು. ಅಮೇರಿಕನ್ ಬ್ರಾಡ್ಕ್ಯಾಸ್ಟಿಂಗ್ ಕಂಪನಿ ಮೊಟ್ಟ ಮೊದಲು ಶನಿವಾರ ಬೆಳಗಿನ ಹೊತ್ತು ಆಗಸ್ಟ್ 19, 1950ರಂದು ಮಕ್ಕಳಿಗಾಗಿ ಕಾರ್ಯಕ್ರಮ ರೂಪಿಸಿ ಪ್ರಸಾರಮಾಡಿತು.

ಅಂದು ಹೀಗೆ ರೂಪಿತವಾದ ದೂರದರ್ಶನ, ಇಂದು ಬೃಹದಾಕಾರವಾದ ತನ್ನ ಜಾಲ ಹರಡಿಕೊಂಡಿದೆ. ಆಕಾಶವಾಣಿ ಅಂದರೆ ರೇಡಿಯೋ ಶ್ರವ್ಯ ಮಾಧ್ಯಮ ಮಾತ್ರವಾದರೆ, ಇದು ಶ್ರವ್ಯ, ದೃಶ್ಯ ಎರಡನ್ನೂ ಒಳಗೊಂಡಿದೆ. ಅಂದರೆ ಮುಂದೆ ಕುಳಿತಾಗ ಕಣ್ಣು ಕಿವಿ ಎರಡೂ ಒಟ್ಟಿಗೇ ಕೆಲಸ ಮಾಡುವುದರಿಂದ ಮನಸಿನ ಮೇಲೆ ಆಗುವ ಪರಿಣಾಮವೂ ಹೆಚ್ಚು! ಹಾಗಾಗಿ ಯಾರೂ ತಪ್ಪಿಸಿಕೊಳ್ಳದ ಹಾಗೆ ಸುಂದರ ಮಾಯಾಜಾಲದಲ್ಲಿ ಹಿಡಿದಿಟ್ಟಿದೆ. ಎಂಥ ಅದ್ಭುತ ಯಂತ್ರ! ಸರಿಯಾದ ರೀತಿಯಲ್ಲಿ ಕಾರ್ಯಕ್ರಮಗಳನ್ನು ಯೋಜಿಸಿದರೆ ವಿಶ್ವದ ದಿಕ್ಕನ್ನೇ ಬದಲಿಸೀತು. ಆವಿಷ್ಕಾರಗಳಿಗೆ ಎರಡು ಮುಖ ಇದ್ದೇ ಇರುತ್ತದೆ. ತಾರಕ ಇಲ್ಲವೇ ಮಾರಕ. ತಾವು ಮಾಡುವ ಸಂಶೋಧನೆಗಳು ಮನುಕುಲದ ಕಲ್ಯಾಣಕ್ಕೆ ನಾಂದಿಯಾಗಲಿ ಎಂದು ತಮ್ಮ ಜೀವಮಾನದ ಅದೆಷ್ಟೋ ಅಮೂಲ್ಯವಾದ ಗಂಟೆಗಳು, ದಿನಗಳು, ವರ್ಷಗಳನ್ನು ಅದಕ್ಕಾಗಿ ಮೀಸಲಿಡುವ ಸಂದರ್ಭದಲ್ಲಿ ಸ್ವಂತ ಸುಖವನ್ನೂ ತ್ಯಾಗ ಮಾಡಿರುತ್ತಾರೆ. ಒಳ್ಳೆಯದರ ಕಡೆಗೇ ನಾವೂ ಸ್ಪಂದಿಸಬೇಕೇ ಹೊರತು ವಿರುದ್ಧ ದಿಕ್ಕಿನಲ್ಲಿ ಹೊರಟರೆ ಅದರ ಫಲವನ್ನು ನಾವೇ ಉಣ್ಣಬೇಕಾಗುತ್ತದೆ. ಮೊಬೈಲುಗಳ ವಿಷಯದಲ್ಲಿ ಈಗ ಆಗಿರುವುದೇ ಹಾಗೆ!

ಇಂದು ಭಾರತದಾದ್ಯಂತ ನೂರಾರು ಏಕೆ ಅದಕ್ಕಿಂತ ಹೆಚ್ಚು ಚಾನೆಲ್‌ಗಳು ಕೆಲಸ ಮಾಡುತ್ತಿವೆ.

ಪ್ರಂಪಂಚದಾದ್ಯಂತ ಘಟಿಸುವ ಅನೇಕ ವಿದ್ಯಮಾನಗಳನ್ನು ನಾವು ಮನೆಯಲ್ಲಿ ಕುಳಿತಲ್ಲಿಯೇ ನೋಡುವುದು ನಿಜಕ್ಕೂ ರೊಮಾಂಚಕಾರಿಯಾದ ಅನುಭವ! ಈಗ ಅದು ಸಾಮಾನ್ಯ ಮನುಷ್ಯನಿಗೆ ಕೈಗೆಟುಕದ ಗಗನ ಕುಸುಮವೇನಲ್ಲ! ಬರೀ ವೀಕ್ಷಿಸುವುದಷ್ಟೇ ಅಲ್ಲ, ಅದರಲ್ಲಿ ಕಾಣಿಸಿಕೊಳ್ಳುವುದಕ್ಕೂ ವಿಫುಲ ಅವಕಾಶಗಳು ಲಭ್ಯವಾಗುವಂತೆ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಇಂದು ಗುಡಿಸಲುಗಳಲ್ಲಿ ಬಡತನ ತಾಂಡವವಾಡುತ್ತಿದ್ದರೂ, ಮೂಲೆಯಲ್ಲೊಂದು ಇದ್ದದ್ದರಲ್ಲಿಯೇ ಒಳ್ಳೆಯ ಜಾಗ ದೊರಕಿಸಿಕೊಂಡು, ಟಿ.ವಿ.ಯೊಂದು ಕಣ್ಣು ಮಿಟುಕಿಸಿ ನಗುತ್ತಿರುತ್ತದೆ.

ಆದರೆ ಈಗ ಪ್ರಸಾರವಾಗುತ್ತಿರುವುದಕ್ಕಿಂತ ಎರಡು ಮೂರು ದಶಕಗಳ ಹಿಂದೆ ಮೂಡಿಬರುತ್ತಿದ್ದ ಕಾರ್ಯಕ್ರಮ ಗಳಲ್ಲಿ ಸತ್ವ, ಶೀಲವಿರುತ್ತಿತ್ತು. ಇಂದು ಮನರಂಜನೆಯ ಹುಚ್ಚು ಪರಾಕಾಷ್ಠೆಗೆ ಏರಿ, ಕೊನೆಗೆ ಅದು ಆರೋಗ್ಯಪೂರ್ಣ ರೇಖೆ ದಾಟಿ, ಅಶ್ಲೀಲ ಮತ್ತು ಅಗ್ಗದ ಮನರಂಜನೆಯಲ್ಲಿ ಪರ್ಯವಸಾನವಾಗುತ್ತಿರುವುದು ದುರದೃಷ್ಟಕರ! ಅದೇ ಪರಮ ಉದ್ದೇಶದ ಹಾಗೆ ಬಿಂಬಿತವಾಗುತ್ತಿದೆ. ಇದು ನೇರವಾಗಿ ಹೆಚ್ಚು ಪರಿಣಾಮ ಬೀರುತ್ತಿರುವುದು ಮುಗ್ಧ ಮಕ್ಕಳು ಮತ್ತು ಹದಿಹರೆಯದ ವಿದ್ಯಾರ್ಥಿಗಳ ಮೇಲೆ! ಇಂದಿನ ಮಕ್ಕಳು ಅಸಾಧಾರಣ ಪ್ರತಿಭಾವಂತರು. ತಲೆಮಾರಿನಿಂದ ತಲೆಮಾರಿಗೆ ಈ ಬುದ್ಧಿಮತ್ತತೆ ಹೆಚ್ಚುತ್ತಾ ಹೋಗುತ್ತಿದೆ. ಹಾಗೆಯೇ ಗ್ರಹಣಶಕ್ತಿ ಚುರುಕಾಗಿದೆ. ಒಳ್ಳೆಯದೋ, ಕೆಟ್ಟುದೋ ಎರಡನ್ನೂ ಮೆದುಳು ಬಹುಬೇಗ ಗ್ರಹಿಸುತ್ತದೆ. ಅದಕ್ಕಾಗಿಯೇ ಎಳೆಯ ಮನಸುಗಳ ಮೇಲೆ ಅಡ್ಡ ಪರಿಣಾಮ ಬೀರದ ಹಾಗೆ ಎಚ್ಚರಿಕೆಯಿಂದ ಕಾರ್ಯಕ್ರಮಗಳನ್ನು ಯೋಜಿಸಬೇಕಾಗುತ್ತದೆ.

ಕೆಲವು ರಿಯಾಲಿಟಿ ಶೋಗಳಲ್ಲಿ ಮುಗ್ಧ ಮಕ್ಕಳನ್ನು ಉಪಯೋಗಿಸುವ ರೀತಿ ಆತಂಕಕಾರಿಯಾಗಿದೆ. ಈ ಜಗತ್ತನ್ನು ಅರ್ಥಮಾಡಿಕೊಳ್ಳಲು ಕುತೂಹಲದ ಬೆರಗಿನಿಂದ ಕಣ್ಣರಳಿಸಿ ನೋಡುತ್ತಿದ್ದ ಹಾಗೇ, ಇನ್ನೂ ಪರಿಪೂರ್ಣ ವಿಕಸಿತವಾಗದ ಎಳೆಯ ಶರೀರವನ್ನು ದೊಡ್ಡವರ ಶೃಂಗಾರಮಯ ಹಾಡುಗಳಿಗೆ ಅಂಗಾಂಗ ಬಳುಕಿಸಿ ನೃತ್ಯ ಮಾಡಿಸುವುದು ಸಮಂಜಸವಾದುದಲ್ಲ.

ವೀಕ್ಷಕರನ್ನು ಹೆಚ್ಚುಮಾಡಿಕೊಳ್ಳಲು ಚಾನೆಲ್‌ಗಳು ಸ್ಪರ್ಧೆಗಿಳಿಯುವುದರ ಬದಲು ಒಳ್ಳೆಯ ಅಭಿರುಚಿಯುಳ್ಳ ಧಾರಾವಾಹಿ ಗಳನ್ನು ಪ್ರಸಾರ ಮಾಡಬೇಕಾಗಿದೆ. ಸಮಾಜದಲ್ಲಿ ಘಟಿಸುತ್ತಿರುವ ಅನ್ಯಾಯಗಳು, ಕೊಲೆ, ಸುಲಿಗೆ, ಅಪರಾಧಗಳ ಬೆನ್ನುಹತ್ತಿ ನಿರ್ಭಯವಾಗಿ ಅವುಗಳನ್ನು ಚಿತ್ರೀಕರಿಸಿ ಬಿತ್ತರಿಸುವ ಚಾನೆಲ್‌ಗಳಲ್ ಕೆಲವು ಸಮರ್ಥವಾಗಿ ಕಾರ್ಯ ನಿರ್ವಹಿಸುತ್ತಿವೆ. ಇವು ಅನೇಕ ವೇಳೆ ಈ ಅನ್ಯಾಯಗಳನ್ನು ಸರಿಮಾಡಲೂ ಮುಂದಾಗಿವೆ. ಅದನ್ನು ಶ್ಲಾಘಿಸಲೇಬೇಕು.

ಹಗಲಿರುಳೂ ಒಂದಲ್ಲ ಒಂದು ಚಲನಚಿತ್ರಗಳನ್ನು ಪ್ರಸಾರ ಮಾಡಲೆಂದೇ ಕೆಲವು ವಾಹಿನಿಗಳು ಇರುವುದರಿಂದ, ವಿದ್ಯಾರ್ಥಿಗಳು ತಮ್ಮ ಅಮೂಲ್ಯವಾದ ಓದುವ ಸಮಯವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಕೆಲವು ಪ್ರಜ್ಞಾವಂತ ವಿದ್ಯಾರ್ಥಿಗಳು ಅದರಿಂದ ತಪ್ಪಿಸಿಕೊಳ್ಳುತ್ತಿರಬಹುದು ಅಷ್ಟೇ! ಈಗಂತೂ ತಾಂತ್ರಿಕತೆ ಎಂದಿಲ್ಲದಷ್ಟು ಮುಂದುವರಿದು ಇಂಟರ್ನೆಟ್ ಜಾಲ ಎಲ್ಲರನ್ನೂ ಆವರಿಸಿಕೊಂಡಿದೆ. ಎಲ್ಲವೂ ಕೆಟ್ಟುದಲ್ಲವಾದರೂ ಆರಿಸಿಕೊಳ್ಳುವ ಜಾಣ್ಮೆಯಿರಬೇಕು.

ಬೇಕಾದಷ್ಟು ಒಳ್ಳೆಯ ಕಾರ್ಯಕ್ರಮಗಳೂ ಪ್ರಸಾರವಾಗುತ್ತಿವೆ. ಆಯ್ಕೆ ಮುಖ್ಯ! ಸಿಹಿ ತಿನ್ನಬೇಕು, ಸರಿ! ಆದರೆ ಹೆಚ್ಚಾದರೆ ಬುದ್ಧಿ ಮಂಕಾಗುತ್ತದೆ, ಜಡತೆ ಆವರಿಸುತ್ತದೆ. ಅತಿಯಾದರೆ ಅಮೃತವೂ ವಿಷ ಎಂದು ಹಿರಿಯರು ಹೇಳಿರುವ ಅಮೃತೋಕ್ತಿ ಎಷ್ಟೊಂದು ಸತ್ಯ!

***

ಯತ್ನ ಮತ್ತು ವಿಫಲತೆ – ಲೇಖನಮಾಲೆ–5

ತೊಂದರೆಗಾಗಿ ಕ್ಷಮಿಸಿ

– ಮಾಧುರಿ ಕೃಷ್ಣ

ನಾವು ಅಕ್ಕ ತಮ್ಮ ಎದುರು ಬಹುವಾಗಿ ಅಷ್ಟೊತ್ತಿಂದ ಕುಳಿತಿದ್ದರೂ ಏನೂ ಮಾತಾಡುತ್ತರಲಿಲ್ಲ. ಇಬ್ಬರಲ್ಲೂ ಒಂದೇ ಚಿಂತೆ ಹೊಗೆಯಾಡುತಿತ್ತು. ಮುಂದೇನು? ಮುಂದೆ ಹೇಗೆ? ಇಡೀ ಎರಡು ವರ್ಷಗಳಿಗೆ ಬಂದಿತ್ತು– ತಮ್ಮನ ಮಗನ ಮದುವೆಗೆ ನಮ್ಮ ಯಾವ ಪ್ರಯತ್ನಗಳೂ ಕೈಗೂಡದೆ ವೈಫಲ್ಯವುಂಟಾಗಿ!

ಹೊರಗೆ ರಾಯಲ್ ಎನ್‌ಫೀಲ್ಡ್ ಗುಡುಗುಡಾಯಿಸಿಕೊಂಡು ಬಂದು ನಿಂತ ಸದ್ದಾಯಿತು. ಅಕ್ಕ ತಮ್ಮ ಇಬ್ಬರೂ ಮುಖ ಮುಖ ನೋಡಿದೆವು. ಈಗೇನು? ಎಂದುಕೊಳ್ಳವಷ್ಟರಲ್ಲೇ ತೆರೆದಿಟ್ಟ ಬಾಗಿಲಲ್ಲಿ ಸೋದರಳಿಯ ಪ್ರತ್ಯಕ್ಷನಾದ. ತಮ್ಮನೋ ಟಿವಿಯಲ್ಲೇ ಮಗ್ನನಾಗಿರುವಂತೆ ನಟಿಸಿದ. ನಾನು ಒಳಬಂದವನಿಗೆ "ಬಾ, ಕಾಫಿ ತರಲೇನೋ'' ಎಂದು ಕೇಳುತ್ತ, ಉತ್ತರಕ್ಕೆ ಕಾಯದೇ ಒಳನಡೆದು. ಕಾಫಿ ಬೆರೆಸಿ ತಂದು ಸೋದರಳಿಯನ ಕೈಗಿತ್ತೆ. ಅವನು ಕೂಡಲೇ ಒಂದು ದೊಡ್ಡ ಸಿಪ್ ಎಳೆದುಕೊಂಡು ಚಪ್ಪರಿಸುತ್ತ ಕೇಳಿದ, "ಯಾಕಪ್ಪಾ, ಯಾಕಾಂಟೀ, ಇಬ್ಬರೂ ಗಪ್‌ಚಿಪ್ ಆಗಿದ್ದೀರಾ, ಯಾಕೆ, ಏನಾಯ್ತು?''

"ಹ್ದೆ ಹ್ದೇ... ಏನೂ ಇಲ್ಲವಪ್ಪ..!'', ತಮ್ಮ ಎದ್ದು ಹೋಗಲು ಪ್ರಯತ್ನಿಸಿದ.

"ಏನಾಂಟೀ, ಯಾವಾಗಲೂ ಕಪ್ಪೆ ಹಾಗೆ ವಟಗುಟ್ಟುವವರು ನೀವು! ನೀವೂ ಯಾಕ್ಹೀಗೆ ಕೈ ಕಟ್, ಬಾಯ್ ಮುಚ್ಚ್ ಆಗಿದ್ದೀರಾ?'' ಹುಡುಗ ಎಂದಿನಂತೆ ತನ್ನ ಖುಶಾಲಿನಲ್ಲೇ ಕೇಳಿದ.

ನಗಲೆತ್ನಿಸುತ್ತ ನಾನೆಂದೆ, "ಇರು. ನಂಗೂ, ನಿಮ್ಮ ಪಪ್ಪನಿಗೂ ಕಾಫಿ ತಂದುಬಿಡ್ತೇನೆ'' ಎಂದು ಜಾಗ ಖಾಲಿ ಮಾಡಲೆತ್ನಿಸಿದೆ.

"ತಡೀರಿ ಆಂಟಿ, ಆ... ನಿನ್ನೆ ಕಂಡು ಬಂದ ಹುಡುಗಿಯ ಮನೆಯವರಿಂದ ಏನಾದರೂ ಉತ್ತರ ಬಂತೇ?'' ಎನ್ನುತ್ತ ತನ್ನಪ್ಪನನ್ನೇ ನೋಡಿದ.

ಎಲಾ ಇವನ! ಬರೇ ಮೊದ್ದು– ಅಮಾಯಕ ಎಂದುಕೊಂಡಿದ್ದರೆ ನಮ್ಮನ್ನೇ ಮಂಗ ಮಾಡುತಿದ್ದಾನಲ್ಲ ಈ ಘಟಿಂಗ!! ನಾನು ಮನಸ್ಸಲ್ಲೇ ಅಂದುಕೊಂಡಿದ್ದು ಮರೆತು ಜೋರಾಗಿಯೇ ಹೊರಬಿತ್ತೇನೋ! 'ಹ್ಹಹ್ಹಾ..' ಎಂದು ಸೂರು ಹಾರುವಂತೆ ನಕ್ಕ ಸೋದರಳಿಯ. ಸದ್ಯ, ನಮ್ಮದು ಊರಿನ ಹಳೆಯಕಾಲದ ಹೆಂಚು ಹೊದಿಸಿದ ಮನೆಯಲ್ಲ! ಬೆಂಗಳೂರಿನ ಗಟ್ಟಿ ತಾರಸಿನ ಮನೆ, ಅಲ್ಲದೇ ಮೇಲೆರಡು ಮಾಳಿಗೆಯೂ ಕಟ್ಟಲ್ಪಟ್ಟಿತ್ತು. "ನಾನು ಕರೆಕ್ಟ್.. ಅಲ್ಲವೇ?'' ಮುಲಾಜಿಲ್ಲದೆ ಇಬ್ಬರ ಮುಖವನ್ನೂ ನಗುತ್ತ ಕೇಳಿದ.

"ಏನಂತೆ ಅವರ ಪುಕಾರು?'' ಗಾಳಿಯಲ್ಲಿ ಬೆರಳುಗಳಿಂದ ಬರೆಯುವಂತೆ ನಟಿಸುತ್ತ, ''ಈ ಸಂಬಂಧಕ್ಕೆ ದೈವಾನುಗ್ರಹವಿಲ್ಲ ಎಂದು ತಮಗೆ ತಿಳಿಸಲು ವಿಷಾದಿಸುತ್ತೇವೆ, ಇಂತೀ ತಮ್ಮ ಶ್ರೇಯೋಭಿಲಾಷಿಗಳು! ಎಂದಿದ್ದಾರೆ ಅಲ್ಲವೇ" ಎಂದ ನಾಟಕೀಯವಾಗಿ.

ಈಗ ಕಿಸಕ್ ಎಂದು ನಗುವ ಸರದಿ ನನ್ನದಾಯಿತು. ನಗು ಶಬ್ದವಾಗಿ ಅನುರಣಿಸಿದ ನಂತರ ಇದ್ದಕ್ಕಿದ್ದಂತೆ ಭಾವಾಗಿ ತಮ್ಮನ ಮುಖ ನೋಡಿದೆ. ಅವನೋ ಊರಿಂದ ಬರುವಾಗಲೇ ಈ ಬಾರಿ ಒಂದಲ್ಲಾ ಒಂದು ಕನ್ಯೆ ಫಿಕ್ಸ್ ಮಾಡಿಕೊಂಡೇ ವಾಪಾಸು ಹೋಗುತ್ತೇನೆಂದು ಕನ್ಯಾಮಣಿಗಳ ಫೋಟೋ ಜಾತಕಗಳ ದೊಡ್ಡ ಬ್ರೀಫ್ಕೇಸನ್ನು ಹೊರಲಾರದೆ ಹೊತ್ತು ತಂದಿದ್ದ. ನಾನೂ ಅವನೂ ಎರಡು ದಿನಗಳಿಂದ ಹಗಲು ರಾತ್ರಿ ಕೂತು ಒಳ್ಳೆಯ ನಕ್ಷತ್ರ, ಗೋತ್ರ, ಕುಲ ಇತ್ಯಾದಿಗಳ ಅನ್ವೇಷಣೆ ನಡೆಸಿ, ಕೊನೆಗಂತೂ ಇಂದು ಬೆಳಿಗ್ಗೆ ವರಮಹಾಶಯನೊಂದಿಗೆ ಹೋಗಿ ಕನ್ಯೆ ನೋಡಿ ಬಂದಿದ್ದೆವು. ಕನ್ಯೆ ಬಲು ಇಷ್ಟವಾದರೂ ಅಲ್ಲೇ 'ಯೆಸ್' ಎನ್ನುವ ಆತುರ ತೋರುವುದಾದರೂ ಯಾಕೆಂದು ಸಂಕೋಚಪಟ್ಟುಕೊಂಡು ಮನೆಗೆ ವಾಪಾಸು ಬಂದಮೇಲೆ ಕನ್ಯೆಯ ಮನೆಯವರಿಗೆ ಫೋನ್ ಮಾಡಿದೆವು. ಅವರ ಉತ್ತರವಾದರೂ ಏನಿತ್ತು! ಸೋದರಳಿಯ ಹೇಳಿದಂತೆ, "ನಿಮಗಿಂತ ಮುಂಚೆ ನಿನ್ನೆ ಸಂಜೆ ಬಂದು ಹೋಗಿದ್ದ ಹುಡುಗನ ಕಡೆಯವರು ಈಗಷ್ಟೇ ಫೋನ್ ಮಾಡಿ, 'ನಿಮ್ಮ ಕನ್ಯೆ ನಮಗಿಷ್ಟವಾಗಿದ್ದಾಳೆಂದೂ, ಈ ಸಂಜೆಯೇ ವೀಳ್ಯ ಬದಲಾಯಿಸಿಕೊಳ್ಳುವ ಶಾಸ್ತ್ರ ಮುಗಿಸೋಣವೆಂದೂ ಹೇಳಿದ್ದಾರೆ' ಎನ್ನಲು ವಿಷಾದವಾಗುತ್ತದೆ'' ಎಂದು ಬೇಸರ ವ್ಯಕ್ತಪಡಿಸಿದ್ದರು. 'ಇನ್ನೆಲ್ಲಿ ಹುಡುಕುವುದಪ್ಪಾ' ಎಂಬ ಬೇಸರದಲ್ಲೇ ನಾವಿಬ್ಬರು ಅಕ್ಕ ತಮ್ಮ ಕುಳಿತಿದ್ದರೆ ಈತನಿಗೆ ಎಲ್ಲವೂ ತಮಾಷೆಯೇ!

"ಛೇ! ಆಂಟೀ.. ಪಪ್ಪಾ, ಇಷ್ಟಕ್ಕೆಲ್ಲ ಇಷ್ಟೊಂದು ಮುಖ ಬಾಡಿಸಿಕೊಂಡು ಕುಳಿತರೆ ಹೇಗೆ? ಇವಳಲ್ಲದಿದ್ದರೆ, ಇವಳ ಅಮ್ಮನ ಹಾಗಿರುವವಳು ಯಾರಾದರೂ ಮುಂದೆ ನನಗೆ ಸಿಕ್ಕಿಯೇ ಸಿಗುತ್ತಾಳೆ, ಬರಿದೆ ಬೇಸರಪಡಬೇಡಿ, ಈಗ ಏದ್ದೇಳಿ ನೋಡುವಾ " ಎಂದು ನಾವು, ಅಕ್ಕ ತಮ್ಮನಿಗೆ ಹೇಳಿಯೇಬಿಟ್ಟ.

ಅವನ ಮಾತು ಹೊರಬಿದ್ದಂತೆ ತತ್‌ಕ್ಷಣಕ್ಕೆ ಮನೆ ಒಮ್ಮೆಲೇ ಮೌನಕ್ಕೆ ಜಾರಿತು. ಮರುಗಳಿಗೆಯಲ್ಲಿ 'ಹಹ್ಹಹ್ಹಾ.. ಹ್ಹೊಹ್ಹೊಹ್ಹೋ... ಎಂದು ಆಗತಾನೇ ಒಳಪ್ರವೇಶಿಸುತ್ತಿರುವ ನಮ್ಮೆಜಮಾನರ ಅಟ್ಟಹಾಸದ ಸ್ವರಶಕ್ತಿಯ ಪರಿಣಾಮಕಾರೀ ಪ್ರಾದರ್ಶಿಕೆ ಮತ್ತು ಪ್ರಾತ್ಯಕ್ಷಿತೆಯಲ್ಲಿ ನಗೆಯ ಆರ್ಭಟವಾಗಿ ಹೊರಬಿದ್ದು, ಕೊನೆಗೂ ತನ್ನ ಮಾತಿನಲ್ಲಿನ ತಪ್ಪನ್ನು ಅರಿತು ಕೊಳ್ಳುವಂತಾದ ಸೋದರಳಿಯನೂ ಸೇರಿ ಇಡೀ ಮನೆ ಮತ್ತೈದು ನಿಮಿಷಗಳ ಕಾಲ ಭಯಂಕರವಾಗಿ ಗಹಗಹಿಸಿತು.

***

ಅರಳುವ ಹೂಗಳು

– ಕಮಲಾಕ್ಷಿ ಸಿ ಆರ್

ಮೊಗ್ಗು ಅರಳುತಿದೆ ನೋಡಿದಿರಾ?
ಹಿಗ್ಗು ತರುವಂತೆ ಬಿರಿಯುವಿರಾ?

ಕತ್ತಲು ಕಳೆದು ರವಿಯು ಮೂಡಲು
ಹಕ್ಕಿಯಂತೆ ಗರಿ ಬಿಚ್ಚಿ ಹಾರಲು
ಗಗನದೆಡೆ ಏರುವ ಬಾನಾಡಿಯಂತೆ
ಮನಸಿನಲಿ ಕನಸುಗಳ ಕಾಣಲು
ಮೊಗ್ಗು ಅರಳುತಿದೆ ನೋಡಿದಿರಾ?

ಜಾತಿ ನೀತಿಯ ಭೇದಗಳಿಲ್ಲ
ಹಮ್ಮು ಬಿಮ್ಮಿನ ಅರಿವೇ ಇಲ್ಲ
ಹೆಣ್ಣು ಗಂಡು ಎಲ್ಲರೊಂದೆ ಎನುತ
ಕೈ ಕೈ ಹಿಡಿದ ಸಾಗುವರಲ್ಲ
ಮೊಗ್ಗು ಅರಳುತಿದೆ ನೋಡಿದಿರಾ?

ಸ್ವಚ್ಛ ಸುಂದರ ಶುದ್ಧ ಮನಸಿನ
ಕಪಟ ವಂಚನೆ ಸುಳಿಯದ ವಯಸಿನ
ಬಾಲ್ಯವು ಕಳೆಯಲು ಮರಳಿ ಬಾರದು
ಬಾಳಿನ ಸ್ವರ್ಣ ಯುಗವಿದು ಮನುಜನ
ಮೊಗ್ಗು ಅರಳುತಿದೆ ನೋಡಿದಿರಾ?

ಶತ ಶತಮಾನದ ಕೊಳೆಯ ಒರೆಸಿ
ಹೃನ್ಮನಗಳಲಿ ಜ್ಞಾನವ ಹರಿಸಿ
ಸಂಸ್ಕೃತಿ ಶಿಕ್ಷಣದಲ್ಲಿ ಬೆರೆಸಿ
ಸೌಜನ್ಯವನು ನಡೆಯಲಿ ಕಲಿಸಿ
ಮೊಗ್ಗು ಅರಳುತಿದೆ ನೋಡಿದಿರಾ?

ಅಂಕೆ ಶಂಕೆಯ ಗಡಿಯ ಮೀರಿ
ನಮ್ಮೀ ನೆಲದ ಸತ್ವವ ಹೀರಿ
ಆಡುತ ಹಾಡುತ ಸಾಗುವ ಕುಡಿಗಳ
ಭವಿಷ್ಯ ಬೆಳಗಲಿ ಕೀರ್ತಿ ಶಿಖರ ಏರಿ
ಮೊಗ್ಗು ಅರಳುತಿದೆ ನೋಡಿದಿರಾ?

***

ಹೊಯ್ದಾಟ

– ಜಿ.ವಿ.ನಿರ್ಮಲ

ಮನಸಿನ ತಾಳ ತಪ್ಪಿ ಅತ್ತಿತ್ತ ಅಲ್ಲಾಡುತಿದೆ
ಎತ್ತೆತ್ತಲೋ ತಿರುಗಿ ಗಿರಿಕಿ ಹೊಡೆಯುತಿದೆ
ಹಳೆಯ ನೆನಪುಗಳ ಹಿಚುಕಿ ಬಿಸುಡಿದರೂ
ಮತ್ತಿಲ್ಲೆ ಇರುವೆವೆಂದು ಗರಿಗೆದರಿ ಕುಣಿಯುತಿವೆ

ಬಾಲ್ಯದಲಿ ಅಪ್ಪ ಅಮ್ಮಂದಿರಿಗೆ ತಲೆ ಬಾಗಿದನೆ?
ಗುರು ಹಿರಿಯರಿಗೆ ನಮಿಸಿ ಗೌರವವ ತೋರಿದೆನೆ?
ಸೋದರ ಸಂಬಂಧಿಗಳಿಗೆ ಪ್ರೀತಿ ಉಣಿಸಿದೆನೆ?
ಮುಸುಕಿನೊಳು ಪ್ರಶ್ನೆಗಳು ಬೆಂಬಿಡದೆ ಕಾಡುತಿವೆ

ಬಂಧು ಬಾಂಧವರ ಸನ್ಮಾನಿಸಿ ಸಂತೃಸಿದೆನೆ?
ಸ್ನೇಹಿತರಿಗೆ ಪ್ರಿಯವಾಗಿ ಹಿತವ ಬಯಸಿದೆನೆ?
ನೆರೆಯವರಿಗೆ ಕೈಚಾಚಿ ಸಹಾಯವೆಸಗಿದೆನೆ?
ಪ್ರಶ್ನೆಗಳಿಗುತ್ತರವ ಹುಡುಕಿ ಹೈರಾಣಾಗಿರುವೆ
ಗಂಡನ ಬೇಕು ಬೇಡಗಳ ಗಮನಿಸಿದೆನೆ?
ಮಕ್ಕಳಿಗೆ ಪ್ರೀತಿಯಿಂದ ಉಣಿಸಿ ಓಲೈಸಿದೆನೆ?
ಯಾರಿಗೂ ವಂಚಿಸದೆ ಸಂಸಾರ ತೂಗಿಸಿದೆನೆ?
ಕ್ಷಣ ಕ್ಷಣದ ದ್ವಂದ್ವ ಎದೆ ಗುದ್ದಿ ಅಬ್ಬಾಡಿಸಿವೆ

ಮತ್ತೆಷ್ಟೋ ಅಹಿತಗಳಿಗುತ್ತರವೆ ಕಾಣದಿದೆ
ಬಾಳಸಾಗರದಂತ್ಯವ ಹುಡುಕಿ ತಡಕುತಿರುವೆ
ಯಾರನೂ ನೋಯಿಸದೆ ದಡವ ಅರಸುತಿರುವೆ
ಶಾಂತಿ ಸಿಂಚನ ಕಿರಣಕ್ಕಾಗಿ ಪರಿತಪಿಸುತಿರುವೆ

***

ಜೀವನಪ್ರೀತಿಯ ಸಾಕಾರಮೂರ್ತಿ ಶಾಲಿನಿ ಕಾಮತ್

– ಜಿ. ವಿ. ಅರುಣ



ನಮಗೆ ಪರಿಚಿತರಾದ ಎಲ್ಲರ ಮೇಲೂ ಲೇಖನವನ್ನು ಬರೆಯಬೇಕೆಂದು ನಮಗೆ ಅನ್ನಿಸುವುದಿಲ್ಲ. ಸಾಮಾನ್ಯ ಮಹಿಳೆಯಂತೆ ಕಂಡರೂ ಅಸಾಮಾನ್ಯ ವ್ಯಕ್ತಿತ್ವವನ್ನು ಹೊಂದಿದ್ದ ಶ್ರೀಮತಿ ಶಾಲಿನಿ ಕಾಮತ್ ನನ್ನ ಮೇಲೆ ಬೀರಿದ ಪ್ರಭಾವದ ಪರಿಣಾಮವೇ ನನ್ನ ಈ ಲೇಖನಕ್ಕೆ ಪ್ರೇರಣೆ. ಅವರು ಯಾವುದೇ ಕಾರ್ಪೊರೇಟ್ ಕಂಪನಿಯ ಸಿಇಒ ಆಗಿರಲಿಲ್ಲ, ಪ್ರಸಿದ್ಧ ಸಮಾಜ ಸೇವಕಿಯೋ, ರಾಜಕೀಯ ವ್ಯಕ್ತಿಯೋ ಆಗಿರಲಿಲ್ಲ. ತಮ್ಮ ಸಾಹಿತ್ಯದ ಓದು ಹಾಗೂ ಅನುಭವಗಳ ಹಿನ್ನೆಲೆಯಲ್ಲಿ ಪಕ್ವವಾದ ಜೀವನಪ್ರೀತಿಯನ್ನು ಕಂಡುಕೊಂಡಿದ್ದವರು ಅವರು. ಆಕೆ ತನ್ನ ಜೀವನದ ಬಹುಪಾಲನ್ನು ಅವರ ಅಡುಗೆಮನೆಯ ನಾಲ್ಕು ಗೋಡೆಗಳ ಮಧ್ಯೆ ಕಳೆದವರು. ಆದರೆ ಅವರನ್ನು ಹತ್ತಿರದಿಂದ ನೋಡಿದವರಿಗೆ ಅವರ ವಿಶಿಷ್ಟವಾದ ವ್ಯಕ್ತಿತ್ವದ ಪರಿಚಯವಾಗುತ್ತಿತ್ತು.

ಶಾಲಿನಿ ಅವರು ನಮಗೆ, ಅಂದರೆ ನಮ್ಮ ತಾಯಿ ಲಕ್ಷ್ಮಿ ಅವರಿಗೆ ಪರಿಚಯವಾಗಿದ್ದು ಆರು ದಶಕಗಳಿಗೂ ಹಿಂದೆ. ಜಯನಗರದ ಎರಡನೆಯ ಬ್ಲಾಕಿನಲ್ಲಿ ನಾವು ಬಾಡಿಗೆಗಿದ್ದ ಮನೆಯ ಪಕ್ಕದಲ್ಲಿ ಖಾಲಿಯಾಗಿದ್ದ ಒಂದು ಮನೆಗೆ ಕೆನರಾ ಬ್ಯಾಂಕಿನ ಪ್ರಬಂಧಕರಾಗಿದ್ದ ಶ್ರೀ ಕಾರ್ಕಳ ಕೇಶವ ಕಾಮತ್ – ಕೆ. ಕೆ. ಕಾಮತ್ ಅವರ ಕುಟುಂಬ ಬಂದಿತ್ತು. ಒಂದು ಬೆಳಗ್ಗೆ ಆ ಮನೆಗೆ ಸಾಮಾನುಗಳನ್ನು ಸಾಗಿಸಿದಾಗ ಬರಿಯ ಗಂಡಸರೇ ನಮ್ಮ ಕಣ್ಣಿಗೆ ಬಿದ್ದದ್ದು. ಮಾರನೆಯ ದಿನ ಬೆಳಗ್ಗೆ ನಮ್ಮ ತಾಯಿಯವರು ಹಾಲನ್ನು ಹಾಕಿಸಿಕೊಳ್ಳಲು ಕಾಯುತ್ತಿದ್ದರು. ಆಗೆಲ್ಲ ಬೆಂಗಳೂರಿನಲ್ಲಿ ವರ್ತನೆಯ ಮನೆಗಳ ಮುಂದೆ ಹಸು, ಎಮ್ಮೆಗಳನ್ನು ತಂದು ಎದುರಿಗೆ ಹಾಲನ್ನು ಕರೆದುಕೊಡುವ ಪದ್ಧತಿ ಇತ್ತು. ಆಗ ಪಕ್ಕದಮನೆಗೆ ಬಂದಿದ್ದ ಕಾಮತರ ಹೆಂಡತಿ ಬಂದು ನಮ್ಮ ತಾಯಿಯನ್ನು ಪರಿಚಯ ಮಾಡಿಕೊಂಡರು. ಹಾಗೆ ಅವರ ಮನೆಗೂ ವರ್ತನೆಗೆ ಹಾಲು ಕೊಳ್ಳುವ ಏರ್ಪಾಟನ್ನು ಮಾಡಿಕೊಂಡರು. ಹೀಗೆ ಶಾಲಿನಿ–ಲಕ್ಷ್ಮಿ ಅವರ ಪರಿಚಯವಾಗಿದ್ದು, ಸ್ನೇಹ ಬೆಳೆದದ್ದು. ಇದು ಗಾಢಸ್ನೇಹವಾಗಿ ಅವರಿಬ್ಬರನ್ನು ಅಕ್ಕತಂಗಿಯರಂಥ ಬಾಂಧವ್ಯಕ್ಕೆ ತಂದು ನಿಲ್ಲಿಸಿತು. ಅದು ಮುಂದಿನ ಪೀಳಿಗೆಗೂ ಮುಂದುವರೆದಿದೆ.


ಇವರಿಬ್ಬರಿಗೂ ಸಮಾನವಾದ ಗುಣಗಳೆಂದರೆ ಜೀವನವನ್ನು ನೋಡುವ ಧನಾತ್ಮಕ ದೃಷ್ಟಿ, ಅತಿಥಿ ಸತ್ಕಾರ, ರುಚಿರುಚಿಯಾದ ರಸಪಾಕದ ತಯಾರಿಕೆ ಹಾಗು ಬಿಡುವಿನ ಸಮಯದಲ್ಲಿ ಸಾಹಿತ್ಯ ಕೃತಿಗಳನ್ನು ಓದುವುದು. ಶಾಲಿನಿ ಅವರು ಕಲಿತದ್ದು ಏಳನೆಯ ತರಗತಿಯವರೆಗೆ ಮಾತ್ರ. ಆದರೆ ಸ್ವಪ್ರಯತ್ನದಿಂದ ಹಿಂದಿ ಹಾಗು ಇಂಗ್ಲಿಷನ್ನು ಕಲಿತಿದ್ದರು. ಅವರಿಗೆ ಕಾದಂಬರಿಗಳನ್ನು ಓದುವುದೆಂದರೆ ಬಹಳ ಇಷ್ಟ. ಶಿವರಾಮ ಕಾರಂತ, ಭೈರಪ್ಪ,

ಅನಂತಮೂರ್ತಿ, ಚಿತ್ತಾಲ, ಎಂ.ಕೆ.ಇಂದಿರಾ... ಹೀಗೆ ಅನೇಕರ ಎಲ್ಲ ಕಾದಂಬರಿಗಳನ್ನು ಅವರು ಓದಿದ್ದರು. ಅನೇಕ ಬಾರಿ ನಮ್ಮ ಮನೆಯಲ್ಲಿ ಶಾಲಿನಿ, ನಮ್ಮ ತಾಯಿ ಹಾಗೂ ತಂದೆ ಪ್ರೊ।। ಜಿ.ವೆಂಕಟಸುಬ್ಬಯ್ಯ ಅವರ ಮಧ್ಯೆ ಅವರು ಓದಿದ ಕಾದಂಬರಿಗಳ ಬಗ್ಗೆ ಚರ್ಚೆಗಳು ನಡೆಯುತಿದ್ದವು.

ಶೆಣೈ ಮನೆತನದ ಶಾಲಿನಿಯವರು ಕಾಮತ್ ಕುಟುಂಬಕ್ಕೆ ಮದುವೆಯಾಗಿ ಬಂದಿದ್ದರು. ಕೊಂಕಣಿ ಮನೆಮಾತು. ಇವರದು ಕನ್ನಡ ಕೊಂಕಣಿ. ಹಾಗೆನ್ನಲು ಕಾರಣವಿದೆ. ಹೆಚ್ಚಿನ ಕೊಂಕಣಸ್ಥರು ಗೋವ, ಮಹಾರಾಷ್ಟ್ರ, ಕರ್ನಾಟಕ, ಕೇರಳಗಳಲ್ಲಿ ನೆಲೆಸಿದ್ದಾರೆ. ಲಿಪಿ ಇಲ್ಲದ ಕೊಂಕಣಿ ಭಾಷೆಗೆ ದೇವನಾಗರಿಯನ್ನೇ ಕೇಂದ್ರ ಸರ್ಕಾರವು ಅಧಿಕೃತ ಲಿಪಿಯನ್ನಾಗಿ ಘೋಷಿಸಿದೆ. ಆದರೆ ಕರ್ನಾಟಕದಲ್ಲಿ ಕೊಂಕಣಿಯನ್ನು ಕನ್ನಡ ಲಿಪಿಯಲ್ಲೂ, ಕೇರಳದಲ್ಲಿ ಮಲೆಯಾಳಂ ಲಿಪಿಯಲ್ಲೂ ಅಲ್ಲಿಯ ಕೊಂಕಣಿಯ ಜನರು ಬಳಸುತ್ತಾರೆ. ಗೋವಾ, ಮಹಾರಾಷ್ಟ್ರಗಳಲ್ಲಿ ಚರ್ಚಿಗೆ ಹೋಗುವ ಕ್ರಿಶ್ಚಿಯನ್ ಕೊಂಕಣಿಗಳ ಬೈಬಲ್ ದೇವನಾಗರಿ ಲಿಪಿಯ ಕೊಂಕಣಿ ಭಾಷೆಯಲಿದ್ದರೆ ಕರ್ನಾಟಕದಲ್ಲಿ ಕೊಂಕಣಿ ಭಾಷೆಯ ಬೈಬಲ್ ಕನ್ನಡ ಲಿಪಿಯಲ್ಲಿದೆ. ಹಾಗಾಗಿ ಕರ್ನಾಟಕದಲ್ಲಿರುವ ಕೊಂಕಣಿ ಜನರು ಕನ್ನಡವನ್ನೇ ಬಳಸುವ ಕನ್ನಡ ಕೊಂಕಣಿಗಳು.

ಕರ್ನಾಟಕದಲ್ಲಿ ಕೊಂಕಣಿ ಭಾಷೆಯ ಅಭಿವೃದ್ಧಿಗಾಗಿ ಶ್ರಮಿಸಿದವರು ಶ್ರೀ ವಾಮನ ಶೆಣೈ. ಇವರು ಶಾಲಿನಿ ಅವರ ಸ್ವಂತ ಅಣ್ಣ. ಕರ್ನಾಟಕದಲ್ಲಿ ಕೊಂಕಣಿ ಸಾಹಿತ್ಯ ಅಕಾಡೆಮಿ ಸ್ಥಾಪನೆಗೆ ಅವರೇ ಕಾರಣ. ಕೊಂಕಣಿ ಭಾಷೆಯನ್ನು ಮಾತನಾಡುವ ಜನರಿಗೆ ಮಂಗಳೂರಿನಲ್ಲಿ ವಿಶ್ವ ಕೊಂಕಣಿ ಕೇಂದ್ರವನ್ನು ಸ್ಥಾಪಿಸಿದ್ದಾರೆ. ಕೊಂಕಣಿ ಭಾಷೆಗೆ ಅವರು ಮಾಡಿದ ಅಸದೃಶ್ಯ ಸೇವೆಗೆ ಅವರನ್ನು "ವಿಶ್ವ ಕೊಂಕಣಿ ಸರದಾರ" ಎಂಬ ಬಿರುದು ನೀಡಿ ಗೌರವಿಸಿದ್ದರು.


ಶಾಲಿನಿ ಅವರದ್ದು ದೊಡ್ಡ ಕುಟುಂಬ ಒಬ್ಬರು ಅಣ್ಣ – ವಾಮನ ಶೆಣೈ, ಇಬ್ಬರು ಅಕ್ಕಂದಿರು, ಒಬ್ಬಳು ತಂಗಿ ಹಾಗೂ ಮೂವರು ತಮ್ಮಂದಿರು. ತಮ್ಮಂದಿರು ಕೆಲಸವನ್ನು ಹುಡುಕುವಾಗ ಕೆಲವು ಕಾಲ ಇವರ ಮನೆಯಲ್ಲಿದ್ದರು. ಹತ್ತಿರದ ಸಂಬಂಧಿಗಳೂ ಕೆಲಸ ಹುಡುಕಲು, ಆಸ್ಪತ್ರೆಯಲ್ಲಿ ಚಿಕಿತ್ಸೆಗೆ, ಕೊರ್ಟು ಕಛೇರಿ ಕೆಲಸಕ್ಕೆ, ಎಸ್ ಎಸ್ ಎಲ್ ಸಿ ಮೌಲ್ಯಮಾಪನಕ್ಕೆ ಬಂದು ಇವರ ಮನೆಯಲ್ಲಿ ಅನೇಕ ವಾರಗಳು ತಂಗುತ್ತಿದ್ದರು. ಆಗ ಆಸ್ಪತ್ರೆಯಲ್ಲಿದ್ದವರಿಗೆ ಸಮಯ ಸಮಯಕ್ಕೆ ಪಥ್ಯದ ಆಹಾರ, ಮೌಲ್ಯಮಾಪನಕ್ಕೆ ಬಂದವರು ಬೆಳಗ್ಗೆ ಬೇಗ ಹೋಗುವ ಸಮಯಕ್ಕೆ ಅವರಿಗೆ ಬೇಕಾದ ಆಹಾರ, ಕೆಲಸವನ್ನು ಹುಡುಕಿಕೊಂಡು ಬಂದ ನೆಂಟರಿಗೆ ಬಸ್ಸಿನಲ್ಲಿ ಓಡಾಡಲು ಬೇಕಾಗುವ ಕಾಸು ಎಲ್ಲವನ್ನು ಶಾಲಿನಿಯವರೇ ನಿರ್ವಹಿಸಬೇಕಾಗಿತ್ತು. ಇದು ಇಂದಿನ ಸಣ್ಣ ಕುಟುಂಬದ ವ್ಯವಸ್ಥೆಯಲ್ಲಿ ವಾಸಿಸುವ ಜನರಿಗೆ ಆಶ್ಚರ್ಯಕರವಾಗಿ ಕಾಣಬಹುದು. ಇಂತಹ ಸಂದರ್ಭಗಳಲ್ಲಿ ತಲೆತೋರಬಹುದಾದ ಅನೇಕ ಕಷ್ಟದ ಪರಿಸ್ಥಿತಿಗಳಿಗೆ ಶಾಲಿನಿಯವರು ತಕ್ಷಣವೇ ಸೂಕ್ತ ಸಮಾಧಾನ, ಪರಿಹಾರಗಳನ್ನು ಕಂಡುಕೊಂಡುಬಿಡುತ್ತಿದ್ದರು. ಈ ವಿಚಾರವಾಗಿ ಮಾತನಾಡುವಾಗ ನಮ್ಮ ತಾಯಿಯವರೊಡನೆ "ಇದಕ್ಕಿಂತ ಕಷ್ಟದ ಪರಿಸ್ಥಿತಿಯಲ್ಲಿರುವವರಿಗೆ ಹೋಲಿಸಿದರೆ ನಾವೇ ಎಷ್ಟೋ ವಾಸಿಯಲ್ಲವೇ?" ಎಂದು ಹೇಳುತ್ತಿದ್ದರು. ಇದಕ್ಕೆ ಕಾರಣ ಪರೋಪಕಾರವನ್ನು ತಮ್ಮ ಕರ್ತವ್ಯ ಎಂದು ಎಣಿಸಿ ಅವರು ಮಾಡುತ್ತಿದ್ದ ಸತ್ಕಾರ್ಯ. 'ಮನೆಗೆ ಬಂದವರು ಅರೋಗ್ಯ ಹೊಂದಿದರೆ, ಸೂಕ್ತ



ಕೆಲಸಕ್ಕೆ ಸೇರಿದರೆ ಒಂದು ಕುಟುಂಬವು ನೆಮ್ಮದಿಯಿಂದ ಇರುವಂತಾಗುವುದಲ್ಲ' ಎಂಬುದು ಅವರ ಸಹಾಯಹಸ್ತದ ಹಿಂದಿರುತ್ತಿದ್ದ ಭಾವನೆ.


ಅವರ ಜೀವನದೃಷ್ಟಿಗೆ ಒಂದು ಉದಾಹರಣೆಯನ್ನು ನೀಡುತ್ತೇನೆ. ಇದು ಶಾಲಿನಿ ಹಾಗೂ ನಮ್ಮ ತಾಯಿಯವರ ನಡುವೆ ಆದ ಮಾತುಕತೆಯಲ್ಲಿ ಹೊರಗೆ ಬಂದ ವಿಚಾರ. ಅವರ ಮನೆಗೆ ಅನೇಕ ಬಾರಿ ಬಂದು ವಾರಗಟ್ಟಲೆ ಉಳಿದುಕೊಂಡಿದ್ದ ಒಂದು ಕುಟುಂಬದ ಮದುವೆಯ ಕಾರ್ಯಕ್ರಮಕ್ಕೆ ಇವರಿಗೆ ಆಹ್ವಾನವಿರಲಿಲ್ಲ. ಕಾಮತರಿಗೆ ಸ್ವಲ್ಪ ಬೇಜಾರಾಗಿತ್ತು. "ನೋಡು ಅವರನ್ನು, ಅವರು ಬಂದಾಗ ಎಷ್ಟು ಬಾರಿ ಸಾಲ ಮಾಡಿ ಅಕ್ಕಿ ಸಕ್ಕರೆ ತಂದು ಅವರಿಗೆ ಔತಣ ಮಾಡಿದ್ವಿ. ನಮ್ಮ ನೆನಪೇ ಅವರಿಗೆ ಇಲ್ಲ" ಎಂದು ಹೆಂಡತಿಗೆ ಹೇಳಿದರು. ಶಾಲಿನಿಯವರು "ಹಾಗೆ ಯಾಕೆ ಬೇಜಾರು ಮಾಡ್ಕೋತೀರಿ? ಹೋಗಿ ಬರುವ ಖರ್ಚು, ಉಡುಗೊರೆ ಖರ್ಚು ಉಳಿಯಿತು ಬಿಡಿ. ಅಲ್ಲದೆ ಅವರು ಬಂದಾಗ, ನಾವು ಕೂಡ ಅವರ ಜೊತೆ ಔತಣದ ಊಟ ಮಾಡಿದೆವಲ್ಲ. ಇಲ್ಲದಿದ್ದರೆ ನಾವು ವಿಶೇಷವಾದ ಅಡುಗೆ ಮಾಡಿ ಊಟ ಮಾಡುತ್ತಿಸದ್ದೆವೇ?" ಎಂದು ಸಮಾಧಾನ ಮಾಡಿದ್ದರು. "ನಾನು ಹೇಳಿದ್ದು ಸರಿಯಲ್ವಾ ಲಕ್ಷ್ಮಮ್ಮ...?" ಎಂದು ನಮ್ಮ ತಾಯಿಯವರ ಬಳಿ ಕೇಳಿದ್ದರು.

ಒಮ್ಮೆ ನನ್ನ ತಾಯಿಯವರೊಡನೆ ಮಾತನಾಡುವಾಗ, "ಈಗ ಯಾರ ಮನೆಯಲ್ಲಿ ನೋಡಿದರು ಇಂಜಿನಿಯರ್, ಡಾಕ್ಟರ್ ಓದಿ ಅಮೆರಿಕಾಗೆ ಹಾರುತ್ತಾ ಇದ್ದಾರೆ. ಅಲ್ಲಿಂದ ಬಂದವರನ್ನು ಕೇಳಿದರೆ 'ಅಮೇರಿಕಾ ಅಂದ್ರೆ ಸ್ವರ್ಗ' ಅಂತ ಹೇಳ್ತಾರೆ. ಒಮ್ಮೆ ಆ ಸ್ವರ್ಗಕ್ಕೆ ಹೋಗಿ ಬರಬೇಕಲ್ಲ ಲಕ್ಷ್ಮಮ್ಮ" ಎಂದಿದ್ದರು. ಅವರ ಆಸೆ ಸ್ವರ್ಗಾಧಿಪತಿಗೆ ಕೇಳಿಸಿತೋ ಏನೋ, ಅವರು ಅಮೆರಿಕಾ ಪ್ರವಾಸಕ್ಕೆ ಹೊರಟೇಬಿಟ್ಟರು. ಅಲ್ಲಿ ಅವರು ನೋಡಿದ ಸ್ಥಳವಿಶೇಷಗಳನ್ನು ಒಂದು ಡೈರಿಯಲ್ಲಿ ಗುರುತು ಮಾಡಿಕೊಂಡು ಬಂದರು. ಹಿಂದುರುಗಿದ ಅನಂತರ "ನಾನು ಕಂಡ ಅಮೇರಿಕಾ ಎಂಬ ಸ್ವರ್ಗ" ಎಂಬ ಪುಸ್ತಕವನ್ನು ಬರೆದರು. ಅದು ಒಳ್ಳೆಯ ಮಾಹಿತಿಯ ಕೈಪಿಡಿಯಾಗಿದ್ದು ವ್ಯಂಗ್ಯ ಹಾಗೂ ಹಾಸ್ಯಗಳು ಬೆರೆತಿವೆ. ಏಳನೆಯ ತರಗತಿಯವರೆಗೆ ಕಲಿತಿದ್ದರೂ ಓದಿನಿಂದ ರೂಢಿಸಿಕೊಂಡ ಭಾಷಾಪ್ರಜ್ಞೆಯು ಹೇಗೆ ಪ್ರತಿಭೆಯನ್ನು ಹೊರತರುತ್ತದೆ ಎಂಬುದಕ್ಕೆ ಇದೊಂದು ಒಳ್ಳೆಯ ಉದಾಹರಣೆ. ಅವರ ಎರಡನೆಯ ಪುಸ್ತಕವೂ ಪ್ರವಾಸ ಸಾಹಿತ್ಯವೇ! ತಾವು



ನೋಡಿದ ಅನೇಕ ಪ್ರದೇಶಗಳ ಬಗ್ಗೆ 'ನನ್ನ ಪ್ರವಾಸಗಳು' ಎಂಬ ಪುಸ್ತಕವನ್ನು ಅವರು ರಚಿಸಿದ್ದಾರೆ. ಅವರು ಮನಸ್ಸು ಮಾಡಿದ್ದರೆ ಒಳ್ಳೆಯ ಲೇಖಕಿಯಾಗಬಹುದಿತ್ತು; ಆದರೆ ಯಾಕೋ ಮನಸ್ಸು ಮಾಡಲಿಲ್ಲ.

ಅವರಿಗೆ ಕಾಗದಗಳನ್ನು ಬರೆಯುವ ಅಭ್ಯಾಸವಿತ್ತು. ಬೆಂಗಳೂರಿನಿಂದ ಬೇರೆಯ ಕಡೆಗೆ ಹೋದನಂತರ ತಿಂಗಳಿಗೆ ಎರಡು ಬಾರಿಯಾದರೂ ಅವರು ನಮ್ಮ ತಾಯಿಗೆ ಕಾಗದಗಳನ್ನು ಬರೆಯುತ್ತಿದ್ದರು. ಆ ದೀರ್ಘ ಪತ್ರಗಳಲ್ಲಿ ಅನೇಕ ಆಗುಹೋಗುಗಳ ವಿಚಾರ, ಅವುಗಳ ಬಗ್ಗೆ ತಮ್ಮ ಮನಸ್ಸಿನ ಅಭಿಪ್ರಾಯವನ್ನು ಅವರು ನಮ್ಮ ತಾಯಿಯವರೊಂದಿಗೆ ಹಂಚಿಕೊಳ್ಳುತ್ತಿದ್ದರು. ವಾರಕ್ಕೊಮ್ಮೆ ನಮ್ಮ ತಾಯಿಯವರು ಫೋನ್ ಮಾಡಿ ಮಾತನಾಡುತ್ತಿದ್ದರು. ಪ್ರೊ॥ ಜಿವಿಯವರು "ಆ ಪತ್ರಗಳ ಭಾಷೆ, ಶೈಲಿ ಬಹಳ ಚೆನ್ನಾಗಿದೆ; ಅದರಲ್ಲಿ ಬರುವ ಪಾತ್ರಗಳು, ವಿಚಾರಗಳು ಅದಕ್ಕೆ ನಿಮ್ಮ ಅಭಿಪ್ರಾಯ ಇವೆಲ್ಲವನ್ನು ಸೇರಿಸಿ ಒಳ್ಳೆಯ ಕಾದಂಬರಿಯನ್ನು ಬರೆಯಬಹುದು" ಎಂದು ಶಾಲಿನಿಯವರಿಗೆ ಹೇಳಿದ್ದರು. ಅವರು ಜೋರಾಗಿ ನಕ್ಕುಬಿಟ್ಟರು. ಪ್ರತಿಭೆ ಇದ್ದರೂ ಕಾದಂಬರಿಯನ್ನು ಬರೆಯಲು ಹೋಗಲಿಲ್ಲ.



॥ ಶ್ರೀ. ಶ್ರೀ. ಗಣೇಶಾಯ ನಮಃ ॥

70ರ ಹರೆಯದ ನೆನಪುಗಳು. ಕಂಡದ್ದು; ಕೇಳಿದ್ದು; ಓದಿದ್ದು.

ರಾಜನೊಬ್ಬ, ಅರಮನೆಯ ಅಂಗಳದಲ್ಲಿ, 'ಗೋಪೂಜೆ' ಮಾಡುತ್ತಿದ್ದ. ನೋಡುತ್ತ ನಿಂತಿದ್ದ ಹಂದಿಯೊಂದು, ರಾಜನೊಡನೆ, "ಎಲೈ ರಾಜನೇ; ನೀನು ದಿನಾಲೂ, ಹಸು ಮತ್ತು ಕರುವನ್ನು ಪೂಜಿಸುತ್ತಿ; ನನ್ನನ್ನೂ ಪೂಜೆ ಮಾಡು" ಅಂದಿತು. ರಾಜ ಒಪ್ಪಲಿಲ್ಲ. ಹಟ ಹಿಡಿದ ಆ ಹಂದಿ, ರಾಜನೇ; ನಿನಗೆ, ದಿನಾಲೂ ಅಡಿಗೆಗೆ, ತಿನ್ನಲಿಕ್ಕೆ, ನನ್ನ ಮಾಂಸವೇ ಬೇಕು; ಹಸುವಿನ ಮಾಂಸ ನೀನು ತಿನ್ನುವುದಿಲ್ಲ. ಪೂಜೆ ಮಾತ್ರ ಅದಕ್ಕೆ ಮಾಡುತ್ತಿ; ನನ್ನನ್ನೂ ಪೂಜೆ ಮಾಡು" ಅಂದಿತು. ಆಗ ರಾಜ, ಎಲೈ ಹಂದಿಯೇ; ಹಸು ಜೀವವಿರುವಾಗಲೇ, ತನ್ನ ಕರುವಿಗೆ ಕುಡಿಯಲು ಕೊಡುವ ಹಾಲನ್ನೇ, ನನಗೂ ಕುಡಿಯಲು ಕೊಡುತ್ತದೆ; ನೀನು, ಬದುಕಿರುವಾಗ ನನಗೆ ಏನು ಕೊಡುತ್ತಿ? ನಿನ್ನನ್ನು ಕೊಂದು, ನಂತರ ನಾವು ನಿನ್ನ ಮಾಂಸ ತಿನ್ನುವುದು; ಅದನ್ನು ನೀನು ಕೊಡುವುದಲ್ಲ; ಕೊಡುವುದೇನಿದ್ದರೂ, ಬದುಕಿರುವಾಗ ಕೊಟ್ಟದ್ದು ಮಾತ್ರ; ಸತ್ತ ನಂತರ ನಿನ್ನ ಮಾಂಸ, ನೀನು ಕೊಡುವುದಲ್ಲ; ಅದನ್ನು ನಾವೇ ತೆಗೆದುಕೊಳ್ಳುವುದು. ಸತ್ತ ನಂತರ ನಿನ್ನ ಇಚ್ಛೆ ಏನೂ ಇಲ್ಲ. ಇತರರು ಕಿತ್ತುಕೊಂಡದ್ದು ನೀನು ಕೊಟ್ಟ ದಾನವಲ್ಲವಲ್ಲ? ಅಂದ ರಾಜ, ಗೋಪೂಜೆಯನ್ನು ಶಾಂತವಾಗಿ ಮುಗಿಸಿದ!

ಈ ಕತೆಯನ್ನು ಓದಿ, ನಂತರ ಕೆಲವರಿಗೆಲ್ಲಾ, ಮುಖ್ಯವಾಗಿ ವಯಸ್ಸಾದವರಿಗೆ, ನಾನು ಹೇಳಿದ್ದೆ, ಈ ಕತೆ. ಕೇಳಿದವರ ಪ್ರತಿಕ್ರಿಯೆ ಹೀಗಿತ್ತು;

ಒಬ್ಬರು — ಈಗಲೇ ಎಲ್ಲವನ್ನು ಹಂಚಿ ಕೊಟ್ಟು, ಕೈ ಖಾಲಿ ಮಾಡಿ ಕೂತು, ನನಗೆ ಬೇಕಾದಾಗ ಬೇರೆಯವರಲ್ಲಿ ಬೇಡಲೇ?

ಇನ್ನೊಬ್ಬರು; — "ನನಗೆ ನನ್ನ ಗಂಡ, ಈ ವಜ್ರದ ನೆಕ್ಲೆಸ್ ಮಾಡಿ ಕೊಡುವಾಗ, "ನನಗೇನಾದರೂ ಆಗಿ, ನಾನು ಸತ್ತರೆ, ನಿನ್ನ ಹತ್ತಿರ ಇರುವ ಒಡವೆ, ವಜ್ರದ ನೆಕ್ಲೆಸ್‌ಗಾಗಿಯಾದರೂ, ಸೊಸೆಯರು ನಿನ್ನನ್ನು ನೋಡಿಕೊಂಡಾರು; ದುಡ್ಡು, ಬಂಗಾರ, ಎಲ್ಲಾ ಜೋಪಾನವಾಗಿಡು" ಅಂದಿದ್ದಾರೆ. ಈಗ ಜೀವವಿರುವಾಗಲೇ ಅವರಿಗೆಲ್ಲಾ ಕೊಟ್ಟು ಬಿಟ್ಟರೆ, ಮತ್ತೆ ಅವರು ನನ್ನನ್ನು ನೋಡಿಕೊಳ್ಳುವರೇ?'

ಮತ್ತೊಬ್ಬರು; — "ನೀನು ಹೇಳಿದ ಕತೆ ಸರಿ." ಅಂದರು! ಮಾತ್ರವಲ್ಲಾ, ತನ್ನ ನಿತ್ಯದ ಅವಶ್ಯಕತೆಗೆ ಬೇಕಾದ, ಧಾರೆಮಣಿ, ಮಂಗಲಸೂತ್ರ, 2 ಜೊತೆ ಬಳೆಗಳು, ಇಷ್ಟು ಮಾತ್ರ ಇಟ್ಟುಕೊಂಡು, ಉಳಿದುದನ್ನೆಲ್ಲಾ, ತನ್ನ ಮಕ್ಕಳಲ್ಲಿ ಯಾರಿಗೆ ಏನು ಕೊಡಬೇಕೆಂದು ಮನಸ್ಸಿನಲ್ಲಿತ್ತೋ, ಹಾಗೆ, ಹಂಚಿ ಕೊಟ್ಟು, ಎಲ್ಲಾ ಮಕ್ಕಳ ಒಟ್ಟಿಗೆ ಸೇರಿದಾಗಲೊಮ್ಮೆ, ತನ್ನ ನಂತರ ತನ್ನ ಮೈಮೇಲಿರುವ ಒಡವೆಗಳಲ್ಲಿ, ಕಣ್ಣನ್ನು [illegible] ನೋಡಿಕೊಂಡ ಹಾಗೆ, ತನ್ನ ಕೆಲಸ ಮಾಡಿದ ಹಾಗೆ, ಏನೇನು ಕೊಡಬೇಕೆಂದು ಹೇಳಿ, ಒಂದು ದಿನ ಸುಖವಾದ ಮುಕ್ತಿಯ ಸಾವು ಸತ್ತರು! ಆದರೆ, ಎಲ್ಲರಿಗೂ ಅಂಥ ಸಾವು ಸಿಗುವುದೇ? ಇಲ್ಲ!

ಸಾಯುವವರೆಗೆ ಬದುಕಲೇ ಬೇಕಲ್ಲವೇ? ಅತ್ತೆ ಸಾಯುವಾಗ, 90-95 ವರ್ಷವಾದರೆ, ಆಗ ಸೊಸೆಗೂ 65-70 ವರ್ಷವಾಗಿರುತ್ತದೆ; ಆಗ ಆ ಅತ್ತೆಯ ಒಡವೆಗಳು ಸೊಸೆಗೆ ಬೇಕೇ?

K. Shalini Kamath

K. Shalini Kamath.

Ph - 2526677

ಅವರ ಬರವಣಿಗೆಯ ಹಸ್ತಪ್ರತಿಯ ಒಂದು ಪುಟವನ್ನು ಓದುಗರ ಅವಗಾಹನೆಗೆ ಇಲ್ಲಿ ನೀಡಿದ್ದೇನೆ.

ಶಾಲಿನಿ ಅವರು ಉಡುಪಿಯಲ್ಲಿ ನೆಲೆನಿಂತ ಮೇಲೆ, ಅಲ್ಲಿಂದ ಫೋನ್ ಮಾಡಿ "ಅರುಣ, ನೀನು ಓದಿ ಆಗಿರುವ ಪುಸ್ತಕಗಳನ್ನು ಕಳಿಸು. ವೆಂಕಟೇಶ ನಾಡಿದ್ದು ಬೆಂಗಳೂರಿಗೆ ಬಂದಾಗ ಮನೆಗೆ ಬರ್ತಾನೆ" ಎಂದು ಹೇಳುತ್ತಿದ್ದರು. ಜೊತೆಗೆ "ನಿನಗೆ ಬೇಕಾದ ಪುಸ್ತಕದ ಮೊದಲ ಪುಟದಲ್ಲಿ 'ವಾಪಸ್ ಬೇಕು' ಎಂದು ಬರೆದುಬಿಡು. ಅದನ್ನು ಮೊದಲು ಓದಿ ಹಿಂದಕ್ಕೆ ಕಳಿಸ್ತೀನಿ. ಉಳಿದದ್ದು ನಿಧಾನವಾಗಿ ಓದುತ್ತೀನಿ" ಎಂದು ಹೇಳಿದ್ದರು. ಒಂದಷ್ಟು ಪುಸ್ತಕಗಳನ್ನು ನಾನು ಕಳುಹಿಸಿದ್ದೆ. ಅದರಲ್ಲಿ 'ಸ್ವಪ್ನ ಸಾರಸ್ವತ ವಾಪಸ್ ಕಳಿಸಿ' ಎಂದು ಬರೆದಿದ್ದೆ. ಸ್ವಲ್ಪ ದಿನಗಳ ನಂತರ ಫೋನ್ ಮಾಡಿ ಆ ಕಾದಂಬರಿಯ ಬಗ್ಗೆ

ಒಂದಷ್ಟು ವಿಚಾರವನ್ನು ಹೇಳಿ. ನಮ್ಮ ಜನಾಂಗದ ಕಥೆ ಅದು ಎಂದಿದ್ದರು. ಅನಂತರ "ಅದನ್ನು ವಾಪಸ್ ಕಳಿಸ್ತೀನಿ. ಮುಂದಿನ ಬಾರಿ ವೆಂಕಟೇಶ ಬಂದಾಗ ತಂದು ಕೊಡುತ್ತಾನೆ. ಜೊತೆಗೆ ನೀನು ಕಳುಹಿಸಿದ ಸಣ್ಣಕತೆಗಳನ್ನೆಲ್ಲ ವಾಪಸ್ ಕಳಿಸ್ತೀನಿ. ನನಗೆ ಸಣ್ಣಕಥೆ, ಪ್ರಬಂಧ ಅವೆಲ್ಲ ಬೇಡ. ಕಾದಂಬರಿ, ಪ್ರವಾಸ ಸಾಹಿತ್ಯ ಮಾತ್ರ ಕಳಿಸು" ಎಂದು ಸ್ಪಷ್ಟವಾಗಿ ಹೇಳಿದ್ದರು. ಇದು ಅವರ ಹೊಸ ಪುಸ್ತಕಗಳನ್ನು ಓದುವ ಉತ್ಕಟ ಇಚ್ಛೆಯನ್ನು ತೋರಿಸುತ್ತದೆ. ಇದೆ ಅಲ್ಲವೆ ಕನ್ನಡ ಸಾಹಿತ್ಯದ ಮೇಲಿನ ಪ್ರೀತಿ ಅಂದರೆ!

ಅವರ ಕನ್ನಡ ಸಾಹಿತ್ಯದ ಮೇಲಿನ ಪ್ರೀತಿ ಇಷ್ಟಕ್ಕೆ ನಿಲ್ಲುವುದಿಲ್ಲ. ಅವರ ಸಂಪರ್ಕಕ್ಕೆ ಬಂದ ಅನೇಕರಿಗೆ ಅವರು ಕನ್ನಡದ ಪುಸ್ತಕಗಳನ್ನು ಓದುವಂತೆ ಪ್ರೋತ್ಸಾಹಿಸುತ್ತಿದ್ದರು. ತಮ್ಮಲ್ಲಿದ್ದ ಪುಸ್ತಕಗಳನ್ನು ಅವರಿಗೆ ಕೊಟ್ಟು ಓದುವಂತೆ ಮಾಡುತ್ತಿದ್ದರು. ಅವರ ಬಳಿ ತಾವು ಓದಿರದೇ ಇದ್ದ ಪುಸ್ತಕವಿದ್ದರೆ ಅದನ್ನು ಎರವಲು ಪಡೆದು ಓದುತ್ತಿದ್ದರು. ಅನಿತಾ ಪೈ ಶಾಲಿನಿಯವರ ಅಕ್ಕನ ಮೊಮ್ಮಗಳು. ಆಕೆ ಕೇವಲ ಲೇಖಕಿಯರ ಪುಸ್ತಕಗಳನ್ನಷ್ಟೇ ಓದುತ್ತಿದ್ದರು. ಅವರಿಗೆ ಮೊದಲ ಬಾರಿಗೆ ಯಶವಂತ ಚಿತ್ತಾಲರ ಪುಸ್ತಕಗಳ ರುಚಿ ಹಿಡಿಸಿದ್ದೇ ಶ್ರೀಮತಿ ಶಾಲಿನಿ ಕಾಮತ್ ಅವರು. ವರ್ಷಕ್ಕೆ ಮೂರು ನಾಲ್ಕು ಸಲ ನಡೆಯುತ್ತಿದ್ದ ಅವರಿಬ್ಬರ ಭೇಟಿಯಲ್ಲಿ, ಮಾತುಕತೆಯ ಮುಖ್ಯ ವಿಷಯವೆಂದರೆ ಅವರು ಓದಿದ ಪುಸ್ತಕಗಳು. ಅವರ ಪುಸ್ತಕ ಪ್ರೀತಿ ನಿಜಕ್ಕೂ ಮೆಚ್ಚುವಂತಹದು ಎಂದು ಇಂದಿಗೂ ಶ್ರೀಮತಿ ಅನಿತಾ ಪೈ ಅವರು ನೆನೆಯುತ್ತಾರೆ.

ಪ್ರೊ|| ಜಿ ವಿ ಅವರಿಗೆ 100 ವರ್ಷಗಳು ತುಂಬಿದ ಸಂದರ್ಭದಲ್ಲಿ ಮೂಡುಬಿದಿರೆಯ ಆಳ್ವಾಸ್ ನುಡಿಸಿರಿಯಲ್ಲಿ ಸನ್ಮಾನ ಕಾರ್ಯಕ್ರಮವಿತ್ತು. ಮಾರನೆಯ ದಿನ ಬೆಳಿಗ್ಗೆ ಉಡುಪಿಯಲ್ಲಿ ಕಡೆಂಗೋಡ್ಲು ಕಾವ್ಯಪ್ರಶಸ್ತಿ ಪ್ರದಾನ ಮಾಡಲು ಪ್ರೊ.ಜಿ ವಿ ಯವರಿಗೆ ಆಹ್ವಾನವಿತ್ತು. ನನ್ನ ತಂದೆಯವರು. "ಉಡುಪಿಗೆ ಹೋಗಿ ಶಾಲಿನಿ, ವೆಂಕಟೇಶ್ ಅವರನ್ನು ಭೇಟಿಯಾಗದಿದ್ದರೆ ಹೇಗೆ? ಸಮಯದ ಏರ್ಪಾಟು ಮಾಡು" ಎಂದು ನನಗೆ ಆದೇಶಿಸಿದ್ದರು. ನಾನು ವೆಂಕಟೇಶನಿಗೆ ಕರೆಮಾಡಿ. "ಬೆಳಗಿನ ಪ್ರಶಸ್ತಿ ಪ್ರದಾನ ಕಾರ್ಯಕ್ರಮದ ಅನಂತರ ಪೇಜಾವರ ಶ್ರೀಗಳ ಔತಣದ ಏರ್ಪಾಟು ಮಾಡಿದ್ದಾರೆ. ನಿಮ್ಮ ಮನೆಯಲ್ಲಿ ಊಟ, ತಿಂಡಿ ಏನೂ ಬೇಡ. ಕಾಫಿ ಮಾತ್ರ ಸಾಕು. ನಿಮ್ಮೊಡನೆ ಮಾತುಕತೆಯ ಅನಂತರ ಸ್ವಲ್ಪ ಹೊತ್ತು ವಿಶ್ರಾಂತಿ ತೆಗೆದುಕೊಳ್ಳುತ್ತಾರೆ" ಎಂದು ತಿಳಿಸಿದ್ದೆ.



ಶಾಲಿನಿಯವರು ತಮ್ಮ ಮನೆಯಲ್ಲಿ ಪ್ರೊ|| ಜಿವಿಯವರ ನೂರನೇ ಹುಟ್ಟುಹಬ್ಬಕ್ಕೆ ಕೇಕ್ ಕತ್ತರಿಸುವ ಏರ್ಪಾಟು ಮಾಡಿದ್ದರು. ಅದಕ್ಕಾಗಿ ತಮ್ಮ ಮನೆಯ ದಿವಾನಖಾನೆ ಯನ್ನು ಅಲಂಕಾರ ಮಾಡಿದ್ದರು. ಅಕ್ಕಪಕ್ಕದ ಕೆಲವರಿಗೆ ಆಮಂತ್ರಣವನ್ನು ನೀಡಿದ್ದರು. ಹಿರಿಯ ಜೀವಿಗಳು ಅರ್ಧ ಶತಮಾನದ ತಮ್ಮ ಸ್ನೇಹವನ್ನು ಎಳೆಎಳೆಯಾಗಿ ಮೆಲಕು ಹಾಕಿದರು. ನಾವು ಅವರ ಮಕ್ಕಳ ಮದುವೆಗೆ

ಹೋಗಿದ್ದು; ಶಾಲಿನಿ ಅವರು ನನ್ನ ಮದುವೆಗೆ ಹೈದರಾಬಾದಿಗೆ ಬಂದದ್ದು; ನನ್ನ ಮಗಳ ಮದುವೆಗೆ ಬಂದದ್ದು; ಅವರ ನೆಂಟರುಗಳ, ನಮ್ಮ ನೆಂಟರುಗಳ ವಿಚಾರ... ಹೀಗೆ ಐವತ್ತು ವರ್ಷಗಳ ಎರಡು ಕುಟುಂಬಗಳ ಇತಿಹಾಸವೇ ಅಂದು ಆ ಇಬ್ಬರು ಹಿರಿಯರ ಮಾತುಕತೆಗಳಲ್ಲಿ ಅನಾವರಣವಾಗಿತ್ತು.

ಚಿಕ್ಕವರೊಡನೆ ಅವರು ಮಾತನಾಡುವಾಗ ಅನೇಕ ಹಾಸ್ಯ ಪ್ರಸಂಗಗಳನ್ನು, ಸಂಗತಿಗಳನ್ನು ಹೇಳಿ ನಮ್ಮನ್ನು ನಗಿಸುತ್ತಿದ್ದರು. ಅಂಥ ಒಂದು ಹಾಸ್ಯ: ಊರಿನಲ್ಲಿ ಒಬ್ಬ ಮಹಿಳೆ ಸ್ತ್ರೀಸಮಾಜದಲ್ಲಿ ಬಹಳ ಮುತುವರ್ಜಿ ವಹಿಸಿ ಕೆಲಸಮಾಡುತ್ತಿದ್ದರು. ಎಲ್ಲರಿಗು ಅವರು 'ಶೆಣೈ ಹೆಂಡತಿ' ಎಂದೇ ಚೆನ್ನಾಗಿ ಪರಿಚಯ. ಒಮ್ಮೆ ದಾರಿಯಲ್ಲಿ ಹೋಗುತ್ತಿದ್ದ ವ್ಯಕ್ತಿಯೊಬ್ಬರು ಎದುರಿನಿಂದ ಬಂದವರೊಡನೆ ಕುಶಲೋಪರಿ ಮಾತನಾಡಿ ಮುಂದೆಹೋದರು.

ಇವರ ಜೊತೆ ಇದ್ದವರು "ಅವರು ಯಾರು?' ಎಂದು ಕೇಳಿದರು.

"ಅವರು ಶೆಣೈ. ನಿಮಗೆ ಗೊತ್ತಿಲ್ಲವೋ ?"

"ಇಲ್ಲ, ಯಾವ ಶೆಣೈ?"

"ನಿಮಗೆ ಶೆಣೈ ಹೆಂಡ್ತಿ ಗೊತ್ತಲ್ವೋ?"

"ಹೌದು, ಗೊತ್ತು!"

"ಇವರು ಶೆಣೈ ಹೆಂಡ್ತಿ ಗಂಡ!"

"ಓ, ಇವರು ಶೆಣೈ ಹೆಂಡ್ತಿ ಗಂಡಾನಾ! ಸರಿ, ಸರಿ"

ಶೆಣೈ ಯಾರಿಗೂ ಗೊತ್ತಿಲ್ಲ; ಆದರೆ ಶೆಣೈ ಹೆಂಡತಿ ಗಂಡ ಎನ್ನುವುದೇ ಅವರ ಗುರುತು! ಇಂಥ ಅನೇಕ ಸಂಗತಿಗಳನ್ನು ಹೇಳಿ ನಮ್ಮನ್ನು ನಗಿಸುತ್ತಿದ್ದರು.

ನಮ್ಮ ಮನೆಯ ಪಕ್ಕದ ಮನೆಗೆ ಬಂದಾಗ. ಶಾಲಿನಿಯವರ ಮಗಳು ರವಿಕಲಾ ನರ್ಸರಿ ಶಾಲೆಗೆ ಸೇರಿದ್ದಳು. ಅವಳನ್ನು ಶಾಲೆಗೆ ಕರೆದುಕೊಂಡು ಹೋಗಿ ಹಿಂದಕ್ಕೆ ಕರೆದುಕೊಂಡು ಬರುವುದು ಮಾಧ್ಯಮಿಕ ಶಾಲೆಯಲ್ಲಿದ್ದ ನನ್ನ ಕರ್ತವ್ಯವಾಗಿತ್ತು. ಮುಂದೆ ರವಿಕಲಾ ನನ್ನನ್ನು ಯಾರಿಗಾದರು ಪರಿಚಯ ಮಾಡಿಕೊಡಬೇಕಿದ್ದರೆ "ನನಗೆ ಇಂದು ಏನಾದರು ಓದು ಬರಹ ಬರುತ್ತೆ ಅಂದರೆ ಅದಕ್ಕೆ ಇವನೇ ಕಾರಣ. ಇವನು ನನ್ನನ್ನು ಶಾಲೆಗೆ ಕರೆದುಕೊಂಡು ಹೋಗದಿದ್ದರೆ ನಾನು ಅನ್‌ಪಡ್ ಆಗಿ ಮನೆಯಲ್ಲೇ ಇರಬೇಕಾಗಿತ್ತು" ಎಂದು ತಮಾಷೆಯಾಗಿ ಹೇಳುತ್ತಿದ್ದಳು. ರವಿಕಲಾಳ ಗಂಡ ಡಾ॥ ರವೀಂದ್ರ ನಾಯಕ್. ಈತ ಖ್ಯಾತ ವಿಜ್ಞಾನಿ. ಅಂಟಾರ್ಟಿಕಾಗೆ ಹೋದ ಮೊದಲ ಭಾರತದ ತಂಡದಲ್ಲಿ ಅವರಿದ್ದರು. ಗೋವಾದ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಓಷನೋಗ್ರಫಿಯಲ್ಲಿ ಡೈರೆಕ್ಟರ್ ಆಗಿದ್ದರು. ನಾನು ಆ ಸಂಸ್ಥೆಗೆ ಕನ್ಸಲ್ಟೆಂಟ್ ಆಗಿ ಅನೇಕ ಬಾರಿ ಹೋಗುವ ಸಂದರ್ಭವಿತ್ತು. ಆಗೆಲ್ಲ ಆ ದಂಪತಿ ಮತ್ತು ಅವರ ಇಬ್ಬರು ಹೆಣ್ಣುಮಕ್ಕಳ ಆತಿಥ್ಯವನ್ನು ನಾನು ಮರೆಯಲಾರೆ. ರವಿಕಲಾಗೆ ಕೂಡ ಅವರ ತಾಯಿಯಂತೆ ಕಾದಂಬರಿಗಳನ್ನು ಓದುವ ಹವ್ಯಾಸವಿದೆ.

ಶಾಲಿನಿ ಅವರ ಕೊನೆಯ ಮಗಳು ನಂದಿನಿ ಹಾಗು ಉಪ್ಪಿನಂಗಡಿಯಲ್ಲಿ ವ್ಯಾಪಾರೋದ್ಯಮದಲ್ಲಿ ಇರುವ ಅವಳ ಪತಿ ಶ್ರೀ ಸುಭಾಷ ಕೂಡ ಅತ್ಯಂತ ಸ್ನೇಹಜೀವಿಗಳು. ಅವರಲ್ಲೂ ನಾವು ಹಲವುಬಾರಿ ಆತಿಥ್ಯವನ್ನು ಸ್ವೀಕರಿಸಿ ಸಂತೋಷ ಪಟ್ಟಿದ್ದೇವೆ.

ಶಾಲಿನಿಯವರ ಮೂವರು ಮಕ್ಕಳಲ್ಲಿ ವೆಂಕಟೇಶ ಕಾಮತ್ ಎರಡನೆಯವನು. ಈಗಲೂ ನನ್ನೊಡನೆ ಹತ್ತಿರದ ಸಂಪರ್ಕದಲ್ಲಿದ್ದಾನೆ. ಶಾಲಿನಿಯವರ ಅಗಾಧ ಓದಿನ ಪ್ರಭಾವ ಮಗ ವೆಂಕಟೇಶ ಕಾಮತ್ ಮೇಲೂ ಆಗಿತ್ತು. ಇದು ಅವನ ಸಾಹಿತ್ಯ ಪ್ರೀತಿಗೆ ಕಾರಣ. ತನ್ನ ಬ್ಯಾಂಕ್ ಉದ್ಯೋಗದ ಜೊತೆಗೆ ಆತ ಇಂಗ್ಲಿಷಿನಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾನೆ. ತನ್ನ ತಾಯಿಯವರೊಂದಿಗೆ ಸಿನಿಮಾಗಳನ್ನು ನೋಡುತ್ತಿದ್ದ. ಈಗ ಕಿರುಚಿತ್ರಗಳ ವಿಮರ್ಶೆ ಮಾಡುವುದಲ್ಲದೆ, ಅದರಲ್ಲಿ ಪಾತ್ರ ವಹಿಸುವುದರಲ್ಲಿ ಹಾಗೂ ನಿರ್ಮಾಣದಲ್ಲಿ ನೆರವಾಗುವುದರಲ್ಲೂ ನಿರತನಾಗಿದ್ದಾನೆ. ಅನೇಕ ವರ್ಷಗಳು ಶಾಲಿನಿ ಕಾಮತ್ ಅವರು ನೆಮ್ಮದಿಯಾಗಿರುವಂತೆ ನೋಡಿಕೊಂಡ ಶ್ರೇಯಸ್ಸು ಶ್ರೀಮತಿ ಮಿತ್ರಾ – ಶ್ರೀ ವೆಂಕಟೇಶ ಕಾಮತ್ ದಂಪತಿಗೆ ಸಲ್ಲುತ್ತದೆ. ಅವರಿಗೆ ಶುಭವಾಗಲಿ.

ಶಾಲಿನಿಯವರು ಎಂದೂ ಯಾರೊಬ್ಬರ ಬಗ್ಗೆಯೂ ಕೀಳಾಗಿ ಮಾತನಾಡಿದವರಲ್ಲ. ಹಾಗೆ ಮಾತನಾಡುವ ಸಂದರ್ಭದಲ್ಲಿ "ಅವರು ಯಾವ ಪರಿಸ್ಥಿತಿಯಲ್ಲಿ ಇದ್ದಾರೋ ನಮಗೆ ಗೊತ್ತಿಲ್ಲವಲ್ಲ. ಹಾಗಾಗಿ ನಾವು ಸುಮ್ಮನಿರುವುದೇ ಮೇಲು" ಎನ್ನುತ್ತಿದ್ದರು. ಈ ಗುಣದಿಂದಲೇ ಅವರ ಮುಖದಲ್ಲಿ ಪರಿಶುದ್ಧ, ಮುಗ್ಧನಗು ಯಾವಾಗಲೂ ಇರುತ್ತಿತ್ತು. ಈಗ ಅದು ನಮಗೆ ನೆನಪು ಮಾತ್ರ. ಅವರು ತಮ್ಮ ನಿರ್ಮಲ ಮನಸ್ಸಿನಿಂದ ಶುಭ ಹಾರೈಸಿದ್ದು ನಮ್ಮನ್ನು ಕಾಯುತ್ತಿರುತ್ತದೆ.

(ಶಾಲಿನಿ ಕಾಮತ್ ಅವರು 01ನೆಯ ಜೂನ್ 2024ರಂದು ತಮ್ಮ 88ನೇ ವಯಸ್ಸಿನಲ್ಲಿ ಉಡುಪಿಯಲ್ಲಿ ಮಗನ ಮನೆಯಲ್ಲಿ ನಿಧನರಾದರು.)

***

ಕೃತಿ ಪರಿಚಯ



'ಗೀತ ಪ್ರೀತಿ'

ಸುಗಮ, ಸಂಗೀತ ಸಿರಿ ಡಾ .ಜಯಶ್ರೀ ಅರವಿಂದ್ ಅವರ ಅಭಿನಂದನಾ ಗ್ರಂಥ.

– ಮಹಾಬಲ

ಕನ್ನಡದ ವಿಶಿಷ್ಟ ಸಂಗೀತ ಪ್ರಕಾರವಾದ ಸುಗಮ ಸಂಗೀತ ಕ್ಷೇತ್ರದ ಎಲ್ಲ ಮಜಲುಗಳಲ್ಲಿ ಸೇವೆ ಸಲ್ಲಿಸಿ ಅದರ ಆಳ, ಉದ್ದಗಲ ವ್ಯಾಪ್ತಿಗಳ ಎಲ್ಲ ಜ್ಞಾನಗಳನ್ನು ಹೊಂದಿರುವ ಡಾ.ಜಯಶ್ರೀ ಅರವಿಂದ್ ಅವರಿಗೆ ಸಮರ್ಪಿಸಲಾದ ಅಭಿನಂದನ ಗ್ರಂಥ "ಗೀತ ಪ್ರೀತಿ". ಜನವರಿ 5ರಂದು ಬೆಂಗಳೂರಿನಲ್ಲಿ ಅದ್ದೂರಿಯ ಸಮಾರಂಭದಲ್ಲಿ ಲೋಕಾರ್ಪಣೆಗೊಂಡ ಈ ಕೃತಿಯಲ್ಲಿ 'ಲಹರಿ' ಎಂದು ಹೆಸರಿಸಲಾದ ಒಂಬತ್ತು ವಿಭಾಗಗಳಿವೆ.

ಮೊದಲನೆಯ ಲಹರಿಯಲ್ಲಿ ಸಂಪಾದಕೀಯ ಹಾಗೂ ಜಯಶ್ರೀಯವರ ಜೀವನ ವಿವರ ಒದಗಿಸುವ ಮುರಳೀಧರ ಬೆಳಾಲು ಅವರ ಉಪಯುಕ್ತ ಲೇಖನವಿದ್ದು ಕಲಾವಿದೆಯ ಸಾಧನೆಗಳನ್ನು ಸಮರ್ಥವಾಗಿ ಚಿತ್ರಿಸಲಾಗಿದೆ.

ಎರಡನೆಯ ಲಹರಿಯಲ್ಲಿ ಸ್ವತಃ ಜಯಶ್ರೀಯವರೇ ಬರೆದಿರುವ ಒಂದು ಕೃತಜ್ಞತಾಸೂಚಕ ಲೇಖನವಿದ್ದು ಅದರಲ್ಲಿ ಸುಗಮ ಸಂಗೀತದ ಮಹತ್ವ, ಈ ಕೃತಿ ಹೊರಬರಲು ಪ್ರೋತ್ಸಾಹಿಸಿದವರು, ದುಡಿದವರು ಮುಂತಾದವರನ್ನು ನಮ್ರತೆಯಿಂದ ಸ್ಮರಿಸಲಾಗಿದೆ. ಜತೆಗೆ 2020ರ ಜನವರಿಯಲ್ಲಿ ಮುಂಬಯಿಯಲ್ಲಿ ನಡೆದ ಸುಗಮ ಸಂಗೀತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಜಯಶ್ರೀಯವರ ಭಾಷಣದ ಪೂರ್ಣಪಾಠವೂ ಇದ್ದು, ಇದು ಆಸಕ್ತರಿಗೆ ಸುಗಮ ಸಂಗೀತ ನಡೆದು ಬಂದ ದಾರಿ, ಅದನ್ನು ಪ್ರಚುರಪಡಿಸುವಲ್ಲಿ ಆಕಾಶವಾಣಿಯಂಥ ಸಂಸ್ಥೆಯ ಪಾತ್ರ, ನವೋದಯ ಸಾಹಿತ್ಯ ಹಾಗೂ ಸುಗಮ ಸಂಗೀತ, ಸುಗಮ ಸಂಗೀತದ ಶೈಲಿ, ಇಂದಿನ ಸುಗಮ ಸಂಗೀತ, ಸುಗಮ ಸಂಗೀತಗಾರರ ಜವಾಬ್ದಾರಿಗಳು ಮಂತಾದ ವಿಷಯಗಳ ಬಗ್ಗೆ ಸಮಗ್ರ ಮಾಹಿತಿ ನೀಡುತ್ತದೆ.

'ಭಾವಮಿಲನ' ಎಂದು ಹೆಸರಿಸಲಾದ ಮೂರನೆಯ ಲಹರಿಯಲ್ಲಿ ಸಂಕೀರ್ಣ ಲೇಖನಗಳಿದ್ದು ಗಮಕ ಹಾಗೂ ಸುಗಮ ಸಂಗೀತದ ಸಂಬಂಧ, ಸಂಪ್ರದಾಯದ ಹಾಡುಗಳು ಹಾಗೂ ಸುಗಮ ಸಂಗೀತ, ಸುಗಮ ಸಾಹಿತ್ಯದ ಮೇಲೆ ದಾಸಸಾಹಿತ್ಯದ ಪ್ರಭಾವ, ಸುಗಮ ಸಂಗೀತದಲ್ಲಿ ಸಾಹಿತ್ಯದ ಪಾತ್ರ, ಸಂಗೀತ ಸಾಹಿತ್ಯದ ಒಂದು ಹದ, ವಾದ್ಯ ಸಂಗೀತದ ಪಾತ್ರ, ಅಲ್ಲದೆ ಈ ನಿಟ್ಟಿನಲ್ಲಿ ಜಯಶ್ರೀ ಅವರ ಸಾಧನೆಗಳು ಮುಂತಾದ ಮಾಹಿತಿ ಖಜಾನೆಯೇ ಇಲ್ಲಿದೆ.

'ಕವಿ ಮನಸಿನ ಮಾತು' ಎಂದು ಹೆಸರಾದ ನಾಲ್ಕನೆಯ ಲಹರಿಯಲ್ಲಿ ಕನ್ನಡದ ಪ್ರಸಿದ್ಧ ಕವಿಗಳಾದ ಎಚ್.ಎಸ್.ವಿ., ದೊಡ್ಡರಂಗೇಗೌಡ, ಸುಬ್ರಾಯ ಚೊಕ್ಕಾಡಿ, ಬಿ.ಆರ್.ಎಲ್. ಮುಂತಾದವರ ಕವಿಹೃದಯಪೂರಿತ ಹಾರೈಕೆಗಳಿವೆ.

ಗೀತ ಪ್ರೀತಿ

ಸುಗಮ ಸಂಗೀತ ಸಿರಿ ಡಾ.ಜಯಶ್ರೀ ಅರವಿಂದ್ ಅವರ ಅಭಿನಂದನಾ ಗ್ರಂಥ

ಸಂಪಾದಕರು: ಮುರಲಿಕೃಷ್ಣ ಬೆಳಾಲು
ಪ್ರಕಾಶಕರು: ಸ್ವರಸಲ್ಲಾಪ ಪ್ರಕಾಶನ, ಬೆಂಗಳೂರು
ದೂರವಾಣಿ:9845443074,9 880974918
ಪುಟಗಳು 400 – ಬೆಲೆ ರೂ. 630 –
ಪ್ರಥಮ ಮುದ್ರಣ: 2023

'ಜೀವನ ಸಂಗೀತ' ಎಂಬ ಐದನೆಯ ಲಹರಿಯಲ್ಲಿ ಕುಟುಂಬದ ಸದಸ್ಯರು ಹಾಗೂ ಒಡನಾಡಿಗಳು ಲೇಖನ ಬರೆದು ತಮ್ಮ ಪ್ರೀತಿ, ಗೌರವಗಳನ್ನು ಸಮರ್ಪಿಸಿದ್ದಾರೆ.

'ಸ್ನೇಹ ಸಂಪದ' ಎಂಬ ಆರನೆಯ ಲಹರಿಯಲ್ಲಿ ಸುಗಮ ಸಂಗೀತ ಕ್ಷೇತ್ರದ ಸಹವರ್ತಿಗಳಾದ ನಗರ ಶ್ರೀನಿವಾಸ ಉಡುಪ, ನರಸಿಂಹ ನಾಯಕ್, ಕಸ್ತೂರಿ ಶಂಕರ್, ಬಿ.ಆರ್.ಛಾಯಾ, ಮಾಲತಿ ಶರ್ಮ, ರಮೇಶ್ ಚಂದ್ರ, ಶಶಿಧರ ಕೋಟೆ, ವೀಣಾವಾರುಣಿ ಮುಂತಾದವರು ಜಯಶ್ರೀಯವರ ಬದುಕು, ಸಾಧನೆಗಳ ಬಗ್ಗೆ ವಿವರವಾಗಿ ಬರೆದಿದ್ದಾರೆ.

'ಹಾರೈಕೆಗಳ ಹೂಗೊಂಚಲು' ಎಂಬ ಏಳನೆಯ ಲಹರಿಯಲ್ಲಿ ಅಭಿಮಾನಿಗಳ ಹೊನಲೇ ಹರಿದಿದೆ. 'ಕವಿಮನದ ಕವಿತೆಯ ಹಾರೈಕೆ'ಯ ಹೆಸರಿನ ಎಂಟನೆಯ ಲಹರಿಯಲ್ಲಿ ಕವಿಗಳಾದ ಎಚ್.ಎಸ್.ವಿ., ದೊಡ್ಡರಂಗೇಗೌಡ, ಚೊಕ್ಕಾಡಿ, ದಾಮೋದರ ಶೆಟ್ಟಿ, ಮುರಳೀಧರ ಬೆಳಾಲು ಮುಂತಾದವರು ಕವಿತೆಯ ರೂಪದಲ್ಲಿ ಅಭಿನಂದನೆ ಸಲ್ಲಿಸಿರುವುದು ವಿಶೇಷವಾಗಿದೆ.

ಒಂಬತ್ತನೆಯ 'ನೆನಪಿನ ಚಿತ್ರರಂಗೋಲೆ' ಲಹರಿಯಲ್ಲಿ ಜಯಶ್ರೀ ಹಾಗೂ ಅರವಿಂದ್ (ಸ್ವತಃ ಕೊಳಲು ವಾದಕರೂ ಧ್ವನಿತಂತ್ರಜ್ಞರೂ ಆದ ಪ್ರತಿಭಾವಂತರು) ದಂಪತಿಗಳು ಹಾಗೂ ಅವರ ಕುಟುಂಬ ಸಂಗೀತಲೋಕದ ದಿಗ್ಗಜರೊಂದಿಗೆ, ಸಹಕಲಾವಿದರೊಂದಿಗೆ, ಸಾರಸ್ವತ ಲೋಕದ ಗಣ್ಯರೊಂದಿಗೆ ಇರುವ ಭಾವಚಿತ್ರಗಳೂ ಕೃತಿಯೊಳಗೆ ಲಭ್ಯವಿದ್ದು ಕೃತಿಗೆ ಕಿರೀಟಪ್ರಾಯವೆನಿಸಿದೆ.

ಸುಗಮ ಸಂಗೀತದ ಸ್ವರ ಸಂಯೋಜನೆ, ಗೀತ ರಚನೆ, ಡಾ.ರಾಜಕುಮಾರ್, ಜೇಸುದಾಸ್, ಎಸ್ಪಿಬಿ ಮುಂತಾದ ದಿಗ್ಗಜಗಳ ಹಾಡಿಕೆಯ ಅಡಕ ಮುದ್ರಿಕೆ ತಂದು ಸುಗಮ ಸಂಗೀತ ಕ್ಷೇತ್ರದಲ್ಲಿ ಸಂಚಲನ ಉಂಟು ಮಾಡಿದ ಜಯಶ್ರೀ ಅರವಿಂದ್ ಅವರನ್ನು ಅಭಿನಂದಿಸುವ ಇಂಥ ಗ್ರಂಥ ಎಂದೋ ಬರಬೇಕಿತ್ತು. ಈಗಲಾದರೂ ಬೆಳಕು ಕಂಡಿರುವುದು ಸ್ವಾಗತಾರ್ಹ. ಕೃತಿಯನ್ನು ಸುಗಮ ಕ್ಷೇತ್ರದ ಪಿತಾಮಹ ಎನಿಸಿದ ಕಾಳಿಂಗರಾವ್ ಅವರಿಗೆ ಹಾಗೂ ಸುಗಮ ಸಂಗೀತದ ಅಶ್ವಿನಿ ದೇವತೆಗಳೆನಿಸಿದ್ದ ಅನಂತಸ್ವಾಮಿ, ಅಶ್ವಥ್ ಅವರುಗಳಿಗೆ ಅರ್ಪಿಸಲಾಗಿದೆ. ಸುಗಮ ಸಂಗೀತ ಕ್ಷೇತ್ರದ ವಿಶ್ವಕೋಶದಂತಿರುವ ಈ ಕೃತಿಯನ್ನು ಎಲ್ಲ ಕನ್ನಡ ಸಾಹಿತ್ಯ-ಸಂಗೀತಾಸಕ್ತರು ಆದರದಿಂದ ಬರಮಾಡಿ ಕೊಳ್ಳುವುದು ಅಗತ್ಯ.

ಕೃತಿಯಲ್ಲಿ ಅಲ್ಲಲ್ಲಿ ನುಸುಳಿರುವ ಮುದ್ರಣದೋಷಗಳನ್ನೂ, ಪುನರುಕ್ತಿಗಳನ್ನೂ ಮುಂದಿನ ಆವೃತ್ತಿಗಳಲ್ಲಿ ನಿವಾರಿಸಿ ಕೊಳ್ಳಬಹುದಾಗಿದೆ.

***

ಸರ್ವಜ್ಞನ ತ್ರಿಪದಿಗಳಲ್ಲಿ ಜ್ಞಾನ

– ಸುಜಾತಾ ರವೀಶ್

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸರ್ವಜ್ಞನ ಸ್ಥಾನ ತುಂಬ ವಿಶಿಷ್ಟವಾಗಿದ್ದು ಇವನ ತ್ರಿಪದಿಗಳು ಜನಮಾನಸದಲ್ಲಿ ಬೇರೂರಿವೆ. ತ್ರಿಪದಿಗಳಲ್ಲಿ ಲೋಕಾನುಭವ ಹೆಜ್ಜೆಹೆಜ್ಜೆಗೂ ವ್ಯಕ್ತವಾಗುತ್ತದೆ ಸರ್ವಜ್ಞನ ವಚನಗಳಲ್ಲಿ ಏನಿದೆ ಅಂತ ಕೇಳುವುದಕ್ಕಿಂತ ಏನಿಲ್ಲ ಎಂದು ಪರಿಶೀಲಿಸಬೇಕು. ಲೌಕಿಕ ಆಧ್ಯಾತ್ಮಿಕ ಎರಡೂ ಇದೆ, ಪ್ರಶ್ನೆ ಜತೆಗೆ ಉತ್ತರ ಎರಡೂ ಕವಿಯೇ ಹೇಳುತ್ತಾರೆ. ನಿರೂಪಣೆಯಲ್ಲಿ ಗೂಢ ಎಲ್ಲವೂ ಸರಳ ಸೂಕ್ತ ರೂಪಕ ಪ್ರತಿಮೆ ಉದಾಹರಣೆಗಳು ವಿಷಯವನ್ನು ಹೆಚ್ಚು ಚೆನ್ನಾಗಿ ಮನದಟ್ಟು ಮಾಡಿಸುತ್ತವೆ.

ಇಂದು ನಾನು ಆರಿಸಿಕೊಂಡಿರುವ ತ್ರಿಪದಿಗಳು ಜ್ಞಾನಕ್ಕೆ ಸಂಬಂಧಪಟ್ಟಿದ್ದು. "ನಹಿ ಜ್ಞಾನೇನ ಸದೃಶಂ" ಎಂದು ವೇದವೇ ಹೇಳುತ್ತದೆ. ಅಂತಹ ಜ್ಞಾನ ಲೌಕಿಕವೂ ಆಗಿರಬೇಕು ಪರಮಾರ್ಥದೆಡೆಗೂ ಒಯ್ಯಬೇಕು. ಅದನ್ನು ಬಹಳಷ್ಟು ತ್ರಿಪದಿಗಳಲ್ಲಿ ಸರ್ವಜ್ಞ ತುಂಬಾ ಸುಂದರವಾಗಿ ಮಾರ್ಮಿಕವಾಗಿ ವರ್ಣಿಸಿದ್ದಾನೆ.

ಜ್ಞಾನದಿಂದಲಿ ಇಹವು ಜ್ಞಾನದಿಂದಲಿ ಪರವು
ಜ್ಞಾನವಿಲ್ಲದೆಲೆ ಸಕಲವೂ ತನಗಿದ್ದು
ಹಾನಿ ಕಾಣಯ್ಯ ಸರ್ವಜ್ಞ

ಇಹದಲ್ಲಿ ನಾವು ಸುಖವಾಗಿ ಜೀವಿಸಬೇಕೆಂದರೆ ಜ್ಞಾನ ಮುಖ್ಯ. ವಿದ್ಯೆ ಅಥವಾ ಲೋಕಜ್ಞಾನ ಯಾವುದೇ ಆಗಲಿ ಅನುಭವಜನ್ಯವಾಗಿ ಗುರು ಮೂಲಕವಾಗಿ ಬಂದದ್ದರಿಂದಲೇ ನಮ್ಮ ಬಾಳಿನಲ್ಲಿ ಏಳಿಗೆ ಸಾಧ್ಯ. ಹಾಗಾಗಿಯೇ ದೈನಂದಿನ ವ್ಯಾವಹಾರಿಕ ಜ್ಞಾನ ಮಾತ್ರವಲ್ಲ ಅಧ್ಯಾತ್ಮ ಜ್ಞಾನವೂ ಸಹ ಮನದ ಉನ್ನತಿಗೆ ಬೇಕು. ಅದನ್ನೇ ಸರ್ವಜ್ಞನು ಜ್ಞಾನದಿಂದಲಿ ಪರವು ಎಂದು ಹೇಳಿದ್ದಾನೆ ಈ ಪಾರಮಾರ್ಥಿಕ ಜ್ಞಾನಕ್ಕಾಗಿಯೇ ಅಲ್ಲದೆ ಋಷಿಮುನಿಗಳು ತಪಗೈದು ಜೀವನವೆಲ್ಲ ಸಾಧನೆ ಮಾಡಿ ಪರಿತಪಿಸಿದ್ದು. ಜ್ಞಾನವಿಲ್ಲದವನಿಗೆ ಬೇರೆಲ್ಲವೂ ಇದ್ದರೂ ಅದನ್ನು ಕಳೆದುಕೊಂಡು ಹೀನಾಯ ಸ್ಥಿತಿಗೆ ಬರುತ್ತಾನೆ. ಜ್ಞಾನವಿದ್ದರೆ ಇಹಕ್ಕೂ ಪರಕ್ಕೂ ಎಲ್ಲಕ್ಕೂ ಅನುಕೂಲ ಎನ್ನುವುದು ಸರ್ವಜ್ಞ ಅಭಿಪ್ರಾಯ.

ನಾಟ ರಾಗವು ಲೇಸು ತೋಡ ಮಲ್ಲಿಗೆ ಲೇಸು
ಕೂಟವದು ಲೇಸು ಹಿರಿಯರೊಳು
ಶಿವನ ಅರಿವಾಟವೇ ಲೇಸು ಸರ್ವಜ್ಞ

ರಾಗಗಳಲ್ಲೆಲ್ಲ ನಾಟರಾಗ ಕಿವಿಗೆ ತುಂಬಾ ಇಂಪು, ಮನಸ್ಸಿಗೆ ತಂಪು ಹಾಗೆಯೇ ತೋಡಾ ಎಂಬ ಮಲ್ಲಿಗೆಯ ಜಾತಿ ತುಂಬಾ ಕಂಪಂತೆ. ಹಾಗೆಯೇ ಕೂಟವದು ಲೇಸು ಹಿರಿಯರೊಳು ಅಂದರೆ ಸಜ್ಜನರ ಹಾಗೂ ಜ್ಞಾನ ವೃದ್ಧರ ಒಡನಾಟದಲ್ಲಿದ್ದರೆ ಅವರ ಸಂಸರ್ಗದಿಂದ ನಮಗೂ ಅಲ್ಪಸ್ವಲ್ಪ ಜ್ಞಾನ ಲಭಿಸುತ್ತದೆ ಎಂಬ ಅಭಿಪ್ರಾಯ. ಹಾಗೆ ಬೇರೆಲ್ಲಾ ಜ್ಞಾನಕ್ಕಿಂತಲೂ ಶಿವನನ್ನು ಅರಿಯುವ ಭಕ್ತಿಯ ಜ್ಞಾನ ಎಲ್ಲದಕ್ಕಿಂತಲೂ ಶ್ರೇಷ್ಠ ಎನ್ನುತ್ತಾನೆ ಸರ್ವಜ್ಞ

ಎತ್ತ ಹೋದರು ಮನವ ಹತ್ತಿಕೊಂಡೇ ಬಹುದು
ಮತ್ತೊಬ್ಬ ಸೆಳೆದು ಕೊಳಲರಿಯ ಜ್ಞಾನದಾ
ಬಿತ್ತು ಲೇಸೆಂದ ಸರ್ವಜ್ಞ

ಬೇರೆ ಒಡವೆ ಚಿನ್ನ ಸಂಪತ್ತುಗಳನ್ನು ಯಾರು ಬೇಕಾದರೂ ಕದ್ದೊಯ್ಯಬಹುದು ಆದರೆ ಅರ್ಜಿತ ಜ್ಞಾನ ಎಂದಿಗೂ ನಮ್ಮೊಂದಿಗೆಯೇ ಇರುತ್ತದೆ. ಯಾರೊಬ್ಬರೂ ಕಳವು ಮಾಡಲು ಸಾಧ್ಯವಿಲ್ಲ. ಹಾಗಾಗಿ ಜ್ಞಾನವನ್ನು ಅರ್ಜಿಸಿ ಜತೆ ಎನಿಸಿಕೊಳ್ಳುವುದು ಮುಖ್ಯ ಎನ್ನುತ್ತಾನೆ ಸರ್ವಜ್ಞ.

ವಿದ್ವಾನ್ ಸರ್ವತ್ರ ಪೂಜ್ಯತೇ ಎಂಬ ಮಾತಿಗೆ ಅನುಗುಣವಾಗಿ ಜ್ಞಾನವುಳ್ಳವನು ಎಲ್ಲ ಕಡೆಗೂ ಗೌರವಕ್ಕೆ ಪಾತ್ರನಾಗುತ್ತಾನೆ ಇಂತಹ ಜ್ಞಾನದ ಬಗೆಗೆ ಸರ್ವಜ್ಞ ತನ್ನ ತ್ರಿಪದಿಗಳ ಮೂಲಕ ಬೆಳಕು ಚೆಲ್ಲಿದ್ದಾನೆ. ಅವುಗಳ ಜ್ಞಾನ ನಮಗಾಗಬೇಕು ಅಷ್ಟೇ.

***

ಬರೆಯುವುದದೆಂತು?

-ಶೀಲಾ ಅರಕಲಗೂಡು

ಖಾಲಿಯಾಗಿದೆ ಮೌನದೊಡಲಿದು
ಮೌನವೂ ತಾನಿಲ್ಲವಾಗಿದೆ
ಕಾಣೊ ಕಣ್ಣಿಗು ತಿಮಿರವಡರಿದೆ
ಏನ ಬರೆಯಲಿ ತಿಳಿಯದು

ಹುಡುಕ ಹೊರಟಿಹೆ ಬೆಳಕಿನೆಳೆಗಳ
ಕಳೆದು ಹೋಗಿಹೆ ದಾರಿಯರಸುತ
ಲೋಕವರಿಯುವ ನನ್ನ ತಿಳಿಯುವ
ಕಾರ್ಯ ಮಾಡಲೆ ಬೇಕಿದೆ

ಅರಿಯಬೇಕಿದೆ ಬರೆವ ಮೊದಲಿಗೆ
ನನ್ನೊಳಿಹ ಅರಿಯರಿದು ಸೋಲಿಸಿ
ಅರಿವನರಿದರಿದರಿದು ನುಣ್ಣಗೆ
ರಕ್ತಗತವದನಾಗಿಸಿ

ಸಾರಸತ್ವದ ಲೋಕದೊಳಗಡೆ
ಸೌಖನಂದದಿ ಮುಳುಗುತೇಳುತ
ಹೀರಲಾಗದೆ ತೊಳಸುತಿರುವೆನು
ಮೂರ್ಖತನವನು ತೋರುತ

ಮಳೆಯ ಧಾರೆಯು ಪಕ್ಷಿ ಗಾನವು
ಗಗನ ವರ್ಣವು ಬೀಸೊ ಮಾರುತ
ಪ್ರಕೃತಿ ತಾನದೊ ಕೂಗಿ ಕರೆದಿದೆ
ಗುರುವು ನಾನಿಹೆನೆನ್ನುತ

ಮೋಡ ಸುರಿದರು ಖಾಲಿಯಾಗದು
ಮತ್ತೆ ತುಂಬುತ ಸುರಿದೆ ಸುರಿವುದು
ಹೀರಿದಲ್ಲದೆ ಸುರಿಯಲಾಪುದೆ
ಖಾಲಿ ಮಡಕೆಯು ಸುರಿಯದು

ಸುತ್ತ ಹರಡಿದೆ ಜ್ಞಾನದಾಕರ
ಹೊರಳಿದೆಲ್ಲೆಡೆ ಶಿಖರದೆತ್ತರ
ನಿಂತೆ ಚಾರಣ ಮಾಡಲಾಪುದೆ
ಹತ್ತಬೇಕಿದೆ ಸರಸರ

ದೂರ ತೀರದ ತೀರದಾಸೆಯು
ಮುಂದಕೆನ್ನನು ಬಿಡದೆ ಸೆಳೆಯಲಿ
ಬರೆವ ಶಕ್ತಿಯು ನನ್ನ ಸೇರಲಿ
ಭಾವ ತುಂಬಲಿ ಮನದಲಿ

ಇಂದು ನಾಳೆಯೋ ಬರೆದೆ ಬರೆವೆನು
ನವ್ಯ ಭಾವದ ಬೀಜ ಬಿತ್ತುತ
ಕಾವ್ಯವಲ್ಲರಿ ಹರಡಿಸುತ್ತಲಿ
ಹೊಸತು ಲೋಕವ ತೆರೆಯುತ

***

ನನ್ನ ನಾನು ಮರೆತಾಗ

– ಗುರುರಾಜ ಶಾಸ್ತ್ರಿ

ಹೇ ದೇವರೇ, ನಿನಗೆ ಬೇಕೆನಿಸಿದರೆ ನನ್ನ ಸಂಪತ್ತು, ನನ್ನ ಪ್ರಸಿದ್ಧಿ ಮತ್ತು ನನ್ನ ಯೌವನವನ್ನು ತೆಗೆದುಕೊ. ಆದರೆ ನನಗೆ ಏನಾದರೂ ನೀಡಲೇಬೇಕೆಂದು ನಿನಗನಿಸಿದರೆ ಆ ನನ್ನ ಚಿಕ್ಕ ವಯಸ್ಸಿನ ದಿನಗಳನ್ನು ಮತ್ತೆ ಕೊಡಿಸು ಎಂದು ಅರ್ಥ ನೀಡುವ ಹಿಂದಿಯ 'ಕಾಗಝ್ ಕಿ ಕಷ್ತಿ' ಗಜಲ್ ಜ್ಞಾಪಿಸಿಕೊಳ್ಳುತ್ತಾ, ಸಾಧ್ಯವೇ ಇಲ್ಲವೇ ಮತ್ತೆ ಆ ಚಿಕ್ಕ ವಯಸ್ಸಿನ ದಿನಗಳಿಗೆ ಮರಳುವುದು ಎಂದುಕೊಂಡೆ. ಒಬ್ಬರೇ ಮನೆಯಲ್ಲಿದ್ದಾಗ ಚಿಕ್ಕಮಕ್ಕಳಂತೆ ಕುಣಿದು ಕುಪ್ಪಳಿಸುವುದು, ನೃತ್ಯ ಮಾಡುವುದು, ಜೋರಾಗಿ ಅರಚುವುದು ಇವೆಲ್ಲವೂ ನನ್ನೊಬ್ಬನಿಗೇ ಮೀಸಲೇನಲ್ಲಾ, ಸಾಕಷ್ಟು ಜನರ ಅನುಭವ ಕೂಡ. ಆದರೂ ಜನರ ಮಧ್ಯ ನಿಂತು ಚಿಕ್ಕ ಹುಡುಗನಂತೆ ಆಡಿದರೆ ಜನ ನನ್ನನ್ನು ಹುಚ್ಚನೆಂದುಕೊಳ್ಳುವುದು ನಿಜ ಎಂಬ ಅರಿವೂ ನನಗೆ ಇದೆ. ಹಾಗಾದರೆ ಆ ಚಿಕ್ಕ ವಯಸ್ಸಿನ ದಿನಗಳಿಗೆ ಮರಳುವ ಕನಸು ನನಸಾಗದೆಯೇ ಉಳಿಯುತ್ತದೆಯೇ ಎಂದು ನಾನು ಯೋಚಿಸುತ್ತಿದ್ದಾಗ, ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ವಾರ್ಷಿಕ ಉತ್ಸವ 'ಎಚ್ಚೆಸ್ಕೆ ಬೆಳಕು' 9ನೇ ಆವೃತ್ತಿಯಲ್ಲಿ ನನಗೆ ನಾಟಕದಲ್ಲಿ ಪಾತ್ರ ಮಾಡುವ ಅವಕಾಶ ಸಿಕ್ಕಿತು. ಎಚ್ಚೆಸ್ಕೆ ಅವರು ಬರೆದ "ಮಾವಿನ ಹಣ್ಣೋ, ಮಾವನ ಹೆಣ್ಣೋ" ಮತ್ತು "ಋಕ್ಕಮ್ಮನ ಸಂಸಾರ" ಎರಡು ಪ್ರಬಂಧಗಳನ್ನು ನಾಟಕಕ್ಕೆ ರೂಪಾಂತರ ಮಾಡಿ ಹಾಗೂ ನಾಟಕವನ್ನು ನಿರ್ದೇಶನ ಮಾಡಿದ ಶ್ರೀ ಧೀರೇಂದ್ರ ಅವರಿಗೆ ಈ ಅವಕಾಶ ನೀಡಿದ್ದಕ್ಕೆ ನಾನು ಧನ್ಯವಾದಗಳನ್ನು ತಿಳಿಸಲೇಬೇಕು.

ಒಂದು ಲಡ್ಡುವಿನ ಜೊತೆ ಇನ್ನೊಂದು ಎಂಬ ಜಾಹಿರಾತಿನಂತೆ ಎರಡು ನಾಟಕಗಳು, ಎರಡರಲ್ಲೂ ನಟಿಸುವ ಅವಕಾಶ, ಅದಕ್ಕಿಂತ ಸಂತೋಷವೆಂದರೆ 50 ವರ್ಷದವ ನಾನು, ಎರಡರಲ್ಲೂ 12ರಿಂದ 16 ವರ್ಷದ ಹುಡುಗನ ಪಾತ್ರ, ಅದೂ ಯಾವುದೇ ಮೇಕಪ್ ಇಲ್ಲದೆ ಮಾಡಬೇಕು. ನನ್ನ ಜೊತೆಗೆ ನನ್ನ ಅಣ್ಣನ ಪಾತ್ರದಲ್ಲಿ ಗೆಳೆಯ ಸತೀಶ್ ತುಂಗ ಮತ್ತು ಅಕ್ಕನ ಪಾತ್ರದಲ್ಲಿ ರೇಣುಕಾ ದೇಸಾಯಿ.

ಪ್ರಬಂಧದಿಂದ ರೂಪಾಂತರಗೊಂಡಿದ್ದರಿಂದ ನಾಟಕದಲ್ಲಿ ಉದ್ದುದ್ದನೇ ಸಂಭಾಷಣೆಗಳು ಮತ್ತು ಕ್ಲಿಷ್ಟವಾದ ಕನ್ನಡ ಪದಗಳು ಹೆಚ್ಚಿತ್ತು. ಈಗಾಗಲೇ ನಾಲ್ಕು ನಾಟಕಗಳನ್ನು ಬರೆದಿದ್ದ ನನಗೆ ಈ ಪ್ರಬಂಧದ ನಾಟಕ ನಿಜವಾಗಿಯೂ ಪ್ರೇಕ್ಷಕರನ್ನು ಮುಟ್ಟುತ್ತದೆಯೇ ಎಂಬ ಅನುಮಾನ. ಸಾಕಷ್ಟು ನಾಟಕಗಳಲ್ಲಿ ಪಾತ್ರಗಳನ್ನು ಮಾಡಿದ್ದ ತುಂಗರಿಗೂ ಇದೇ ಅನುಮಾನವಿತ್ತು. ಏನಾದರಾಗಲಿ ಒಪ್ಪಿಕೊಂಡಿದ್ದಾಗಿದೆ, ನಮ್ಮ ಪ್ರಯತ್ನ ನಾವು ಮಾಡೋಣ ಎಂದು ನಿರ್ಧರಿಸಿದ್ದಾಯಿತು. ಒಂದು ಚಡ್ಡಿ ಅಥವಾ ಬರ್ಮುಡಾ ಮತ್ತು ಒಂದು ಬಣ್ಣಬಣ್ಣದ ಟೀಶರ್ಟ್ ಧರಿಸಿದರೆ ಮಕ್ಕಳ ಪಾತ್ರಕ್ಕೆ ಸಾಕೆಂದು ಕೊಂಡರೂ, ತುಂಗರ ಸುಮಾರು, ಸುಮಾರೇನೂ ಸಾಕಷ್ಟೇ ಬರಿದಾದ ತಲೆ ಮತ್ತು ಗೊಂಚಲು ಗೊಂಚಲು ಬಿಳಿ ಕೂದಲಿರುವ ನನ್ನ ತಲೆ ಇವುಗಳನ್ನು ಹೇಗೆ ಸರಿಮಾಡುವುದು ಎಂದು ಯೋಚಿಸಿದಾಗ ಟೋಪಿ ಧರಿಸಿದರಾಯಿತು ಎಂದುಕೊಂಡೆವು. ಟೋಪಿಯನ್ನು ಈಗಿನ ಯುವಕರ ಸ್ಟೈಲಿನಂತೆ ಹಿಂದುಮುಂದಲಾಗಿ ಧರಿಸಿ ಎಂದರು, ಧೀರೇಂದ್ರ.

ಲೇಖನ ಶೀರ್ಷಿಕೆಯಿಂದ ಬೇರೆತ್ತಲಿಗೋ ಹೋಗುತ್ತಿದೆ ಎಂಬ ಅನುಮಾನ ನನಗೂ ಬಂದಿದೆ. ಅದಕ್ಕಾಗಿಯೇ ಮತ್ತೆ ಬಂಡಿಯನ್ನು ಟ್ರ್ಯಾಕ್‌ಗೆ ಎಳೆಯುತ್ತಿದ್ದೇನೆ.

ನಾಟಕದ ಪೂರ್ವ ತಯಾರಿ ಸುಮಾರು 15ರಿಂದ 20 ದಿನ ನಡೆಯಿತು. ಒಂದು ನಾಟಕದಲ್ಲಿ ಅಜ್ಜಿಯ ಪಾತ್ರದಲ್ಲಿದ್ದ ಶಂತಾ ನಾಗಮಂಗಲ ಅವರ ಸಂಭಾಷಣೆಯೇ ಸುಮಾರು ಶೇಕಡ 70. ಆದರೆ ಮತ್ತೊಂದರಲ್ಲಿ ಧೀರೇಂದ್ರ ಅವರ ಸಂಭಾಷಣೆ ಶೇಕಡ 70. ಮಿಕ್ಕ ಏಳು ಜನ ಅಂದರೆ ಶ್ರೀಪ್ರಕಾಶ್, ಶ್ರೀರಂಗರಾಜನ್, ಇಜೇರಿ, ರಾಧಿಕಾ, ರೇಣುಕಾ, ತುಂಗಾ ಮತ್ತು ನಾನು, ನಮಗೆ ಗಟ್ಟು ಹೊಡೆಯಲು ಹೆಚ್ಚೇನು ಸಂಭಾಷಣೆ ಇರಲಿಲ್ಲ. ಹಾಗಾಗಿ ನಮ್ಮ ನಟನೆಯಿಂದಲೇ ನಾವು ಜನರನ್ನು ಮುಟ್ಟಬೇಕು ಎಂಬ ಅರಿವಿತ್ತು. ನಾಟಕದ ಪೂರ್ವತಯಾರಿಯು ಕಡೆಯ ಹಂತಕ್ಕೆ ಬರುವ ಹೊತ್ತಿಗೆ ನಮ್ಮ ಕೆಲವರ ಸಂಭಾಷಣೆಗಳು ಪ್ರಬಂಧದ ಭಾಷೆಯಿಂದ ಸಂಪೂರ್ಣವಾಗಿ ಆಡು ಮಾತಿಗೆ ಬದಲಾಗಿತ್ತು.

ನಾಟಕದ ದಿನ ಬಂತು, ವೇದಿಕೆ ಹತ್ತಿದ್ದಷ್ಟೇ. ನನ್ನ ಚಿಕ್ಕ ವಯಸ್ಸಿನ ದಿನಗಳನ್ನು ಜ್ಞಾಪಿಸಕೊಳ್ಳಲಿಲ್ಲ, ನೇರ ಚಿಕ್ಕ ವಯಸ್ಸಿಗೇ ಹೋಗಿಬಿಟ್ಟಿದ್ದೆ. ಅಲ್ಲಿ ಇತರ ಪಾತ್ರಧಾರಿಗಳು ನನ್ನ ಸ್ವಂತ ಅಪ್ಪ, ಅಮ್ಮ, ಅಣ್ಣ, ಅಕ್ಕ ಮತ್ತು ಚಿಕ್ಕಪ್ಪರಾಗಿ ಕಂಡರು. ಯಾವುದೇ ನಾಟಕದ ವೀಕ್ಷಕರು ನನ್ನ ಕಣ್ಣಿಗೆ ಕಾಣಲೇ ಇಲ್ಲ. ಆ ಸನ್ನಿವೇಶ ನನ್ನ ಮನೆಯಲ್ಲೇ ನಡೆಯುತ್ತಿದೆ ಎಂದು ಭಾಸವಾಗುತ್ತಿತ್ತು. ಒಂದೆರೆಡು ವಾರಗಳ ಹಿಂದೆ ನಮ್ಮ ಹಳಗನ್ನಡ ತರಗತಿಯಲ್ಲಿ ರಾಮಾಯಣದ ಸುಂದರ ಕಾಂಡವನ್ನು ಓದಿದ್ದೆವು. ಆ ಸುಂದರಕಾಂಡದ ಹನುಮಂತನು ರಾವಣನ ಅಶೋಕವನದಲ್ಲಿದ್ದ ಹಣ್ಣುಗಳನ್ನು ತಿಂದು ಮುಗಿಸಿದ್ದನ್ನು ತಿಳಿಸಿಕೊಟ್ಟಿದ್ದ ಶಾಂತಾ ಅವರ ವಿವರಣೆ ಮನದಲ್ಲಿ



ಅಚ್ಚಾಗಿಬಿಟ್ಟಿತ್ತು. ಬಹುಶಃ ನಾಟಕದಲ್ಲಿ ನಾನು ಮಾವಿನ ಹಣ್ಣು ತಿನ್ನುವಾಗ ಅದೇ ಹನುಮಂತನು ನನ್ನ ಮೇಲೆ ಆವಾಹನೆಯಾಗಿದ್ದನೋ ಗೊತ್ತಿಲ್ಲ. ಪ್ರೇಕ್ಷಕರಿಗೆಲ್ಲಾ ಹೊಟ್ಟೆ ಉರಿ ಬರುವಷ್ಟು ರೀತಿಯಲ್ಲಿ ಹಣ್ಣು ತಿಂದೆನೆಂದು ನನಗೆ ನಂತರವೇ ಗೊತ್ತಾಗಿದ್ದು. ಯಾಕೆಂದರು ತಿಂದವನು ನಾನಲ್ಲ, ಆವಾಹನೆಯಾಗಿದ್ದ ಹನುಮಂತನಲ್ಲವೇ.

ಒಟ್ಟಾರೆ ನಾಟಕ ಪ್ರೇಕ್ಷಕರನ್ನು ಮುಟ್ಟುವಲ್ಲಿ ಯಶಸ್ವಿಯಾಯಿತು. ಅಜ್ಜಿ ಪಾತ್ರದಲ್ಲಿ ನಟಿಸಿ ಉದ್ದುದ್ದನೇ ಸಂಭಾಷಣೆಗಳನ್ನು ಸರಾಗವಾಗಿ ಪ್ರೇಕ್ಷಕರ ಕಡೆಗೆ ಎಸೆದ ಶಾಂತಾ ನಾಗಮಂಗಲ, ನಮ್ಮೆಲ್ಲರ ಮಾರ್ಗದರ್ಶಿ ಧೀರೇಂದ್ರರ ನುರಿತ ಅಭಿನಯ, ತರತರಾವರಿಯ ಮಾವಿನ ಹಣ್ಣುಗಳ ಹೆಸರುಗಳನ್ನು ಮನನ ಮಾಡಿ ಒಂದೇ ಸಂಭಾಷಣೆಯಲ್ಲಿ ಸುಮಾರು ಇಪ್ಪತ್ತು ಮಾವಿನ ತಳಿಗಳ ಹೆಸರನ್ನು ಹೇಳಿ ಜನರ ಮನ ಗೆದ್ದ ಶ್ರೀರಂಗರಾಜನ್,



ಅರವತ್ತರ ಹರೆಯದಲ್ಲಿ ಲಂಗ ದಾವಣಿ ಧರಿಸಿ ಚಿಕ್ಕ ಹುಡುಗಿಯಂತೆ ಕುಣಿದ ರೇಣುಕಾ ಮತ್ತು ಚಿಕ್ಕ ಪಾತ್ರ ಗಳಾದರೂ ಅಭಿನಯದಲ್ಲಿ ಗೆದ್ದ ಶ್ರೀಪ್ರಕಾಶ, ರಾಧಿಕಾ, ಇಜೇರಿ ಈ ಎಲ್ಲರ ಅಭಿನಯ ಹಾಗೂ ಸಂಪೂರ್ಣ ಪಾಲ್ಗೊಳ್ಳುವಿಕೆ ಪ್ರೇಕ್ಷಕರ ಹೊಗಳಿಕೆಗೆ ಪಾತ್ರವಾಯಿತು.

ನಿಮ್ಮ ನಟನೆ ತುಂಬಾ ಚೆನ್ನಾಗಿತ್ತು, ನೀವು ವೇದಿಕೆಯ ಆ ಮೂಲೆಯಿಂದ ಈ ಮೂಲೆಗೆ ಜಿಗಿಯುತ್ತಿದ್ದದ್ದನ್ನು ನೋಡಿದರೆ ನಿಮ್ಮ ವಯಸ್ಸೆಷ್ಟು ಎಂಬ ಅನುಮಾನ ನಮಗೆ ಬಂತು, ಮಾವಿನಹಣ್ಣು ಬೇಕೆಂದು ಹಠ ಮಾಡುವಾಗ ನೀವು ಮುಖದಲ್ಲಿ ತೋರಿಸುತ್ತಿದ್ದ ಭಾವನೆಗಳು ನುರಿತ ನಟನಂತಿತ್ತು – ಹೀಗೆ ಇನ್ನಷ್ಟು ಹೊಗಳಿಕೆಗಳು ನನಗೆ ಬಂದವು. ಆದರೆ ಒಂದು ಗುಟ್ಟು ಹೇಳಲೇಬೇಕು, ನಾನು ನಾಟಕದಲ್ಲಿ ನಟಿಸಲೇ ಇಲ್ಲ, ನನ್ನ ನಾನು ಮರೆತಿದ್ದೆ ಅಷ್ಟೆ. ಮತ್ತೆ ಆ ಚಿಕ್ಕ ವಯಸ್ಸಿನ ದಿನಗಳಿಗೆ ಹೋಗಲು ಪ್ರಯತ್ನಿಸಿ ಯಾಶಸ್ವಿಯಾಗಿದ್ದೆ. ಹೌದು ನನ್ನ ನಾನು ಮರೆತಿದ್ದೆ.

****

ಹಾಸ್ಯ ಲೇಖನ

ಮಾತ್ರೆ – ಮುಚ್ಚಳ

– ಅನ್ನಪೂರ್ಣ ಸುಬ್ಬರಾವ್

ಔಷಧಿ ಮಾತ್ರೆ ಅಂದ್ರೆ ಬೇಡಪ್ಪ ಇದರ ಸಹವಾಸ ಅಂತ ದೂರ ಓಡೋರನ್ನು ನೋಡಿದ್ದೇವೆ. ಮಾತ್ರೆ ನುಂಗಿದ ಹಾಗೇ ನಟಿಸಿ, ಕಿಟಕಿಯಿಂದ ಆಚೆ ಎಸೆಯುವವರನ್ನೂ ನೋಡಿದ್ದೇವೆ. ಆದ್ರೆ ನಮ್ಮ ಮಾವನವರಿಗೆ ಮಾತ್ರ ಔಷಧಿ ಮಾತ್ರೆ ಅಂದ್ರೆ ಅದೇನೋ ಖುಷಿ. ಎಂಥಾ ಕಹಿ ಇದ್ದರೂ, ಒಂದು ಸಾರಿಯಾದರೂ ಮುಖ ಸೊಟ್ಟಗೆ ಮಾಡದೆ ಸಿಹಿ ತಿಂದ ಹಾಗೆ ತಿಂದುಬಿಡ್ತಾ ಇದ್ರು. ಮಧ್ಯರಾತ್ರಿ ಎಬ್ಬಿಸಿ ಮಾವಾ ಮಾತ್ರೆ ಅಂದ್ರೂ ಥಟ್ಟನೆ ಎದ್ದುಕೂತು, ನೀರಿಲ್ಲದೆ ಗಬಕ್ ಅಂತ ಬಾಯಿಗೆ ಹಾಕಿ ನುಂಗಿ ಬಿಡ್ತಿದ್ರು. ಒಂದು ಸಿರಪ್ ಬಾಟೆಲ್ ಎರಡೇ ಸಲಕ್ಕೆ ಕುಡಿದು ಖಾಲಿ ಮಾಡ್ತಾ ಇದ್ರು.

ನನ್ನ ಮದುವೆಯಾದ ಹೊಸದರಲ್ಲಿ ಮನೆಯಲ್ಲಿ ಏನೋ ಸಮಾರಂಭ. ಊಟ ಮುಗಿಸಿ ಎಲ್ಲರೂ ಹಾಲಲ್ಲಿ ಕುಳಿತು ಮಾತುಕತೆಯಲ್ಲಿ ಮಗ್ನರಾಗಿದ್ದರು. ಕೆಲವರು ಹೊಟ್ಟೆ ಭಾರ ಅಂತ ನೆಲದ ಮೇಲೆ ಮಲಗಿ ಅಡ್ಡಾದಿಡ್ಡಿ ಹೊರಳಾಡುತ್ತಿದ್ದರೆ ಇನ್ನು ಕೆಲವರು ಎಲೆ ಅಡಿಕೆ ಜಗಿಯುವುದರಲ್ಲಿ ತಲ್ಲೀನರಾಗಿದ್ದರು. ಅತ್ತೆಯವರಿಗೆ ಓಡಾಟದಲ್ಲಿ ಕಾಲು ನೋವು ಜಾಸ್ತಿ ಆಗಿದ್ದೂ ಗೊತ್ತಾಗಿರಲಿಲ್ಲ. ಬಿಡುವಾಯ್ತು ಅಂತ ಕಾಲುಚಾಚಿ ಕುಳಿತವರಿಗೆ ನೋವು ಎಷ್ಟಿದೆ ಅಂತ ಗೊತ್ತಾಗಿದ್ದೇ ಆಗ. ಮುಖ ಕಿವುಚಿಕೊಂಡು, ಕಾಲು ನೀಡಿಕೊಂಡು, 'ಯಾಕೋ ಸಿಕ್ಕಾಪಟ್ಟೆ ಕಾಲು ನೋವು, ಅಲ್ಲಿರೋ ಆಯಿಂಟ್ಮೆಂಟ್ ಕೊಡಮ್ಮ ಹಚ್ಕೋತೀನಿ' ಅಂದ್ರು. ಸದ್ಯ, ಈಗಲಾದ್ರು ಕಾಲು ನೋಯ್ತಾ ಇದೆ ಅಂತ ಗೊತ್ತಾಯ್ತಲ್ಲ..! 'ನಾನೇ ಹಚ್ತೀನಿ ತಡೀರಿ' ಅಂತ ಆಯಿಂಟ್ಮೆಂಟ್ ತಂದು ಹಚ್ಚಲು ಕುಳಿತೆ. ಆಯಿಂಟ್ಮೆಂಟ್ ಟ್ಯೂಬ್ ನನ್ನ ಕೈಲಿತ್ತು. ಅದರ ಮುಚ್ಚಳ ಕೆಳಗೆ ಬಿದ್ದಿತ್ತು. ಅಲ್ಲ ನಾನೇ ಇಟ್ಟಿದ್ದೆ.

ಮಾವ ಆಚೆಯಿಂದ ಬಂದವರು, 'ಓಹೋ...!! ನೀವೆಲ್ರೂ ಇಲ್ಲಿ ಸೇರಿದ್ದೀರೋ..!!' ಅನ್ನುತ್ತಾ ನಮ್ಮ ಹತ್ತಿರ ಬಂದು ಕುಳಿತರು. ಏನೂ ಮಾತಾಡದೇ ಮೌನವಾಗಿದ್ದರು. ಅವರ ಮನಸಲ್ಲಿ ಏನೋ ಓಡ್ತಾ ಇದೆ. ಏನನ್ನೋ ನೋಡ್ತಾ ಇದ್ದಾರೆ ಅನ್ನುವ ಹಾಗೆ ಮುಖದ ಭಾವ ಗೊತ್ತಾಗ್ತಾ ಇತ್ತು. ಏನೂಂತ ಹೊಳೀಲಿಲ್ಲ. ಸ್ವಲ್ಪ ಹೊತ್ತಿಗೇ ಮಾವ ಎದ್ದು ಹೊರಗಡೆ ಹೋದ್ರು. ಹತ್ತು ನಿಮಿಷ ಆದ್ಮೇಲೆ ಆಯಿಂಟ್ಮೆಂಟ್ ಹಚ್ಚಿ ಮುಗಿಸಿ, ಮುಚ್ಚಳ ಹುಡುಕಿದೆ. ಸಿಗಲಿಲ್ಲ. ಇಲ್ಲೇ ಇಟ್ಟಿದ್ದೆ ಇಷ್ಟು ಬೇಗ ಅದೆಲ್ಲಿ ಹೋಯ್ತು..? ಎಂದು ಗೊಣಗುತ್ತಾ.. ಮೇಲೆದ್ದು ಬಟ್ಟೆಯನ್ನು ಕೊಡವುತ್ತ ಸುತ್ತಲೂ ಹುಡುಕಿದೆ ಇಲ್ಲ. 'ಏನಮ್ಮಾ ಹುಡುಕ್ತೀಯಾ ಅಂದ್ರು' ಅತ್ತೆ.

"ಇದರ ಮುಚ್ಚಳ ಅತ್ತೇ, ಇಲ್ಲೇ ಇಟ್ಟಿದ್ದೆ ಅದೆಷ್ಟು ಬೇಗ ಮಾಯ ಆಗಿದೆ ನೋಡಿ" ಅಂದೆ.

ಅವರಿಗೆ ಏನೋ ಹೊಳೆದಂತಾಗಿ, "ಅದೆಲ್ಲಿ ಮಾಯ ಆಗುತ್ತೆ..! ನಿಮ್ಮಾವನ್ನ ಕರಿ" ಅಂದ್ರು. ಯಾಕತ್ತೆ ಅಂದೆ.?

“ನೀನು ಕರಿ ಹೇಳ್ತೀನಿ. ಮುಚ್ಚಳ ಎಲ್ಲಿ ಅಂತ ಗೊತ್ತಾಗುತ್ತೆ” ಅಂದ್ರು. ನಂಗೆ ಆಶ್ಚರ್ಯ..!! “ಏನತ್ತೆ ನೀವು.. ಅವರಿಗೂ ಮುಚ್ಚಳಕ್ಕೂ ಏನತ್ತೆ...” ಅಂದೆ ರಾಗವಾಗಿ..

“ನೀನು ಕರಿ, ಗೊತ್ತಾಗುತ್ತೆ. ನಿಂಗೂ ಗೊತ್ತಾಗ್ಲಿ ನಿಮ್ಮಾವ ಏನೂ ಅಂತ” ಅಂದ್ರು.

ಆಚೆ ಕೂತಿದ್ರು ಮಾವ. ಅತ್ತೆ ಕರೀತಿದಾರೆ ಬನ್ನಿ ಅಂದೆ.

ಪಾಪ.. !! ಏನೂ ಗೊತ್ತಿಲ್ಲದವರ ಹಾಗೆ ಬಂದು ಮುಂದೆ ನಿಂತ್ರು. ಇಲ್ಲಿದ್ದ ಮುಚ್ಚಳ ಎಲ್ರಿ ಅತ್ತೆ ಕೇಳಿದ್ರು..?

“ಅದಾ... ಅದು .. ಅದೂ..” ಅಂತ ನನ್ನ ಮುಖ ನೋಡಿದ್ರು ಮಾವ.

“ಅವಳ ಮುಖ ಏನ್ ನೋಡ್ತೀರಾ..? ಅವಳಿಗೇನ್ ಗೊತ್ತು. ಇನ್ಮೇಲೆ ಅವಳಿಗೂ ಗೊತ್ತಾಗುತ್ತೆ” ಅಂದ್ರು ಅತ್ತೆ.

“ಏನತ್ತೇ.. ..? ನನಗೇನು ಗೊತ್ತಾಗ್ಬೇಕು..?”

“ನಿಂಗೆ ಗೊತ್ತಾಗ್ಬೇಕು. ಅವರು ಹೇಳಲ್ಲ. ನಾನೇ ಹೇಳ್ತೀನಿ ಕೇಳು. ಅವ್ರಿಗೆ ಮಾತ್ರೆ ಹುಚ್ಚು. ಏನು ಕಂಡ್ರೂ ಆವರ ಕಣ್ಣಿಗೆ ಮಾತ್ರೆ ಥರ ಕಾಣುತ್ತೆ. ಮಾತ್ರೆ ಥರ ಕಾಣೋದೆಲ್ಲ ಇವರ ಹೊಟ್ಟೆ ಸೇರುತ್ತೆ. ನಮ್ಮತ್ರ ಕೂತೋರು, ಅಷ್ಟು ಬೇಗ ಯಾಕೆ ಆಚೆ ಹೋದ್ರು ಹೇಳು..? ನೀನು ಮುಚ್ಚಳ ಹುಡುಕಿದಾಗ್ಲೆ ಅಂದ್ಕೊಂಡೆ. ಹೀಗೇ ಆಗಿರುತ್ತೆ ಅಂತ”.

“ಇನ್ನೂ ಗೊತ್ತಾಗ್ಲಿಲ್ವ..? ಮುಚ್ಚಳ ಇವರ ಹೊಟ್ಟೆ ಸೇರಿದೆ” ಅಂದ್ರು.

“ಏನತ್ತೆ ಹೇಳ್ತಿದ್ದೀರ!” ಅಂದೆ.

“ಇರೋದನ್ನೇ ಹೇಳ್ತಾ ಇದ್ದೀನೆ. ಇವ್ರ ಸ್ವಭಾವ ಗೊತ್ತಿದ್ದೂ ಇಲ್ಲಿ ಬಂದು ಕೂತಾಗ್ಲೆ ನಂಗೆ ಹೊಳಿಬೇಕಿತ್ತು. ಮುಚ್ಚಳ ತೆಗೆದಿಡು ಅಂತ ನಿಂಗೆ ಹೇಳ್ಬೇಕಿತ್ತು. ಇಲ್ಲ ನಾನೇ ತೆಗೆದಿಡ್ಬೇಕಿತ್ತು. ಒಂದು ಕ್ಷಣದಲ್ಲಿ ಮರ್ತೆ ನೋಡು”.
“ಹೋಗ್ಲಿ ಬಿಡಿ ಅತ್ತೇ . ಆವರ ಮುಖ ನೋಡಿ, ಪಾಪ..” ಅಂದೆ.

“ಪಾಪ ಅಂತೆ.. ಹೀಗಾಗಿದ್ದೆ ಒಳ್ಳೇದಾಯ್ತು ಬಿಡು. ನಿಂಗೆ ಅರ್ಥ ಆಯ್ತಲ್ಲ. ಇನ್ಮುಂದೆ ಹೇಳಿಸಿಕೊಳ್ಳೋ ಪ್ರಮೇಯವೇ ಬರಲ್ಲ. ನೀನೇ ಎಚ್ಚರವಾಗಿರ್ತೀಯ”.

“ಇನ್ನೂ ಯಾಕ್ರೀ ಹಾಗೇ ನಿಂತಿದ್ದೀರಾ...! ನಿಮ್ಮ ಸೊಸೆಗೂ ಗೊತ್ತಾಯ್ತಲ್ಲ, ನಿಮ್ಮ ಮಾತ್ರೆ ಪ್ರೀತಿ ಅಂತನಾ..” ಅಂದ್ರು ಅತ್ತೆ.

ನಂಗಂತೂ ಏನು ಹೇಳ್ಬೇಕು ಅಂತ ಗೊತ್ತಾಗ್ಲಿಲ್ಲ. ನನ್ನೆದುರಿಗೆ ಹೀಗಾಗಿದ್ದು ಮಾವನವರಿಗೆ ಮುಜುಗರ ಆಯ್ತೇನೋ ಅಂದ್ಕೊಂಡೆ. ಆದ್ರೆ ಅದ್ಯಾವುದೂ ಅವರ ಮುಖದಲ್ಲಿ ಕಾಣ್ಲಿಲ್ಲ. ಒಂದು ಕಡೆ ನಗು. ಇನ್ನೊಂದು ಕಡೆ ಎಂಥ ಮುಗ್ಧರಪ್ಪ ಇವರು, ಮಕ್ಕಳಿಗೂ ಇವರಿಗೂ ಏನೂ ವ್ಯತ್ಯಾಸವಿಲ್ಲ ಅನ್ನಿಸ್ತು.

"ಮುಚ್ಚಳಕ್ಕೂ ಮಾತ್ರೆಗೂ ವ್ಯತ್ಯಾಸ ಗೊತ್ತಾಗ್ಲಿಲ್ವ ಮಾವ..!! ಯಾಕ್ ಹೀಗ್ ಮಾಡ್ತೀರಾ..?” ಅಂದೆ.

“ಬೆಳ್ಳಗೆ ಮಾತ್ರೆ ಥರ ಇತ್ತಲ್ಲ, ಯಾಕೆ ಇಲ್ಲಿ ಬಿದ್ದಿದೆಯಲ್ಲ ಅಂತ ನುಂಗ್ಬಿಟ್ಟೆ ಕಣಮ್ಮ” ಅಂದ್ರು.

ಅಷ್ಟು ಜನ ಅಲ್ಲಿದ್ರೂ ಯಾರ ಗಮನಕ್ಕೂ ಬಾರದೆ ಅದ್ಯಾವ ಮಾಯದಲ್ಲಿ ನುಂಗಿದ್ರೋ ದೇವರೇ ಬಲ್ಲ..!!

“ಅವನು ನಂಗಿದ್ದು ನೋಡ್ದೆ. ಅದು ಮುಚ್ಚಳ ಅಂತ ನಂಗೆ ಗೊತ್ತಾಗ್ಲಿಲ್ಲ ಕಣಮ್ಮ, ಇಲ್ಲಾಂದ್ರೆ ಆಗ್ಱೇ ಹೇಳ್ತಾ ಇದ್ದೆ” ಅಂದ್ರು ನಮ್ಮ ಚಿಕ್ಕ ಮಾವ.

ನಮ್ಮತ್ತೆಯವರಿಗಂತೂ ಅಷ್ಟು ಜನರ ಮುಂದೆ ಆವರನ್ನು ಏನೂ ಅನ್ನಲಾರದ ಪರಿಸ್ಥಿತಿ. ಆದರೂ ಮಕ್ಕಳನ್ನು ಗದರುವಂತೆ, “ಏನಾಗಿದೆ ನಿಮ್ಗೆ..? ಇದೆಂಥ ಮಾತ್ರೆ ಹುಚ್ಚು ಅಂತೀನಿ. ಕಂಡಿದ್ದೆಲ್ಲ ಮಾತ್ರೆ ಅಂತ ನುಂಗ್ತೀರಲ್ಲ, ಏನಾದ್ರು ಹೆಚ್ಚುಕಮ್ಮಿ ಆದ್ರೆ ಎನ್ಗತಿ..? ಮಾತ್ರೆ ಯಾವ್ದು, ಮುಚ್ಚಳ ಯಾವ್ದು ಅಂತ ಗೊತ್ತಾಗಲ್ವ ನಿಮ್ಗೆ. ತಲೇಲಿ ಅದೇನು ತುಂಬಿದಾನೋ ಆ ದೇವ್ರು.. ಇನ್ನೂ ಏನೇನ್ ನೋಡ್ಬೇಕೋ!” ಅಂತ ಬೇಸರ ಮಾಡ್ಕೊಂಡಿದ್ದು ನೋಡಿ ನಮಗೂ ಬೇಸರವಾಯ್ತು ಒಂದು ಕ್ಷಣ.

“ಅದ್ಯಾಕೆ ಅಷ್ಟು ಬೇಸರ ಮಾಡ್ಕೊತಿಯಾ..? ಏನೂ ಆಗಲ್ಲ.. ಒಂದ್ಸಲ ತಂಬಿಗೆ ತಗೊಂಡು ಹೋಗ್ಬಂದ್ರೆ ಆಚೆ ಹೋಗುತ್ತೆ ಬಿಡು. ಇಷ್ಟು ದಿನ ಇಲ್ದೇ ಇರೋದು ಈಗೇನಾಗುತ್ತೆ...?” ಅಂದ್ರು ಮಾವ ಅಷ್ಟೇ ಸಮಾಧಾನವಾಗಿ.

“ಅಂದ್ರೆ...! ಮುಂಚೆಯಿಂದಲೂ ಇದೇ ಅಭ್ಯಾಸ ಇದೇ ಅಂದಾಯ್ತು. ಇನ್ನೂ ಏನೇನ್ ನುಂಗಿದ್ದೀರಾ..!!” ಅಂತ ಎಲ್ಲರೂ ಹಾಸ್ಯಮಾಡಿ ನಕ್ಕರೆ ಅತ್ತೇ ಮಾತ್ರ ಗಂಭೀರವಾಗಿದ್ರು.

“ಸಾಕ್ರಿ..!! ನಿಮ್ಮಾತಿಗೆ ನಗ್ಬೇಕೊ ಅಳ್ಬೇಕೋ ಒಂದೂ ಗೊತ್ತಾಗಲ್ಲ.. ಮಕ್ಳಾದ್ರು ವಾಸಿ...!!” ಅಂದ್ರು ಬೇಸರದಿಂದ.

ಸಿಕ್ಕ ಸಿಕ್ಕ ಮಾತ್ರೆ, ಮುಚ್ಚಳ ನುಂಗಿದ್ರೂ ಅವರಿಗೆ ಏನೂ ಆಗಿಲ್ಲ. ಆಗದೇ ಇದ್ದದ್ದು ಮಾತ್ರ ಆಶ್ಚರ್ಯ...!!!! ಅಂಥ ಗಟ್ಟಿ ದೇಹ. ಆತ್ತೆಯವರಿಗೆ ಅವರ ಸ್ವಭಾವ ಅನುಭವ ಆಗಿತ್ತು. ಸಮಾಧಾನವಾಗಿದ್ರು. ನನಗೆ ಈ ಮನೆಗೆ ಬಂದ ಕೆಲವೇ ದಿನಗಳಲ್ಲಿ ಮಾವನವರ ಸ್ವಭಾವ ಹೇಗೆ ಎಂದು ಗೊತ್ತಾಗಿಹೋಯ್ತು.

ಆದಿನ ಸಹಜವಾಗಿ ಆತಂಕ ಆಗಿದ್ರೂ, ದಿನಗಳು ಕಳೆದಂತೆ ಅವರು ಸಹಜವಾಗೇ ಇದ್ದದ್ದು ನೋಡಿ ಸಮಾಧಾನ ಆಗಿತ್ತು. ಕ್ರಮೇಣ ನನಗೂ ಅಭ್ಯಾಸ ಆಗಿ, ಮುನ್ನೆಚ್ಚರಿಕೆ ವಹಿಸಿ ಔಷಧಿ ಮಾತ್ರೆ ಅವರಿಂದ ದೂರ ಇರಿಸುವುದೂ ವಾಡಿಕೆಯಾಯ್ತು. ಆದರೆ ಕಣ್ಣಾರೆ ಕಂಡ ಈ ಪ್ರಸಂಗ ಮಾತ್ರ ನೆನಪಾದಾಗಲೆಲ್ಲಾ ನಮಗೇ ಗೊತ್ತಿಲ್ಲದ ಹಾಗೆ ನಗು ತರಿಸುವುದು. .!!!!

ಈ ರೀತಿ ಔಷಧಿ, ಮಾತ್ರೆ ಇಷ್ಟಪಡುವವರು ಇರ್ತಾರಾ ..!! ಇರಲಾರರು ಅಂದ್ಕೊತೀನಿ. ಇದು ಹಾಸ್ಯ ಅನ್ನಿಸಿದರೂ ಅಷ್ಟೇ ಸತ್ಯ ....!!!!!

***

ಮೂಢ ನಂಬಿಕೆ

- ಗಣಪತಿ ಹೆಗಡೆ

'ನಾನು ಮುಂಚೀನೆ ಹೇಳ್ಕೆ. ಗುರು ಹೆಗ್ಡೇರ್ಗೆ ಬೊಕ್ಕೆಕಾಯಿ ಕೊಡೂಕಾಗ ಹೇಳಿ. ಈಗ್ನೋಡಿ. ಕಾಯ್ಹೋಗ್ಲಿ, ಮರಕ್ಮರನೇ ಬೆಂದ್ಹೋಗೀದು. ವಡೀದೀರಿಗೆ ಇದೆಲ್ಲಾ ಅರ್ಥಾಪಕಿಲ್ಲ. ನೋಡಿ, ಇರೂದ್ವಂದೇ ಬೊಕ್ಕೆಮರ ಅಲ್ವ್ರ? ಈಗ್ ಅನ್ಬೋಸ್ಬೇಕು'.

ನಮ್ಮ ಮನೆ ಆಳು ಪರಮು, ಇದನ್ನೆಲ್ಲಾ ನನ್ನಲ್ಲಿ ಹೇಳುವದಿಲ್ಲ. ಹೇಳುವದೇನಿದ್ದರೂ ನನ್ನ ಹೆಂಡತಿಯ ಮುಂದೆ. ಅಲ್ಲಿ ನನ್ನನ್ನು ಕಂಡಿರಬೇಕು ಅಷ್ಟೇ. ಅದು ನನ್ನ ಕುರಿತಾಗಿಯೇ ಅಂತ ನನಗೆ ತಿಳಿಯುವದೇನೂ ಕಷ್ಟವಲ್ಲ.

ಬಹಳ ವರ್ಷಗಳಿಂದ, ನನ್ನ ತಂದೆಯ ಕಾಲದಿಂದಲೂ, ನಮ್ಮ ಮನೆಯ ತೋಟದ ಕೆಲಸ ಮಾಡುತ್ತಿದ್ದಾನೆ ಈ ಪರಮು. ತೋಟ-ಜಮೀನಿನ ಎಷ್ಟೋ ವಿಷಯಗಳು ನನಗೇ ಗುತ್ತಿರುವದಿಲ್ಲ. ಮರಗಿಡಗಳ ಮೇಲೆ ನನಗಿಂತಲೂ ಹೆಚ್ಚಿನ ಕಾಳಜಿ ಅವನಿಗೆ. ಅಡಿಕೆಗೆ ಮದ್ದು ಸಿಂಪರಣೆ ಯಾವಾಗ ಮಾಡಬೇಕು, ಯಾವ ಯಾವ ಮರಗಳಿಗೆ ಕಟ್ಟೆ ಬಂದಿದೆ, ತೋಟಕ್ಕೆ ನೀರು ಹಾಕುವುದು ಯಾವಾಗ, ತೆಂಗಿನ ಕಾಯಿ ಬೆಳೆದಿದೆಯೋ ಹೇಗೆ ಮುಂತಾದ ವಿಷಯಗಳಲ್ಲಿ ಅವನದೇ ನಿರ್ಣಯ.

ಅವನ ಹೇಳಿಕೆ ಹೌದೋ ಅಲ್ಲವೋ, ಅದು ಬೇರೆ ವಿಷಯ. ಆದರೆ ಅವನಿಗಿದ್ದ ಕಾಳಜಿಯ ಕುರಿತಾಗಿನ ಪ್ರಾಮಾಣಿಕತೆ ಇದೆಯಲ್ಲ, ಇದನ್ನು ಪ್ರಶ್ನಿಸುವ ಹಾಗಿಲ್ಲ.

ನಮ್ಮ ಮನೆಯ ಬೇಣದಲ್ಲಿ ಮೂರ್ನಾಲ್ಕು ಹಲಸಿನ ಮರಗಳಿದ್ದರೂ ಬೊಕ್ಕೆ ಮರ ಇದೊಂದೇ ಆಗಿತ್ತು. ಒಂದು ವಾರದ ಹಿಂದೆ, ಮರದ ತುಂಬಾ ಬೊಕ್ಕೆ ಕಾಯಿ ಬಿಟ್ಟಿರುವದನ್ನು ಸಂಭ್ರಮದಿಂದಲೇ ನಮ್ಮಲ್ಲಿ ಹೇಳಿದ್ದನು ಪರಮು. ತಿನ್ನಲು ಹಲಸಿನ ಹಣ್ಣಿಗಿಂತ ಬೊಕ್ಕೆ ಹಣ್ಣು ಜಗಿದು ಆಸ್ವಾದಿಸಲು ಹಿತ ಎನ್ನುವದು ನಮಗೆಲ್ಲಾ ತಿಳಿದ ವಿಷಯವೇ ಆಗಿದೆ. ಮೇಲಾಗಿ ಈ ಮರದ ಹಣ್ಣು ಜೇನಿನ ಹಾಗೆ ರುಚಿಯಾಗಿದೆ ಎನ್ನುವದು ನಮ್ಮ ಕೇರಿಯವರಿಗೂ ಗುತ್ತಿತ್ತು.

ಇದೇ ಕಾರಣಕ್ಕಾಗಿ ನಮ್ಮ ನೆರೆಮನೆಯ ಗುರುನಾಥಣ್ಣ ಎರಡು ಬೊಕ್ಕೆ ಕಾಯಿಗಳನ್ನು, ನನ್ನ ಹೆಂಡತಿಗೆ ಹೇಳಿಯೇ ಕೊಯ್ದುಕೊಂಡು ಹೋಗಿದ್ದನು. ಇದು ಪರಮುವಿಗೆ ಇಷ್ಟವಿರಲಿಲ್ಲ. ಅದಕ್ಕೆ ಅವನದೇ ಆದ ಕಾರಣವಿತ್ತು.

'ಅಬ್ಬೇರೆ, ಗುರ್ಹೆಗ್ಡೇರ ಕಣ್ಣರಿ ಇಲ್ಲ ಹೇಳ್ತೀರು. ಎಲ್ಕಣ್ಬಿದ್ರೂ ಅಲ್ಲೇ ಹುಳ್ಳಾತೀದು. ನಮ್ಕೊಪ್ದ ಜನ ಅವ್ರ ಮನೀಗೆ ತರ್ಕಾರೀನೆ ಕೊಡುದಿಲ್ಲ ಈಗ. ಅವ್ರ್ಮನೀಗೆ ಪಟ್ಲಕಾಯ್ಕೊಟ್ಟು ಅಂಬ್ಕಾರ್ಣಕೇ ಸುಬ್ಬೀಗೆ ಜೋರ್ಮಾಡ್ಯ ಮಾರ್ಬಾವ. ಇನ್ಮೇಣೆ ಏನಾದ್ರೂ ಆದ್ರೆ ನಂಜವಾಬ್ದಾರಿ ಇಲ್ಲ ನೋಡಿ.' ನಮ್ಮ ಮನೆಯಲ್ಲಿ ಒದಗಬಹುದಾದ

ಶುಭಾಶುಭ ಪರಿಣಾಮಗಳಿಗೆ ಅವನೂ ಒಂದು ಜವಾಬ್ದಾರಿ ಮನುಷ್ಯ ಎನ್ನುವ ತಿಳುವಳಿಕೆ ಅವನದು. ಅದರಿಂದ ನನಗೇನೂ ಬೇಸರವಿಲ್ಲ. ಆ ಮಟ್ಟಿಗೆ ನನ್ನ ಜವಾಬ್ದಾರಿ ಕಡಿಮೆಯಾಯಿತು ಅಂತ ತಿಳಿಯುವವ ನಾನು.

ಆದರೆ ನನ್ನ ಹೆಂಡತಿಗೆ ಅವನ ಈ ಮಾತಿನ ಮೇಲೆ ತುಂಬಾ ವಿಶ್ವಾಸ. ನಮ್ಮ ಹಿತ್ತಿಲಿನ ಚಪ್ಪರದ ತುಂಬೆಲ್ಲಾ ಹರಡಿದ್ದ ತೊಂಡೇಕಾಯಿ ಬಳ್ಳಿಯ ಸಮೇತ ಕೊಳೆತು ನೆಲಕಚ್ಚಲು ಗುರುನಾಥಣ್ಣನ ಕಣ್ಣು ಬಿದ್ದಿದ್ದೇ ಕಾರಣ ಅಂತ ಅವಳ ಗಾಢವಾದ ನಂಬಿಕೆ. ಮಳೆ ಬಿದ್ದುದರಿಂದ ಬಳ್ಳಿ ಕೊಳೆತು ಹಣ್ಣುಗಳು ಬಳ್ಳಿಯ ಸಮೇತ ನೆಲಕಚ್ಚಿದ್ದಾವೆ ಅಂತ ನಾನೆಷ್ಟು ಹೇಳಿದರೂ ಅವಳಿಗೆ ವಿಶ್ವಾಸವಿಲ್ಲ. ಅವಳ ಮಾತನ್ನು ಸಮರ್ಥಿಸಲು ಪರಮೂನೂ ಇದ್ದಾನಲ್ಲ. ನಾನು ಒಬ್ಬಂಟಿ.

ಊರಿನಲ್ಲಿ ಗುರುನಾಥಣ್ಣನ ಕಣ್ಣು ಸರಿ ಇಲ್ಲ ಎನ್ನುವ ಪುಕಾರು ಇದ್ದಿದ್ದು ಸುಳ್ಳಲ್ಲ. ಇದೇ ಕಾರಣಕ್ಕೆ ಮನೆಯಲ್ಲಿ ಬೆಳೆದ ತರಕಾರಿಗಳನ್ನೋ, ಹಣ್ಣು ಹಂಪಲುಗಳನ್ನೊ ಅಥವಾ ಮಾಡಿದ ಕಜ್ಜಾಯಗಳನ್ನೋ ಅವರ ಮನೆಗೆ ಕೊಡುವ ಕ್ರಮ ಇಲ್ಲ. ಅವರ ಮನೆಗೆ 'ಕೊಟ್ಟಲ್ಲಿ ಎಲ್ಲಾ ಚಟ್ನಿ' ಎನ್ನುವ ನಂಬುಗೆ ಜಗಜ್ಜಾಹಿರ. ನನಗೇಕೋ ಈ ವಿಷಯದಲ್ಲಿ ಜನರು ಸುಖಾಸುಮ್ಮನೆ ಅವನಿಗೆ ಕೆಟ್ಟ ಹೆಸರನ್ನು ತರುತ್ತಿದ್ದಾರೆ ಅಂತ ಅನಿಸದೇ ಇಲ್ಲ. ಪಾಪ ಸ್ವಲ್ಪ ಹೆಚ್ಚೇ ಎನಿಸುವಷ್ಟು ವಾಚಾಳಿ ಗುರುನಾಥಣ್ಣ. ಯಾರ ಯಾರ ಮನೆಯ ತೋಟದಲ್ಲಿ ಕೊಳೆ ಬಂದಿದೆ, ಅಡಿಕೆ ಕೊಯ್ಲು ತಡವಾದ ತೋಟಗಳು ಯಾವವು, ಕಾಯಿಗೊಯ್ಲು ತಡವಾಗಿ ಕಾಯಿ ಉದುರುತ್ತಿರುವ ತೋಟಗಳು ಯಾವವು, ಯಾರ ಮನೆಯ ಮಾವಿನ ಮರ ಅಥವಾ ಗೇರು ಮರಗಳಿಗೆ ಕಸ್ತ್ರಿ ಬಂದು ಒಣಗಿಯೇ ಬಿದ್ದು ಹೋಗುತ್ತದೆ, ಕೊನೆಗಳನ್ನೋ ಅಥವಾ ಕಾಯಿಗಳನ್ನೋ ಕದ್ದು 'ಕಳ್ಳ ಮಾಲನ್ನು ಖರೀದಿಸುವ ರಾಮು ಅಂಗಡಿಗೆ' ರಾತ್ರಿಯಲ್ಲಿ ಯಾರು ಯಾರು ಸಾಗಿಸುತ್ತಾರೆ, ಇವೆಲ್ಲವುಗಳ ಸವಿವರವಾದ ಪಟ್ಟಿ ಗುರುನಾಥಣ್ಣನಲ್ಲಿ ಉಂಟು. ಇದನ್ನು ಹೇಳಲು ಅವನು ಹಿಂಜರಿಯುವದಿಲ್ಲ. ಆದರೆ 'ಅವನ ಉಸಿರು ತಾಗಿದಲ್ಲಿ ಬಾಳೆಮರವೂ ಒಣಗುತ್ತದೆ' ಎನ್ನುವ ಆಕ್ಷೇಪಗಳನ್ನು ಅವನಲ್ಲಿ ಆರೋಪಿಸಿ ಬಚಾವಾಗುತ್ತಾರೆ ಖದೀಮರು. ಆದುದರಿಂದಲೇ ಅವನ ಮೇಲೆ ಆಕ್ಷೇಪ ಅಂತ ನನ್ನ ಅನಿಸಿಕೆ.

ಆದರೂ ನಮ್ಮ ಮನೆಯ ಬೊಕ್ಕೆ ಮರ ಕಾಯಿ ಸಮೇತ ಒಣಗಿದ್ದನ್ನು ಕೇಳಿದ ನನಗೂ ಬೇಸರವಾಯಿತು. ಹೌದು, ಅದೊಂದು ಉತ್ತಮವಾದ ಬೊಕ್ಕೆಮರ. ನನ್ನ ಅಜ್ಜನ ಕಾಲದಲ್ಲಿಯೇ ಹಣ್ಣು ಬಿಡುತ್ತಿದ್ದವು ಅಂತ ಕೇಳಿದ್ದೇನೆ. ಈಗಂತೂ ಬೆಳೆದ ಮರ. ಮರ ಬೆಳೆದ ಹಾಗೆ ಹಣ್ಣುಗಳೂ ಹೆಚ್ಚು ಹೆಚ್ಚು ರುಚಿಯಾಗಿರುತ್ತೆ ಎನ್ನುತ್ತಾರೆ. ಈ ವಿಷಯ ನನಗಿಂತ ಪರಮುವಿಗೆ ಹೆಚ್ಚು ಗೊತ್ತು. ನಾನು ಆ ಕಡೆ ಹೋಗದೇ ತಿಂಗಳುಗಳೇ ಕಳೆದಿರಬೇಕು. ಅಂತೂ ನಾನೊಮ್ಮೆ ನೋಡಿ ಬರೋಣವೆಂದು ಹೊರಟೆ.

ಸುಮಾರು ನೂರಾರು ಕಾಯಿಗಳು ಮರದ ತುಂಬೆಲ್ಲಾ ಬಿಟ್ಟಿದ್ದವು. ಕಾಯಿಗಳು ಕೊಳೆತು ಉದುರುತ್ತಿರುವದು ಕಂಡು ಕರುಳು ಕಿತ್ತುಬಂದ ಹಾಗಾಯಿತು. ಕೇವಲ ಕಾಯಿಗಳು ಒಣಗಿದ್ದು ಮಾತ್ರವಲ್ಲ, ಮರದ ಎಲೆಗಳೂ ಒಣಗಲು ಶುರು

ಹಚ್ಚಿಕೊಂಡಿದ್ದವು. ಮರ ನಾಶದ ಅಂಚಿನಲ್ಲಿದ್ದ ಹಾಗಿತ್ತು. ನೂರಾರು ವರ್ಷಗಳು ಜೀವಿಸಿದ ಮರ ತನ್ನ ಕೊನೆಯ ದಿನಗಳನ್ನು ಕಂಡುಕೊಳ್ಳುತ್ತಿರುವ ಹಾಗೆ ಅನಿಸಿತು. ಬಹುಶಃ 'ನಾಟಿನ ಕಟ್ಟಿಗೆಗೂ' ಬರಲಿಕ್ಕಿಲ್ಲವೇನೋ?. ಏನಿದ್ದರೂ ಇದು 'ಲುಕ್ಸಾನು ಕಾಲ' ಹೌದು.

ಮೊನ್ನೆ ಗುರುನಾಥಣ್ಣ ಬೊಕ್ಕೆ ಕಾಯಿಗಳನ್ನು ಕೊಯ್ದು ಒಯ್ದಿದ್ದು ನನಗೂ ಗೊತ್ತಿದ್ದ ವಿಷಯವೇ. ಅವನ ತೋಟದ ಪಕ್ಕದಲ್ಲಿಯೇ ನನ್ನ ಬೇಣ. ನಮ್ಮಿಬ್ಬರ ಮನೆಗಳು ಅಕ್ಕಪಕ್ಕವಿದ್ದ ಹಾಗೆಯೇ ಬೇಣ ಹಾಗೂ ತೋಟಗಳೂ ಅಕ್ಕ ಪಕ್ಕದಲ್ಲಿಯೇ. ತೋಟವಾದುದರಿಂದ ಅವನು ಪ್ರತಿದಿನ ತೋಟಕ್ಕೆ ಹೋಗುತ್ತಾನೆ. ನಾನು ಅಪರೂಪಕ್ಕೆ ಹೋಗುವುದು ಅಷ್ಟೇ.

ಮನೆಗೆ ತಿರುಗಿ ಬರುವಾಗ 'ಗುರುನಾಥಣ್ಣೋ' ಹೇಳಿ ಕೂಗಿದರೂ ಅವನು ಇರಲಿಲ್ಲ. ಅವನ ಆಳು 'ವಡೇದೀರು ಮನೆಗೆ ಹೋಗರೆ' ಅಂತ ಹೇಳಿದುದರಿಂದ ನಾನು ಸೀದಾ ಮನೆಗೆ ನಡೆದೆ.

ಬಹುಶಃ ಆಳು ಗುರುನಾಥಣ್ಣನಿಗೆ, ನಾನು ಬೇಣಕ್ಕೆ ಹೋಗಿ ಕರೆದುದನ್ನು ಹೇಳಿರಬೇಕು. ಸಾಯಂಕಾಲವೇ ನಮ್ಮ ಮನೆಗೆ ಬಂದು 'ನೀ ಬೇಣಕ್ಕೆ ಹೋಗಿದ್ಯಡ. ಆಳು ಹೇಳ್ದ. ತಿರ್ಗಿ ನಾ ಬಂದ್ಮೂಡ್ಲೆ ನಿಮ್ಮನೆಗೆ ಬಂದೆ.' ಅಂತ ಬಂದ ಕಾರಣವನ್ನೂ ತಿಳಿಸಿದ ಗುರುನಾಥಣ್ಣ.

'ಗುರು ಬಾವ, ನಮ್ಮನೆ ಪರ್ಮು ಹೇಳ್ದ. ನಮ್ಮನೆ ಬೊಕ್ಕೆ ಮರ್ದಲ್ಲಿ ಬಿಟ್ಟ ಬೊಕ್ಕೇ ಕಾಯೆಲ್ಲಾ ಕೊಳ್ತೋಯಡ. ನೀ ಆದಿನ ಕೊಯ್ಕಂಡ್ಹೋಗಕಾರೆ, 'ಚಲೋ ಇದ್ದಕು, ಬೇಕಾರೆ ಎರ್ಡ ಕಾಯಿ ಇಟ್ಕಳಿ ನಿಂಗ ಹೇಳಿದ್ದೇ ಕಡೆ. ನಂಗಕ್ಕೆ ಮುಂದೆ ಯೋಗಿಲ್ಯಕು', ಒಳಗಿನಿಂದಲೇ ನನ್ನ ಹೆಂಡತಿಯ ಮಾತು ಬಂದಿತು. ಇದರಲ್ಲಿ ಆಳು ಪರಮು ಹೇಳಿದ 'ದೃಷ್ಟಿ ಬಿದ್ದ' ವಿಷಯದ ಸೂಕ್ಷ್ಮ ವಾಸನೆಯನ್ನು ನಾನು ಗುರುತಿಸಿದೆ.

ಗುರುನಾಥಣ್ಣನ ಮುಖ ಸಣ್ಣಗಾಯಿತು. ಇವೆಲ್ಲ ವಿಷಯಗಳು ಅವನಿಗೆ ತಿಳಿಯದ್ದೇನೂ ಅಲ್ಲ. ಆದರೂ ಸಮಾಜದಲ್ಲಿ ಇವೆಲ್ಲಾ ಸಾಮಾನ್ಯ ಅಂತ ಲಘುವಾಗಿ ತೆಗೆದುಕೊಳ್ಳುವ ಪ್ರವೃತ್ತಿ ಅವನದು. ಆದರೆ ನಮ್ಮ ಮನೆಗೆ ಬಂದಾಗಲೇ ನನ್ನ ಹೆಂಡತಿಯಿಂದ ಈ ಮಾತನ್ನು ನಿರೀಕ್ಷಿಸಿರಲಿಲ್ಲ ಅನಿಸುತ್ತದೆ.

'ನೋಡು ವಿಮ್ಲು, ನಿಮ್ಮನೇ ಬೊಕ್ಕೆಮರ ಹಾಳಾಗಿದ್ದು ನಂಗೂ ಗುತ್ತಿದ್ದದ್ದೇಯ. ಅದು ನಂಗೇನು ಕುಶಿ ವಿಷ್ಯವ?. ಅದ್ರ ಸಂಗ್ಡ ನಮ್ಮನೆ ಆರ್ತೆಂಗ್ನಮರ, ಹತ್ ಅಡ್ಕೆ ಮರ ಸುಟ್ಹೋಯು. ಬಾಳೆ ಮರವೇ ಸುಟ್ಟು ಕರ್ದಾಗೋಯು ಅಂದ್ರೆ ನೀನೇ ಲೆಕ್ಕ ಹಾಕು',

ಹೀಗೆ ಹೇಳಿದ ಗುರುನಾಥಣ್ಣ ನನ್ನ ಹತ್ತಿರ ಹೇಳಿದ, 'ಗಪ್ಪಣ್ಣ, ಮೊನ್ನೆ ಗುಡ್ಗು ಸಿಡ್ಲು ಬಂತಲ, ಆಗ ಸಿಡ್ಲಬಿದ್ದು ನಮ್ಮನೆ ತೋಟ್ದ ಮರ, ಮತೆ ನಿಮ್ಮನೆ ಬೊಕ್ಕೆಮರ ಯೆಡ್ರೂ ಸುಟ್ಟಿ ಕರ್ಕ್ಲಾಗೋಯು. ಬೊಕ್ಕೇ ಮರ್ವೂವ ಸಿಡ್ಲೊ್ಡತ್ಕೆ ಸುಟ್ಟೋಯು. ನಿನ್ನೆನೇ ನಂಗುತ್ತಾತು. ನಿಂಗ್ಹೇಳವು ಮಾಡ್ಕಂಡಿದ್ದೆ. ಆದ್ರೆ ಆ ತಲೆಬಿಸೀಲಿ ಯಲ್ಲಾ ಮತೋ್ರತು. ಇವತ್ತು ನೀನು ಆಕಡೆ ಹೋದಂವ ನನ್ನ ಕರ್ದ್ಯಡ. ಅದ್ಕೆ ಕೂಡ್ಲೇ ಬಂದೆ'. ಮತ್ತೆರಡು ಸುದ್ದಿ ಹೇಳಿದ ಗುರುನಾಥಣ್ಣ ತಿರುಗಿ ಹೋದ.

ಮಾರನೇ ದಿನ ಪರ್ಮು ನಮ್ಮ ಮನೆಗೆ ಬಂದಮೇಲೆ ಇದೇ ವಿಷಯವನ್ನು ಗಟ್ಟಿಯಾಗಿಯೇ ಹೇಳಿದೆ.

'ನೋಡು ಪರಮು, ನಾಲ್ಕೈನ್ದ ಹಿಂದೆ ಸಿಡ್ಲ ಬಿದ್ದ ಶಬ್ದ ನೀ ಕೇಳ್ಳಿಲ್ವನ. ಆ ಸಿಡ್ಲಿಂದ್ಲೇ ಗುರ್ಹೆಗಡೇರ ಯಂಟ್ಹತ್ತು ಅಡ್ಕೆಮರ ಮತೆ ತೆಂಗಿನ್ಮರ ಸುಟ್ಹೋಗದ್ಯಂತೆ. ನಮ್ಮನೆ ಬೊಕ್ಕೆ ಮರ ಮತ್ತೆ ಬೊಕ್ಕೆಕಾಯಿ, ಗುರ್ಹೆಗಡೇರ ಕಣ್ಬಿದ್ದೇ ಕೊಳ್ತಹೋಗದೆ ಅಂದ್ಯಲ. ಸುಮ್ನೆ ಅವ್ರಮೇಲೆ ಆಕ್ಷೇಪ ಹೇಳೂಕಾಗ. ತಿಳೀತನ?. ಅದ್ಕೆ ಮೂಢ ನಂಬಿಕೆ ಹೇಳ್ತು. ತಿಳ್ಕ'.

ಪರಮುನ ಹೇಳಿಕೆಯೇ ಬೇರೆ, 'ಗಪ್ಪಡ್ಯ, ನೀವ್ ಶುಮ್ಮುಳೀರಿ. ನಿಮ್ಗುತ್ತಾಗುಕಿಲ್ಲ ಅದೆಲ್ಲವ. ಗುರ್ಹೆಗಡೇರು ಊರಲ್ಲೆಲ್ಲಾ ಕಡೀಗೆ ಕಣ್ಹಾಕಿದ್ರಲ್ರ, ಅದ್ಕೇ ಪರ್ಮಾತ್ಮ ಅವ್ರ ತೋಟಕ್ಕೇ ಕಣ್ಹಾಕಿ ಸುಟ್ಟನೆ ಅಂಬ್ರು ನಮ್ಮೂರ್ಜನ.'

ನಾನು ಇದಕ್ಕೆ ಉತ್ತರಿಸಲು ಹೋಗಲಿಲ್ಲ. ಉತ್ತರಿಸಿದರೆ ಪ್ರಯೋಜನವೂ ಇಲ್ಲ. ಅವರವರ ನಂಬಿಕೆ ಅವರವರಿಗಲ್ಲವೇ?.

ಆದರೆ ನನ್ನಲ್ಲೇ ಪ್ರಶ್ನಿಸಿಕೊಂಡೆ.

'ಹಂಗಾದ್ರೆ ನಮ್ಮ ಮನೆ ಬೊಕ್ಕೆಮರ?.'

***

ರೇಷ್ಮೆ ಕಣದ ಕಥೆ–ವ್ಯಥೆ

– ಎನ್.ವಿ. ರಘುರಾಂ



ಮನೆಯೊಡತಿ ವ್ಯಾನಿಟಿ ಬ್ಯಾಗಿನಿಂದ ನನ್ನನ್ನು ತೆಗೆದು ಗಾಡ್ರೇಜ್ ಅಲ್ಮೇರಾದ ಕೆಳಗಡೆ ಖಾನೆಯಲ್ಲಿ ಇಟ್ಟಾಗ ಸುತ್ತಲೂ ನೋಡಿದೆ. ಅಲ್ಲಿ ನನ್ನ ಅನೇಕ ಅಕ್ಕ, ತಂಗಿಯರಿದ್ದರು. ಹಾಗೆ ನೋಡಿದರೆ ಇದೇನು ನನಗೆ ಹೊಸ ಜಾಗವಲ್ಲ. ಕಳೆದ ಆರು ತಿಂಗಳ ಹಿಂದೆ ಈ ಜಾಗದಲ್ಲೇ ಇದ್ದೆ. ನಂತರ ಬೆಂಗಳೂರು ಸುತ್ತಿಕೊಂಡು ಈಗ ಮತ್ತೆ ಇದೇ ಜಾಗಕ್ಕೆ ಬಂದಿದ್ದೇನೆ. ಬೇರೆಯವರ ಮನೆಗಿಂತ ಈ ಮನೆಯೇ ವಾಸಿ. ಗಾಡ್ರೇಜ್ ಅಲ್ಮೇರಾದಲ್ಲಿ ಸರಿಯಾಗಿ ಒಂದರ ಮೇಲೊಂದರಂತೆ ಇಡುತ್ತಾರೆ. 'ಏನೇ ಹೇಗಿದ್ದೀಯಾ?' ಎಂದು ನನ್ನ ಕೆಳಗೆ ಇದ್ದ 'ಬಿಂಬ' ಕೇಳಿದಳು. 'ಓ, ನಾನು ಚೆನ್ನಾಗಿದ್ದೇನೆ. ನೀನು ಯಾವಾಗ ಇಲ್ಲಿಗೆ ಬಂದೆ?' ಎಂದು ಕೇಳಿದೆ. ಅಷ್ಟರಲ್ಲಿ ಪಕ್ಕದ ಸಾಲಿನವರು 'ತಮ್ಮ ಸವಾರಿ ಎಲ್ಲೆಲ್ಲಿ ಹೋಗಿತ್ತು? ಹೇಳು' ಎನ್ನುತ್ತಾ ಒಟ್ಟಿಗೆ ಬೇಡಿಕೆ ಇಟ್ಟರು. ನಾನು ಚೆನ್ನಾಗಿ ಕಥೆ ಕಟ್ಟುತ್ತೇನೆಂದು ಹೋದಲ್ಲೆಲ್ಲ ಹೇಳುತ್ತಾರೆ. ಈಗ ಮತ್ತೆ ನನ್ನ ಪ್ರವಾಸ ಕಥನ ಪ್ರಾರಂಭ ಮಾಡಿದೆ.

ಹೌದು, ಆ ದಿನ ಗುರುವಾರ. ಸಂಕ್ರಾಂತಿ ಎಳ್ಳು ಕೊಡಲು ಯಜಮಾನಿಯ ಚಿಕ್ಕತ್ತೆ ಬಂದಿದ್ದರು. ಆಗ 'ಏನೂ ತರಲು ಆಗಲಿಲ್ಲ, ತುರ್ತಾಗಿ ಹೊರಟುಬಿಟ್ರೆ' ಎಂದು ಉಪಚರಿಸುತ್ತಾ ನನ್ನನ್ನು ಎಳ್ಳಿನ ಬಟ್ಟಲ ಜೊತೆ ಇಟ್ಟು ಕಳುಹಿಸಿದ್ದರು. ಈ ಸಾರಿ ಸಂಕ್ರಾಂತಿಗೆ ಹೊಸದೇನು ತರೋದು ಬೇಡ, ಇರುವುದರಲ್ಲೇ ಸರಿದೂಗಿಸೋಣ ಎಂದು ನಿರ್ಧಾರ ಮಾಡಿದ್ದು ಎಲ್ಲರಿಗೂ ಹೇಳುವ ಅವಶ್ಯಕತೆ ಆದ್ರು ಏನಿದೆ? ಆ ಚಿಕ್ಕತ್ತೆಯ ಮನೆ ದೂರವೇನೂ ಇರಲಿಲ್ಲ, ಅಲ್ಲೆ ಪಕ್ಕದ ರಾಜಾಜಿನಗರ. ಅವರ ಮನೆ ಊಟದ ಟೇಬಲ್ ಮೇಲೆ ಎರಡು ದಿನ ಇಟ್ಟುಕೊಂಡಿದ್ದರು. ಎರಡು ದಿನ ಆದರೂ ಅವರ ಮನೆಗೆ ಯಾರೂ ಬರಲಿಲ್ಲ! ಕೊನೆಗೆ ನನ್ನನ್ನು ಅವರ ಮನೆ ಅಲ್ಮೇರಾಗೆ ಸೇರಿಸಿದರು. ಅಲ್ಲೂ ನನ್ನ ಅಕ್ಕತಂಗಿಯರು ಬೇಕಾದಷ್ಟು ಜನ ಇದ್ದರು. ಆದರೆ ಅವರು ಪಾಲಿಯಸ್ಟರ್ ಬಟ್ಟೆ, ವಿನ್ಯಾಸಗಳಿರುವ ಬಟ್ಟೆ, ರೇಷ್ಮೆ ಕಣಗಳನ್ನು ಬೇರೆ ಬೇರೆ ಮಾಡಿಟ್ಟಿದ್ದರು. ನಾನು ಮೈ ತುಂಬ ಸಣ್ಣ ಸಣ್ಣ ಹೂವಿನ ಚಿತ್ತಾರ ಇರುವ ರೇಷ್ಮೆ ಕಣ. ಹಾಗಾಗಿ ಸ್ವಲ್ಪನಾದರೂ ಹೋದ ಕಡೆಯಲೆಲ್ಲಾ ಮರ್ಯಾದೆ ಮೇಲೊಂದರಂತೆ ಸಿಗುತ್ತೆ. ಉಳಿದವರೆಲ್ಲಾ ಸ್ವಲ್ಪ ಹೊಟ್ಟೆ ಉರಿದುಕೊಂಡರೂ ತೋರಿಸಿಕೊಳ್ಳದೆ 'ಅಮೇಲ್ ಏನಾಯ್ತು ಹೇಳಕ್ಕ' ಎಂದರು.

ಆ ಯಜಮಾನಿ ಮಧ್ಯೆ, ಮಧ್ಯೆ ಅಲ್ಮೇರಾ ಬಾಗಿಲು ತೆಗೆಯೋರು. ನನ್ನನ್ನು ಕೈಗೆ ತೆಗೆದುಕೊಳ್ಳೋರು, 'ಅಲ್ಲ ಅವ್ಳಿಗೆ ಯಾಕೆ ರೇಷ್ಮೆದು, ಹೋದ ಸಾರಿ ಅವರು ಮನೆಗೆ ಹೋದಾಗ ಅವರೇನು ಕೊಟ್ಟಿರಲಿಲ್ಲವಲ್ಲ' ಎಂದು ಗೊಣಗಿಕೊಳ್ಳುತ್ತಾ, ನನ್ನನ್ನು ಮತ್ತೆ ಅಲ್ಲೆ ಇಟ್ಟು 'ಸಾಕು ಬಿಡು ಇದೇನೆ' ಅಂದುಕೊಳ್ಳುತ್ತಾ ಹಳೆಯ ಪಾಲಿಸ್ಟರ್ 'ಟು

ಬೈ ಟು' ಪೀಸ್ ಎತ್ತಿಕೊಂಡು ಹೋಗುತ್ತಿದ್ದರು. ಅಂತೂ ಒಂದು ತಿಂಗಳು ಆ ಮನೆಯಲ್ಲಿ ಕಾಲ ಕಳೆದ ಮೇಲೆ ಅವರ ಚಿಕ್ಕಮ್ಮ ಜಯನಗರದಿಂದ ಬಂದಿದ್ದರು. ದೊಡ್ಡವರು, ಚಿಕ್ಕಮ್ಮ ಬೇರೆ, ರೇಷ್ಮೆದು ಕೊಡಲೇ ಬೇಕಲ್ಲ. 'ಮೊದಲೇ ಗೊತ್ತಿದ್ದರೆ ಏನಾದ್ರೂ ತರಬಹುದಿತ್ತು' ಎಂದು ಮಾಮೂಲಿ ರಾಗ ಹಾಡುತ್ತಾ ನನ್ನನ್ನು ಅವರಿಗೆ ಕೊಟ್ಟರೆ, ಅವರು 'ಇದೆಲ್ಲಾ ಯಾಕೀಗ' ಎನ್ನುತ್ತಾ ತೆಗೆದು ಕೊಂಡರು. ಎಲ್ಲರ ಮನೆಯಲ್ಲಿ ಇದೇ ಮಾತು! ಅವರು ವ್ಯಾನಿಟಿ ಬ್ಯಾಗ್ ಒಳಗೆ ನನ್ನ ತುರುಕಿ ಇಟ್ಟುಕೊಂಡರು. ನನಗೆ ಅಲ್ಲಿ ವಿಪರೀತ ಸೆಖೆ ಆಗುತ್ತಿತ್ತು. ನೋಡ್ರೆ, ಆಗ ಅವರು ಮನೆಗೆ ಹೋಗಲು ಮೆಟ್ರೋ ಹತ್ತಿದರು. 'ಹೌದು, ಕಣ್ರೋ ನಾನು ಮೆಟ್ರೋದಲ್ಲಿ ತಣ್ಣಗೆ ಪ್ರಯಾಣ ಮಾಡಿದ್ದೇನೆ' ಎಂದು ಸ್ವಲ್ಪ ಜಂಬದ ಪೋಸ್ ಕೊಟ್ಟೆ. 'ಅದೇನು ಭಾರೀ ಬಿಡು, ನಾನು ಬಿ.ಎಂ.ಡಬ್ಲು. ಕಾರಿನಲ್ಲಿ ಹೋಗಿದ್ದೇನೆ' ಎಂದು ಪಕ್ಕದಲ್ಲಿದ್ದ ನನ್ನ ಅಕ್ಕ ಹೇಳಿದಳು. ಭಾರೀ ಬೆಲೆಯ ಮೆಜಂಟಾ ಬಣ್ಣದ, ಮೈಯೆಲ್ಲಾ ಕಸೂತಿ ಮಾಡಿಕ್ಕೊಂಡಿದ್ದ ನನ್ನಕ್ಕ ದೊಡ್ಡ ಮನುಷ್ಯರ ಮನೆಯಿಂದ ಬಂದವಳೆಂದು ಹೊಸದಾಗಿ ಹೇಳಬೇಕಾಗಿಲ್ಲ. ಅವಳ ಹಾವಭಾವ ನೋಡಿದ್ರೆ ತಿಳಿಯುತ್ತೆ! 'ನನ್ನ ಹಳೇ ಯಜಮಾನಿ ಸಾಫ್ಟ್‌ವೇರ್ ಇಂಜಿನಿಯರ್. ಆಕೆ ತನ್ನ ಚಿಕ್ಕಮ್ಮನಿಗೆ ನನ್ನ ಕೊಟ್ಟು ಬೊಮ್ಮನಹಳ್ಳಿಯಿಂದ ಜಯನಗರದ ಅವರ ಮನೆಗೆ ಬಿ.ಎಂ.ಡಬ್ಲ್ಯು. ಕಾರಿನಲ್ಲಿ ಡ್ರಾಪ್ ಮಾಡಿ ಬರಲು ಒಮ್ಮೆ ಕಳುಹಿಸಿದ್ದರು' ಎನ್ನುತ್ತಾ ಮುಖವನ್ನು ಆಗಲ ಮಾಡಿಕೊಂಡು ಹೇಳಿದಳು. ದೊಡ್ಡ ಕಾರಿನಲ್ಲಿ ಪ್ರಯಾಣ ಮಾಡುವುದು ಯಾರಿಗುಂಟು ಯಾರಿಗಿಲ್ಲ! 'ಏನಾದ್ರೆ ಏನು? ಈ ರೀತಿ ಬಂಧಿಯಾಗಿ ಕೂತಿರುವುದು ತಪ್ಪಲ್ಲವಲ್ಲ' ಎಂದು ಇತರರಿಗೆ ಅನಿಸಿದರೂ ಯಾರು ಬಾಯಿಬಿಟ್ಟು ಹೇಳಲಿಲ್ಲ.

ಆದರೆ ನೋಡ್ರೆ, ಈ ಸಾರಿ ಹೊರಗಡೆ ಬರಲು ಜಾಸ್ತಿ ದಿನ ಕಾಯಲಿಲ್ಲ. ಆ ಹೊಸ ಯಜಮಾನಿಗೆ ಸ್ನೇಹಿತರು ಜಾಸ್ತಿ. ಮನೆಯ ಹತ್ತಿರದ ಗಣೇಶನ ದೇವಸ್ಥಾನದಲ್ಲಿ ನಿತ್ಯ ಸಂಜೆ ಹೋಗಿ ಅವರ ಸ್ನೇಹಿತರ ಜೊತೆ ದೇವರನಾಮ ಹೇಳಿ ಬರುತ್ತಿದ್ದರು. ಅಲ್ಲಂತೂ ಅರಿಷಿನ, ಕುಂಕುಮ ಕೊಡಲು ಹಬ್ಬಗಳೇ ಬರಬೇಕೆಂದಿಲ್ಲ. ಶುಕ್ರವಾರ, ಮಂಗಳ ವಾರಗಳೇ ಸಾಕು. ಹಾಗೇ ದೇವಸ್ಥಾನದಲ್ಲಿ ಒಂದು ಶುಕ್ರವಾರ ಅದೇ ಬಡಾವಣೆಯ ಮೂರನೇಯ ಅಡ್ಡರಸ್ತೆಯಲ್ಲಿದ್ದ ಆಕೆಯ ಸ್ನೇಹಿತೆ ದೇವಿಕಾ ಕೈಗೆ ನಾನು ತಲುಪಿದೆ. ಅವರ ಮನೆಯಲ್ಲಿ ಇಂಟೀರಿಯರ್ ಡಿಜೈನರ್ ಮಾಡಿದ ಚಿತ್ತಾರದ ಅಲ್ಮೇರಾಗಳಿದ್ದವು. ಆದರೆ ನನ್ನನ್ನು ಅಲ್ಲಿಡಲಿಲ್ಲ, ಮಂಚದ ಕೆಳಗಿಂದ ಒಂದು ಹಳೇ ಸೂಟ್‌ಕೇಸ್ ತೆಗೆದು ಅಲ್ಲಿ ಕಟ್ಟಿಟ್ಟಿದ್ದ ಹಳೆಯ ಟವಲ್ ಬಿಚ್ಚಿದರು. ಅಲ್ಲಿ ನನ್ನ ಅಕ್ಕ ತಂಗಿಯರ ಜೊತೆ ನನ್ನನ್ನು ಸೇರಿಸಿ, ಮತ್ತೆ ಟವಲ್ ಕಟ್ಟಿ, ಸೂಟ್ ಕೇಸ್ ಮಂಚದ ಕೆಳಗೆ ದೂಡಿದರು. ಮತ್ತೆ ಕತ್ತಲಮನೆ ವಾಸ ಪ್ರಾರಂಭವಾಯಿತು ಎಂದು ನಕ್ಕೆ. ಆ ದಿನ ಯಜಮಾನಿ ಹಳೇ ಸೂಟ್ ಕೇಸ್ ನಿಧಾನವಾಗಿ ತೆಗೆದಿದ್ದು ನೋಡಿದರೆ ಬಹಳವೇ ಸಮಾಧಾನದಿಂದ ಇದ್ದರೆಂದು ಹೇಳಬಹುದು. ಟವಲ್ ಗಂಟು ಬಿಚ್ಚಿ, ಎಲ್ಲಾ ಬ್ಲೌಸ್ ಪೀಸ್ ನೋಡಲು ಪ್ರಾರಂಭ ಮಾಡಿದರು. ಏಳು



ಬೇರೆ ಬೇರೆ ಬಣ್ಣದ ಚಿತ್ತಾರಗಳಿಲ್ಲದ ರೇಷ್ಮೆ ಕಣಗಳನ್ನು ತೆಗೆದುಕೊಂಡರು. 'ಏ ಆಶಾ, ಬಾ ಇಲ್ಲಿ' ಎಂದು ಮಗಳಿಗೆ ಕರೆದರು. 'ನೋಡು, ಈ ತರಹ ಜೋಡಿಸಿ ಮಗು ನವ್ಯ ಪುಟ್ಟಿಗೆ ಲಂಗ ಹೊಲಿಸು. ಚೆನ್ನಾಗಿ ಕಾಣುತ್ತೆ' ಎಂದರು. ಒಂದೇಸಾರಿಗೆ ಏಳು ಕಣಗಳಿಗೆ ಮುಕ್ತಿ ದೊರೆಯಿತು. ಅದನ್ನು ಕೇಳಿ ನಮಗೂ ಯಾವಾಗಲಾದರೂ ಮುಕ್ತಿ ಸಿಗುತ್ತದೆಂಬ ಆಶಾಭಾವನೆ ಮೂಡಿತು. ಹೊರಟವರಿಗೆ ಬೈ ಬೈ ಹೇಳಿದೆವು. ಒಂದು ನಿಮಿಷದ ನಂತರ 'ಮುಂದೇನಾಯ್ತು ಹೇಳಕ್ಕ' ಪಕ್ಕದ ಸಾಲಿನಲ್ಲಿದ್ದ ನನ್ನ ತಂಗಿ ಕೇಳಿದಳು.

'ನಾಳೆನೇ ನನ್ನ ಮಗಳ ಸೀಮಂತ, ಖಂಡಿತ ಬರಬೇಕು' ಎಂದು ಮೂರು ಮನೆ ಆ ಕಡೆಯಿದ್ದ ಸರೋಜಮ್ಮ ಕರೆಯಲು ಬಂದಿದ್ದರು. ಈ ಮೂರನೇಯ ಅಡ್ಡ ರಸ್ತೆಯಲ್ಲಿ ಇಪ್ಪತ್ತು ವರ್ಷದಿಂದ ಒಟ್ಟಿಗೆ ಇರುವವರು. ಹಾಗಾಗಿ ಕೈಬೀಸಿಕೊಂಡು ಹೋಗಲು ಆಗುತ್ತದೆಯೇ? ಬಸುರಿಗೆ ಕೊಡಲು ಹಣ್ಣು ಮತ್ತು ಸಿಹಿ ಪದಾರ್ಥ ಇರುವ ತಟ್ಟೆಯಲ್ಲಿ ನನ್ನನ್ನು ಇಟ್ಟರು. ನಾನು ಸರೋಜಮ್ಮನ ಮನೆ ಸೇರಿದೆ. ಬಸುರಿ ಹೆಂಗಸು ಎಂದು ನೋಡಲು ಯಾರಾದ್ರು ಬರುವುದು ಇದ್ದಿದ್ದೆ. ಹಾಗಾಗಿ ಒಂದೇ ವಾರದಲ್ಲಿ ಅವರು ಮನೆಯಿಂದ ಜಯನಗರಕ್ಕೆ ಅವರ ದೊಡ್ಡಮ್ಮನ ಮನೆಗೆ ಹೋಗಿ, ಅವರ ಹಳೆಯ ಟ್ರಂಕಿನಲ್ಲಿ ಮಂಚದ ಕೆಳಗೆ ಸೇರಿಕೊಂಡೆ.

ಅಲ್ಲೂ ಜಾಸ್ತಿ ದಿನ ಇರಲಿಲ್ಲ. ಅವರ ಸೊಸೆ ಅಮೇರಿಕಾದಿಂದ ಮೂರು ತಿಂಗಳ ಮೊಮ್ಮಗಳನ್ನು ಎತ್ತಿಕೊಂಡು ಬಂದಳು. ಈಗ ಇವರಿಗೆಲ್ಲಾ ಶಾಸ್ತ್ರ ಮಾಡುವ ಆತುರ. ತೊಟ್ಟಿಲು ಹಾಕುವ ಶಾಸ್ತ್ರದಿಂದ ಹಿಡಿದು, ನಾಮಕರಣ, ಅನ್ನಪ್ರಾಶನ ಇನ್ನೂ ಏನೇನು ಇದೆಯೋ ಅದೆಲ್ಲ ಮಾಡಲು ತಯಾರಿ ನಡೆಯಿತು. ಆಗ ತೊಟ್ಟಿಲಿಗೆ ರೇಷ್ಮೆ ಸೀರೆ ಕಟ್ಟಿದ್ದರು. ತೊಟ್ಟಲಿನಲ್ಲಿದ್ದ ಮೆತ್ತನೆಯ ಹಾಸಿಗೆ ಮೇಲೆ ನನ್ನನ್ನು ಹಾಕಿದರು. ನಾನು ಎಲ್ಲಾ ಫೋಟೋದಲ್ಲಿ ಮಿಂಚಿದ್ದೇ, ಮಿಂಚಿದ್ದು. ಈಗೆಲ್ಲಾ ಮಕ್ಕಳಿಗೆ ಹಗ್ಗೀಸ್ ಹಾಕಿರುತ್ತಾರೆ. ಹಾಗಾಗಿ ನಾನೇನು ಒದ್ದೆಯಾಗಲಿಲ್ಲ! ಎಷ್ಟು ಚೆಂದದ ದಿವಸವದು! ಬಹಳವೇ ಸಂತೋಷಪಟ್ಟೆ. ಆದರೆ ನಂತರ ರಾತ್ರಿಗೆ ಮತ್ತೆ ಕತ್ತಲೆ ಗೂಡು ಸೇರಿದೆ.

ಸಣ್ಣ ಮಗು ನೋಡಲು ಬರುವವರು ಇದ್ದೇ ಇರುತ್ತಾರೆ. ಹಾಗಾಗಿ ಅಲ್ಲಿಂದ ಎರಡೇ ದಿನದಲ್ಲಿ ಮಗು ನೋಡಲು ಬಂದಿದ್ದ ಸೊಸೆಯ ಸ್ನೇಹಿತೆಯ ಮನೆಗೆ ವರ್ಗಾವಣೆಯಾದೆ. ಆಕೆ ಈ ಕಾಲದ ಹುಡುಗಿ. ಆಕೆ ಸೀರೆ ಉಡುವುದು ಎಥಿನಿಕ್ ಡೇ, ವರಮಹಾಲಕ್ಷ್ಮೀ ವ್ರತ, ಗೌರಿ ಹಬ್ಬಗಳಲ್ಲಿ ಮಾತ್ರ. ಆದರೂ ಬೇಕಾದಷ್ಟು ಸೀರೆಗಳು ಅವಳ ಬಳಿಯಿದ್ದವು. ನನ್ನನ್ನು ಎಲ್ಲಾ ಸೀರೆಗಳ ಪಕ್ಕ ಇಟ್ಟು ಮ್ಯಾಚ್ ಆಗುತ್ತಾ ಎಂದು ಪರಿಶೀಲಿಸಲು ಪ್ರಾರಂಭ ಮಾಡಿದಳು. ಈ ಹೊಸ ಕಾಲದವರು ಅದೇ ಬಣ್ಣ ಇರಬೇಕೆಂದು ಬಯಸಲ್ಲ. ಕಾಂಟ್ರಾಸ್ಟ್ ಕಲರ್ ಕೂಡ ಇವರು ಟ್ರೈ ಮಾಡುತ್ತಾರೆ. ಹಾಗಾಗಿ ಬೇಗ ಮುಕ್ತಿ ಸಿಗುತ್ತೆ ಎಂದು ಖುಷಿ ಆಯಿತು. 'ಜ್ಯೋತಿ ಬೋಟಿಕ್'ಗೆ ನನ್ನನ್ನು ಸೀರೆ ಜೊತೆಯಲ್ಲಿ ತೆಗೆದುಕೊಂಡು ಹೋದಳು. 'ನೋಡಿ, ರೌಂಡ್ ನೆಕ್, ಕೋಲ್ಡ್ ಶೋಲ್ಡರ್, ಅರ್ಧ ತೋಳು, ಲೋ ಬ್ಯಾಕ್...' ಎಲ್ಲಾ ಮಾತನಾಡಿದ ಮೇಲೆ, ಹೊಲಿಗೆ ದರ ಸಾವಿರದ ನಾನೂರು ಎಂದು ಟೈಲರ್ ಅಲ್ಲಾ ವಿನ್ಯಾಸಕಾರ ಹೇಳಿದಾಗ ಆಕೆ ಯೋಚನೆ ಮಾಡುತ್ತಾ ನಿಂತಳು. 'ನನ್ನ ಫ್ಯಾನ್ಸಿ ಸೀರೆಗೆ ಆನ್ಲೈನ್ನಲ್ಲಿ ರಿಯಾಯಿತಿ



ದರವಿದ್ದಾಗ ಆರು ನೂರು ಕೊಟ್ಟು ತೆಗೆದುಕೊಂಡಿದ್ದು. ಈಗ ಅದರ ದುಪ್ಪಟ್ಟಿಗಿಂತ ಹೆಚ್ಚು ಬ್ಲೌಸ್ ಹೊಲಿಯಲು ಕೊಡೋದಾ? ಮಿಶೋದಲ್ಲಿ ರೆಡಿಮೇಡ್ ಬ್ಲೌಸ್ ಮುನ್ನೂರು ರೂಪಾಯಿಗೆ ಒಳ್ಳೆದೇ ಸಿಗುತ್ತೆ' ಎಂದುಕೊಂಡು 'ಇನ್ನೊಮ್ಮೆ ಬೇರೆ ಕಣ ತರುತ್ತೇನೆ' ಎಂದು ಟೈಲರ್‌ಗೆ ಸುಳ್ಳು ಹೇಳಿ ನನ್ನನ್ನು ಮತ್ತೆ ಬ್ಯಾಗಿಗೆ ತುರುಕಿ ಕೊಂಡಾಗ, ಸುಂದರ ಬ್ಲೌಸ್ ಆಗುವೆನೆಂದು ಉಬ್ಬಿದ್ದ ನಾನು ಟಪ್ ಎಂದು ಒಡೆದ ಬಲೂನಿನಂತೆ ಆಗಿದ್ದೆ.

ಅಲ್ಲಿಂದ ಒಂದು ವಾರದಲ್ಲೇ ಆಕೆಯ ಮದುವೆ ನಿಶ್ಚಯವಾಯಿತು. ಅಮೇರಿಕಾದ ಗಂಡು. ಆತನಿಗೆ ಇನ್ನು ಎರಡು ವಾರ ಮಾತ್ರ ರಜವಿದೆ. ತುರಾತುರಿಯಲ್ಲಿ ಮದುವೆಯ ತಯಾರಿ ನಡೆಯಲು ಪ್ರಾರಂಭವಾಯಿತು. 'ಹುಡುಗಿ ಬಟ್ಟೆಗಳ ಜೊತೆ ಉಳಿದುಕೊಂಡರೆ ನಾನು ಅಮೆರೀಕಾಗೆ ಹೋಗಬಹುದಾ' ಅಂದುಕೊಂಡಾಗ ಒಮ್ಮೆ ಮೈ ಜುಮ್ ಎಂದಿತು. ನಾನು ಅಮೇರಿಕಾದ ಕನಸು ಕಾಣುವುದರೊಳಗೆ 'ಅಮ್ಮಾ, ಇದೆಲ್ಲಾ ಇಟ್ಟುಕೊಂಡು ನಾನೇನು ಮಾಡ್ಲಿ, ತೊಗೋ' ಎನ್ನುತ್ತಾ ನನ್ನನ್ನು ಇತರ ನಾಲ್ಕೈದು ಕಣಗಳ ಜೊತೆ ಅವರ ಅಮ್ಮನಿಗೆ ಕೊಟ್ಟಳು. ಆಗ ನಾವೆಲ್ಲಾ ಮದುವೆ ಮನೆ ಸೇರಿದೆವು. ಹೊಸದಾಗಿ ತಂದಿದ್ದ ಒಂದಿಷ್ಟು ಕಣಗಳ ಜೊತೆ ನಮ್ಮನ್ನು ಸೇರಿಸಿದರು. ಅಲ್ಲಿ ನೋಡಿ ಸಾವಿತ್ರಮ್ಮ ಬಂದಿದ್ದರು. ಹುಡುಗನ ಅಪ್ಪ, ಸಾವಿತ್ರಮ್ಮನ ಯಜಮಾನರು ಸಹೋದ್ಯೋಗಿಗಳಂತೆ. ಮೊದಲೆಲ್ಲಾ 'ಆಮೇಲೆ ಕುಂಕುಮ ಇಟ್ಟುಕೊಂಡು ಹೋಗಿ' ಎಂದು ಹೇಳಿ, ಊಟವಾದ ಮೇಲೆ ಕುಂಕುಮ ಕೊಟ್ಟು ಕೆಲವರಿಗೆ ಬ್ಲೌಸ್ ಪೀಸ್, ಇನ್ನು ಕೆಲವರಿಗೆ ಸೀರೆ, ಮನೆಯವರು ಯಾರಾದ್ರು ಕೊಡುತ್ತಿದ್ದರು. ಈಗ ಊಟಕ್ಕೆ ಕೂತಾಗ ಅಲ್ಲೇ ಎಲ್ಲರಿಗೂ ನೀಟಾಗಿ ಸೀರೆ ಉಟ್ಟುಕೊಂಡು ಬಂದ ಕಂಟ್ರಾಕ್ಟರ್ ಕಡೆಯವರು ಬ್ಲೌಸ್ಪೀಸ್ ಎಡಗೈ ಮೇಲೆ ಇಡುತ್ತಾ ಹೋಗುತ್ತಾರೆ. ಆಗ ನಾನು ಸಾವಿತ್ರಮ್ಮನ ಎಡಕೈಗೆ ಸಿಕ್ಕಿ ಮಂಜುನಾಥನಗರಕ್ಕೆ ಬಂದೆ. ಕಥೆ ಹೇಳುವುದನ್ನು ನಿಲ್ಲಿಸಿ, ಒಮ್ಮೆ ಎಲ್ಲರ ಮುಖ ನೋಡಿದೆ. ಎಲ್ಲರೂ ಕುತೂಹಲದಿಂದ ನನ್ನ ಮುಖವನ್ನೇ ನೋಡುತ್ತಿದ್ದರು. ನಾನು ಕಥೆ ಮುಂದುವರೆಸಿದೆ.

ಆ ದಿನ ಸಾವಿತ್ರಮ್ಮನ ಮನೆಯ ಬೀರುವಿನ ಬಾಗಿಲು ಮತ್ತೆ ತೆರೆಯಿತು. ಪ್ರತಿ ಬಾರಿ ಅಲ್ಮೇರಾ ಬಾಗಿಲು ತೆಗೆದಾಗ ಎಲ್ಲರಿಗೂ ಕಾತರದ ಕ್ಷಣಗಳು ಎದುರಾಗುತ್ತವೆ. 'ಬಂದಿರುವುದು ದೊಡ್ಡ ನಾದಿನಿ, ಅವರಿಗೇನು ಕೊಡೋದು? ಅವರ ಮನೆಗೆ ಹೋದಾಗ ಏನಾದ್ರು ಕೊಟ್ಟೆ ಕೊಡುತ್ತಾರೆ' ಎನ್ನುತ್ತಾ ಯಜಮಾನಿ ಮೇಲಿನ ಸಾಲಿನಿಂದ ಒಂದು ಒಳ್ಳೆಯ ಸೀರೆ ತೆಗೆದುಕೊಂಡರು. 'ಅದರಲ್ಲೇ ಬ್ಲೌಸ್ ಬಟ್ಟೆ ಇರುತ್ತೆ, ಆದ್ರೂ ಅವರು ಸಂಪ್ರದಾಯಸ್ಥರು, ಒಂದು ಸೀರೆ ಮಾತ್ರ ಕೊಡಬಾರದು' ಎಂದುಕೊಳ್ಳುತ್ತಾ ಹೆಚ್ಚು ಕಡಿಮೆ ಅದೇ ಬಣ್ಣದ ಪಾಲಿಯಸ್ಟರ್ ಪೀಸೊಂದನ್ನು ಹುಡುಕಿ ತೆಗೆದು, ಆ ಸೀರೆಯ ಜೊತೆಗೆ ಇಟ್ಟುಕೊಂಡರು. ಮತ್ತೇನು ಅನಿಸಿತೋ, ಪಾಲಿಯಸ್ಟರ್ ಪೀಸ್ ತೆಗೆದಿಟ್ಟು, ನನ್ನನ್ನು

ಸೀರೆಯ ಜೊತೆಗೆ ಕಾಣುವಂತೆ ಇಟ್ಟು ಅವರಿಗೆ ಕೊಟ್ಟರು. ನಾನು ಅವರ ದೊಡ್ಡ ನಾದಿನಿ ಭಾಮಮಣಿಯ ಮಲ್ಲೇಶ್ವರದ ಮನೆ ಸೇರಿದೆ.

ಮಾರನೇ ದಿನವೇ ಅಲ್ಮೇರಾದಲ್ಲಿ ಕುಳಿತ ನಮಗೂ ಅವರ ಮನೆಯವರು ಬಿಕ್ಕಿ ಬಿಕ್ಕಿ ಅಳುವ ಶಬ್ದ ಕೇಳುತ್ತಿತ್ತು. ಈಗ ನಮಗೂ ಯಾವ ಶಬ್ದ ಬಂದರೆ ಏನಾಗಿದೆ ಎಂದು ತಿಳಿಯುತ್ತದೆ. ಇನ್ನು ಹತ್ತು ದಿನ ಯಾರು ಅಲ್ಮೇರಾ ಕಡೆ ಬರಲ್ಲ ಎಂದು ಗೊತ್ತು. ನಾವು ಬೇಸರದಿಂದಲೇ ಮಲಗಿಕೊಂಡೆವು.

ಹದಿನಾಲ್ಕನೆಯ ದಿನ ಭಾಮಮಣಿ ಅವರ ಅತ್ತೆಯ ವೈಕುಂಠ ಸಮಾರಾಧನೆಗೆ ನಮ್ಮನ್ನು ಕರೆದುಕೊಂಡು ಹೋದರು. ಹೊಸದಾಗಿ ತಂದಿದ್ದ ಒಂದಿಷ್ಟು ಕಣಗಳ ಜೊತೆ ನಮ್ಮನ್ನು ಇಟ್ಟರು. ಮುತ್ತೈದೆ ಸಾವು. ಬಂದ ಎಲ್ಲ ಮುತ್ತೈದೆಯರಿಗೆ ಗೋಪುರ ಕಂಪನಿಯ ಅರಿಷಿಣ, ಕುಂಕುಮದ ಚೀಟಿಗಳ ಜೊತೆ ನಾನು ಈ ಯಜಮಾನಿಯ ಕೈಗೆ ಮತ್ತೆ ವಾಪಾಸು ಬಂದೆ. ಇವರು ಭಾಮಮಣಿ ಮಾವನ ಮಗಳಂತೆ ಎನ್ನುತ್ತಾ ನಿಟ್ಟುಸಿರು ಬಿಟ್ಟೆ.

ಇನ್ನೊಂದು ತಿಂಗಳು ಆಷಾಢ ಮಾಸ. ಹಾಗಾಗಿ ಜಾಸ್ತಿ ಓಡಾಟ ಇರಲ್ಲ. ಭೀಮನ ಅಮಾವಾಸ್ಯೆಯಿಂದ ಪ್ರಾರಂಭವಾದರೆ ದೀಪಾವಳಿ ಮುಗಿಯುವ ತನಕ ನಾವು ನಿರಂತರ ಓಡಾಡಬೇಕು. ಈಗ ವಿಶ್ರಾಂತಿ ತೆಗೆದುಕೊಳ್ಳಿ ಎಂದೆ. ಈ ಮಧ್ಯದಲ್ಲಿ ನಮಗೆ ಯಾರಾದ್ರು ಕಣದಿಂದ ಕುಪ್ಪಸಕ್ಕೆ ಬಡ್ತಿ ಕೊಡಬಹುದು ಎಂಬ ಆಶಾಭಾವನೆಯಿಂದ ನಿದ್ದೆಗೆ ಜಾರಿದೆ.

***

ಅಮ್ಮ ಬರೆದ ಪುಟಗಳು

– ವೆಂಕಟೇಶ ಕಾಮತ್



ತಾಯಿ ಶಾಲಿನಿ ಕಾಮತ್ ಅವರೊಂದಿಗೆ ಲೇಖಕರು

ನನ್ನ ಪ್ರೀತಿಯ ಅಮ್ಮ ಶಾಲಿನಿ ಕಾಮತ್ ಮೊನ್ನೆ ಶನಿವಾರ ತಾ॥ 01.06.2024ರ ಮಧ್ಯಾಹ್ನ ನಮ್ಮನ್ನೆಲ್ಲ ಬಿಟ್ಟು ಹೊರಟೇಹೋದರು. ಅವರು ಕಲಿತದ್ದು ಅಂದಿನ ಏಳನೆಯ ತರಗತಿಯವರೆಗೇ ಆದರೂ ಅವರು ಚಿಕ್ಕಂದಿನಿಂದಲೇ ಓದುವುದು ಬರೆಯುವುದನ್ನು ಒಂದು ಹವ್ಯಾಸವಾಗಿ ಬೆಳೆಸಿಕೊಂಡಿದ್ದರು. ಶಿವರಾಮ ಕಾರಂತ, ಭೈರಪ್ಪ ಅವರ ಮೆಚ್ಚಿನ ಲೇಖಕರು. ಇತ್ತೀಚಿನ ನಮ್ಮವರೇ ಆದ ಶ್ರವಣಕುಮಾರಿ ಹಾಗೂ ನನ್ನ ಆಪ್ತಮಿತ್ರರಾದ ರಮೇಶ್ ಭಟ್ ಬೆಳಗೋಡುರವರ ಕಥಾ ಸಂಕಲನಗಳನ್ನು ಓದಿ ಮೆಚ್ಚಿದ್ದರು. ಅವರು ಪ್ರತಿವರುಷದ ಕೊನೆಯ ವಾರದಲ್ಲೇ ಒಂದು ಡೈರಿ ತರಿಸಿ ಮೊದಲ ದಿನದಿಂದ ನಿತ್ಯ ದಿನಚರಿ ಬರೆಯುವವರು. ನನಗೆ ಶನಿವಾರ ಹಾಗೂ ಭಾನುವಾರಕ್ಕೂ ಫುಲ್ ಹಾಳೆ ಇರುವ ಡೈರಿ ತರಲು ಹೇಳುವರು. 'ಮತ್ತೆ ನಮ್ಮಲ್ಲಿ ಶನಿವಾರ ಭಾನುವಾರ ಕಾರ್ಯಕ್ರಮಗಳು ಹೆಚ್ಚು ಹೆಚ್ಚು, ಮತ್ತೆ ಈ ಡೈರಿಯವರು ಬಹಳೆಡೆ ಅರ್ಧ ಪುಟ ಕೊಟ್ಟಿರುತ್ತಾರೆ. ಸರೀ ನೋಡಿ ತರಬೇಕು' ಅನ್ನುವರು.

ಅವರು ಎರಡು ಪ್ರವಾಸ ಲೇಖನದ ಪುಸ್ತಕ ಪ್ರಕಟಿಸಿದ್ದಾರೆ. ಈಗ ಅಲ್ಲಲ್ಲಿ ಅವರು ಬರೆದ ಹಲವು ಪುಟಗಳು ನನಗೆ ದೊರೆತು ನಾನು ಅವುಗಳನ್ನು ಒಂದೆಡೆ ಇಟ್ಟಿರುವೆ. ಅದರಲ್ಲಿ ಕೆಲವು ಇಲ್ಲಿವೆ:

1. ನೋವಿನ ಪುರಾಣ

ಬೆಂಗಳೂರಿಗೆ ಹೋದಾಗೊಮ್ಮೆ, ಬ್ಯಾಂಕ್ ಅಧಿಕಾರಿಯಾಗಿದ್ದು ವಿ ಆರ್ ಎಸ್ ತೆಗೆದುಕೊಂಡು ಮನೆಯಲ್ಲಿಯೇ ಇದ್ದ ತಮ್ಮನ ಹೆಂಡತಿಗೆ ಹೇಳಿದೆ. "ಇಂತವರ ಮನೆಗೊಮ್ಮೆ ಹೋಗಿ ಬರೋಣವೇ, ತುಂಬಾ ಸಮಯವಾಯಿತು ಅವರನ್ನು ನೋಡದೆ" ಅಂದೆ. "ಅಯ್ಯೋ ಅವರನ್ನೇನು ನೋಡುವುದು? ನಿಮ್ಮ ಮುಖ ನೋಡುತ್ತಲೇ ಅವರು ತಮ್ಮ ನೋವುಗಳ ಪುರಾಣ ಶುರುಮಾಡುತ್ತಾರೆ, ಮತ್ತೆ ಬೇರೆ ವಿಷಯವೇ ಅವರ ಹತ್ತಿರ ಇಲ್ಲಾ" ಅಂದಳು. "ಅದಕ್ಕೆ ಮದ್ದು ನನ್ನ ಹತ್ತಿರ ಇದೆ ನೀನೇನೂ ಹೆದರಬೇಡ ಹೋಗಿ ಬರೋಣ" ಅಂದೆ. ಹೋದಾಗ ಅವಳು ಹೇಳಿದ ಹಾಗೆ "ಹೇಗಿದ್ದೀರಿ? ತುಂಬಾ ಸಮಯವಾಯಿತಲ್ಲವೇ ನಾವು ಭೇಟಿಯಾಗಿ? ಅಂದಕೂಡಲೇ ಶುರು ಮಾಡಿದರು.

"ಅದೇನು ಕೇಳುತ್ತಿ? ನನಗೆ ಕಾಲು ನೋವಿಂದ ನಡೆಯಲಿಕ್ಕೆ ಕಷ್ಟ, ಕೈ ನೋವಿಂದ ಸೊಳ್ಳೆ ಕೂಡ ಹೊಡೆಯಲಿಕ್ಕೆ ಆಗುವುದಿಲ್ಲಾ, ಸೊಂಟ ನೋವು..." ಎಂದು ಹೇಳಲಿಕ್ಕೆ ಶುರುಮಾಡಿದರು.



ಅರ್ಧದಲ್ಲೇ ಅವರ ಮಾತನ್ನು ತಡೆದು, "ನೋಡಿ ನಾನು ಬಂದಿದ್ದು ನಿಮ್ಮನ್ನ ನೋಡಿ, ಮಾತಾಡಿ ಬಾಲ್ಯದ ನೆನಪು ಮಾಡಿಕೊಂಡು ಸಂತೋಷವಾಗಿ ಕೆಲವು ಗಳಿಗೆ ನಿಮ್ಮೊಡನೆ ಕಳೆದು ಹೋಗೋಣವೆಂದು. ನೋವುಗಳು ಎಲ್ಲರಿಗೂ ಇದ್ದದ್ದೇ, ನನಗೂ ನಿಮ್ಮಷ್ಟೇ ಇವೆ ಮತ್ತು ನಮಗಿಂತ ಎಷ್ಟೋ ವರುಷ ಕಿರಿಯರಾದ ನಿಮ್ಮ ಸೊಸೆ ಮತ್ತು ನನ್ನ ಸೊಸೆ ನಮಗಿಂತ ಹೆಚ್ಚು ಕುಂಟುತ್ತಾರೆ. 99% ಜನರಿಗೆ, ಅದರಲ್ಲೂ ಹೆಂಗಸರಿಗೆ ನನ್ನ ನಿಮ್ಮಂತೆ ಧಡೂತಿ ದೇಹದವರಿಗೆ ಇಂಥ ನೋವುಗಳು ಸಾಮಾನ್ಯ. ಈ ನೋವುಗಳು ಇನ್ನು ನಾವು ಇರುವವರೆಗೆ ನಮ್ಮನ್ನು ಬಿಟ್ಟು ಹೋಗುವಂತಹವಲ್ಲಾ. ಬೇಕಾದಷ್ಟು ತಪಾಸಣೆ, ಮದ್ದು ಮಸಾಜು ಎಲ್ಲಾ ಮಾಡಿಸಿಕೊಂಡು ಮತ್ತೂ ಇರುವ ನೋವಿನೊಟ್ಟಿಗೆ ಬದುಕಲಿಕ್ಕೆ ಕಲಿತರೆ ಅದರೊಡನೆ ರಾಜಿ ಮಾಡಿಕೊಂಡು, ಬೇರೆಯವರಿಗೆ ಕಿರಿಕಿರಿಯಾಗದಂತೆ ನಾವೂ ಬದುಕಿ, ಉಳಿದವರಿಗೂ ಸ್ವಲ್ಪ ಹಾಯಾಗಿ ಬದುಕಲಿಕ್ಕೆ ಅವಕಾಶವಿದೆ. ಇಲ್ಲದಿದ್ದರೆ 'ನಿತ್ಯ ಸಾಯುವವರಿಗೆ ಅಳುವವರ್ಯಾರು' ಎಂಬ ಗಾದೆ ಮಾತಿದೆ ಗೊತ್ತಲ್ಲವೇ? ನೀವು ನಿಮ್ಮ ನೋವುಗಳನ್ನು ಹೇಳಲಿಕ್ಕೆ ಶುರುಮಾಡಿದ ಕೂಡಲೇ ಎದುರಿಗಿದ್ದು ಕೇಳುವವರು ತಕ್ಷಣ ತಮ್ಮ ನೋವುಗಳನ್ನು ಹೇಳಲಿಕ್ಕೆ ಶುರು ಮಾಡುತ್ತಾರೆ. ಅವರು ಹೋಗುವವರೆಗೆ ಬೇರೇನೂ ಮಾತಾಡಲಿಕ್ಕೆ ಸಿಗದೇ ಬರೀ ನೋವಿನ ಪುರಾಣವೇ ಆಗುತ್ತದೆ ಮಾತ್ರವಲ್ಲಾ, ಇನ್ನೊಮ್ಮೆ ನಿಮ್ಮನ್ನು ನೋಡಲಿಕ್ಕೆ ಬರುವ ಧೈರ್ಯ ಅವರು ಮಾಡುವುದಿಲ್ಲಾ. ಅದಕ್ಕಿಂತ ಯಾರಾದರೂ ಬಂದಾಗ, 'ಚೆನ್ನಾಗಿದ್ದೇನೆ, ನೀವು ಹೇಗಿದ್ದೀರಿ? ನಿಮ್ಮ ಮಕ್ಕಳು, ಮೊಮ್ಮಕ್ಕಳು ಹೇಗಿದ್ದಾರೆ? ಏನು ಮಾಡುತ್ತಿದ್ದಾರೆ?' ಎಂದೆಲ್ಲಾ ಕೇಳಿ ಅವರಿಗೂ ಸಂತೋಷವಾಗಿ ನಿಮಗೂ ಕೆಲವು ಗಳಿಗೆ ನೋವು ಮರೆತು ಸಂತೋಷವಾಗಿರಲಿಕ್ಕೆ ಪ್ರಯತ್ನ ಮಾಡಿ. ಇನ್ನೊಂದು ಗಾದೆ ಇದೆ. 'ಎಲ್ಲರಿಗೂ ಹುಚ್ಚು, ನನಗೆ ಸ್ವಲ್ಪ ಹೆಚ್ಚು' ಎಂದು. ಇದನ್ನು ಮನಸ್ಸಲ್ಲಿ ಇಟ್ಟುಕೊಳ್ಳಿ" ಅಂದೆ. ಬಂದವರು ಇವರು ಹೇಳಿದ್ದನ್ನು ಒಮ್ಮೆ ಮಾತ್ರ ಕೇಳುವುದು. ಆದರೆ ಮನೆಯಲ್ಲೇ ಇರುವ ಇತರರು ಅದೇ ನೋವಿನ ಪುರಾಣ 105 ಸಲ ಕೇಳುವುದೇನೋ? "ನನಗೆ ನೋವು ಎಂದು ಹೇಳಿದರೆ ಇಲ್ಲಿ ಯಾರೂ ಕಿವಿಗೆ ಹಾಕಿಕೊಳ್ಳುವುದೇ ಇಲ್ಲಾ, ಅಸಡ್ಡೆ ಮಾಡುತ್ತಾರೆ" ಎನ್ನುವ ದೂರೂ ಇಂತವರನ್ನು ನೋಡಲಿಕ್ಕೆ ಹೋದವರು ಕೇಳಬೇಕಾಗುವುದು ಸಾಮಾನ್ಯ.

2. ಸರ್ ಮಿರ್ಜಾ ಇಸ್ಮಾಯಿಲ್


ಸರ್ ಮಿರ್ಜಾ ಇಸ್ಮಾಯಿಲ್ ಮೈಸೂರು ಸಂಸ್ಥಾನದ "ದಿವಾನ"ರಾಗಿದ್ದಾಗ ನಡೆದ ಕಥೆ. ಅವರು ಸ್ವತಃ ಜಮಾಬಂದಿಗೆ ಹೋಗಿ ಪ್ರಜೆಗಳ ಕಷ್ಟ ಸುಖ ವಿಚಾರಿಸಿ ತಕ್ಷಣ ತಕ್ಕ ಪರಿಹಾರಕ್ಕೆ ಕೆಳಗಿನ ಅಧಿಕಾರಿಗಳಿಗೆ ಅಪ್ಪಣೆ ಕೊಡುವುದು ಅವರ ರೀತಿಯಾಗಿತ್ತು. ಹೀಗೆ ಒಮ್ಮೆ ಒಂದೂರಿನಲ್ಲಿ ಅವರು ಬರುವ ಕಾರ್ಯಕ್ರಮವಿರುವುದನ್ನು ತಿಳಿದು ಜನರು ತಮ್ಮ ಅಹವಾಲು ಹೇಳಿಕೊಳ್ಳಲು ಕಾಯುತ್ತಿದ್ದರು. ಸ್ವಲ್ಪವೇ ದೂರದಲ್ಲಿರುವ ಕಟ್ಟೆಯೊಂದರ ಮೇಲೆ ವೃದ್ಧ ಬ್ರಾಹ್ಮಣ

ದಂಪತಿಗಳಿಬ್ಬರೂ ಕೂತು ಖಾವಂದರ ನಿರೀಕ್ಷೆಯಲ್ಲಿದ್ದರು. ದಿವಾನರು ಬಂದು ಸೇರಿದ ಜನರನ್ನೆಲ್ಲಾ ವಿಚಾರಿಸಿ ಅವರ ದೂರು, ಬೇಡಿಕೆ ಎಲ್ಲವನ್ನೂ ಕೇಳಿ ಜನರೆಲ್ಲಾ ಚದುರಿದ ನಂತರ ಕಡೆಯದಾಗಿ ಕಟ್ಟೆಯಲ್ಲಿ ಕುಳಿತು ತನ್ನನ್ನೇ ನೋಡುತ್ತಿದ್ದ ದಂಪತಿಗಳನ್ನು ನೋಡಿದರು. ತಾವೇ ಎದ್ದು ಅವರು ಕುಳಿತಲ್ಲಿಗೆ ಹೋಗಿ, "ಏನು ಸ್ವಾಮಿ? ತಾವು ಯಾರು? ನನ್ನಿಂದ ತಮಗೆ ಏನಾಗಬೇಕು? ಅಪ್ಪಣೆ ಕೊಡಿ" ಅಂದರು. ತುಂಬಾ ಬಳಲಿದಂತಿದ್ದ ವೃದ್ದರು ಬಾಯಿ ತೆರೆದು. ಖಾವಂದರೆ, ನಾನು ಇಲ್ಲಿಯ ಶಾಲೆಯಲ್ಲಿ ಸಂಸ್ಕೃತ, ಕನ್ನಡ ಕಲಿಸುತ್ತಿದ್ದ "ಶಾಸ್ತ್ರಿ". ನಿವೃತ್ತನಾಗಿ ಬಹಳ ವರುಷಗಳಾದವು ನನಗೆ ಈಗ ಏನೂ ಸಂಪಾದನೆ ಇಲ್ಲಾ, ದಯವಿಟ್ಟು ನನಗೆ ನಿವೃತ್ತಿ ವೇತನ 'ಪಿಂಚಣಿ' ಕೊಡಿಸಿಕೊಡಬೇಕಾಗಿ ವಿನಂತಿಸಲು ಬಂದಿದ್ದೇನೆ" ಅಂದರು. ದಿವಾನರು "ಶಾಸ್ತ್ರಿಗಳೇ, ನಿಮಗೆ ಮಕ್ಕಳಿಲ್ಲವೇ? ಮಕ್ಕಳಿದ್ದವರಿಗೆ ಪಿಂಚಣಿ ಕೊಡುವ ಕಾಯಿದೆ ಇಲ್ಲವಲ್ಲಾ" ಅಂದರು. ಆಗ ಆ ವೃದ್ಧ ಶಾಸ್ತ್ರಿಗಳು "ಮಹಾಸ್ವಾಮಿ, ನಮಗೆ ಹತ್ತು ಜನ ಮಕ್ಕಳಿದ್ದಾರೆ. ಆದರೆ ನಾನು ದುಡಿಯುತ್ತಿದ್ದಾಗ, ಆ ಹತ್ತು ಜನ ಮಕ್ಕಳನ್ನೂ ಓದಿಸಿ ಮುಂಜಿ ಮದುವೆ ಮಾಡಿಸಿ ಉದ್ಯೋಗ ದೊರಕಿಸಿ ಕೊಟ್ಟು ನನ್ನಿಂದಾದಷ್ಟು ಚೆನ್ನಾಗಿ ಸಾಕಿ ಸಲಹಿದ್ದೇನೆ, ಈಗ ಎಲ್ಲರೂ ತಮ್ಮ ತಮ್ಮ ಸಂಸಾರವನ್ನು ನೋಡಿಕೊಂಡು ತಮ್ಮ ಪಾಡಿಗೆ ತಾವಿದ್ದಾರೆ. ನಮ್ಮನ್ನು ನೋಡಿಕೊಳ್ಳುವರು ಮಾತ್ರ ಯಾರೂ ಇಲ್ಲಾ. ತಂದೆ ತಾಯಿಯರಿಗೆ ಹತ್ತು ಜನ ಮಕ್ಕಳಿದ್ದರೂ ಭಾರವೆನಿಸುವುದಿಲ್ಲಾ.. ಆದರೆ ಅದೇ ಹತ್ತು ಜನ ಮಕ್ಕಳಿಗೆ ತಂದೆ ತಾಯಿ ಇಬ್ಬರೂ ಭಾರವಾಗುತ್ತಾರೆ. ನಮ್ಮಿಬ್ಬರ ಅಗತ್ಯದ ಖರ್ಚಿಗೆ ನಾಲ್ಕು ಆಣೆ ಬೇಕೆಂದರೂ ನಾವು ಈ ಮಕ್ಕಳಲ್ಲಿ ಬೇಡಿದರೂ ಕೊಡುವವರಿಲ್ಲಾ. ಆದುದ್ದರಿಂದ ಸ್ವಾಮೀ, ದಯವಿಟ್ಟು ನನಗೆ ಪಿಂಚಣಿ ಕೊಡಿಸಿದರೆ ಇನ್ನುಳಿದ ಆಯುಷ್ಯವನ್ನೆಲ್ಲಾ ತಮ್ಮ ಹೆಸರು ಹೇಳಿ ಬದುಕುತ್ತೇವೆ" ಅಂದರು. ದಿವಾನರಿಗೆ ಈ ಮಾತು ನಿಜವೆನಿಸಿತು. ಶಾಸ್ತ್ರಿಗಳಂತಹ ಇನ್ನೂ ಅನೇಕ ವೃದ್ಧರಿಗೆ, ನಿವೃತ್ತ ಉಪಾಧ್ಯಾಯರಿಗೆ ಪಿಂಚಣಿ ಜಾರಿಗೊಳಿಸಿದರು. ಸರ್ ಮಿರ್ಜಾ ಇಸ್ಮಾಯಿಲರ ಅಧಿಕಾರಾವಧಿಯಲ್ಲಿ, ಅವರು ಮೈಸೂರು ಸಂಸ್ಥಾನವನ್ನು ಅಭಿವೃದ್ಧಿಯ ಪಥದಲ್ಲಿ ಮುನ್ನಡೆಸಿ ಪ್ರಜೆಗಳ ಸುಖ ಸಂತೋಷದ ಜೀವನಕ್ಕೆ ತಮ್ಮಿಂದಾದಷ್ಟು ಅನುವು ಮಾಡಿಕೊಟ್ಟು ಮೈಸೂರಿನ ಚರಿತ್ರೆಯಲ್ಲಿ ತಮ್ಮ ಹೆಸರನ್ನು ಅಜರಾಮರವಾಗಿಸಿದರು.

3. ಕೊಡುವುದನ್ನು ಬದುಕಿದ್ದಾಗಲೇ ಕೊಡು

ರಾಜನೊಬ್ಬ ಅರಮನೆಯ ಅಂಗಳದೊಳಗೆ 'ಗೋ ಪೂಜೆ' ಮಾಡುತ್ತಿದ್ದ. ನೋಡುತ್ತಾ ನಿಂತಿದ್ದ ಹಂದಿಯೊಂದು ರಾಜನೊಡನೆ, "ಎಲೈ ರಾಜನೇ.. ನೀನು ದಿನಾಲೂ ಹಸು ಮತ್ತು ಕರುವನ್ನು ಪೂಜಿಸುತ್ತಿ. ನನ್ನನ್ನೂ ಪೂಜೆ ಮಾಡು" ಅಂದಿತು. ರಾಜ ಒಪ್ಪಲಿಲ್ಲ. ಹಠ ಹಿಡಿದ ಆ ಹಂದಿ, "ರಾಜನೇ ನಿನಗೆ ದಿನಾಲೂ ಅಡುಗೆಗೆ, ತಿನ್ನಲಿಕ್ಕೆ ನನ್ನ ಮಾಂಸವೇ ಬೇಕು. ಹಸುವಿನ ಮಾಂಸ ನೀನು ತಿನ್ನೋದಿಲ್ಲ, ಪೂಜೆ ಮಾತ್ರ ಅದಕ್ಕೆ ಮಾಡುತ್ತಿ. ನನ್ನನ್ನು ಪೂಜೆ ಮಾಡು" ಅಂದಿತು. ಆಗ ರಾಜ "ಎಲೈ ಹಂದಿಯೇ, ಹಸು ಜೀವವಿರುವಾಗಲೇ ತನ್ನ ಕರುವಿಗೆ ಕುಡಿಯಲು ಕೊಡುವ ಹಾಲನ್ನೇ ನನಗೂ ಕುಡಿಯಲು ಕೊಡುತ್ತದೆ, ನೀನು ಬದುಕಿರುವಾಗ ನನಗೆ ಏನು ಕೊಡುತ್ತಿ? ನಿನ್ನನ್ನು ಕೊಂದು ನಂತರ ನಾವು ನಿನ್ನ ಮಾಂಸ ತಿನ್ನುವುದು. ಅದನ್ನು ನೀನು ಕೊಡುವುದಲ್ಲ. ಕೊಡುವುದೇನಿದ್ದರೂ ಬದುಕಿರುವಾಗ ಕೊಟ್ಟಿದ್ದು ಮಾತ್ರ. ಸತ್ತ ನಂತರ ನಿನ್ನ ಮಾಂಸ ನೀನು ಕೊಡುವುದಲ್ಲ, ಅದನ್ನು ನಾವೇ

ಅಮ್ಮನ ಕೈ ಬರಹ



ತೆಗೆದುಕೊಳ್ಳುವುದು. ಸತ್ತ ನಂತರ ನಿನ್ನ ಇಚ್ಛೆ ಏನೂ ಇಲ್ಲ. ಇತರರು ಕಿತ್ತುಕೊಂಡದ್ದು ನೀನು ಕೊಟ್ಟ ಹಾಗಲ್ಲವಲ್ಲ" ಅಂದ ರಾಜ ಸಾಂಗವಾಗಿ ಪೂಜೆ ಮುಗಿಸಿದ.

ಈ ಕಥೆಯನ್ನು ಓದಿದ ನಂತರ ಕೆಲವರಿಗೆಲ್ಲ ಮುಖ್ಯವಾಗಿ ವಯಸ್ಸಾದವರಿಗೆ ನಾನು ಈ ಕಥೆ ಹೇಳಿದ್ದೆ. ಈ ಕಥೆ ಕೇಳಿದವರ ಪ್ರತಿಕ್ರಿಯೆ ಹೀಗೆ ಇದ್ದವು:

ಒಬ್ಬರು: "ಈಗಲೇ ಎಲ್ಲವನ್ನು ಹಂಚಿಕೊಟ್ಟು ಕೈ ಖಾಲಿಮಾಡಿ ಕೂತು ನನಗೆ ಬೇಕಾದಾಗ ಬೇರೆಯವರಲ್ಲಿ ಬೇಡಬೇಕೆ?"

ಇನ್ನೊಬ್ಬರು: "ನನಗೆ ನನ್ನ ಗಂಡ ಈ ವಜ್ರದ ನೆಕ್ಲೆಸ್ ಮಾಡಿಕೊಡುವಾಗ, 'ನನಗೆ ಏನಾದರೂ ಆಗಿ ನಾನು ಸತ್ತರೆ ನಿನ್ನ ಹತ್ತಿರ ಇರುವ ಒಡವೆ ವಜ್ರದ ನೆಕ್ಲೆಸಿಗಾಗಿ ಆದರೂ ಸೊಸೆಯರು ನಿನ್ನನ್ನು ನೋಡಿಕೊಂಡಾರು, ದುಡ್ಡು ಬಂಗಾರ ಎಲ್ಲಾ ಜೋಪಾನವಾಗಿಡು' ಅಂದಿದ್ದಾರೆ. ಈಗ ಜೀವವಿರುವಾಗಲೇ ಅವರಿಗೆಲ್ಲ ಕೊಟ್ಟುಬಿಟ್ಟರೆ ಮತ್ತೆ ಅವರು ನನ್ನನ್ನು ನೋಡಿಕೊಳ್ಳುವರೇ?"

ಮತ್ತೊಬ್ಬರು: "ನೀನು ಹೇಳಿದ ಕಥೆ ಸರಿ ಅಂದದ್ದು ಮಾತ್ರವಲ್ಲ, ತನ್ನ ನಿತ್ಯದ ಅವಶ್ಯಕತೆಗೆ ಬೇಕಾದ ಧಾರೆಮಣಿ, ಮಂಗಳಸೂತ್ರ. ಎರಡು ಜೊತೆ ಬಳೆಗಳು ಇಷ್ಟು ಮಾತ್ರ ಇಟ್ಟುಕೊಂಡು ಉಳಿದುದ್ದನ್ನೆಲ್ಲ ತನ್ನ ಮಕ್ಕಳಲ್ಲಿ ಯಾರಿಗೆ ಏನು ಕೊಡಬೇಕೆಂದು ಮನಸ್ಥಿತಿ, ಮನಸ್ಸು ಇತ್ತೋ ಹಾಗೆ ಹಂಚಿಕೊಟ್ಟು ಎಲ್ಲ ಮಕ್ಕಳು ಒಟ್ಟಿಗೆ ಸೇರಿದಾಗಲೊಮ್ಮೆ, ತನ್ನ ನಂತರ ತನ್ನ ಮೈ ಮೇಲಿರುವ ಒಡವೆಗಳಲ್ಲಿ ತನ್ನನ್ನು ಕಡೆಗಾಲದಲ್ಲಿ ನೋಡಿಕೊಂಡವರಿಗೆ, ತನ್ನ ಕೆಲಸ ಮಾಡಿದವರಿಗೆ ಏನೇನು ಕೊಡಬೇಕೆಂದು ಹೇಳಿ ಒಂದು ದಿನ ಸುಖವಾದ ಮುತ್ತೈದೆ ಸಾವು ಸತ್ತರು. ಆದರೆ ಎಲ್ಲರಿಗೂ ಅಂತ ಸಾವು ಸಿಗುವುದೇ ಇಲ್ಲ. ಸಾಯುವವರೆಗೆ ಬದುಕಲೇಬೇಕಲ್ಲವೇ? ಅತ್ತೆ ಸಾಯುವಾಗ 90–95 ವರ್ಷವಾದರೆ ಆಗ ಸೊಸೆಗೂ 65–70 ವರ್ಷವಾದೀತು, ಆಗ ಅತ್ತೆಯ ಒಡವೆಗಳು ಸೊಸೆಗೆ ಬೇಕೆ?"

***

ಸೈಕಲಿನಿಂದ ಸೈಕಲ್ಲಿಗಾಗಿ

– ಶಾಂತಿವಾಸು

ಅರ್ಧ ಗಂಟೆಗೆ ಐದು ನಿಮಿಷ ಇರುವಾಗಲೇ ಬ್ರೇಕ್ ಇಲ್ಲದ ಸೈಕಲ್ಲಿಗೆ ಐವತ್ತು ಪೈಸಾ ವಸೂಲಿ ಮಾಡುತ್ತಿದ್ದ ರಾಘವೇಂದ್ರ ಸೈಕಲ್ ಶಾಪಿನ ಕಪ್ಪು ಮನುಷ್ಯ ಅದೆಷ್ಟು ಮಕ್ಕಳ ಹಾಗೂ ಪೋಷಕರ ಶಾಪ ಪಡೆದಿದ್ದರೋ? ವಯಸ್ಸಾಗಿದೆ. ಇನ್ನೂ ಚೆನ್ನಾಗಿದ್ದಾರೆ. ಇದು ಅದೊಂದು ಕಾಲದಲ್ಲಿ ನಾನು ಸೈಕಲ್ ಕಲಿತ ಕಥೆ.

ಒಮ್ಮೆ ಕೆಂಪು ಸೈಕಲ್ ಹತ್ತಿ ಸುಬ್ರಹ್ಮಣ್ಯ ನಗರದ ಮುಖ್ಯ ರಸ್ತೆಯಲ್ಲಿ ಹೋಗುತ್ತಿದ್ದೆ. ಅದು ಇಳಿಜಾರು ರಸ್ತೆ. ಎದುರಿನಿಂದ ಲಾರಿಯೊಂದು ಉಬ್ಬಸಪಟ್ಟು ಹತ್ತುತ್ತಿದೆ. ಸುಮ್ಮನೆ ಎಡಕ್ಕೆ ಹೋಗಿದ್ದರೆ ಏನೂ ಆಗುತ್ತಿರಲಿಲ್ಲ. ಧಡೂತಿ ವಾಹನ ಬಂದು ನನಗೆ ಡಿಕ್ಕಿ ಹೊಡೆದೇ ಹೊಡೀತದೆ ಅಂತ ಕಲ್ಪನೆ ಮಾಡಿಕೊಂಡು ತಪ್ಪಿಸಿಕೊಳ್ಳುವ ಬೇರೆ ಉಪಾಯವೂ ಹೊಳೆಯದೆ, ಬಲಕ್ಕೆ ಹ್ಯಾಂಡಲ್ ತಿರುಗಿಸಿದೆ. ವಯಸ್ಸು ಇನ್ನೂ ಏಳೋ ಎಂಟೋ ಇರಬಹುದು. ನೆನಪಿರಲಿ. ಆಗಿನ್ನೂ ಸೈಕಲ್ ಕಲಿಯುತ್ತಿದ್ದೆ.

ಪುಣ್ಯಾತ್ಮ ಎಂಥಾ ಸೈಕಲ್ ಕೊಟ್ಟಿದ್ದ ಅಂದ್ರೆ, ಕಾಲಿಗೆ ಪೆಡಲ್ ತುಳಿಯೋ ಕೆಲಸ ಇಲ್ಲ. ಕೈಗೆ ಬ್ರೇಕ್ ಹಾಕೋ ಕೆಲಸಾನೂ ಇಲ್ಲ. ಸೈಕಲ್ ತಾನಾಗಿ ಎಲ್ಲಿಗೆ ಹೋಗುತ್ತೋ ಅಲ್ಲಿಗೇ ನಾನು ಹೋಗಬೇಕಾಗಿತ್ತು. ಆಗ ನನಗೆ ಅಂತಹ ಬ್ರೇಕಿಲ್ಲದ, ಪೆಡಲ್ಲಿಗೆ ಸರಪಳಿಯೂ ನೆಟ್ಟಗಿಲ್ಲದ ಸೈಕಲ್ಲಿನಿಂದ ಆಗಬಹುದಾದ ಅನಾಹುತದ ಅರಿವಿಲ್ಲ. ಒಟ್ನೂ ಸೈಕಲ್ ಬೇಕು ಅನ್ನೋ ನಶೆ ಅಷ್ಟೇ. ಹೌದ್ರಿ ನನಗೆ ಅದೊಂದು ನಶೆ. ಇರಲಿ. ಅಂಥಾ ಡಕೋಟಾ ಸೈಕಲ್ ಹತ್ತಿ ನೇರ ಹೋಗಿದ್ದರೆ ಗ್ಯಾರಂಟಿ ಲಾರಿ ಕೆಳಗೆ ನುಗ್ಗಿ ಜಜ್ಜಿ ಹೋಗುತ್ತಿದ್ದೆ. ಅದೇನು ಹೊಳೆಯಿತೋ ಎರಡು ಕಾಲುಗಳನ್ನೂ ಪೆಡಲ್ ಮೇಲಿಂದ ತೆಗೆದು ದೂರ ದೂರ ಇಟ್ಟುಕೊಂಡು ಸ್ಟೈಲಾಗಿ ಬಲಕ್ಕೆ ತಿರುಗಿಸಿದ್ದೆ. ಅಷ್ಟೇ. ಸೊಯ್ ಅಂತ ರಭಸದಿಂದ ನುಗ್ಗಿದ ಸೈಕಲ್ ಲಾರಿಗೆ ಒಂದೆರಡೇ ಅಡಿ ಹತ್ತಿರದಿಂದ ಪಕ್ಕಕ್ಕೆ ಚಲಿಸಿ ಪಕ್ಕದಲ್ಲಿದ್ದ ಮೋರಿಯಲ್ಲಿ ಬೀಳಿಸಿತ್ತು. ನನ್ನ ಮೇಲೆ ತಾನೂ ಬಿದ್ದಿತ್ತು. ಅಂದರೆ ಎಡಗಡೆಯಿಂದ ಬಲಕ್ಕೆ ಹೋಗಿ ಬಿದ್ದಿದ್ದೆ. ಬಿದ್ದ ರಭಸ ಹಾಗೂ ಭಯಕ್ಕೇ ಪ್ರಜ್ಞೆ ತಪ್ಪಿತ್ತು.

ಈಗ ತಮಾಷೆ. ನಮ್ಮಮ್ಮನಿಗೆ ಮೂರು ಜನ ರಾಜೇಶ್ವರಿ ಹೆಸರಿನ ಗೆಳತಿಯರು. ತೆಂಗಿನ ಮರದ ರಾಜೇಶ್ವರಿ, ತೆಲುಗಿನಲ್ಲಿ ನಮ್ಮಮ್ಮ ಟೆಂಕಾಯಿ ಮಾನು ರಾಜೇಶ್ವರಿ ಅಂತ ಕರೆಯೋದು. ಅವರ ಮನೆ ಕಾಂಪೌಂಡ್ ಒಳಗೆ ಹತ್ತಾರು ತೆಂಗಿನ ಮರಗಳಿದ್ದವು. ಅದರಲ್ಲಿ ಒಂದು ಮರ ಆಕಾಶದ ಕಡೆ ಹೋಗದೆ, ಅವರ ಮನೆಯ ಹೊಸ್ತಿಲಿಗೆ ಸ್ವಲ್ಪ ದೂರದಲ್ಲಿ ಅಡ್ಡವಾಗಿ ಬೆಳೆದಿತ್ತು. ಒಟ್ನೂ ನೆಲಮಟ್ಟದಲ್ಲಿತ್ತು. ಬಳಸಿಕೊಂಡೂ ಹೋಗಬಹುದಿತ್ತು. ಆದರೆ ನಾನು ಅದರ ಮೇಲೆ ಹತ್ತಿ ಇಳಿದೇ ಅವರ ಮನೆಗೆ ಹೋಗುತ್ತಿದ್ದೆ. ಫಳಫಳ ಹೊಳೆಯುವ ತಾಜಾ ಹೊಂಬಾಳೆ ಹಾಗೂ ಹೀಚು ಕಾಯಿಗಳನ್ನು ಕಿತ್ತು ನಾನು ಆಗಾಗ ಮಣ್ಣು ಇಟ್ಟಿಗೆಗಳಿಂದ ಕಟ್ಟಿ ಕೆಡವುವ ದೇವಸ್ಥಾನ, ದೇವರ ಮುಂದೆ ಇಟ್ಟು ಅಡ್ಡ ಬೀಳುತ್ತಿದ್ದೆ. ಮತ್ತೆ ಅದೇ ಮರದ ಮೇಲೆ ಅತ್ತಿತ್ತ ಕಾಲು ಹಾಕಿ ಕುಳಿತು ಗೆಳೆಯರ ಜೊತೆ ಹರಟೆ ಹೊಡೆಯೋದು, ಕುದುರೆ ಸವಾರಿ, ಬಸ್ಸು, ರೈಲು ಓಡಿಸೋದು ಬಾರೀ ಮಜಾ ಇರೋದು ಕಣ್ರೀ.

ಇನ್ನೊಬ್ಬರು ಮೂಲೆಮನೆ ರಾಜೇಶ್ವರಿ (ಮೂಲಿಂಟಿ ರಾಜೇಶ್ವರಿ). ಇವರದ್ದು ಮೂಲೆ ನಿವೇಶನ. ಬೀದಿಗೇ ಬಾಗಿಲು. ಮನೆಯಲ್ಲಿ ಹೆಣ್ಣು ಮಕ್ಕಳಿದ್ದಿದ್ದರಿಂದ, ಹಗಲಲ್ಲೂ ಬಾಗಿಲನ್ನ ತೆಗೆದಿಟ್ಟು ಓಡಾಡಿದ ನೆನಪು ಊಹೂಂ ನನಗಿಲ್ಲ. ಸಂಜೆ ದೀಪ ಹಚ್ಚುವ ಹೊತ್ತಿಗೆ ಅರ್ಧ ಗಂಟೆ ಬಾಗಿಲು ತೆಗೆದರೆ ಹೆಚ್ಚು. ಮನೆಯಲ್ಲಿ ಇನ್ನೂ ಇಬ್ಬರು ಗಂಡು ಮಕ್ಕಳಿದ್ದರು. ಆದರೇನು? ಶಾಲೆಯ ಮುಖ ನೋಡದ ಅಕ್ಕತಂಗಿಯರ ಸಲುವಾಗಿ ಅವರೂ ಆ ಪುಟಾಣಿ ಮನೆಯಲ್ಲಿ ಬಂಧಿಗಳಾಗದೆ ವಿಧಿಯಿಲ್ಲ. ಒಂದು ಸೈಕಲ್ ವಿಷಯಕ್ಕೆ ಎಷ್ಟೆಲ್ಲಾ ನೆನಪಾಯಿತು ನೋಡಿ. ನಿಜಕ್ಕೂ ಎಷ್ಟೊಂದು ವಿಷಯಗಳನ್ನ ಮರೆತೇ ಹೋಗಿದ್ದೀನಲ್ಲಾ? ಅಂತ ಆಶ್ಚರ್ಯ ಆಗ್ತಿದೆ.

ನಾಯಿ ಸಾಕಿದ್ದ ನಾಯಿ ರಾಜೇಶ್ವರಿ (ಕುಕ್ಕ ರಾಜೇಶ್ವರಿ) ಮತ್ತೊಬ್ಬರು. ತುಂಬಾ ಮೃದು ಸ್ವಭಾವದವರು. ಮಧ್ಯಾಹ್ನ ನಮ್ಮ ಮನೆ ಮುಂದಿನ ಚಪ್ಪರದ ಕೆಳಗೆ ಹೆಂಗಸರು ಸಭೆ ಸೇರಿ ಎಷ್ಟೇ ಮಾತಾಡಿದರೂ ನಗು ಮುಖದ ಇವರು ಮಾತ್ರ ಗುಮ್ಮನೆ ಕುಳಿತುಕೊಳ್ಳುತ್ತಿದ್ದ ನೆನಪಾಗುತ್ತಿದೆ. ಹಾಗೇ ಒಂದು ಸಲ ನಾನು ಸುಮ್ಮನಿರಲಾಗದೆ ಅವರಿರುವಾಗಲೇ ನಮ್ಮಮ್ಮನ ಬಳಿ "ನಾಯಿ ರಾಜೇಶ್ವರಿ ಮನೆ ನಾಯಿ ಎಲ್ಲರನ್ನೂ ಕಚ್ಚುತ್ತೆ. ಅದುನ್ನ ಒಳಗೆ ಕಟ್ಟೋಕ್ಕೆ ಹೇಳಮ್ಮಾ" ಅಂದಾಗ ಮೃದುಭಾಷಿಣಿ ರಾಜೇಶ್ವರಿಗೇ ಸಿಟ್ಟು ಬಂದು ಜಗಳ ಆಡಿದ್ದೂ ನೆನಪಾಯಿತು. ಗುರುತಿಗಿರಲಿ ಅಂತ ನಮ್ಮಮ್ಮ ಗುಟ್ಟಾಗಿಟ್ಟ ಹೆಸರು ನನ್ನ ಅವಿವೇಕದಿಂದ ಬಯಲಾಗಿ ಆಕೆ ಕೋಪಿಸಿಕೊಂಡಿದ್ದರು. ಅವರು ಆ ಕಡೆ ಹೋಗುತ್ತಿದ್ದಂತೆ ಚೆನ್ನಾಗಿ ಬಡಿದಿದ್ದರು ನಮ್ಮಮ್ಮ ಕಸ್ತೂರಮ್ಮ. ಆಮೇಲೆ ಸ್ವಲ್ಪ ದಿನ ಆಕೆ ನಮ್ಮನೆ ಕಡೆ ಸುಳಿಯಲಿಲ್ಲ. ಆದರೇನು? ಮಧ್ಯಾಹ್ನದ ಮಹಿಳಾ ಸಭೆಯ ಆಕರ್ಷಣೆ ಮತ್ತೆ ಅವರನ್ನು ಚಪ್ಪರದ ಕೆಳಗೆ ಬಂದು ಕೂರುವಂತೆ ಮಾಡಿತ್ತು.

ಈಗ ಅವರು ಯಾರೂ ಅಲ್ಲಿಲ್ಲ. ನಾವೂ ಅಲ್ಲಿಲ್ಲ. ಮುಂದೆ ಮುಂದೆ ಭೂಮಿಯ ಮೇಲೇ ಇರಲಾರೆವು. ಅವರೆಲ್ಲಾ ದೊಡ್ಡ ವಯಸ್ಸಿನವರು. ಬಹುಶಃ ಬದುಕಿರಲಾರರು. ಆದರೆ ನಾನಿರುವ ತನಕ ಮರೆಯಲಾರದ ನೆನಪಿನ ಬುತ್ತಿ ಈ ಸೈಕಲ್ಲಿನಲ್ಲಿ ಹೇಗೆ ಅಡಗಿ ಕುಳಿತುಬಿಟ್ಟಿದೆ ನೋಡಿ. ಹೂಂ, ನನಗೆ ಪ್ರಜ್ಞೆ ಬಂದ ಆ ಸಮಯದಲ್ಲಿ ಸೈಕಲ್ ಮತ್ತು ನನ್ನನ್ನ ಮೋರಿಯಿಂದ ಎತ್ತಿ ಬೀದಿಯಲ್ಲಿ ಮಲಗಿಸಿ ಗಾಳಿ ಹಾಕುತ್ತಿದ್ದವರು ಮೂಲೆ ಮನೆ ರಾಜೇಶ್ವರಿ. ನ್ಯಾಯಕ್ಕಾಗಿ ಹೋರಾಡುವ ಜಾಯಮಾನದಾಕೆ. ಪ್ರಜ್ಞೆ ಬಂದಿದ್ದೇ ತಡ, ಎದ್ದು ಹೊರಟರು. ಗಟ್ಟಿಯಾಗಿ ದಪ್ಪಕ್ಕಿದ್ದವರು. ಕಲ್ಪನಾ ತರಹ ಚಿಕ್ಕ ಸೆರಗನ್ನು ಬಿಟ್ಟಿದ್ದ ಆಕೆ ಬಿರುಸಾಗಿ ಹೊರಟಿದ್ದು ನಮ್ಮನೆಗೇ ಅಂತ ಅನುಮಾನವೇ ಇಲ್ಲ. ಅಪ್ಪನ ಭಯ ಇಲ್ಲ ನಂಗೆ. ಅಮ್ಮನ ಭಯ ಜಾಸ್ತಿ. ಅಳುತ್ತಾ "ರೀ, ನಮ್ಮಮ್ಮನಿಗೆ ಹೇಳ್ಬೇಡ್ರಿ. ಹೊಡೀತಾರೆ" ಅಂದೆ. ಆಗೆಲ್ಲಾ ಆಂಟಿ ಪಾಂಟಿ ಅನ್ನೋ ತಲೆನೋವಿಲ್ಲ ನೋಡಿ. ಎಷ್ಟು ವಯಸ್ಸಾಗಿದ್ರೂ "ರೀ" "ಅತ್ತೆ" "ಚಿಕ್ಕಮ್ಮ" "ಅಜ್ಜಿ" ಅಷ್ಟೇ. ತಮಿಳು ಜನ. ಅವರಿಗೆ ಕನ್ನಡ ಬರಲ್ಲ. ನನಗೆ ತಮಿಳು ಬರಲ್ಲ.

ಆಗಲೇ ಹೇಳುದ್ನಲ್ಲಾ ನ್ಯಾಯಕ್ಕಾಗಿ ಹೋರಾಡುವಾಕೆ ಅಂತ, ದೀರ್ಘ ಹಾಗೂ ವ್ಯಂಗ್ಯವಾಗಿ ತಮಿಳಿನಲ್ಲೇ "ಗಂಡುವೇಣಿ, ಬಾ ಮನೆಗೆ. ಹುಡ್ಗಿ ಹುಡ್ಗಿ ತರ ಇರ್ಬೇಕು. ಅದು ಬಿಟ್ಟು ಹುಡ್ಗನ ತರ ಪ್ಯಾಂಟು, ಶರ್ಟು ಹಾಕ್ಕೊಂಡು ಸೈಕಲ್ ಓಡುಸ್ತೀಯಾ? ಇನ್ಮೇಲೆ ಪ್ಯಾಂಟ್, ಶರ್ಟು, ಸೈಕಲ್ಲು ಯಾವ್ದೂ ಕನಸಲ್ಲೂ ಸಿಕ್ಕಲ್ಲ ಬಾರೆ ನೋಡ್ಕೊಂತೀನಿ"

ಅನ್ನುತ್ತಾ ದುಡು ದುಡು ನಡೆದಾಗ ಬಿದ್ದ ಸುಸ್ತು, ಮೊಣಕೈ, ಹಣೆ ತರಚಿ ಸೋರುತ್ತಿದ್ದ ರಕ್ತವನ್ನೂ ಲೆಕ್ಕಿಸದೇ ಆಕೆಯ ಚಿಕ್ಕ ಸೆರಗು ಹಿಡಿದು ಜಗ್ಗುತ್ತಾ, "ರೀ, ಬೇಡಾರೀ. ನಮ್ಮಮ್ಮ ಹೊಡೀತಾರೆ" ಅನ್ನೋ ಗೋಗರೆತ ನೆನಪಾಗುತ್ತಿದೆ.

"ಅಯ್ಯೋ ಸೆರಗು ಬಿಡೇ ಗಂಡುಬೀರಿ. ನಿಮ್ಮಮ್ಮಂಗೆ ಹೇಳ್ದೆ ಮಾತ್ರ ಬಿಡಲ್ಲ ಕಣೆ. ಲಾರಿ ಕೆಳಗೆ ನೆಗೆದು ಬಿದ್ದು ಸತ್ತಿದ್ರೆ ಅಳೋವ್ರು ಯಾರು? ಚಚ್ಚಿ ಚಚ್ಚಿ ಸಾಯಿಸ್ಲಿ ಬಿಡು. ನೀನಿದ್ದು ಏನ್ಮಾಡ್ಬೇಕು? ಇನ್ನೂ ಮೂರಿದ್ದಾವೆ. ಅಷ್ಟೇ ಸಾಕು" ಅಂದರೂ ನನ್ನಿಂದ ಬಿಡಿಸಿಕೊಂಡರೆ ಸಾಕು ಅನ್ನುವಂತೆ ತಕ್ಷಣ ಸಮಾಧಾನದಿಂದ, "ಸರಿ ಹೇಳಲ್ಲ ಸೆರಗು ಬಿಡು" ಎಂದಾಗ ಸೆರಗು ಬಿಟ್ಟೆ. ಇನ್ನು ಸಮಯ ಮುಗಿದು ಹೋಯಿತೇನೋ ಅನ್ನುವ ಭಯ ಶುರುವಾಯಿತು. ಅದೇ ಸೈಕಲ್ ವಾಪಸ್ ಬಿಡಬೇಕಲ್ಲಾ? ಕಣ್ಣೀರು ಕೆನ್ನೆಯ ಮೇಲೆ ಕರೆಗಟ್ಟಿದ್ದನ್ನ ನೋಡಿಯಾದರೂ ಸೈಕಲ್ ಶಾಪ್ ಪುಣ್ಯಾತ್ಮ ದುಡ್ಡು ಕೇಳದೆ ಬಿಟ್ಟುಬಿಡಲಿ ಎನ್ನುವ ದೂರದಾಸೆಯಿಂದ ಸೈಕಲ್ ತಳ್ಳಿಕೊಂಡು ಹೋದೆ.

ಹೋದಾಗ ಇನ್ನೂ ಐದು ನಿಮಿಷ ಇತ್ತು. ಅವನ ಗಡಿಯಾರದ ಪ್ರಕಾರವೇ ನಾವು ಸಮಯದ ಕಾನೂನು ಪಾಲನೆ ಮಾಡಬೇಕಿತ್ತು. ಮನೆಯ ಗಡಿಯಾರ ನಂಬಿಕೊಂಡು ಸೈಕಲ್ ತಗೊಂಡು ಹೋದೆವೋ ಇನ್ನೂ ಐವತ್ತು ಪೈಸೆ ಹೆಚ್ಚಿನ ಪೆನಾಲ್ಟಿ ಬೀಳುತ್ತಿತ್ತು. ಹೇಗೋ? ಏನೋ? ಅವನ ಗಡಿಯಾರ ಯಾವಾಗಲೂ ಮುಂದಿರುತ್ತಿತ್ತು. ನೋಡಿದ ತಕ್ಷಣ ಸೈಕಲನ್ನು ಕಿತ್ತುಕೊಂಡ. "ಇನ್ನೂ ಐದು ನಿಮಿಷ ಇದ್ಯಲ್ಲ? ಒಂದು ರೌಂಡು ಹೋಗಿ ಆಮೇಲೆ ಕೊಡ್ತೀನಿ ಬಿಡ್ರಿ" ಅಂತ ಬೇಡಿಕೊಂಡರೂ "ನೀನು ಒಂದು ರವಂಡ್ ಹೋಗ್ಬರೋಷ್ಟ್ರಾಗೆ ಹತ್ನಿಮ್ಸ ಆಗಿರ್ತದೆ. ನಾಳೆ ನಿಂಗೆ ಐದು ನಿಮ್ಸ ದಾಸ್ತಿ ಕೊಟ್ಟೇನು. ಈಗ ಬ್ಯಾರೇರು ಕಾಯ್ತಾವ್ರೆ. ಬುಡು" ಅಂದ. ಆ ದಿನ ಅವನು ಮತ್ತೆ ಅದೇ ಬ್ರೇಕಿಲ್ಲದ ಸೈಕಲ್ ಕೊಡದೇ ಇದ್ದದ್ದು ಒಳ್ಳೆಯದಾಯ್ತು. ಕೊಟ್ಟಿದ್ದರೆ ಮತ್ತೆ ಯಾವ ಮೋರಿಯಲ್ಲಿ ಬೀಳಬೇಕಾಗಿತ್ತೋ? ನಾನು ಬಿಟ್ಟ ಅದೇ ಸೈಕಲನ್ನ ಯಾರು ತೆಗೆದುಕೊಂಡು ಹೋದರೋ ಏನೋ? ಪಾಪ.

ಮನೆಗೆ ಬರುವಷ್ಟರಲ್ಲಿ ಮೂಲೆಮನೆ ರಾಜೇಶ್ವರಿ ಹಾಜರಿದ್ದರು. ಗಾಯಗಳು ಭಗಭಗನೆ ಉರಿಯುತ್ತಿದ್ದವು. ಇನ್ನು ಮುಂದೆ ಬೀಳುವ ಒದೆ ಆ ಗಾಯದ ಮೇಲೂ ಬೀಳಬಹುದು. ಕೈಗೆ ಸಿಕ್ಕ ಸೈಕಲ್ ತೃಪ್ತಿಯನ್ನೇ ಕೊಡಲಿಲ್ಲ ಅನ್ನುವ ಬೇಸರ ಬೇರೆ. ನಮ್ಮಮ್ಮ ಮನೆಯಲ್ಲಿರಲಿಲ್ಲ. ರಾಜೇಶ್ವರಿ ರಟ್ಟೆ ಹಿಡಿದು ದರದರನೆ ಎಳೆದೊಯ್ದು ತೊಟ್ಟಿಯಲ್ಲಿದ್ದ ನೀರಿನಿಂದ ಕೈಕಾಲು, ಮುಖವನ್ನೆಲ್ಲಾ ಒರಟಾಗಿ ತೊಳೆದರು. ನೋವಿಗೆ ಕಿರುಚಿ ಅಳತೊಡಗಿದೆ. "ಬಾಯಿ ಮುಚ್ಚೆ ಬಜಾರಿ. ಆ ಲಾರಿ ಕೆಳಗೆ ಬಿದ್ದು ಏನಾದ್ರೂ ಆಗಿದ್ರೆ ಏನೇ ಗತಿ" ಎನ್ನುತ್ತಾ ತಮ್ಮ ದಾರಿ ಹಿಡಿದು ಹೊರಟರು. ಪ್ರಾಣ ಉಳಿಸಿ ಶುಶ್ರೂಷೆ ಮಾಡಿದ ಆಕೆಯನ್ನು ಕಂಡರೆ ಎಷ್ಟೋ ವರ್ಷ ನನಗಾಗುತ್ತಿರಲಿಲ್ಲ. ಬಹುಶಃ ಆಕೆಯ ಒರಟುತನಕ್ಕೆ ನಾನು ವಿರೋಧಿಯಾಗಿದ್ದೆ. ನನ್ನ ಸುರಕ್ಷೆಯ ಸಲುವಾಗಿಯೇ ಆಕೆ ವ್ಯಾಕುಲಗೊಂಡಿದ್ದರು. ಆದರೆ ಒರಟಾಗಿ. ಈಗ ಅವರ ಆ ಒರಟುತನದ ಹಿಂದಿನ ಮುಗ್ಧ ಹಾಗೂ ನಿಸ್ವಾರ್ಥ ಸ್ವಭಾವ ಅರ್ಥವಾಗುತ್ತಿದೆ. ಆದರೆ ಆಕೆ ಈಗ ಜೀವಂತ ಇಲ್ಲ.

ಇರಿ, ಇನ್ನೂ ಸೈಕಲ್ ವಿಷಯ ಎಷ್ಟೊಂದಿದೆ. ಸೈಕಲ್ ಅನ್ನೋದು ಮತ್ತು ಅಂತಾನೋ, ನಿಶೆ ಅಂತಾನೋ ಬರೆದಿದ್ನಲ್ಲಾ? ಅದು ಯಾಕೆ ಅಂತ ಹೇಳ್ಬೇಡ್ವಾ? ನಮ್ಮ ಪೀಳಿಗೆಯ ಎಲ್ಲರಿಗೂ ಅದು ನಿಶೇನೆ. ಈಗ ಬಿಡಿ

ಹೊಸದೋ ಹಳೆಯದೋ ಈಗಿನ ಮಕ್ಕಳ ಬಳಿ ಸೈಕಲ್ ಇರುತ್ತೆ ಅನ್ನೋಕ್ಕೆ ಸೈಕಲ್ ಬಾಡಿಗೆ ಕೊಡುವ ಅಂಗಡಿಗಳು ಎಲ್ಲೂ ಇಲ್ಲ ಅನ್ನೋದೇ ಸಾಕ್ಷಿ. ಬಾಡಿಗೆಗೆ ಇಲ್ಲದೇ ಇದ್ದರೂ ಮಕ್ಕಳಿಗೆ ಸೈಕಲ್ ಬರ ಇಲ್ಲ ಅನ್ನೋದನ್ನ ಒಪ್ಪಲೇಬೇಕು. ತಮ್ಮ ಮಕ್ಕಳು ಬಳಸಿದ ಸೈಕಲ್ಲುಗಳನ್ನು ಮಾರಾಟ ಮಾಡದೇ ಕೆಲಸದವರಿಗೋ ಮತ್ತೊಬ್ಬರಿಗೋ ನೀಡುವ ಒಳ್ಳೆಯ ಬೆಳವಣಿಗೆಯನ್ನೂ ನಾವು ನೋಡುತ್ತಿದ್ದೇವೆ. ಈ ರೀತಿ ಸೈಕಲ್ಲನ್ನು ಬಡ ಮಕ್ಕಳಿಗೆ ನೀಡಿ ಎಲ್ಲರೂ ಸ್ಪಂದಿಸುವ ರೀತಿಗೆ ಸಂತೋಷವಾಗುತ್ತದೆ.

ಆದರೆ ಆಗೆಲ್ಲಾ ನನ್ನ ಬಳಿ ಅಲ್ಲ, ಬೇರೆ ಯಾರ ಬಳಿಯೂ ಸೈಕಲ್ ಇಲ್ಲವೇ ಇಲ್ಲ. ಹಾಗಾಗಿ ಸೈಕಲ್ ಕಲಿಯುವುದರಲ್ಲಿ ನಮ್ಮ ಪೀಳಿಗೆಯ ಎಲ್ಲರದ್ದೂ ಹೆಚ್ಚೂಕಡಿಮೆ ಒಂದೇ ರೀತಿಯ ಅನುಭವ.

ನಮ್ಮ ಮನೆಯಲ್ಲಿ ಕಮಲನಾಥ ಅನ್ನುವ ನಮ್ಮಮ್ಮನ ಸೋದರ ಸಂಬಂಧಿಯೊಬ್ಬರು ಬಾಡಿಗೆಗಿದ್ದರು. ಒಂದೂವರೆ ಕಣ್ಣೋಟ, ಕಪ್ಪು ಮೈಬಣ್ಣದ, ಕಡ್ಡಿ ಕೈಕಾಲುಗಳ ಆರಡಿ ಮನುಷ್ಯನನ್ನು ನಾವು ಮಾವ ಅನ್ನುತ್ತಿದ್ದೆವು. ಆಂಧ್ರಪ್ರದೇಶದ ಯಾವುದೋ ಹಳ್ಳಿಯಿಂದ ಉದ್ಯೋಗ ಹುಡುಕಿ ಬಂದು, ಒಂದು ಸೈಕಲ್ ಶಾಪಿನಲ್ಲಿ ಸೈಕಲ್ ರಿಪೇರಿ ಮಾಡುವ ದಿನಗೂಲಿ ಕೆಲಸದಲ್ಲಿದ್ದರು. ದಿನಾ ಒಂಭತ್ತು ಗಂಟೆಗೆ ಹೊರಟು ಮಧ್ಯಾಹ್ನ ಒಂದು ಗಂಟೆಗೆ ಊಟಕ್ಕೆ ಬರುವುದು ನಂತರ ಮತ್ತೆ ಹೋಗಿ, 'ದೀಪ ಹಚ್ಚಿದ ನಂತರ ಕಬ್ಬಿಣದ ಕೆಲಸ ಮಾಡಬಾರದು' ಎನ್ನುವ ಪದ್ಧತಿಯಂತೆ ಆರು ಗಂಟೆಗೆಲ್ಲಾ ಮನೆಗೆ ವಾಪಸ್ ಬರುತ್ತಿದ್ದರು. ಅವರ ಹೆಂಡತಿಯಂತೂ ಸೋಮಾರಿ ಅಂದರೆ ತೀರಾ ಸೋಮಾರಿ. ಬೆಳಗ್ಗೆದ್ದು ಗಂಡನೇ ಏನೋ ಒಂದು ತಿಂಡಿ ಮಾಡಿ, ತಿಂದು ಮಧ್ಯಾನ್ಹದ ಅಡುಗೆಗೂ ತರಕಾರಿ ಹೆಚ್ಚಿಟ್ಟು ಹೋಗುವರು. ಆಕೆ ಬೆಳಗ್ಗೆದ್ದು ಬಂದು ಮನೆ ಹೊಸ್ತಿಲಿನ ಮುಂದಿದ್ದ ದಿಣ್ಣೆಯ ಮೇಲೆ ಮೊಣಕಾಲು ಮಡಚಿ, ಕೆನ್ನೆ ಅದರ ಮೇಲಿಟ್ಟು ಕುಳಿತರೆ ಮುಗಿಯಿತು. ತಿನ್ನಲು ಸಹಾ ಮೇಲೇಳುತ್ತಿರಲಿಲ್ಲ.

ಅದೂ ಎಲ್ಲಿಯ ತನಕ ಗೊತ್ತಾ? ಕಮಲ ಮಾವ ಒಂದು ಗಂಟೆಗೆ ಊಟಕ್ಕೆ ಬರುವ ತನಕ ಆ ಜಾಗ ಬಿಟ್ಟೇಳುತ್ತಿರಲಿಲ್ಲ. ಅದೇನೋ ಖಾಯಿಲೆ ಇರಬೇಕು ಅಂತ ಈಗ ಅನ್ನಿಸುತ್ತೆ. ಶೌಚಾಲಯಕ್ಕೆ ಮಾತ್ರ ಎದ್ದು ಹೋಗುತ್ತಿದ್ದ ಹಾಗೆ ನೆನಪು ನನಗೆ. ಒಳಗೆ ಹೋದವಳು ಎಷ್ಟು ಹೊತ್ತಾದರೂ ಹೊರಗೇ ಬರುವುದಿಲ್ಲ. ಎರಡು ಮನೆಗೆ ಒಂದೇ ಶೌಚಾಲಯ ಇದ್ದಿದ್ದು. ಮತ್ತೊಬ್ಬ ಬಾಡಿಗೆ ಮನೆಯವರು ಜೋರು ಮಾಡಿ ಹೊರಗೆ ಕರೆಸುತ್ತಿದ್ದರು. ಇಬ್ಬರು ಜೋರು ಮಾಡಿದರೆ ಜಗಳ. ಇಲ್ಲಿ ಲಕ್ಷ್ಮಕ್ಕ ಬಾಯೇ ಬಿಡುತ್ತಿರಲಿಲ್ಲ. ಹಾಗಾಗಿ ಒಂದೇ ಕಡೆಯ ಕೂಗಾಟ, ಗೊಣಗಾಟ, ಲಕ್ಷ್ಮಕ್ಕನ ಗಂಡ ಮನೆಗೆ ಬಂದ ಕೂಡಲೇ ಚಾಡಿ ಹೇಳಾಟ.

ಏನೋ ಅಡಿಗೆ ಮಾಡಿರುತ್ತಾಳೆ ಎಂದು ಮನೆಗೆ ಬರುವ ಗಂಡನಿಗೆ ಪಕ್ಕದ ಮನೆಯವರ ಗೊಣಗಾಟ ಕೇಳಿ ಹೇಗಾಗಬೇಡ? ಬಂದ ಅವರ ಬಟ್ಟೆಯೆಲ್ಲಾ ಗ್ರೀಸ್‌ಮಯವಾಗಿರುತ್ತಿತ್ತು. ಆ ಮಾವ ಬಂದರೂ ಅವಳಲ್ಲಿ ಯಾವ ಧಾವಂತವೂ ಇರುತ್ತಿರಲಿಲ್ಲ. ಕುಳಿತೇ ಇರುತ್ತಿದ್ದಳು. ನಮ್ಮಮ್ಮ ಹತ್ತು ಗಂಟೆಗೆಲ್ಲಾ ಅವಳಿಗೆ "ಈಗ ಎದ್ದು ಹೋಗಿ ಅಡಿಗೆ ಶುರು ಮಾಡುದ್ರೆ ನಿಂಗೆ ಮಧ್ಯಾನ್ಹ ಆಗುತ್ತೆ. ಎದ್ದು ಒಳಗೋಗಿ, ಹಲ್ಲುಜ್ಜಿ, ಅವ್ನು ಮಾಡಿಟ್ಟಿರೋದನ್ನ ತಿಂದು

ಅಡಿಗೆ ಶುರು ಮಾಡು ಹೋಗು. ಇಲ್ದಿದ್ರೆ ಆಮೇಲೆ ಕಮಲ ಬಂದು ಮುಖ ಊದೋ ಹಾಗೆ ಬಿಗಿತಾನೆ" ಎಂದು ಎಚ್ಚರಿಕೆ ನೀಡಿರುತ್ತಿದ್ದರು. ಆದರೂ ಅವಳಿಗೆ ಯಾವ ಕಡೆಯೂ ಗಮನವಿರುತ್ತಿರಲಿಲ್ಲ.

ಹಾಂ, ಗಮನವಿಲ್ಲದೆಯೇ ಇಲ್ಲ. ಪ್ರತಿ ಶುಕ್ರವಾರ ಕಮಲ ಮಾವನಿಗೆ ರಜಾ. ಪ್ರತಿವಾರ ಹೆಂಡತಿಯನ್ನು ಸೈಕಲ್ ಮೇಲೆ ಕೂರಿಸಿಕೊಂಡು ಮಾರ್ನಿಂಗ್ ಶೋ ಸಿನಿಮಾ ತೋರಿಸಿ ನಂತರ ಅವಳಮ್ಮನ ಮನೆಯಲ್ಲಿ ಎರಡು ಹೊತ್ತು ಊಟ ಮಾಡಿ ರಾತ್ರಿಯೇ ಮನೆಗೆ ಬರುತ್ತಿದ್ದುದು. ಆ ದಿನ ಅವಳ ಅಲಂಕಾರ, ತಳುಕು, ಬಳುಕು, ಬಿನ್ನಾಣ ನೋಡಿ ನಮಗೆಲ್ಲಾ ಆಶ್ಚರ್ಯ. ನಮ್ಮಮ್ಮ "ದಿನಾ ಹೀಗೇ ಇರೋಕ್ಕೇನು ಕೇಡು ನಿಂಗೆ" ಅಂತ ಬೈಯ್ಯುವುದು ಅವಳ ಕಿವಿಗೇ ಬೀಳುತ್ತಿರಲಿಲ್ಲ. ಮಾರನೇ ಬೆಳಗ್ಗೆ ಮತ್ತೆ ಅದೇ ಭಂಗಿ.

ಮಧ್ಯಾಹ್ನ ಊಟಕ್ಕೆ ಬರುವ ಕಮಲ ಮಾವ ಅವಳ ಆ ಎಂದಿನ ಅವತಾರ ನೋಡಿ ಕೆಂಡಾಮಂಡಲವಾಗುತ್ತಿದ್ದರು. ಯಾವಾಗಲೂ ಕೆದರಿಯೇ ಇರುವ ಉದ್ದನೆ ಕೂದಲಿನ ಬುಡ ಹಿಡಿದು ಕೋಪದಿಂದ ದರದರನೆ ಮನೆಯೊಳಕ್ಕೆ ಎಳೆದೊಯ್ದು ಬಾರಿಸುವ ಶಬ್ದ ಪ್ರತಿದಿನ ಮಧ್ಯಾಹ್ನ ಒಂದರಿಂದ ಒಂದೂವರೆ ಗಂಟೆಯೊಳಗೆ ಕೇಳಿಸುವುದು ಮಾಮೂಲು. ಆಕೆಗೆ ಅಳುವುದಕ್ಕೂ ಸೋಮಾರಿತನ. "ಊ ಊ" ಅನ್ನುವ ಮೆಲು ಮುಲುಗಾಟ ಮಾತ್ರ ಅವಳಿಂದ ಬರುತ್ತಿದ್ದುದು. ಊಟ ಮಾಡಿ ಮತ್ತೆ ಅದೇ ಜಾಗದಲ್ಲಿ ಕುಳಿತು ದಿಣ್ಣೆ ಸವೆಸುತ್ತಿದ್ದ ಲಕ್ಷ್ಮಕ್ಕ, ಸೈಕಲ್ ಶಾಪಿನ ಯಜಮಾನರ ಅಣ್ಣನ ಮಗಳು. ಹಾಗಾಗಿ ಕಮಲ ಮಾವ ತಡವಾಗಿ ಹೋದರೂ ಬೈಗುಳವೂ ಇಲ್ಲ. ಸಂಬಳದಲ್ಲಿ ಕಡಿತವೂ ಇಲ್ಲ. ಅವಳನ್ನು ಹೊಡಿದು ಬಡಿದರೂ ಅವರು ಕೇಳುತ್ತಲೇ ಇರಲಿಲ್ಲ.

ವರ್ಷಗಟ್ಟಲೆ ಕುಳಿತ ಕಡೆಯೇ ಕುಳಿತವಳನ್ನು ಮದುವೆ ಮಾಡಿಕೊಂಡ ಮಹಾನುಭಾವನಿಗೆ ಎಲ್ಲಾ ಅಧಿಕಾರವನ್ನೂ ಕೊಟ್ಟಿತ್ತು ಅವಳ ತವರು. ಲಕ್ಷ್ಮಕ್ಕನ ಒಬ್ಬ ತಮ್ಮ ನಪುಂಸಕ. ಒಮ್ಮೊಮ್ಮೆ ಪಟ್ಟಾಪಟ್ಟಿ ಅಥವಾ ಖಾಕಿ ಬಣ್ಣದ ದೊಗಲೆ ಚಡ್ಡಿ ಮೇಲೆ ಕುತ್ತಿಗೆಯ ತನಕ ಗುಂಡಿ ಹಾಕಿದ ಬಿಳಿ ಶರಟು ಹಾಕಿ, ಅದರ ಮೇಲೆ ಕೆಂಪು ಟವಲನ್ನು ಸೆರಗಿನಂತೆ ಹೊದ್ದುಕೊಂಡು ಹಿಡಿಯಿದ್ದ ಮಾಸಿದ ಪ್ಲಾಸ್ಟಿಕ್ ಬುಟ್ಟಿ ಹಿಡಿದುಕೊಂಡು ಬರುತ್ತಿದ್ದ. ಈಗಿನಂತೆ ಸೆರಗಿಗೆ ಪಿನ್ನು ಹಾಕುವ ರೂಢಿ ಆಗ ಇರಲಿಲ್ಲ. ಹಾಗಾಗಿ ಬಿದ್ದು ಬಿದ್ದು ಹೋಗುತ್ತಿದ್ದ ಆ ಟವಲನ್ನು ವಯ್ಯಾರವಾಗಿ ಭುಜಕ್ಕೇರಿಸುತ್ತಿದ್ದ ದೃಶ್ಯ ಈಗಲೂ ಕಣ್ಣಿಗೆ ಕಟ್ಟಿದಂತಿದೆ. ಜನಸಂಖ್ಯೆ ತೀರಾ ಕಡಿಮೆಯಿದ್ದ ಆ ಸಂದರ್ಭದಲ್ಲಿ ಹೀಗಿದ್ದವರು ಕೂಡ ಕಡಿಮೆಯೇ. ನನ್ನ ಜೀವಮಾನದಲ್ಲಿ ಕಂಡ ಮೊಟ್ಟ ಮೊದಲ ನಪುಂಸಕ ಅವನೇ. ಲಕ್ಷ್ಮಿ.

ಕಣ್ಣಿಗೆ ದಟ್ಟವಾಗಿ ಕಾಡಿಗೆ ಹಚ್ಚಿ, ಹಣೆ ಹಾಗೂ ಕೆನ್ನೆಯ ಮೇಲೆ ಅಗಲವಾದ ಕಪ್ಪು ಬೊಟ್ಟಿಟ್ಟುಕೊಂಡು ಬಳುಕುತ್ತಾ ಬರುವವನು ನಮ್ಮ ಗೆಳತಿಯರ ಗುಂಪಿನ ಸದಸ್ಯ. ವಯಸ್ಸಿನಲ್ಲಿ ನನಗಿಂತಲೂ ಏಳೆಂಟು ವರ್ಷ ದೊಡ್ಡವನಿರಬೇಕು. ತನ್ನ ಅಕ್ಕನನ್ನ ಅಪ್ಪಿಯೇ ಬೆಳೆದು ದೊಡ್ಡವನಾಗಿದ್ದರಿಂದ ಹಾಗೂ ತಾನು ಬಹಳ ಹತ್ತಿರದಿಂದ ಕಂಡಿದ್ದಂತಹ ಏಕೈಕ ಹೆಣ್ಣು ಲಕ್ಷ್ಮಕ್ಕ. ಹಾಗಾಗಿ ತನ್ನ ಹೆಸರನ್ನು ಕೂಡ ಲಕ್ಷ್ಮಿ ಅಂತ ತಾನೇ ಇಟ್ಟುಕೊಂಡಿದ್ದ. ಅವನ ಸ್ವಭಾವ ಯಾಕೆ ಹಾಗೆ ಅಂತ ನಾವೂ ಯಾರನ್ನೂ ಕೇಳಲಿಲ್ಲ. ಈಗಿನ ಹಾಗಲ್ಲ ನಮ್ಮ ಹಿರಿಯರು. ನಮಗೂ ಅವರಿಗೂ ನಡುವೆ ಒಂದು ದೊಡ್ಡದೇ ಅಂತರವಿತ್ತು. ಹಾಗೊಂದು ವೇಳೆ ಲಕ್ಷ್ಮಿಯ ಬಗ್ಗೆ ಕೇಳಿದ್ದರೂ ಬಿಡಿಸಿ ಹೇಳುತ್ತಲೂ ಇರಲಿಲ್ಲ ಬಿಡಿ.

ಒಟ್ಟೂ ತಾನು ಹೇಗಿದ್ದನೋ ಹಾಗೇ ನಮ್ಮಲ್ಲಿ ಒಬ್ಬನಾಗಿ ಹೋಗಿದ್ದ ಅಷ್ಟೇ. ಇನ್ನೂ ಮುಂದುವರೆದು ಅವನು ಬಂದಾಗ ಅವನ ಹಾಗೇ ಹಣೆಗೆ, ಕೆನ್ನೆಗೆ ಅವನ ಕೈಲೇ ದೊಡ್ಡ ಬೊಟ್ಟಿಡಿಸಿಕೊಂಡು, ಫ್ರಾಕ್ ಮೇಲೆ ಟವೆಲ್ ಹೊದ್ದು, ಕಿವಿಗೆ ಹೂಮುಡಿದು ಓಡಾಡಿದ್ದನ್ನು ಮರೆತುಹೋಗಿದ್ದೆ. ಈಗ ನೆನಪು ನುಗ್ಗಿಬರುತ್ತಿದೆ.

ಅವನು ಬಂದ ದಿನ ಲ್ಷಕ್ಮಕ್ಕ ನೋಡಲು ಲಕ್ಷಣವಾಗಿರುತ್ತಿದ್ದಳು. ಅವಳು ಕುಳಿತ ಕಡೆಯೇ ಹೇನು ಕುಕ್ಕಿ, ಕೂದಲು ಬಾಚಿ, ಜಡೆ ಹೆಣೆದು, ಅಮ್ಮ ಕೊಟ್ಟು ಕಳಿಸಿದ ಹೂವನ್ನ ತಾನಷ್ಟು ಕಿವಿಗೆ ಸಿಕ್ಕಿಸಿಕೊಂಡು, ಅಕ್ಕನಿಗೂ ಮುಡಿಸಿ, ಒದ್ದೆ ಬಟ್ಟೆಯಿಂದ ಮುಖ ಒರೆಸಿ, ಪೌಡರ್ ಹಚ್ಚಿ, ಸ್ಟಿಕ್ಕರ್ ಅಂಟಿಸುತ್ತಿದ್ದ. ಯಾವುದೇ ಭಾವನೆಯಿಲ್ಲದೆ ಕುಳಿತು ಅಲಂಕಾರ ಮಾಡಿಸಿಕೊಳ್ಳುತ್ತಿದ್ದಳು ಲ್ಷಕ್ಮಕ್ಕ. ಆ ದಿನ ಮಧ್ಯಾಹ್ನ ಬರುವ ಕಮಲಮಾವ ಅವಳ ಅಲಂಕಾರಕ್ಕೆ ಯಾವ ಮನ್ನಣೆಯನ್ನೂ ಕೊಡದೆ ಕುಟ್ಟುತ್ತಿದ್ದ. ಅವನಿಗೆ ಹಸಿವು. ಒಮ್ಮೊಮ್ಮೆ ಬಿಡುವಾಗಿ ಕುಳಿತಾಗ ನಮ್ಮಪ್ಪನಿಗೆ "ಮೊದ್ಲು ಆ ದಿಣ್ಣೆ ಹೊಡ್ಸಾಕ್ತೀನಿ ಮಾವ. ಅದಿದ್ರೆ ತಾನೇ ಇವ್ಳು ದೆವ್ವ ಹಿಡಿದವಳ ತರ ಅದರ ಮೇಲೆ ಕೂತ್ಕೊಳ್ಳೋದು. ಹೊಸಲು ದಾಟುದ್ರೆ ಹಳ್ಳ ಇರ್ಬೇಕು. ಮುಂದೆ ಕಾಲಿಟ್ರೆ ಅದ್ರಲ್ಲಿ ಬಿದ್ದೋಗ್ಬೇಕು" ಅಂತ ತಮ್ಮ ನಿರಾಸೆ ಹಾಗೂ ಹತಾಶೆಯನ್ನು ಹಲವು ವಿಧದಲ್ಲಿ ಹೊರಹಾಕುತ್ತಿದ್ದರು. ಅದಕ್ಕೂ ನಿರ್ಭಾವುಕ ಉತ್ತರ ಅವಳ ಕಡೆಯಿಂದ. ಆಗ ಅವರು ಹೇಳುವ ರೀತಿಗೆ ನಾವೂ ಇನ್ನಷ್ಟು ಬೆರೆಸಿ ತಮಾಷೆ ಮಾಡಿ ನಗುತ್ತಿದ್ದೆವು. ಆದರೆ ಅವರ ಅಂದಿನ ಆ ಸ್ಥಿತಿಗೆ ಈಗ ಅಯ್ಯೋ ಅನ್ನಿಸಿ ವಿಷಾದವಾಗುತ್ತದೆ.

ಇಲ್ಲಿ ನೋಡಿ ಸೈಕಲ್ ವಿಷಯ ಮರೆತು ಕಥೆ ಬೇರೆ ಕಡೆ ಹೋಯ್ತು. ಇರಲಿ. ಯಾಕಪ್ಪಾ ಆ ವಿಷಯ ಬಂತು? ಹಾಂ, ನನ್ನ ಶಾಲೆಗೆ ರಜಾ ದಿನಗಳಲ್ಲಿ ಕಮಲ ಮಾವ ತರುತ್ತಿದ್ದ ವಿಧವಿಧವಾದ ಸೈಕಲ್ಲಿಗೆ ನಾನು ಕಾಯುತ್ತಾ ಇರುತ್ತಿದ್ದೆ. ಸೈಕಲ್ ಅಂದ್ರೆ ರೈಲುಬೋಗಿ ಹಾಗೆ ಕಮಲ ಮಾವನ ನೆನಪು, ಲಕ್ಷ್ಮಿ ಲ್ಷಕ್ಮಕ್ಕರ ನೆನಪು ಒಂದರ ಹಿಂದೆ ಒಂದು ಬರ್ತಾನೇ ಇರುತ್ತೆ. ಆ ಸೈಕಲ್ಲುಗಳು ರಿಪೇರಿಗಾಗಿ ಬರುವಂಥವು. ರಿಪೇರಿ ಮಾಡಿ ಅದನ್ನೇ ತರುತ್ತಿದ್ದರು. ಒಂದೊಂದು ಸೈಕಲ್ ಎತ್ತರವಿದ್ದರೆ ಮತ್ತೆ ಕೆಲವು ನನ್ನ ಅಳತೆಗೆ ತಕ್ಕಂತೆ ಇರುತ್ತಿತ್ತು. ಕೆಲವಕ್ಕೆ ಮಧ್ಯೆ ಬಾರ್ ಇರುತ್ತಿರಲಿಲ್ಲ. ಅದು ಲೇಡೀಸ್ ಸೈಕಲ್ ಎನ್ನುವುದೇ ಆಗ ಹೊಸ ವಿಷಯ. ಆ ಸೈಕಲ್ಲುಗಳು ಮಾತ್ರ ಹೊಚ್ಚ ಹೊಸದಾಗಿರುತ್ತಿತ್ತು. ಅಂದರೆ ಲೇಡೀಸ್ ಸೈಕಲ್ಲುಗಳು ನಮ್ಮ ಕಾಲದಲ್ಲಿಯೇ ಹುಟ್ಟಿದ್ದು. ಇನ್ನು ಗಂಡಸರ ಸೈಕಲ್ಲುಗಳಲ್ಲಿ ಬಹುಪಾಲು ಹಳೆಯದೇ ಇರುತ್ತಿತ್ತು.

ನನ್ನ ಗೆಳತಿಯರ ಮುಂದೆ ದಿನಕ್ಕೊಂದು ಸೈಕಲ್ ತುಳಿಯುವುದು ಎಷ್ಟು ಜಂಬದ ವಿಷಯ ಅಲ್ಲವೇ? ಗೇಟಿನ ಬಳಿಯೇ ಕಾದಿದ್ದು ಬೀಗ ಪಡೆದು ಸೈಕಲ್ ತುಳಿಯೋಕ್ಕೆ ಶುರುಮಾಡಿದರೆ, ಮಾವ ಒಳಗೆ ಹೋಗಿ ಹೆಂಡತಿಯನ್ನು ಚಚ್ಚಿ, ನಂತರ ಸ್ಟವ್ ಹಚ್ಚಿ ಅಡುಗೆ ಮಾಡಿ ಊಟ ಮಾಡುವ ಹೊತ್ತಿಗೆ ಮಧ್ಯಾಹ್ನ ಮೂರು ಗಂಟೆ ಗ್ಯಾರಂಟಿ. ಅಲ್ಲಿಯ ತನಕ ನಾನು ಸೈಕಲ್ ತುಳಿದಿದ್ದೂ ತುಳಿದಿದ್ದೆ. ಒಂದೊಂದು ಸಲ ಮಾವ ಬರುವಾಗ ಯಾಮಾರಿ ನಾನು ಒಳಗಿದ್ದುಬಿಟ್ಟರೆ ನನ್ನ ಪಾಡು ಯಾರಿಗೂ ಬೇಡ. ಕೋಪಿಸಿಕೊಂಡು ಹೆಂಡತಿಯನ್ನು ಚಚ್ಚುವಾಗ ನನಗೆ ಸೈಕಲ್ ಬೀಗ ಹೇಗೆ ಸಿಗುತ್ತದೆ? ಅದೂ ಪೌರುಷ ಜೋರಾಗಿರುವ ಸಂದರ್ಭದಲ್ಲಿ ಮಧ್ಯೆ ನುಸುಳಿದರೆ ನನಗೂ ಗೂಸಾ ಬೀಳುವುದು ಗ್ಯಾರಂಟಿ. ಸೈಕಲ್ ಬೀಗ ಪಡೆಯಲು ಒದ್ದಾಡಿಬಿಡುತ್ತಿದ್ದೆ.

ಆಗೆಲ್ಲಾ ನನ್ನನ್ನೇ ನಾನು ಹಳಿದುಕೊಂಡ ಸಂದರ್ಭ ಎಷ್ಟೋ. ಹೀಗೆ ಒಮ್ಮೆ ಮಾವ ಬಂದ ಸಂದರ್ಭದಲ್ಲಿ ಗೇಟಿನ ಬಳಿಯಿರದೆ ಬೀಗ ಸಿಗಲಿಲ್ಲ. ಸೀಮೆಎಣ್ಣೆ ಸ್ಟವ್ವಿನ ಪಂಪ್ ಮಾಡುತ್ತಿದ್ದ ಮಾವನನ್ನು ಹೆದರಿಕೆಯಿಂದಲೇ ಬೀಗ ಕೇಳಿದೆ. ಬಿಸಿಲಲ್ಲಿ ಹಸಿವಿನಿಂದ ಬಂದು ಹೆಂಡತಿಗೆ ಬಾರಿಸಿ ಬೇಸರಗೊಂಡಿದ್ದ ಮಾವ "ಬಾ ಇಲ್ಲಿ. ಅಡಿಗೆ ಮಾಡು. ಆಮೇಲೆ ಬೀಗ ಕೊಡ್ತೀನಿ" ಅಂದರು. ನಾನಿನ್ನೂ ನಾಲ್ಕೋ ಐದೋ ಓದುತ್ತಿದ್ದೆ. ನಾನು "ನಂಗೆ ಅಡಿಗೆ ಬರಲ್ಲ" ಅಂದೆ. "ಹೆಣ್ಮಕ್ಕಳು ಅಡಿಗೆ ಕಲೀದಿದ್ರೆ ಆಗುತ್ತಾ? ಕಟ್ಕೊಂಡ ಗಂಡ ನನ್ನಂಗೆ ಸಾಯ್ಬೇಕು ಅಷ್ಟೇ. ಅಡಿಗೆ ಕಲಿ ಬಾ ಇಲ್ಲಿ" ಅಂದರು ಕೋಪದಿಂದ. ತಕ್ಷಣ ಲ್ಷಕ್ಕ್ಮಕ್ಕ "ಬೀಗ ಅಲ್ಲಿದೆ. ತಗೊಂಡು ನೀನು ಹೋಗೇ" ಅಂದಳು. ನನಗೆ ಬೇಕಾದ್ದು ಸಿಕ್ಕಿತ್ತು. ತಗೊಂಡು ಹಾರುತ್ತಾ ಹೊರಗೋಡಿದೆ. "ಹೀಗೇ ಮೆರೀತಾ ಇರು. ಆಮೇಲೆ ಮೈ ಬಗ್ಗಲ್ಲ ನೋಡ್ತಿರು" ಅಂತ ಮಾವ ಕೂಗುವುದು ಕೇಳುತ್ತಿತ್ತು. ಅಪರ ಸೋಮಾರಿ ಲ್ಷಕ್ಕ್ಮಕ್ಕ, ಆ ಸಮಯದಲ್ಲಿ ಅಷ್ಟು ಚುರುಕಿನ ಮಾತಾಡಿದ ಕಾರಣ ಇಂದಿಗೂ ಒಗಟು ನನಗೆ.

(ಶ್ರೀಮತಿ ಶಾಂತಾ ನಾಗಮಂಗಲ ಅವರು ಇತ್ತೀಚೆಗೆ ಸಮನ್ವಯ ಸಮಿತಿ ವೇದಿಕೆಯಲ್ಲಿ ಹಾಕಿದ್ದ ಸೈಕಲ್ ಕವನದಿಂದ ಸ್ಫೂರ್ತಿಗೊಂಡು ಬರೆದ ಅನುಭವ ಕಥನ)

***

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ

ಅಧ್ಯಕ್ಷೀಯ ಅನಿಸಿಕೆಗಳು



– ಮಾನಸ ಕೆ.ಕೆ.

ಸಮನ್ವಯ ಸಮಿತಿ ಕನ್ನಡವೇ ಸತ್ಯ ವಾಟ್ಸಾಪ್ ಸಾಹಿತ್ಯ ಬಳಗದಿಂದ ನನ್ನನ್ನು 226ನೇ ದಾಸೋಹದ ಅಧ್ಯಕ್ಷಳನ್ನಾಗಿ ಮಾಡಿ ನನ್ನ ಸಾಹಿತ್ಯ ಸೇವೆಗೆ ಪ್ರೋತ್ಸಾಹಿಸುತ್ತಿರುವ ಎಲ್ಲಾ ಹಿರಿಯ ಲೇಖಕರಿಗೆ, ಗಣ್ಯರಿಗೆ ಹಾಗೂ ಶ್ರೀ ಮಹಾಬಲರವರಿಗೂ ಧನ್ಯವಾದಗಳು. ಬಳಗದ ಹಿರಿಯರಾದ ಶ್ರೀ ರವೀಂದ್ರ ಸರ್ ಅವರು ನನಗೆ ಈ ಬಳಗದಲ್ಲಿ ಭಾಗವಹಿಸಲು ಅವಕಾಶ ನೀಡಿ ಪ್ರೋತ್ಸಾಹಿಸುತ್ತಿದ್ದಾರೆ. ಅವರಿಗೆ ಮನಃಪೂರ್ತಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಜೂನ್ ತಿಂಗಳ 226ನೇ ದಾಸೋಹದಲ್ಲಿ ಪ್ರಸ್ತುತಪಡಿಸಿದ ಒಟ್ಟು 22 ಬರಹಗಳ ಬಗ್ಗೆ ನನ್ನ ಅನಿಸಿಕೆಗಳು ಹೀಗಿವೆ:

1. ಶ್ರೀಮತಿ ಪೂರ್ಣಿಮಾ ಭಗವಾನ್ – 'ಸಕ್ಕರೆ ಮಿಠಾಯಿ' – ನೀತಿ ಕತೆಗಳ ಸಂಕಲನ ಪರಿಚಯ

ಮೊದಲನೇ ಪ್ರಸ್ತುತಿ ಶ್ರೀಮತಿ ಪೂರ್ಣಿಮಾ ಭಗವಾನ್‌ರವರದ್ದು. ಇವರು ಶ್ರೀಮತಿ ಟಿ.ಆರ್. ಉಷಾರಾಣಿಯವರು ರಚಿಸಿರುವ 'ಸಕ್ಕರೆ ಮಿಠಾಯಿ' ಕಥಾ ಸಂಕಲನವನ್ನು ಪರಿಚಯಿಸಿದ್ದಾರೆ. ಈ ಕೃತಿಯಲ್ಲಿ ಮಕ್ಕಳಿಗಾಗಿ 40 ನೀತಿ ಕತೆಗಳಿವೆ. ಈ ಎಲ್ಲಾ ಕಥೆಗಳು ಹೊಸ ತಿರುವುಗಳೊಂದಿಗೆ ಸಮಾಜಕ್ಕೆ ಉಪಯುಕ್ತ ಕಥೆಗಳಾಗಿವೆ. ಮುಖ್ಯವಾಗಿ ಮಕ್ಕಳಿಗೆ ಉತ್ತಮ ಜೀವನದ ಅರಿವನ್ನು ತಿಳಿಸುವ ಉದ್ದೇಶ ಮೆಚ್ಚುಗೆ ಆಯಿತು. ಇದೊಂದು ಉತ್ತಮ ಆಲೋಚನೆಯ ಕೃತಿಯಾಗಿದೆ.

ಇಲ್ಲಿ 'ಮಾಯಾ ಕನ್ನಡಿ' ಕಥೆಯನ್ನು ಉದ್ಯೋಗಾಕಾಂಕ್ಷಿಗಳಿಗಾಗಿ ಬರೆದಿರುವರು. ಯುವಕರಿಗೆ ಇಂಥಹ ವಿಚಾರಧಾರೆ ಬೇಕು. ಭವಿಷ್ಯವಿಲ್ಲದೇ ಸಂಸಾರಗಳು ಎತ್ತ ಸಾಗುತ್ತಿವೆ. ಇಂತಹ ವಿಚಾರಗಳನ್ನು ಬರಹದ ಮೂಲಕ ಯುವ ಸಮೂಹಕ್ಕೆ ತಲುಪಿಸುವ ದೊಡ್ಡ ಜವಾಬ್ದಾರಿ ಲೇಖಕರದ್ದು. 'ಸಕ್ಕರೆ ಬೊಂಬೆ'ಯಲ್ಲಿ ಅಹಂಕಾರದ ಮದದ ವಿಚಾರ ಇದೆ. ವಿದ್ಯೆಯೊಂದೇ ಇದ್ದರೆ ಸಾಲದು, ವಿನಯವೂ ಮುಖ್ಯ ಎನ್ನುವ ಸಂದೇಶ ಬಹಳ ಚೆಂದವಾಗಿ ವಿವರಿಸಿದ್ದಾರೆ.

ಇವರ ಎಲ್ಲಾ ಕತೆಗಳಲ್ಲಿ ಕಾಲ್ಪನಿಕ, ವೈಚಾರಿಕ, ರಮ್ಯಾದ್ಭುತ, ಪರಿಸರ ಕಾಳಜಿ ಹೀಗೆ ಹಲವಾರು ವಿಚಾರಗಳನ್ನು ಲೇಖಕಿ ಸಮರ್ಪಕವಾಗಿ ಬಿಂಬಿಸಿದ್ದಾರೆ. ಒಟ್ಟಾರೆ ಈ ಕೃತಿ ಮಕ್ಕಳ ಮನಸ್ಸನ್ನು ಗೆಲ್ಲುವ ಸುಂದರ ಬರಹದ ಕೃತಿ ಎಂದು ಹೇಳಬಹುದು. ಪೂರ್ಣಿಮಾರವರು ಹೇಳಿರುವ ಹಾಗೆ ಇದು ಶಿಶು ಸಾಹಿತ್ಯಕ್ಕೆ ನೀಡಿರುವ ಅಮೂಲ್ಯ ಕೊಡುಗೆಯಾಗಿದೆ. ಲೇಖಕಿ ಉಷಾರವರ ಲೇಖನಿಯಿಂದ ಮತ್ತಷ್ಟು ಮಗದಷ್ಟು ಉತ್ತಮ ಕೃತಿಗಳು ಹೊರಹೊಮ್ಮಲಿ ಎಂದು ಆಶಿಸುವೆನು.

ಶ್ರೀಮತಿ ಮಾನಸ ಕೆ.ಕೆ.

ಮೂಲತಃ ತುಮಕೂರಿನವರಾದ ಶ್ರೀಮತಿ ಮಾನಸ ಅವರು ಪ್ರಸಕ್ತ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ. ತುಮಕೂರಿನ ಸರ್ಕಾರಿ ಕಲಾ ಕಾಲೇಜಿನಿಂದ ಬಿ.ಎ. ಪದವಿ ಪಡೆದಿರುವ ಇವರು, ಸಣ್ಣ ಕಥೆ, ನೀಳ್ಗತೆ, ಮಕ್ಕಳ ಕತೆಗಳು, ನ್ಯಾನೋ ಕತೆ, ಕವನ, ಹನಿಗವನ, ಚುಟುಕು, ನೀಳ್ಗವಿತೆ, ಭಾವಗೀತೆ, ಕಟ್ಟುಪದ, ಸೂಕ್ತಿ ಹೀಗೆ ನಾನಾ ಪ್ರಕಾರದ ಸಾಹಿತ್ಯ ರಚನೆಯಲ್ಲಿ ತೊಡಗಿಕೊಂಡು ಕವಯತ್ರಿ ಹಾಗೂ ಲೇಖಕಿ ಎಂದು ಗುರುತಿಸಿಕೊಂಡಿದ್ದಾರೆ. ಇವರ ಬರಹಗಳು ನಾಡಿನ ಅನೇಕ ಪತ್ರಿಕೆಗಳು ಹಾಗೂ ನಿಯತಕಾಲಿಕಗಳಲ್ಲಿ ಪ್ರಕಟವಾಗಿವೆ. ರಾಜ್ಯ ಮಟ್ಟದ ಕವಿಗೋಷ್ಠಿಗಳಲ್ಲೂ ಭಾಗವಹಿಸಿ ಗೌರವ, ಸನ್ಮಾನಗಳನ್ನು ಸ್ವೀಕರಿಸಿದ್ದಾರೆ.

ಮಾನಸ ಅವರು ರಚಿಸಿದ 'ಮುಗ್ಧಮನ', 'ಅಂತರ್ಮುಖಿ', 'ಮೌನತರಂಗ', 'ಚಿತ್ತಾದ ಸುತ್ತ' ಎಂಬ ಕಥಾ ಸಂಕಲನಗಳು, 'ಹೃನ್ಮನಗಾನ' ಕವನ ಸಂಕಲನ, 'ಹತ್ತು ಮುತ್ತು' ಸಂಪಾದಿತ ಕವನ ಸಂಕಲನ ಮತ್ತು 'ಅಕ್ಷರ ಸಿಂಚನ' ಲೇಖನ ಮಾಲಿಕೆ – ಹೀಗೆ ಇವರ ಹಲವು ಕೃತಿಗಳು ಈಗಾಗಲೇ ಬಿಡುಗಡೆಯಾಗಿವೆ.

ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ 'ಕನ್ನಡ ಸೇವಾ ರತ್ನ' ಪ್ರಶಸ್ತಿ, ಕರ್ನಾಟಕ ಲೇಖಕಿಯರ ಸಂಘದಿಂದ 'ನಿರ್ಮಲಾ ಎಲಿಗಾರ್ ಉದಯೋನ್ಮುಖ ಕವಯತ್ರಿ' ಬಹುಮಾನ, ಸ್ನೇಹ ಸಂಗಮ ವಾಟ್ಸಾಪ್ ಬಳಗದಿಂದ 'ಸ್ಫೂರ್ತಿರತ್ನ ಪ್ರಶಸ್ತಿ', ಸುಧರ್ಮ ಸಾಂಸ್ಕೃತಿಕ ಸಂಸ್ಥೆಯಿಂದ ಗೌರವ ಸನ್ಮಾನ ಮತ್ತು 'ಲಲಿತಾ ಪುರಸ್ಕಾರ', ಕರ್ನಾಟಕ ವಚನ ಸಂಸ್ಥೆಯಿಂದ 'ಶರಣ ಬಂಧು' ಪುರಸ್ಕಾರ – ಹೀಗೆ ಹಲವು ಗೌರವ ಪ್ರಶಸ್ತಿಗಳಿಗೆ ಭಾಜನರಾಗಿರುವ ಶ್ರೀಮತಿ ಮಾನಸರವರು ನುಡಿತೋರಣ ಬಳಗದ ಸಂಚಾಲಕಿಯೂ ಆಗಿದ್ದಾರೆ.

***

2. ಶ್ರೀಮತಿ ಸ್ನೇಹ ಶಶಿಧರ್ – ಕಥೆ: 'ಸವಿಯದಿರು ಸವಿತಾ'

ಬದುಕೆಂದರೆ ಹಾಗೆ ಒಮ್ಮೆ ನಗು ಒಮ್ಮೆ ಅಳು. ಈ ಕತೆಯಲ್ಲಿ ಲೇಖಕಿ ಮತ್ತು ಸವಿತಾರ ಭಾಂದವ್ಯದ ಬಗ್ಗೆ ಅದ್ಭುತವಾಗಿ ಬರೆದಿರುವರು. ಒಬ್ಬರನ್ನೊಬ್ಬರು ಸಹಬಾಳ್ವೆಯಿಂದ ಅರಿತು ಬಾಳುವ ಕಲೆಯನ್ನು ಕಲಿಸುವ ಪರಿ ಚಂದವಾಗಿ ಮೂಡಿಬಂದಿದೆ. ಸವಿತಾರ ಸಂಸಾರದಲ್ಲಿ ಏರುಪೇರುಗಳು ಸಾಕಷ್ಟು ಬಂದರೂ ಧೃತಿಗೆಡದೆ ಬಂದ ಕಷ್ಟಗಳನ್ನೆಲ್ಲ ಸವಾಲಾಗಿ ಸ್ವೀಕರಿಸಿ ಎಲ್ಲರನ್ನೂ ಸುಧಾರಿಸಿಕೊಂಡು ಹೋಗುವ ಸವಿತಾರಂತಹ ಮನಸ್ಥಿತಿಯನ್ನು ಜೀವನದಲ್ಲಿ ಹೊಂದಿಸಿಕೊಂಡು ಹೋಗುವುದನ್ನು ಕಲಿಯಬೇಕು. ಕೊನೆಯಲ್ಲಿ ಅವರನ್ನು ಫೇಸ್ಬುಕ್ನಲ್ಲಿ ನೋಡಿ ಮಾತಾಡಿರುವಾಗ ಅವರ ಮನಸ್ಥಿತಿ ಹೇಗಿರಬೇಕಲ್ಲವೇ? ಒಂದು ಸುಂದರ ಸಂಸಾರದ ಸುತ್ತ ಹೆಣೆದ ಕತೆ ಸಮಾಜಕ್ಕೆ ಮಾದರಿ ಎಂದು ಹೇಳಬಹುದು. ಉತ್ತಮ ಕಥೆ.

3. ಶ್ರೀಮತಿ ಗೌರಿ ಭಟ್ – ಲೇಖನ: 'ಅತ್ತೆಮ್ಮ'

ಮದುವೆಯ ಹೊಸದರಲ್ಲಿ ಪತಿಗೆ ಮೈಸೂರಿಗೆ ವರ್ಗಾವಣೆ ಸಂದರ್ಭ, ಹಳ್ಳಿ ವಾಸದ ಅನುಭವ, ಅತ್ತೆ ಮಾವನವರೊಟ್ಟಿಗೆ ಬದುಕುವುದು ಅನಿವಾರ್ಯ ಆದಾಗ, ಭಯದ ವಾತಾವರಣ ಸೃಷ್ಟಿ ಆದಾಗ ನಡೆದ ಘಟನೆಯನ್ನು ಚೆನ್ನಾಗಿ ಕಟ್ಟಿಕೊಟ್ಟಿರುವರು. ಈ ಲೇಖನ ಇವರ ಬದುಕಿನ ಅನುಭವದಂತಿದೆ. ಅತ್ತೆ ಮಾವನವರೊಟ್ಟಿಗಿನ ಜೀವನದಲ್ಲಿ ಅರಿಯದೆ ಪಕ್ಕದ ಮಾವಿನ ತೋಟದಲ್ಲಿ ಮಾವಿನ ಫಲ ತಿನ್ನುವ ಬಯಕೆಯಿಂದ

ಅದ ಅವಾಂತರ ಮಾಡಿದ ಪ್ರಸಂಗದ ವಿವರಣೆ ಚೆನ್ನಾಗಿ ಕೊಟ್ಟಿರುವರು. ಸಂಪ್ರದಾಯದ ಹೆಣ್ಣುಮಕ್ಕಳು ಇಂತಹ ಅನೇಕ ವಿಧವಾದ ಅನುಭವಗಳನ್ನು ಪಡೆದಿರುತ್ತಾರೆ. ಅನೇಕರು ಇಂತಹ ಸನ್ನಿವೇಶಗಳನ್ನು ದಾಟಿ ಬಂದಿರುವರು.

'ಯಾರವಳು' ಎಂದು ಗದರಿದಾಗ ಆ ದನಿಗೆ ಹೆದರಿದ ಆ ಪುಟ್ಟ ಹೃದಯದ ಕಸಿವಿಸಿಯ ಜೊತೆಗೆ ಪಾಕಿಸ್ತಾನವನ್ನು ನೆನಪಿಸಿಕೊಂಡಿರುವರು, ಅಂದ್ರೇ ಗಡಿಯ ಗುಂಡಿಗೆಯಲ್ಲಿ ಯಾವ ರೀತಿ ಭೀತಿ ಇರುವುದೋ ಆ ರೀತಿಯ ಅನಿಸಿಕೆ ತಿಳಿಸಿರುವರು. ಇದರಿಂದ ಅತ್ತೆಯ ಸ್ವಭಾವ ಅರಿವ ಒಂದು ಅವಕಾಶ ಇದಾಗಿದೆ. ಇಲ್ಲಿ ಗೌರಿ ಅವರ ವಿಚಿತ್ರ ಮನಸ್ಥಿತಿಯನ್ನು ಪ್ರಸ್ತುತಿಪಡಿಸಿರುವರು. ಅಪರಿಚಿತ ವ್ಯಕ್ತಿಯಿಂದ ತಾಯಿಯ ಪರಿಚಯ, ಅದರೂ ಗದರಿದವರಿಂದಲೇ ಪ್ರಶಂಸೆ ಪಡೆದದ್ದು ವಿಧಿ ಲೀಲೆ ಎನ್ನಬಹುದು.

ಇಲ್ಲಿ ಮಾವಿನಹಣ್ಣಿನ ಹೆಸರನ್ನು ವಿವರಿಸಿರುವರು. ಅಬ್ಬಾ ಏನೆಲ್ಲಾ ಮಾವಿನ ತಳಿಗಳು ಇರುತ್ತವೆಂದು ನಾನು ತಿಳಿದೆ. ತಂದೆ ತಾಯಿ ಗೌರಿಯ ಮನೆಗೆ ಬಂದಾಗ ಊಟ ಬಡಿಸುವಾಗಿನ ಒಂದು ಸಣ್ಣ ಘಟನೆ ಅತ್ತೆಯ ಸ್ವಭಾವವನ್ನು ತಿಳಿಸುವ ಪರಿ ಸುಂದರ ವರ್ಣನೆ. ಒಟ್ಟಾರೆ ಅತ್ತೆ ಹೇಗೆ ಇರಲಿ, ಸೊಸೆ ಅತ್ತೆಯನ್ನು ಮೆಚ್ಚಿಕೊಳ್ಳುವ ಮನಸ್ಸು ತುಂಬಾ ಮೆಚ್ಚುಗೆಯಾಯಿತು. ಉತ್ತಮ ಲೇಖನ. ಧನ್ಯವಾದ ಗೌರಿ ಭಟ್‌ರವರೆ.

4. ಶ್ರೀ ವಿಠ್ಠಲ ಇಜೇರಿ – ಲೇಖನ : 'ಅಹಂಕಾರದ ಅಳಿವು'

ಮನುಷ್ಯನ ಜೀವನದಲ್ಲಿ ನಂಬಿಕೆ ಎಷ್ಟು ಮುಖ್ಯ ಅನ್ನುವುದನ್ನು ಈ ಲೇಖನ ಸೂಚಿಸುತ್ತದೆ. ನಂಬಿಕೆ ಮತ್ತು ಮೂಢನಂಬಿಕೆ ವ್ಯತ್ಯಾಸವನ್ನು ಅರ್ಥಪೂರ್ಣವಾಗಿ ತಿಳಿಸಿದ್ದಾರೆ. ನಾವು ಎಷ್ಟು ಬಲಶಾಲಿಗಳಾದರೂ ಒಮ್ಮೆ ಅಪನಂಬಿಕೆ ಹೊಕ್ಕರೆ ವಿಶೇಷತೆಗಳೆಲ್ಲವೂ ಗೌಣ. ಬದುಕ ಸವೆಸಬೇಕಾದರೆ ನಂಬಿಕೆ ಬಹುಮುಖ್ಯ ಪಾತ್ರವಹಿಸುತ್ತದೆ. ನಂಬಿಕೆಯ ವಿಚಾರದ ಒಂದು ದಂತಕಥೆಯನ್ನು ಹೇಳಿದ್ದಾರೆ.

ಚೀನಾ ದೇಶದ ಒಬ್ಬ ರಾಜ ನೈತಿಕ ಅಧ:ಪತನದಿಂದ ಬೇಸರಗೊಂಡು ದೇಶ ತೊರೆದು ಹೊರಟ. ಹಾದಿಯಲ್ಲಿ ಒಬ್ಬ ಅವನನ್ನು ಅಡ್ಡ ಹಾಕಿ ನಿಮಗೆ ಆತಿಥ್ಯ ನೀಡುತ್ತೇನೆ ಎಂದ. ಆಗ ತತ್ವಜ್ಞಾನಿ ಸುಂಕದಕಟ್ಟೆಯವನಿಗೆ ಉಪದೇಶಿಸಿದ ಮಾತನ್ನು ಇಲ್ಲಿ ಗಮನಿಸಬೇಕು. ಎಲ್ಲಾ ಕಾಲದಲ್ಲಿಯೂ ಎಲ್ಲಾ ದೇಶದಲ್ಲಿಯೂ ಒಳ್ಳೆಯವರ ಮತ್ತು ಕೆಟ್ಟವರ ತಾರತಮ್ಯ ಇದ್ದೇ ಇರುತ್ತದೆ. ನೀನು ನಿನ್ನ ಪಾಡಿಗೆ ನಿನ್ನ ಚಿಂತನೆಯನ್ನು ಬರೆದುಬಿಡು ಎಂಬುದಾಗಿ ತಿಳಿಸುತ್ತಾನೆ. ಆಗ ದಾವೋದಿ ಜಿಂಗ್ ಎಂಬ ಪುಸ್ತಕ ರಚಿಸಿದಾಗ ಇದು ಅನೇಕರಿಗೆ ದಾರಿದೀಪವಾಗುತ್ತದೆ.

ಈ ತತ್ವದ ಸಾರಾಂಶದಿಂದ ಮತ್ತೊಂದು ಕಥೆಯ ಸಾರಾಂಶವನ್ನು ಹೊರಹಾಕಿದ್ದಾರೆ. ಶಾ ಇಬ್ರಾಹಿಂ ಎಂಬ ಅರಸ ಭೋಬಲ್ ರಾಜ್ಯ ಆಳುತ್ತಿದ್ದ ಇವನಿಗೆ ಆಧ್ಯಾತ್ಮ, ಸಾಧುಸಂತರು, ಬಡವರ ಮೇಲೆ ಕರುಣೆ ಮತ್ತು ಭಗವಂತನ ಧ್ಯಾನದಿಂದ ಮೋಕ್ಷ ಹೊಂದುವ ಮಹದಾಸೆ ಇತ್ತಂತೆ. ರಾಜನಿಗೆ ಪಾಠ ಕಲಿಸುವ ನೆಪದಲ್ಲಿ ರಾಜನ ಬದುಕು ಬದಲಾದ ಪ್ರಸಂಗ ಅದ್ಭುತ ರೂಪತಾಳಿದೆ. ರಾಜ ಭಾರತಕ್ಕೆ ಬಂದು ಸಂತ ಕಬೀರರ ಆಶ್ರಯದಲ್ಲಿದ್ದು ಕಾಯಕ ಮಾಡುವಾಗ ಕೆಲವು ಪರೀಕ್ಷೆಗಳನ್ನು ಎದುರಿಸಬೇಕಾಗುತ್ತದೆ. ಕಬೀರರ ಕುಟುಂಬದಲ್ಲಿ ವಾಸವಾಗಿದ್ದಾಗ ಹಲವಾರು

ಅನುಭವಗಳನ್ನು, ದೇವರನ್ನು ಅರಿವ ಕ್ಷಣಗಳನ್ನು ಲೇಖಕರು ಚೆನ್ನಾಗಿ ರಚಿಸಿರುವರು. ಮುಂದಿನ ದಿನಗಳಲ್ಲಿ ರಾಜ ತನ್ನ ದೇಶದ ಅರಮನೆ ಪ್ರವೇಶಿಸಲಿಲ್ಲ. ಇಲ್ಲಿಯೂ ಕೂಡ ಒಂದು ಸೂಜಿ ಕತೆ ಬರುತ್ತದೆ. ಆ ಸಂದರ್ಭ ಇಡೀ ಬದುಕಿನ ಸಾರ, ಸತ್ವ ತಿಳಿಸುತ್ತದೆ. ನಿಜಕ್ಕೂ ಇದು ಉಪಯುಕ್ತ ಲೇಖನ. ವಿಠ್ಠಲ ಇಜೇರಿ ಅವರಿಗೆ ಧನ್ಯವಾದಗಳು.

5. ಶ್ರೀಮತಿ ಶಾಂತಾ ನಾಗಮಂಗಲ– ಕೃತಿ ಪರಿಚಯ:'ಪುಸ್ತಕ ನಡುವಣ ನವಿಲುಗರಿ–ಅಭಿಜಾತ ಭಾರತೀಯ ಕಲಾಪ'

ಶತವಾಧಾನಿ ಗಣೇಶ್ ಎಂದು ಪ್ರಸಿದ್ಧರಾದ ಶ್ರೀ ಗಣೇಶ್ ಅವರು ಅವಧಾನ ಕಲೆಯ ವಿದ್ವಾಂಸರು. ಬಹು ಭಾಷೆಗಳಲ್ಲಿ ಉತ್ಕೃಷ್ಟ ಕವಿ. ಕನ್ನಡ, ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳಲ್ಲಿ ಸುಮಾರು 1300ಕ್ಕೂ ಹೆಚ್ಚಿನ ಅವಧಾನಗಳನ್ನು ಮಾಡಿರುತ್ತಾರೆ. ನಿಜಕ್ಕೂ ಇಂತಹ ಮಹಾ ವ್ಯಕ್ತಿಯ ಬರಹದ ಬಗ್ಗೆ ಒಂದೆರಡು ಸಾಲುಗಳನ್ನು ತಿಳಿಸಲು ಅವಕಾಶ ಸಿಕ್ಕಿರುವುದು ನನ್ನ ಸೌಭಾಗ್ಯವೆಂದು ಭಾವಿಸುತ್ತೇನೆ. ಇದಕ್ಕೆ ಕಾರಣರಾದ ಶ್ರೀಮತಿ ಶಾಂತಾ ನಾಗಮಂಗಲ ಅವರಿಗೆ ಹೃತ್ಪೂರ್ವಕ ಧನ್ಯವಾದಗಳು.

ಲೇಖಕರು ಅಭಿಜಾತ ಸಾಹಿತ್ಯದ ಓದಿನ ಹಾದಿಯಲ್ಲಿ ತಮ್ಮೊಳಗೆ ತಟ್ಟಿದ ಅನೇಕ ಸಂದರ್ಭಗಳನ್ನು ಕತೆಯಾಗಿಸಿರುವರು. ಈ ಕೃತಿಯೇ 'ಪುಸ್ತಕ ನಡುವಣ ನವಿಲುಗರಿ'. ಚಿಕ್ಕ ಮಕ್ಕಳಾಗಿದ್ದಾಗ ಪುಸ್ತಕದಲ್ಲಿ ನವಿಲುಗರಿಯನ್ನು ಇಡುತಿದ್ದ ದಿನಗಳನ್ನು ನೆನಪಿಸಿಕೊಂಡು ಒಂದೊಂದು ಕತೆ ಬರೆಯುವಾಗಲೂ ನವಿಲುಗರಿ ಇಡುತಿದ್ದರಂತೆ. ಇಂತಹ ಆಲೋಚನೆ ಕಣ್ಣಿಗೆ ಕಂಡದ್ದು ರಚಿತವಾದಾಗ ನವಿಲುಗರಿಯನ್ನು ಎಣಿಕೆಗಾಗಿ ಇರಿಸುತ್ತಿದ್ದರೇನೋ ಎಂದೆನಿಸಿತು. ಒಂದೊಂದು ಕಥೆಯೂ ವಿಶಿಷ್ಟ ರೂಪ ತಾಳಿ ಅರ್ಥಪೂರ್ಣವಾಗಿದೆ. ಓದುಗರಿಗೆ ಅಚ್ಚರಿಯನ್ನು ಮೂಡಿಸುತ್ತವೆ. ಈ ಕಥಾ ಸಂಕಲನದಲ್ಲಿ 10 ಕಥೆಗಳಿದ್ದು, ಲೇಖಕಿ ಕೆಲವು ಕತೆಗಳನ್ನು ನಮ್ಮ ಹೆಸರಿಸಿದ್ದಾರೆ.

'ಸೀತಾ ಸಂದೇಹ' – "ಆತ್ಮಾನಂ ಮಾನುಷ: ಮನ್ಯೆ". ಇದು ರಾಮಾಯಣಕ್ಕೆ ಸಂಬಂಧಪಟ್ಟ ಕಥೆಯಾಗಿದೆ. ಲೋಕೋ ಭಿನ್ನ ರುಚಿ: ಎಂಬಂತೆ ಲೋಕ ಏನೇ ಹೇಳಿದರೂ ಶ್ರೀರಾಮ ಮತ್ತು ಸೀತಾ ಮಾತೆಯ ಪರಸ್ಪರ ಪ್ರೇಮ ವಿಶ್ವಾಸಗಳ ಪರಾಕಾಷ್ಠೆಯನ್ನು ತೋರುತ್ತದೆ.

"ಶತ ಶೃಂಗ ಪರ್ವತ" ಕತೆಯಲ್ಲಿ ಮಾದ್ರಿ ಮತ್ತು ಪಾಂಡು ಮರಣಿಸುವ ಪ್ರಸಂಗವನ್ನು ಚಿತ್ತಾರವಾಗಿ ಶೃಂಗಾರವಾಗಿ ಅದ್ಭುತವಾಗಿ ವರ್ಣಿಸಲಾಗಿದೆ. ಮಹಾಭಾರತದ ಪ್ರಸಂಗಗಳ ಕತೆಗಳಲ್ಲಿ ಕೃಷ್ಣನ ಪಾತ್ರವು ಗೋಪಿಕೆಯ ಪತ್ರ ವಿಚಾರ, ಗೋಕುಲದ ವಿಚಾರಗಳು, ಬೃಂದಾವನ ತೊರೆದು ಮಥುರೆಯತ್ತ ಪಯಣ ಹೀಗೆ ನಾನಾ ವಿಚಾರಗಳು ಈ ಕತೆಯಲ್ಲಿವೆ.

"ವಾರಾಣಾಸಿಯ ವಾರಾಂಗನೇ"– ಸಂಸ್ಕೃತದ ಶ್ರೇಷ್ಠ ಕವಯತ್ರಿ ಕಾಶ್ಮೀರದ ವಿಕಟ ನಿತಂಬೆಯ ಬದುಕಿನಲ್ಲಿ ವಿಧಿಯಾಡಿದ ಆಟ, ಅದರಿಂದ ಅವಳ ಬದುಕಿನ ತಿರುವು, ಬದಲಾದ ಪ್ರಸಂಗಗಳು, ಮೂರ್ಖ ಗಂಡನ ಮಡದಿ ಯಾಗಲೊಲ್ಲದೆ ಮನನೊಂದು ವಾರಾಣಸಿ ಸೇರಿ ವಾರಾಂಗನೆಯಾದ ಘಟನೆಯ ಸುತ್ತ ಹೆಣೆದ ಕತೆ ಇದಾಗಿದೆ.

"ಭವದ ಬಸುರಿನ ಭಾವ"- ಸಂಸ್ಕೃತದ ಮತ್ತೊಬ್ಬ ಶ್ರೇಷ್ಠ ನಾಟಕಕಾರರಾದ ಭವಭೂತಿಯ ಬದುಕಿನ ಕತೆ. ಹಿರಿಯ ಕವಿಯನ್ನು ಅವನ ಅಭಿಮಾನಿಯಾದ ಕಿರಿಯ ಕವಿಯೊಬ್ಬ ಮಾತುಕತೆಗಳಿಗೆಳೆದು ಹಿರಿಯನ ಮನದಲ್ಲಿ ಒಟ್ಟಾಗಿರುವ, ಒತ್ತಾಗಿರುವ ಭವದ ಭಾವಗಳಿಗೆಲ್ಲಾ ಹೊರ ಅರಿವು ಕೊಡುವಂತಿದೆ ಈ ಕತೆ.

ಒಟ್ಟಾರೆ, ಪುರಾಣದ ಪಾತ್ರಗಳನ್ನು ಅಲ್ಲಿನ ಜೀವನ ಶೈಲಿಯನ್ನು ಕತೆಗಳ ಮೂಲಕ ನಮ್ಮ ಸಂಸ್ಕೃತಿಯನ್ನು ಎಲ್ಲೂ ಲೋಪ ಬಾರದಂತೆ ಪಾತ್ರಗಳಿಗೆ ಜೀವ ತುಂಬಿ ಬರೆದ ಎಲ್ಲಾ ಕತೆಗಳು ಧರ್ಮೋದ್ಧಾರಕ್ಕಾಗಿ ರಚಿಸಿದ್ದಾರೆ. ಈ ದಿನ ಈ ಕೃತಿಯ ಪ್ರಸ್ತುತಿಯ ಮೂಲಕ ಇದರ ವಿಚಾರ ತಿಳಿಯುವ ಸದವಕಾಶ ಸಿಕ್ಕಿವುದು ನನ್ನ ಪುಣ್ಯವೆಂದೇ ಭಾವಿಸಿರುವೆ. ಲೇಖಕರಾದ ಶ್ರೀ ಶತಾವಧಾನಿ ಗಣೇಶ್‌ರವರಿಗೆ ಮತ್ತು ಶಾಂತಾ ನಾಗಮಂಗಲ ಅವರಿಗೆ ಅಭಿನಂದನೆಗಳು ಮತ್ತು ಧನ್ಯವಾದಗಳು.

6. ಶ್ರೀ ಎಸ್. ಧೀರೇಂದ್ರ ಲೇಖನ : 'ತೆರೆಯ ಮರೆಯಲ್ಲಿ'

ಶ್ರೀ ಧೀರೇಂದ್ರರವರ ಈ ಲೇಖನ ಚೆಂದವಿದೆ. ಮೂರು ವರ್ಷಗಳ ಹಿಂದೆ ವಾಚನ ಮಾಡಿದ ಬರಹ ನಾಟಕವಾದದ್ದು ಸಂತಸದ ವಿಚಾರ. ಎಚ್ಚೆಸ್ಕೆಯವರ ಪ್ರಬಂಧಗಳನ್ನು ಆಧರಿಸಿ ತಾವೇ ನಾಟಕ ರಚಿಸಿದ ಈ ಬರಹವು ಎಚ್ಚೆಸ್ಕೆ ಬೆಳಕು-9ರ ಕಾರ್ಯಕ್ರಮದ ಒಂದು ಭಾಗವಾಗಿ ಪ್ರದರ್ಶನ ಮಾಡುವ ಅವಕಾಶ ಸಿಕ್ಕಿದ್ದು ಖುಷಿಯ ವಿಚಾರ ಎಂದಿರುವರು. ನಾಟಕದ ಪಾತ್ರಗಳನ್ನು ಸೃಷ್ಟಿಸುವುದು ಸುಲಭದ ಮಾತಲ್ಲ. ವಿಭಿನ್ನ ಆಯಾಮಗಳನ್ನು ಆಲೋಚಿಸಬೇಕು, ಪಾತ್ರಗಳಿಗೆ ನ್ಯಾಯ ಒದಗಿಸಬೇಕು, ಎಲ್ಲವೂ ಸುಸೂತ್ರವಾಗಿ ಸಾಗಬೇಕೆಂದರೆ ಹಾಡುಗಳು ಬೇಕು. ಇದಕ್ಕೆ ಹಾಡುಗಳನ್ನು ಬಳಗದ ಶ್ರೀ ಕೆ.ಆರ್.ಎಸ್. ಮೂರ್ತಿ ಅವರು ಅಳವಡಿಸಿಕೊಟ್ಟರಂತೆ. ಈ ನಾಟಕದಲ್ಲಿ ವಿಶೇಷ ಅಂದ್ರೆ 61ರಿಂದ 79 ವರ್ಷದವರು ಉತ್ಸಾಹದಿಂದ ಪಾತ್ರವಹಿಸಿದ್ದರು. ಇದರ ತಾಲೀಮು, ಆಯೋಜನೆ, ಎಷ್ಟು ಕಷ್ಟ ಇರಬಹುದು. ಎಲ್ಲರನ್ನೂ ಒಟ್ಟುಗೂಡಿಸುವುದು ತಪಸ್ಸು ಎನ್ನಬಹುದು. ಇಲ್ಲಿ ಲೇಖಕರು ಅನುಭವಿಸಿದ ತಳಮಳಗಳನ್ನು ಚೆಂದವಾಗಿ ವರ್ಣಿಸಿರುವರು. ಅವರ ಪ್ರಯತ್ನಕ್ಕೆ ಸಿಕ್ಕ ಫಲ ಅದೊಂದು ಪರಮಾನಂದ ಎನ್ನಬಹುದು. ಅಲ್ಲಿ ನಡೆಯುತ್ತಿದ್ದ ತಾಲೀಮಿನ ಸಮಯದಲ್ಲಿ ಚಪ್ಪರಿಸಿದ ತರಹ ತರಹದ ಸವಿ ತಿನಿಸು ಸವಿದವರೆಲ್ಲಾ ಪುಣ್ಯವಂತರು. ಇಂತಹ ವರ್ಣನೆ ಕಂಡಾಗ ನಾನೂ ಪಾತ್ರಧಾರಿ ಆಗಿದ್ದರೆ ಚೆಂದ ಅನಿಸಿತ್ತು. ಒಟ್ಟಾರೆ ನಾಟಕ ಪ್ರದರ್ಶನದ ನೆನಪುಗಳನ್ನು ಅದ್ಭುತವಾಗಿ ವಿವರಿಸಿದ್ದಾರೆ. ಧೀರೇಂದ್ರ ಸರ್ ಉತ್ತಮ ಲೇಖನದಲ್ಲಿ ಹಲವಾರು ವಿಚಾರ ತಿಳಿಸಿರುವಿರಿ. ನಿಮಗೂ ಧನ್ಯವಾದಗಳು.

7. ಶ್ರೀಮತಿ ಜಯಂತಿ ಕನ್ನುಕೆರೆ - ಕವನ: 'ಬಲ್ಲಿದನಾದ ಬಲ್ಲವ'

ಈ ಕವನ ಅರ್ಥಪೂರ್ಣವಾಗಿದೆ. ಮನುಷ್ಯ ತನ್ನ ಬದುಕಿನಲ್ಲಿ ಹೇಗೆ ಪರಸ್ಪರ ಹೊಂದಿಕೊಳ್ಳಬೇಕು, ಯಾರಿಗೂ ನೋವುಂಟು ಮಾಡದೆ ಬದುಕುವ ಕಲೆಯನ್ನು ತಮ್ಮ ಭಾವನೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಒಳಿತಿನ ವಿಚಾರದಲ್ಲಿ ನಾವು ಹೇಗೆ ಸತ್ವಯುತವಾದುದನ್ನು ಅಳವಡಿಸಿಕೊಂಡು ಸಾರ್ಥಕ ಬದುಕನ್ನು ಮಾಡಬೇಕು. 'ವಾದ ವಿವಾದದ ಸುಳಿಗೆ ಸಿಲುಕದಿರಿ, ಮೌನದಿಂದ ಸಕಲವನ್ನೂ ಗೆಲ್ಲುತ್ತಾ ಸೌಮ್ಯ ಮನ ಹೊತ್ತು ಬಿಡಿ' ಎಂದು ಜಗತ್ತಿಗೆ ನಾವು ಎಂದೂ ಭಾರವಾಗ ಬಾರದೆಂದು ಸುಂದರ ಸಂದೇಶ ನೀಡಿದ್ದಾರೆ. ಹಾಗೆ ತುಂಬಿದ ಕೊಡ ತುಳುಕುವುದಿಲ್ಲ. ಸತ್ಯದ ಫೇಸ್

ನುಡಿಯದು. ನಮ್ಮ ನಡೆ, ನುಡಿ ನಾಲ್ಕು ಮಂದಿಗೆ ಮಾದರಿಯಾಗಲಿ ಎನ್ನುವ ಉತ್ತಮ ಸಂದೇಶದ ಕವನವಿದು. ಇಂತಹ ಕವನಗಳು ಸಮಾಜಕ್ಕೂ ಮುಖ್ಯವಾಗಿ ಬೇಕು. ಬರಹದ ಮುಖೇನ ತಿಳಿಸುವ ಪ್ರಯತ್ನ ಮಾಡಿದರೆ ಬೆರಳೆಣಿಕೆಯಷ್ಟು ಜನರ ಬದುಕು ಬದಲಾದೀತು.. ಉತ್ತಮ ವಿಚಾರದ ಕವನ. ಧನ್ಯವಾದ ಜಯಂತಿ ಮೇಡಂ.

8. ಶ್ರೀಮತಿ ನಾಗರತ್ನ ಚಂದ್ರಶೇಖರ್ – ಲೇಖನ: 'ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ'.

ಇದೊಂದು ಯುದ್ಧದ ಘಟನೆ. ಧರ್ಮ ಅಧರ್ಮಕ್ಕಿಂತ ಮನುಷ್ಯನ ಅಧಿಕಾರ ಲಾಲಸೆ, ಶ್ರೇಷ್ಠತೆಯ ಸವಾಲುಗಳು ಅಧಿಕವಾಗಿದೆ. ಹೀರೋಶಿಮಾ ನಾಗಸಾಕಿಗಳ ಮೇಲೆ ಅಮೇರಿಕ ಹಾಕಿದ ಅಣುಬಾಂಬ್ನ್ನು ಲೇಖಕಿ ಶೀರ್ಷಿಕೆ ಯಾಗಿಸಿರುವರು. ದೇಶ ದೇಶಗಳ ನಡುವಿನ ಯುದ್ಧ ಸುಮಾರು ಆರು ವರ್ಷಗಳ ಕಾಲ ವಿಶ್ವವ್ಯಾಪಿಯಾಗಿ ಸಾವು ನೋವುಂಟು ಮಾಡಿದೆ. ಅಮೇರಿಕಾದ ಹೀನಕೃತ್ಯದಿಂದಾಗಿ ಬೆಂದು ಭಸ್ಮವಾದ ಎರಡು ನಗರಗಳ ಲಕ್ಷಾಂತರ ಜನರು, ಪ್ರಾಣಿಗಳು, ಪಕ್ಷಿಗಳು, ಕಟ್ಟಡಗಳು, ಮಹಾಯುದ್ಧಗಳ ಪೈಶಾಚಿಕ ಯೋಚನೆಗಳಿಗೆ ಸಾಕ್ಷಿಯಾಗಿವೆ. ಇಲ್ಲಿ ಎ ಬಾಂಬ್ ಡೋಂ (ಜೆನ್ಬಾಕು) ಎಂದು ಕರೆಯಲಾದ ಅರ್ಧ ಸುಟ್ಟು ಕರಕಲಾದ ಕಟ್ಟಡದ ಭಗ್ನಾವಶೇಷಗಳನ್ನು. ಮಕ್ಕಳ ಸುಟ್ಟ ಕರಕಲಾದ ಆಟಿಕೆಗಳು, ಯೂನಿಫಾರ್ಮ್ಗಳನ್ನು ಜಪಾನೀಯರು ಇಂದಿಗೂ ಹೀರೋಶಿಮಾದಲ್ಲಿ ಉಳಿಸಿಕೊಂಡಿದ್ದಾರೆ. 1945ರ ಆಗಸ್ಟ್, 6 ಮತ್ತು 9ರಂದು ಜಪಾನಿನ ಮೇಲಾದ ಪರಮಾಣು ದಾಳಿಯ ಹಲವಾರು ದಾರುಣ ಚಿತ್ರಗಳನ್ನು ಹೀರೋಶಿಮಾದಲ್ಲಿ ಪೀಸ್ ಮೆಮೊರಿಯಲ್ ಮ್ಯೂಸಿಯಂನಲ್ಲಿ ಇಡಲಾಗಿದೆ. ಮುಂದಿನ ಪೀಳಿಗೆಗೆ ಇದರ ಭಯಂಕರ ಪರಿಣಾಮಗಳ ವಿಚಾರ, ತಿಳವಳಿಕೆ ಹಾಗೂ ಸಾವುನೋವಿನ ಚಿತ್ರಗಳು ಮೌನವಾಗಿವೆ. ಲಕ್ಷ ಲಕ್ಷ ಜನರು ಬಾಂಬ್ ದಾಳಿಗೆ ಬಲಿಯಾದ ಈ ಯುದ್ಧವು ಜಪಾನಿನ ಶರಣಾಗತಿಯೊಂದಿಗೆ ಕೊನೆಯಾಯಿತು. ಇಂಥಹ ಯುದ್ಧಗಳು ಬೇಕೇ? ಎನ್ನುವ ಪ್ರಶ್ನೆ ಎಲ್ಲರ ಮನದಲ್ಲಿದೆ. ಆದರೆ ಜಪಾನ್ ಇಂದು ಇಡೀ ಜಗತ್ತಿನ ಗಮನ ಸೆಳೆಯುತ್ತ ಪ್ರಗತಿಯ ಮುನ್ನಡೆಯಲ್ಲಿದ್ದು, ಶಾಂತಿ, ಸ್ನೇಹ, ನಮ್ರತೆ, ಬುದ್ಧಿವಂತಿಕೆಯ ಬದುಕನ್ನು ಜಪಾನೀಯರು ಕಟ್ಟಿಕೊಂಡಿರುವರು. ಒಂದು ಮಾಹಿತಿಯುಕ್ತ ಲೇಖನವನ್ನು ಬಳಗಕ್ಕೆ ಓದಲು ನೀಡಿರುವಿರಿ, ನಾಗರತ್ನ ಚಂದ್ರಶೇಖರ್ ಮೇಡಂ. ಧನ್ಯವಾದಗಳು.

9. ಶ್ರೀಮತಿ ಗಿರಿಜಾ ರಾಜ್ – ಲೇಖನ: 'ದೂರದರ್ಶನದ ಉಗಮ ಮತ್ತು ಇಂದಿನ ಪರಿಣಾಮಗಳು'

ದೂರದರ್ಶನ ಕೇವಲ ಒಬ್ಬರಿಂದ ಆದದ್ದಲ್ಲ. ಅನೇಕ ಸಂಶೋಧಕರು ಕ್ರಮವಾಗಿ ಸುಧಾರಿತ ರೂಪವನ್ನು ನೀಡಿ ಬೇರೆ ದೇಶಗಳ ವಿಜ್ಞಾನಿಗಳ ಬುದ್ಧಿಶಕ್ತಿಯಿಂದ ನಮ್ಮ ದೂರದರ್ಶನ 21ನೇ ಶತಮಾನದಲ್ಲಿ ಎಲ್ಲರ ಆಕರ್ಷಣೆಯ ಕೇಂದ್ರವಾಗಿದೆ. ಇಲ್ಲಿ "ದೂರ ಇರುವುದನ್ನು ಹತ್ತಿರವಾಗಿ ದರ್ಶನ ಮಾಡಿಸುವುದೇ ದೂರದರ್ಶನ" ಎಂದು ಹೇಳಲಾಗಿದೆ. ದೂರದರ್ಶನದ ಉಗಮ, ಇದರ ಸಂಶೋಧನೆ, ಕಲ್ಪನೆ ಮತ್ತು ತಾಂತ್ರಿಕತೆಯ ಪ್ರಮುಖ ಹಾದಿಯಲ್ಲಿ ಕವಲೊಡೆದಿದೆ. ಇದರ ಮೂಲ ಪುರುಷರೆಂದರೆ ಸಂಶೋಧಕರಾದ ಪಾಲ್ ನಿಪ್ ಕೋವ್. ಇವರು ರೊಟೇಟಿಂಗ್ ಆಧಾರದ ಮೇಲೆ ಯಾಂತ್ರಿಕತೆಗೆ ಒತ್ತುಕೊಟ್ಟು ದೂರದರ್ಶನದ ಪ್ರಯತ್ನ ಮಾಡಿದ್ದಾರೆಂದು ಮಾಹಿತಿ ನೀಡಲಾಗಿದೆ. ಹಲವಾರು ವಿಜ್ಞಾನಿಗಳಿಂದ ರೂಪಿಸಲ್ಪಟ್ಟ ದೂರದರ್ಶನ ಇಂದಿನ ಸಮಾಜಕ್ಕೆ ಕೊಡುಗೆಯಾಗಿದೆ. ಅಮೇರಿಕಾದ ಬ್ರಾಡ್‌ಕ್ಯಾಸ್ಟಿಂಗ್ ಕಂಪನಿ 1950ರಲ್ಲಿ ಮಕ್ಕಳಿಗಾಗಿ ಕಾರ್ಯಕ್ರಮ ರೂಪಿಸಿ ಪ್ರಸಾರ ಮಾಡಿದೆ. ಬೃಹದಾಕಾರವಾದ ದೂರದರ್ಶನ ಇಂದು ಸರಿದಾರಿಯಲ್ಲಿ ಕಾಯಕ ಮಾಡಿದರೆ ಇಡೀ ವಿಶ್ವದ ದಿಕ್ಕನ್ನು ಬದಲಿಸುವ ಶಕ್ತಿ ಇದೆ. ಒಳಿತು

ಕೆಡುಕುಗಳ ಪರಿವೆ ಇಲ್ಲದೆ ಇಂದು ಹಲವಾರು ರಿಯಾಲಿಟಿ ಶೋಗಳಿಂದ ಜೀವನದ ಏರುಪೇರು ಆಗುತ್ತಿದೆ. ನೂರಾರು ಚಾನೆಲ್‌ಗಳ ನಡುವೆ ನಾವು ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬ ಅರಿವು ಇದ್ದರೆ ದೂರದರ್ಶನದ ಪ್ರಯೋಜನ ಪಡೆದುಕೊಳ್ಳಬಹುದು.

10. ಶ್ರೀಮತಿ ಮಾಧುರಿ ಕೃಷ್ಣ – ಲೇಖನ : 'ತೊಂದರೆಗಾಗಿ ಕ್ಷಮಿಸಿ' – ಯತ್ನ ಮತ್ತು ವಿಫಲತೆ ಲೇಖನ ಮಾಲೆ-5

ಲೇಖನದ ಶೀರ್ಷಿಕೆಯೇ ಚೆಂದವಾಗಿದೆ. ಇದೊಂದು ಸುಂದರ ಸಂಸಾರದ ಕತೆಯಾಗಿದ್ದು, ಲೇಖನದ ರೂಪ ತಾಳಿದೆ. ಸಂಬಂಧಗಳ ನಡುವೆ ಹಾಸ್ಯಾಸ್ಪದವಾದ ಮಾತುಗಳು ಕೆಲವೊಮ್ಮೆ ಚರ್ಚೆಯಾದಾಗ ಜವಾಬ್ದಾರಿಗಳು ಮನುಷ್ಯರನ್ನು ಎಚ್ಚರಗೊಳಿಸುತ್ತವೆ. ಈ ಲೇಖನದಲ್ಲಿ ಅಕ್ಕ ಮತ್ತು ತಮ್ಮನ ಮಾತಿದೆ. ತಮ್ಮನ ಮಗನ ಮದುವೆಯ ವಿಚಾರ ಪ್ರಸ್ತಾಪಿಸಿದ್ದಾರೆ. ಇತ್ತೀಚೆಗೆ ವಧು-ವರರ ಹುಡುಕಾಟದಲ್ಲಿ ಮಧ್ಯಮ ವಯಸ್ಕರು ಸೊರಗಿ ಹೋಗಿದ್ದಾರೆ. ಹಳೆಯ ಕಾಲದ ಹಾಗೆ ಈಗಿಲ್ಲ. ಮಕ್ಕಳ ಭವಿಷ್ಯ ರೂಪಿಸುವುದು ಬೆಟ್ಟ ಹತ್ತಿದಷ್ಟು ಕಷ್ಟ. ಸಮಾಜಕ್ಕೆ ಬೇಕಾದ ವಿಚಾರವನ್ನು ಲೇಖನವನ್ನಾಗಿಸಿರುವರು. ಉತ್ತಮ ಲೇಖನ. ಧನ್ಯವಾದಗಳು. ಮೇಡಂ.

11. ಶ್ರೀಮತಿ ಜಿ.ವಿ. ನಿರ್ಮಲ – ಕವಿತೆ : ಹೊಯ್ದಾಟ

ಈ ಕವಿತೆ ಮನಸ್ಸಿನ ಮೇಲೆ ಬಿದ್ದ ಪರಿಣಾಮಗಳ ಸುತ್ತ ಗಿರಕಿ ಹೊಡೆದಿದೆ. ತಾಳ ತಪ್ಪಿದ ಮನಸ್ಸು, ಬಾಲ್ಯದ ನೆನಪುಗಳು ಬೇಡವೆಂದು ಮತ್ತದೇ ಮನದಲ್ಲಿ ಮನೆ ಮಾಡುತ್ತಿರುವಂತೆ ಅಂದು ಹೇಗೆ ಬಾಳಿಗೆ ಅಪ್ಪ ಅಮ್ಮನಿಗೆ ತಲೆಬಾಗಿ ಗುರುಹಿರಿಯರಿಗೆ ಗೌರವಿಸಿ ಸೋದರ ಸೋದರಿ ಸಂಬಂಧಗಳಿಗೂ ಪ್ರೀತಿಯೂಡಿಸಿದರೂ ಮತ್ತೆ ಪ್ರಶ್ನೆಗಳೇಕೋ ಎಂಬ ಯಕ್ಷ ಪ್ರಶ್ನೆ ಉದ್ಭವಿಸದೆ ಹೇಗೆ ನಾನಾ ವಿಚಾರಗಳು ತಾವು ಮಾಡಿದ ನಿಸ್ವಾರ್ಥ ಸೇವೆಯಿಂದ ಮನದ ಆಸೆ ಆಕಾಂಕ್ಷೆಗಳು ಮರೀಚಿಕೆಯಾಗಿ ಕಂಡರೂ ಎಲ್ಲೂ ಮನದ ಮೂಲೆಯಲ್ಲಿ ಹೆಣ್ಣಿನ ಮನಸ್ಸು ನೆಮ್ಮದಿಗಾಗಿ ಶಾಂತಿಗಾಗಿ ಪರಿತಪಿಸುವ ಪರಿ ಅದ್ಭುತ ರಚನೆಯಾಗಿದೆ. ಹೆಣ್ಣಿನ ಮನದ ಸುತ್ತಲೇ ಸುತ್ತುತ್ತದೆ ಈ ಕವಿತೆ. ಧನ್ಯವಾದಗಳು ಮೇಡಂ.

12. ಶ್ರೀ ಜಿ.ವಿ. ಅರುಣ – ಲೇಖನ : ಜೀವನ ಪ್ರೀತಿಯ ಸಾಕಾರ ಮೂರ್ತಿ ಶಾಲಿನಿ ಕಾಮತ್

ಜೂನ್ 1, 2024 ರಂದು ಅಗಲಿದ ಹಿರಿಯ ಜೀವ ಶಾಲಿನಿ ಅವರ ಬಾಂಧವ್ಯದ ಕುರಿತ ಲೇಖನವಿದು. ಶ್ರೀ ಅರುಣ ಅವರಿಗೆ ಶಾಲಿನಿಯವರು ಸುಮಾರು ಆರು ದಶಕಗಳಿಂದ ಪರಿಚಯಸ್ಥರು. ಲೇಖಕರ ತಾಯಿ ಲಕ್ಷ್ಮಿ ಮತ್ತು ಶಾಲಿನಿ ಕಾಮತ್‌ರವರ ಅವಿನಾಭಾವ ಸಂಬಂಧದ ವಿಚಾರ, ಬರೆದ ಸಾಲುಗಳು ಮನಮುಟ್ಟಿದವು. ಅವರಿಬ್ಬರ ಸ್ನೇಹ ಅಕ್ಕ ತಂಗಿಯತಿದ್ದ ದಿನಗಳನ್ನು ನೆನಪು ಮಾಡಿಕೊಂಡಿದ್ದಾರೆ. ಇಬ್ಬರ ಒಂದು ಗುಣವೆಂದರೆ ಅತಿಥಿ ಸತ್ಕಾರ ಮಾಡುವುದು, ಪುಸ್ತಕ ಓದುವುದು, ರುಚಿ ರುಚಿ ಅಡುಗೆ ಮಾಡುವುದು. ಶಾಲಿನಿ ಅಮ್ಮನವರ ವಿದ್ಯಾಭ್ಯಾಸ 7ನೇ ತರಗತಿ ಆದರೂ ಇಂಗ್ಲಿಷ್ ಮತ್ತು ಹಿಂದಿಯನ್ನು ಸ್ವಪ್ರಯತ್ನದಿಂದ ಕಲಿತಿದ್ದರೆನ್ನಲಾಗಿದೆ. ಹಿರಿಯ ಲೇಖಕರ ಬರಹಗಳು, ಕಾದಂಬರಿಗಳನ್ನು ಓದಿ ಪ್ರೊಫೆಸರ್ ವೆಂಕಟಸುಬ್ಬಯ್ಯ ಅವರೊಡನೆ ಚರ್ಚೆ ಮಾಡುತಿದ್ದರಂತೆ. ಅವರ ಮನಸ್ಸು ಎಷ್ಟು ಮುಗ್ಧವಾಗಿತ್ತು ಅಂದ್ರೆ, ತಮ್ಮ ಪುಸ್ತಕವನ್ನು ಯಾರಿಗಾದರೂ ಕೊಟ್ಟರೆ ಮತ್ತೆ ಪುಸ್ತಕ ವಾಪಾಸ್ ಕೊಡಿ ಎಂದು ಬರೆಯುತ್ತಿದ್ದರಂತೆ. ಈ ಸಾಲು ನನಗೆ ಇಷ್ಟ ಆಯಿತು. ಇದನ್ನು ಓದುವಾಗ ಶಾಲಿನಿಯವರ ಜೀವನ ಚರಿತ್ರೆ

ಓದಿದಂತೆ ಆಯಿತು. ಅವರ ಮಗ ವೆಂಕಟೇಶ್ ಕಾಮತ್‌ರವರು ಅವರನ್ನು ಚೆನ್ನಾಗಿ ನೋಡಿಕೊಂಡಿದ್ದರು ಎಂದು ಕೇಳಿ ಮತ್ತಷ್ಟು ಸಂತಸವಾಯಿತು. ಇಬ್ಬರಿಗೂ ಪುಣ್ಯವೇ ಸರಿ. ಶಾಲಿನಿಯವರ ಗುಣ ವರ್ಣನೆ ಮಾಡಿದ್ದಾರೆ. ಅವರ ಸ್ವಭಾವ ಉತ್ತಮ ಗುಣವಂತೆ ಎಂದಿರುವರು. ಹೆಣ್ಣಿಗೆ ಇದಲ್ಲವೇ ಬೇಕಿರೋದು. ಸಾರ್ಥಕ ಜೀವನ ನಡೆಸಿದ ಶಾಲಿನಿ ಅಮ್ಮನರ ಆತ್ಮಕ್ಕೆ ದೇವರು ಶಾಂತಿ ನೀಡಲಿ. ಇಂತಹ ವ್ಯಕ್ತಿಗಳು ಇರಬೇಕು. ಮತ್ತೆ ಹುಟ್ಟಿ ಬನ್ನಿ ಎಂದು ಬೇಡುವೆ.

ಅರುಣ ಸರ್, ನಿಮ್ಮ ಲೇಖನ ಚೆಂದ. ನಿಮ್ಮ ಅಭಿಮಾನ ಬಹು ದೊಡ್ಡದು. ಧನ್ಯವಾದಗಳು.

13. ಶ್ರೀ ಮಹಾಬಲ – ಕೃತಿ ಪರಿಚಯ: 'ಗೀತಾ ಪ್ರಿಯ' ಅಭಿನಂದನಾ ಗ್ರಂಥ

ಸುಗಮ ಸಂಗೀತ ಸಿರಿ ಡಾ. ಜಯಶ್ರೀ ಅರವಿಂದ್ ಅವರ 'ಗೀತಾ ಪ್ರಿಯ' ಎಂಬ ಅಭಿನಂದನಾ ಗ್ರಂಥವನದನು ಪರಿಚಯಿಸಿರುವ ಶ್ರೀ ಮಹಾಬಲರವರು, ಇದರಲ್ಲಿ 'ಲಹರಿ' ಎಂಬ ಎಂಟು ವಿಭಾಗಗಳಿವೆ ಎಂದಿದ್ದಾರೆ. ನಾನು ಕೆಲವು ಲಹರಿಗಳ ಮುಖ್ಯ ವಿಚಾರ ತಿಳಿಸುವೆನು.

ಮೊದಲ ಲಹರಿಯಲ್ಲಿ ಲೇಖಕಿ ಜಯಶ್ರೀರವರ ಜೀವನ ವಿವರ ಹಾಗೂ ಮುರಳೀಧರ್ ಅವರ ಉಪಯುಕ್ತ ಲೇಖನದ ವಿಚಾರ ತಿಳಿಸಿರುವರು. ಒಬ್ಬ ಕಲಾವಿದೆಯನ್ನು ಮತ್ತು ಅವರ ಜೀವನವನ್ನು ವರ್ಣಿಸುವುದು ಸುಲಭದ ಮಾತಲ್ಲ. ಇದನ್ನು ಸಮರ್ಪಕವಾಗಿ ಕಟ್ಟಿಕೊಟ್ಟಿದ್ದಾರೆ. ಎರಡನೆಯ ಲಹರಿಯಲ್ಲಿ ಜಯಶ್ರೀರವರಿಂದ ರಚಿತವಾದ ಲೇಖನದಲ್ಲಿ ಸುಗಮ ಸಂಗೀತದ ಮಹತ್ವ, 2020ರ ಜನವರಿಯಲ್ಲಿ ಮುಂಬೈಯಲ್ಲಿ ನಡೆದ ಸುಗಮ ಸಂಗೀತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ವಿಚಾರ, ನವೋದಯ ಸಾಹಿತ್ಯ, ಸುಗಮ ಸಂಗೀತದ ಶೈಲಿ ಹಾಗೂ ಮುಖ್ಯವಾಗಿ ಸುಗಮ ಸಂಗೀತಗಾರರ ಜವಾಬ್ದಾರಿಗಳ ಬಗ್ಗೆ ಪ್ರಸ್ತುತಿಪಡಿಸಿರುವರು.

ಭಾವಮಿಲನ ಎಂಬ ಮೂರನೇ ಲಹರಿಯಲ್ಲಿ ಸುಗಮ ಸಂಗೀತದ ಸಂಬಂಧ, ಸಂಪ್ರದಾಯ, ಹಾಡುಗಳು, ಹಾಗೂ ವಾದ್ಯ ಸಂಗೀತದ ಪಾತ್ರ, ದಾಸ ಸಾಹಿತ್ಯದ ಪ್ರಭಾವ ಹೀಗೆ ನಾನಾ ವಿಚಾರಗಳನ್ನು ತಿಳಿಸಿದ್ದು, ಸುಗಮ ಸಂಗೀತದ ಸಾರ ಸತ್ವವನ್ನು ರಚಿಸಿ ಓದುಗರ ಮನ ಮುಟ್ಟುವಂತೆ ಇದೆ. ನಾಲ್ಕನೆಯ ಲಹರಿಯಲ್ಲಿ ವಿವಿಧ ಹಿರಿಯ ಕವಿಗಳ ಹಾರೈಕೆಗಳಿದ್ದರೆ, ಐದನೆಯ ಲಹರಿಯಲ್ಲಿ ಕುಟುಂಬದ ಸದಸ್ಯರ ಕಿರು ಪರಿಚಯ, ಅವರ ಒಡನಾಡಿಗಳ ಪ್ರೀತಿ ಗೌರವಗಳನ್ನು ಸಮರ್ಪಿಸಿದ್ದಾರೆ. ಮುಂದುವರೆದ ಭಾಗದಲ್ಲಿ ಡಾ.ಜಯಶ್ರೀ ಅವರ ಹಿತೈಷಿಗಳು, ಸುಗಮ ಸಂಗೀತದ ಸಹವರ್ತಿಗಳು ಶುಭ ಕೋರಿದ್ದಾರೆ. ಸುಗಮ ಸಂಗೀತದ ಸ್ವರ ಸಂಯೋಜನೆ, ಗೀತಾ ರಚನೆ, ಡಾ. ರಾಜಕುಮಾರ್, ಜೇಸುದಾಸ್, ಎಸ್ಪಿಬಿ, ಮುಂತಾದವರ ಹಾಡಿಕೆಯ ಮುದ್ರಿಕೆಗಳನ್ನು ಕನ್ನಡಿಗರಿಗೆ ನೀಡಿದ ಶ್ರೀಮತಿ ಡಾ.ಜಯಶ್ರೀ ಅರವಿಂದ್ ಅವರನ್ನು ಅಭಿನಂದಿಸಲೇಬೇಕು.

ಈ ಅಭಿನಂದನಾ ಗ್ರಂಥದ ಬಗ್ಗೆ ಅನಿಸಿಕೆ ಹೇಳಲು ನನಗೆ ಅವಕಾಶ ಮಾಡಿಕೊಟ್ಟ ಹಿರಿಯ ಲೇಖಕರಾದ ಶ್ರೀ ಮಹಾಬಲ ಅವರಿಗೆ ಧನ್ಯವಾದಗಳು.

14. ಶ್ರೀಮತಿ ಸುಜಾತಾ ರವೀಶ್ – ಲೇಖನ: 'ಸರ್ವಜ್ಞನ ತ್ರಿಪದಿಗಳಲ್ಲಿ ಜ್ಞಾನ'

'ಜ್ಞಾನದಿಂದಲಿ ಇಹವು ಜ್ಞಾನದಿಂದಲಿ ಪರವು
ಜ್ಞಾನವಿಲ್ಲದೆಲೆ ಸಕಲವೂ ತನಗಿದ್ದು
ಹಾನಿ ಕಾಣಯ್ಯ ಸರ್ವಜ್ಞ'

ಇಹದಲ್ಲಿ ನಾವು ಸುಖವಾಗಿ ಜೀವಿಸಬೇಕೆಂದರೆ ಜ್ಞಾನ ಮುಖ್ಯ. ವಿದ್ಯೆ ಅಥವಾ ಲೋಕಜ್ಞಾನ ಯಾವುದೇ ಆಗಲಿ ಗುರುವಿನ ಮೂಲಕವಾಗಿ ಬಂದುದ್ದರಿಂದಲೇ ನಮ್ಮ ಬಾಳಿನಲ್ಲಿ ಏಳಿಗೆ ಸಾಧ್ಯ ಎಂಬ ಮಾತಿದೆ. ನಮ್ಮ ದೈನಂದಿನ ವ್ಯಾವಹಾರಿಕ ಜ್ಞಾನ ಹಾಗೂ ಆಧ್ಯಾತ್ಮಿಕ ಜ್ಞಾನವನ್ನು ಜೀವನದಲ್ಲಿ ಉನ್ನತಿಹೊಂದುವ ಬಗ್ಗೆ ತಿಳಿಸಿದ್ದಾರೆ. ಬೇರೆಲ್ಲಾ ಇದ್ದರೂ ಜ್ಞಾನವಿಲ್ಲದ ಮೇಲೆ ಯಾವ ಫಲ ಸಿದ್ಧಿಸಿದರೂ ಅಂತಹ ಮನುಷ್ಯ ಹೀನಾಯ ಸ್ಥಿತಿಗೆ ಬರುತ್ತಾನೆ ಎಂದು ಸರ್ವಜ್ಞರು ನುಡಿಯುತ್ತಾರೆ. ಸುಜಾತ ರವೀಶ್ ರವರು ತಮ್ಮ ಬರಹದಲ್ಲಿ ಸರ್ವಜ್ಞನ ತ್ರಿಪದಿಗಳ ಮೂಲಕ ಪ್ರಾಪಂಚಿಕ ಜ್ಞಾನವನ್ನು ತಿಳಿಸಿರುವರು. ಧನ್ಯವಾದಗಳು ಸುಜಾತಾ ರವೀಶ್ ರವರೇ..

15. ಶ್ರೀ ಗುರುರಾಜ ಶಾಸ್ತ್ರಿ – ಲೇಖನ: 'ನನ್ನ ನಾನು ಮರೆತಾಗ'

ಲೇಖಕರು ದೇವರನ್ನು ನೆನಸಿಕೊಂಡು ಏನನ್ನೂ ಬೇಡದೆ ಮತ್ತೆ ಆ ಬಾಲ್ಯದ ದಿನಗಳನ್ನು ಕೊಡಿಸು ಎಂಬ ಮಹದಾಸೆ ಕೇಳುತ್ತಾರೆ. ಇವರ ಅಸೆ ನೆರವೇರಲಿ ಎಂದು ನಾನೂ ಆಶಿಸುವೆ. ಇತ್ತೀಚೆಗೆ ನಡೆದ ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ವಾರ್ಷಿಕ ಉತ್ಸವ 'ಎಚ್ಚೆಸ್ಕೆ ಬೆಳಕು–9'ರಲ್ಲಿ ನಾಟಕ ಪ್ರದರ್ಶನದಲ್ಲಿ ಪಾತ್ರ ಮಾಡಿದಾಗ ಸಿಕ್ಕ ಸಂತಸ ವ್ಯಕ್ತಪಡಿಸಿರುವರು. ನಾಟಕದಲ್ಲಿ ತಮಗಾದ ಅನುಭವಗಳು, 14 ವರ್ಷದ ಚಿಕ್ಕ ಹುಡುಗನ ಪಾತ್ರ ಮಾಡಿದಾಗಿನ ಅನುಭವಗಳು ಮತ್ತು ಮನಸ್ಸಿಗಾದ ಆನಂದವನ್ನು ಚಿತ್ರಿಸಿರುವರು. ಇಲ್ಲಿ ಸುಂದರ ಕಾಂಡ, ರಾಮಾಯಣ ಪ್ರಸಂಗಗಳು, ಹನುಮನು ಹಣ್ಣು ತಿಂದನೆಂದು ತಾನೇ ತಿಂದದನ್ನು ಮೆಲುಕು ಹಾಕಿರುವುದು ಎಲ್ಲವೂ ಚೆಂದವಾಗಿ ಮೂಡಿಬಂದಿದೆ. ಇತರ ಎಲ್ಲಾ ಕಲಾವಿದರ ಪಾತ್ರಗಳನ್ನೂ ಮನಸಾರೆ ಮೆಚ್ಚಿರುವರು. ಇವರು ನಾಟಕದಲ್ಲಿ ಜಿಗಿಯುತ್ತಿದ್ದ ರೀತಿ ನೋಡಿ ಇವರಿಗೆ ವಯಸ್ಸು ಎಷ್ಟು ಎಂಬ ಪ್ರಶ್ನೆ ಮೂಡಿದೆ ಎನಿಸುತ್ತಿತ್ತಂತೆ ಎಂದು ಪ್ರಶಂಸೆಗಳು ಬಂದಿದ್ದಕ್ಕೆ ಸಂತಸ ವ್ಯಕ್ತಪಡಿಸಿದ್ದಾರೆ. ನಾನೇನು ನಟಿಸಲೇ ಇಲ್ಲ, ನನ್ನ ನಾನು ಮರೆತಿದ್ದೆ. ಚಿಕ್ಕ ಹುಡುಗನ ಪಾತ್ರ ಅರಿಸಿಕೊಂಡು ಮಾಡಿದ ನಾಟಕ ಮರೆಯಲಾರೆ ಎಂದಿರುವರು. ನಿಜಕ್ಕೂ ಗುರುರಾಜ್ ಅಂತ ಒಬ್ಬ ಕಲಾವಿದ ನಮ್ಮ ಬಳಗದಲ್ಲಿ ಇರೋದು ನಮ್ಮ ಹೆಮ್ಮೆ ಎಂದು ಹೇಳುವೆ. ನಾನು ಕೂಡ ಆ ನಾಟಕ ಮಿಸ್ ಮಾಡಿಕೊಂಡೆ ಅನಿಸಿತು. ನಾಟಕದ ಪಾತ್ರಧಾರಿ ಗುರುರಾಜರಿಗೆ ಅಭಿನಂದನೆಗಳು, ಶುಭವಾಗಲಿ ಸರ್.

16. ಶ್ರೀಮತಿ ಶೀಲಾ ಅರಕಲಗೂಡು – ಕವನ : 'ಬರೆಯುವುದದೆಂತು'

ಇದೊಂದು ಮೌನ ಮನದ ತಳಮಳ. ಬರೆಯುವ ಮನಸ್ಸಿಗೆ ಮೌನವಿಲ್ಲಿ ಕಡಿವಾಣ ಹಾಕಿದೆ. ಮೌನವೂ ಮಾಯವಾಗಿದೆ. ಕತ್ತಲಿನಿಂದ ಬೆಳಕಿನಡೆಗೆ ಸಾಗುವ ಪರಿಯನ್ನು ಪರಿತಪಿಸಿದೆ. ಅಪಾರ ವಿದ್ಯಾ ಸಂಪತ್ತಿದ್ದರೂ, ಏನೋ ಒಂದು ರೀತಿಯ ತಳಮಳ, ತುಡಿತ, ಮಿಡಿತವನ್ನು ಹೀಗೂ ವರ್ಣಿಸಬಹುದೇ ಅನಿಸಿತು. ಕವನದ ಪ್ರತಿಸಾಲುಗಳು ಒಂದೊಂದು ವಿಶೇಷ ಅರ್ಥವನ್ನು ಸೂಚಿಸುತ್ತವೆ. ಕೊನೆಗೆ ಬರೆದ ಗೆಲುವಿನ ಹಾದಿಯ ಪಣತೊಟ್ಟು ಗೆದ್ದೇ ಗೆಲ್ಲುವೆ ನವ್ಯ ಭಾವದ ಬೀಜ ಬಿತ್ತೇವ ಕಾವ್ಯ ಲಹರಿ ಹೊಸತು ಲೋಕವ ತೆರೆಯಿತು. ನಿಜಕ್ಕೂ

ಆತ್ಮಾವಲೋಕನದ ಕವನ. ಮನಸ್ಸನ್ನು ಪುಟಿದೇಳಿಸುವ ಸುಂದರ ಕವನವನ್ನು ನಮಗೆ ನೀಡಿರುವಿರಿ. ಶೀಲಾ ಮೇಡಂ ಧನ್ಯವಾದಗಳು.

ನಿಮ್ಮ ಧ್ವನಿಯಿಂದ ಎಲ್ಲಾ ರೀತಿಯ ಬರಹ ಕೇಳುವುದೇ ಸಂತಸ. ನಿಮ್ಮ ಕಥಾವಾಚನ ಅದ್ಭುತ. ನಾನು ನಿಮ್ಮ ಅಭಿಮಾನಿ ಎಂದು ತಿಳಿಸುವೆ. ಅಭಿನಂದನೆಗಳು ಮೇಡಂ.

17. ಶ್ರೀಮತಿ ಅನ್ನಪೂರ್ಣ ಸುಬ್ಬರಾವ್ – ಹಾಸ್ಯ ಲೇಖನ : 'ಮಾತ್ರೆ ಮುಚ್ಚಳ'

ಇದೊಂದು ಹಾಸ್ಯಾಸ್ಪದ ಪ್ರಸಂಗ. ಆದರೆ ಇದನ್ನು ಓದುವಾಗ ಹೀಗೂ ಲೇಖನ ಬರೆಯಬಹುದಾ ಅನಿಸಿತು. ಹಳೆಯ ನೆನಪಿನ ಮೆಲುಕು ಅನಿಸಿತು. ಈ ಲೇಖನದಲ್ಲಿ ಮಾವನವರ ಮುಗ್ದತೆ, ಅತ್ತೆಯ ಕಷ್ಟದ ಮನಸ್ಸು ಅರಿವ ಸೊಸೆಯ ಪಾತ್ರ, ಅವರ ತಾಳ್ಮೆಯನ್ನು ಅದ್ಭುತವಾಗಿ ಬರೆದಿದ್ದಾರೆ.ಇದನ್ನು ಹಾಸ್ಯ ರೂಪಕ್ಕೆ ತಂದು ಬರೆಯುವುದಂತೂ ಒಂದು ಸುಂದರ ಕಲೆ. ಇಲ್ಲಿ ಮಾತ್ರೆಡಬ್ಬದ ಮುಚ್ಚಳ ನುಂಗಿದ ಪ್ಯಾರಾವನ್ನು ಚೆನ್ನಾಗಿ ಕಟ್ಟಿದ್ದಾರೆ. ಇದೊಂದು ವಿಭಿನ್ನ ಲೇಖನ. ಓದುತ್ತಾ ಓದುತ್ತಾ ಅಲ್ಲಿ ನಾನು ಒಂದು ಪಾತ್ರವಾದೆ. ಒಂದು ಹೆಣ್ಣು ಸಂಸಾರದಲ್ಲಿ ಎಷ್ಟು ಜೊತೆ ಜವಾಬ್ದಾರಿ ವಹಿಸುತ್ತಾಳೆ, ಆಕೆಯ ಭಾವನೆಗಳಿಗೆ ಅವಳೇ ಸ್ಪಂದಿಸದ ಹಾಗೆ ಕಳೆಯುವ ಕಾಲದಲ್ಲಿ ಸಂಪೂರ್ಣ ಸಮಯ ಸಂಸಾರಕ್ಕೆ ನೀಡುವಳು. ಇಂಥಹ ಕೆಲವು ವಿಚಾರಕ್ಕೆ ಹೆಣ್ಣು ಮಕ್ಕಳಿಗೆ ಹ್ಯಾಟ್ಸಾಫ್ ಹೇಳಲೇಬೇಕು. ಹೆಣ್ಣೆಂದರೆ ದೊಡ್ಡ ಜವಾಬ್ದಾರಿ, ಆಕೆಯನ್ನು ಯಾರೂ ನೋಡಿಕೊಳ್ಳುವ ಅವಶ್ಯವಿಲ್ಲ ಎನ್ನುವುದನ್ನು ಅದ್ಭುತವಾಗಿ ರಚಿಸಿರುವಿರಿ. ನನಗೆ ಲೇಖನದ ಶೀರ್ಷಿಕೆ ತುಂಬಾ ಇಷ್ಟ ಆಯಿತು.. ಲೇಖನವು ಚೆಂದವಿದೆ. ಧನ್ಯವಾದಗಳು ಮೇಡಂ

18. ಶ್ರೀ ಎನ್.ವಿ. ರಘುರಾಮ್ – ಲೇಖನ : 'ರೇಷ್ಮೆ ಕಣವೊಂದರ ಕತೆ–ವ್ಯಥೆ'

ಶುಭ ಸಮಾರಂಭಗಳಲ್ಲಿ ಸಂಪ್ರದಾಯವಾಗಿ ಅರಿಸಿನ, ಕುಂಕುಮ, ರೇಷ್ಮೆ ಕಣವನ್ನು ನೀಡುವುದು ವಾಡಿಕೆ. ಅಂತಹ ರೇಷ್ಮೆ ಕಣದ ವಿಚಾರ ಬರೆದಿರುವ ಲೇಖನ ವಿಶೇಷವಾಗಿದೆ. ರವಿಕೆ ಕಣದವು ನೊಂದುಕೊಳ್ಳುವ ಪರಿ ಪರಿಯನ್ನು ಪ್ರತಿ ಸಾಲಿನಲ್ಲೂ ನಾವು ವಸ್ತುಗಳ ವ್ಯಾಮೋಹವನ್ನು ಎಷ್ಟರ ಮಟ್ಟಿಗೆ ಹೊಂದಿಕೊಂಡಿರುವೆವು ಎಂದು ಅರಿಯಬೇಕಿದೆ. ಮನುಷ್ಯ ತನ್ನ ಸುತ್ತಲಿನ ಪರಿಸರದಲ್ಲಿ ಹೇಗೆ ತನ್ನನ್ನು ತಾನು ತೊಡಗಿಸಿಕೊಂಡು ಜೀವಿಸುತ್ತಿರಬಹುದು ಅನ್ನುವುದನ್ನು ಅರ್ಥಮಾಡಿಕೊಳ್ಳಬೇಕು. ಬರಹಗಾರರ ಆಲೋಚನೆಗಳು ಸದಾ ವಿಭಿನ್ನವಾಗಿರುತ್ತದೆ. ಒಳಿತಿನತ್ತಲೇ ಚಿಂತೆ ಇರುತ್ತದೆ.

ಮನೆಯೊಡತಿಯ ಬ್ಯಾಗಿನಿಂದ ಆರಂಭವಾಗಿ ಗೋದ್ರೇಜ್, ಅಲ್ಮೆರಾ, ಎಲ್ಲೆಲ್ಲಿ ನೋಡಿದರೂ ರೇಷ್ಮೆ ಕಣ, ಒಂದು ಇನ್ನೊಂದರೊಂದಿಗೆ ನಡೆಸುವ ಸಂಭಾಷಣೆ, ಅಕ್ಕ ತಂಗಿಯ ಭಾವನೆ ಬಿಂಬಿಸುವ ಪರಿ ಭಾವನಾತ್ಮಕವಾಗಿದೆ. ಹಬ್ಬಗಳ ಸಾಲುಗಳು ಅಂದ್ರೆ ಮುತ್ತೈದೆಯರ ಕೈ ಸೇರಿ ಇನ್ನೊಬ್ಬರ ಬೀರು ಸೇರುವ ರೇಷ್ಮೆ ಕಣ ತಾನೇ ತನ್ನ ಜೀವನದ ವಿಚಾರ ತಿಳಿಸುತ್ತಾ ಹೋಗುವ ರೀತಿ ಲೇಖಕರ ಐ ಕ್ಯೂ ಒಪ್ಪಲೇಬೇಕು. ಇದೊಂದು ಅಪರೂಪದ ಲೇಖನ ಬಹಳ ಮೆಚ್ಚುಗೆ ಆಯಿತು.ಧನ್ಯವಾದಗಳು ಸರ್. ಉತ್ತಮ ಲೇಖನ

19. ಶ್ರೀ ಗಣಪತಿ ಹೆಗಡೆ – ಲೇಖನ : ಮೂಢನಂಬಿಕೆ

ಹಳ್ಳಿಯಲ್ಲಿ ನಡೆದ ಘಟನೆ ಎನಿಸಿತು. ಅಂದಿನ ಕಾಲದಲ್ಲಿ ಜಮೀನು ಇರುವ ಮನೆಗಳಲ್ಲಿ ಮನೆಯ ಯಜಮಾನರಿಗಿಂತ ಆಳುಗಳಿಗೆ ಅಲ್ಲಿನ ವಿಚಾರ ಹೆಚ್ಚು ತಿಳಿದಿರುತ್ತದೆ. ಈ ಲೇಖನ ಓದಿದಾಗ ಆಳು ಪರಮುವಿನ ಪ್ರಾಮಾಣಿಕತೆ, ಅವನ ಜವಾಬ್ದಾರಿತನ ಕಂಡು ಸಂತಸವಾಯಿತು. ಕಾಲಕಾಲಕ್ಕೆ ಬದಲಾವಣೆಯನ್ನು ಕಾಣುವ ಕಾಲದಲ್ಲಿ ಇತ್ತೀಚೆಗೆ ಪರಮು ವಿನಂತಹ ವ್ಯಕ್ತಿಗಳು ಕಣ್ಮರೆಯಾಗುತ್ತಿದ್ದಾರೆ ಎಂಬುದಿಲ್ಲಿ ಬೇಸರದ ಸಂಗತಿ. ಈ ಲೇಖನ ಓದುವಾಗ ನಮ್ಮ ಮನೆಯಲ್ಲಿಯೂ ಇದೇ ರೀತಿಯ ಪ್ರಸಂಗಗಳು ನಡೆದದ್ದು ನೆನಪಾಯಿತು. ಇಲ್ಲಿ ಲೇಖಕರು ಕೇವಲ ಲೇಖನವಾಗಿಸದೆ ಪಾತ್ರಗಳ ಮೌಲ್ಯದ ನಡುವೆ ವ್ಯಕ್ತಿಗಳ ವ್ಯಕ್ತಿತ್ವಗಳನ್ನು ಬರಹದ ಮೂಲಕ ಚೆನ್ನಾಗಿ ರೂಪಿಸಿರುವರು. ಹೆಂಡತಿ ವಿಮಲಾರವರು ಕೂಡ ಗೃಹಿಣಿಯಾಗಿ ಸಂಸಾರದ ಭಾರ ಹೊತ್ತು ಪತಿಗೆ ಸಹಕಾರಿಯಾಗಿರುವುದು ಪ್ರಶಂಸನೀಯ. ಅವರ ಗುಣ ಮೆಚ್ಚುವಂತಹದು. ಅಕ್ಕಪಕ್ಕದವರ ಸಂಪರ್ಕದಿಂದ ಏನೆಲ್ಲಾ ಮನಸ್ಸಿಗೆ ತೊಂದರೆಯಾಗುತ್ತದೆ ಅಂತಹವರನ್ನು ಸಹಿಸಿಕೊಂಡು ಬಾಳ್ವೆ ಮಾಡಿಕೊಂಡು ಅವರ ಮನಸ್ಥಿತಿಗಳ ವಿಚಾರ ಅಂತೂ ಸೂಪರ್ ಎಂದು ಹೇಳಬಹುದು. ಒಂದು ಸಂಸಾರದ ಸುತ್ತ ಏನೆಲ್ಲ ನಡೆಯುತ್ತಿರುತ್ತದೆ. ಅದರ ಆಗುಹೋಗುಗಳ ಒಳ ಹೊರ ವಿಚಾರದಲ್ಲಿ ನಮ್ಮ ಬದುಕು ಬದಲಿಸಿಕೊಳ್ಳುವುದು ಅಸಾಧ್ಯ ಮತ್ತು ಅವಕಾಶ ಇರುತ್ತಿರಲಿಲ್ಲ ಎನ್ನುವುದಕ್ಕೆ ಈ ಲೇಖನ ಉದಾಹರಣೆಯಾಗಿದೆ. ರೈತಾಪಿ ವರ್ಗಕ್ಕೆ ಸೇರಿದ ಕುಟುಂಬಗಳ ಒಂದು ಸುಂದರ ಲೇಖನವಿದು. ಈ ಲೇಖನದಲ್ಲಿ ಬೊಕ್ಕೆ ಮರದ ವಿಚಾರ ನನಗೆ ಹೊಸತು ಎನಿಸಿತು. ಉತ್ತಮ ವಿಚಾರದ ಲೇಖನ. ಧನ್ಯವಾದಗಳು ಸರ್.

20. ಶ್ರೀ ವೆಂಕಟೇಶ್ ಕಾಮತ್ – ಲೇಖನ: 'ಅಮ್ಮ ಬರೆದ ಪುಟಗಳು'

01.06.2024ರಂದು ಅಗಲಿದ ವೆಂಕಟೇಶ್ ಕಾಮತ್ ಅವರ ತಾಯಿಯ ಆತ್ಮಕ್ಕೆ ದೇವರು ಶಾಂತಿ ನೀಡಲಿ. ಲೇಖಕರು ಇಲ್ಲಿ ತಮ್ಮ ತಾಯಿಯವರು ಬರೆದ ಕೆಲವು ಬರಹಗಳನ್ನು ಪ್ರಸ್ತುತಿಪಡಿಸಿರುವರು. ಒಂದಕ್ಕಿಂತ ಒಂದು ಅರ್ಥಪೂರ್ಣ ಬರಹಗಳು. ಮಾಗಿದ ಮನಸುಗಳ ಸಂಕಟಗಳು, ಬದುಕಿನ ಹಾದಿಯಲ್ಲಿ ಅನುಭವಿಸುವ ಮನಸ್ಸಿನ ತುಮುಲಗಳನ್ನು ಚೆನ್ನಾಗಿ ಕಟ್ಟಿಕೊಟ್ಟಿದ್ದಾರೆ. 'ನೋವಿನ ಪುರಾಣ'ದಲ್ಲಿ ವಯಸ್ಸಿನ ನಡುವೆ ಮನಸ್ಸಿನ ಹೋರಾಟ ಎದ್ದು ಕಾಣುತ್ತದೆ. ಬಹುಶಃ ವಯಸ್ಕರು ಯಾರ ಬಳಿಯೂ ಹೇಳಿಕೊಳ್ಳಲಾಗದ ಪರಿಸ್ಥಿತಿಯನ್ನು, ನೋವನ್ನು ಹೇಳಿಕೊಂಡ ರೀತಿಯನ್ನು ಉತ್ತಮ ಲೇಖನವಾಗಿಸಿರುವರು. ಮತ್ತೊಂದರಲ್ಲಿ ಸರ್ ಮಿರ್ಜಾ ಇಸ್ಮಾಯಿಲ್ ಅವರು ಮೈಸೂರು ಸಂಸ್ಥಾನದ ದಿವಾನರಾಗಿದ್ದಾಗ ನಡೆದ ಘಟನೆಯು ವೃದ್ಧ ದಂಪತಿಗಳ ಬದುಕಿನ ವ್ಯಥೆ ಮನ ಕಲಕುವಂತಿದೆ. ಎಂಥಹ ವಿಪರ್ಯಾಸ. ಎಷ್ಟೇ ದುಡಿದರೂ ಮಕ್ಕಳನ್ನು ಬೆಳೆಸಿ ಒಂದು ಹಂತಕ್ಕೆ ತಲುಪಿದಾಗ ತಮ್ಮ ಜೀವನಕ್ಕಾಗಿ ಪರದಾಡುವ ನರಕ ಯಾವ ಶತೃವಿಗೂ ಬೇಡ ಎನಿಸುತ್ತದೆ. ಅದರಲ್ಲಿಯೂ ಹತ್ತು ಮಕ್ಕಳ ಪೋಷಕರು ಅಂದಾಗ ಹೇಳತೀರದ ನೋವೇ ಸರಿ. ಮಕ್ಕಳು ಅವರನ್ನು ನೋಡಿಕೊಳ್ಳಲು ಭಾರ ಅಂದಾಗ ಇಂತಹ ಮನಸ್ಥಿತಿ ಪೆನ್ಷನ್ ಹಣಕ್ಕಾಗಿ ಪರದಾಡಿ ಯಾರಾದರೂ ಕೊಡಿಸಿದರೆ ನಿಮ್ಮ ಹೆಸರು ಹೇಳಿಕೊಂಡು ಬದುಕುವೆವು ಎಂದು ಹೇಳಿದಾಗ ದಿವಾನರ ಮನ ಕರಗಿ ಅನೇಕ ನಿವೃತ್ತ ಉಪಾಧ್ಯಾಯರಿಗೆ, ಪ್ರಜೆಗಳಿಗೆ ಸಹಾಯ ಮಾಡಿದರಲ್ಲದೆ, ನಂತರ ಸಂತೋಷಕರ ಜೀವನ ನಡೆಸಲು ಸಹಕಾರಿಯಾದರು. ಸರ್ ಮಿರ್ಜಾ ಇಸ್ಮಾಯಿಲ್ ಮೈಸೂರಿನ ಚರಿತ್ರೆಯಲ್ಲಿ ಅಜರಾಮರರಾದರು. ಇಂತಹ ವಿಚಾರಗಳು ಎಲ್ಲರಿಗೂ ತಿಳಿಯಬೇಕು, ಆಗುಹೋಗುಗಳ ಪರಿವರ್ತನೆ ಆಗಬೇಕು.

ಇನ್ನೊಂದು ಕತೆ ಒಬ್ಬ ರಾಜ ಹಸುವನ್ನು ಪೂಜಿಸುವಾಗ ಅಲ್ಲಿ ಬಂದ ಹಂದಿಯ ಪ್ರಶ್ನೆಗೆ ಉತ್ತರ ಅದ್ಭುತವಾಗಿದೆ. ಗೋಮಾತೆಯನ್ನು ಸ್ಮರಿಸುವ ರೀತಿ, ನೀಡುವ ಗೌರವ ಚೆನ್ನಾಗಿ ಬರೆದಿರುವರು. "ಪ್ರಪಂಚದಲ್ಲಿ ಉಪಯೋಗ ಇರುವಾಗ ಬೆಲೆ ಸತ್ತ ಮೇಲೆ ಶೂನ್ಯವಾಗುತ್ತದೆ" ಎಂದು ರಾಜ ಉತ್ತರಿಸುತ್ತಾ ಪೂಜೆ ಮುಗಿಸುವನು. ಈ ಕತೆಯಲ್ಲಿ ಬದುಕಿನ ಸತ್ಯವೂ ಅಡಗಿದೆ ಇಂತಹ ಪರಿಸ್ಥಿತಿ ಜೀವನದಲ್ಲಿ ಎಲ್ಲರಿಗೂ ಆಗಿರುತ್ತದೆ. ಲೇಖಕರು ಮತ್ತೊಂದು ಪಂಚ್ ಇರುವ ಕಥೆ ಕೊಟ್ಟಿದ್ದಾರೆ ಅತ್ತೆ ಸೊಸೆ ಸಂಬಂಧದಲ್ಲಿ ಒಡವೆಗಳು. ಜೀವನದಲ್ಲಿ ಸತ್ತ ನಂತರ ಒಡವೆ ಯಾರ ಪಾಲು, ಅತ್ತೆಗಾಗುವ ಚಿಂತೆಯನ್ನು ಚೆನ್ನಾಗಿ ಬರೆದಿದ್ದಾರೆ. ಒಟ್ಟಾರೆ ಅರ್ಥಪೂರ್ಣ ಬರಹ. ಧನ್ಯವಾದಗಳು.

21. ಶ್ರೀಮತಿ ರಾಧಿಕಾ ವಿ ಗುಜ್ಜರ್ – ಕವನ : ಊರುಗೋಲು

ಊರುಗೋಲು ಎಂದಾಕ್ಷಣ ನೆನಪಿಗೆ ಬರುವುದು ವಯಸ್ಕರು. 60 ದಾಟಿದ ಮುದಿ ದೇಹಕ್ಕೆ ಆಸರೆಯಾಗುವುದು ಈ ಊರುಗೋಲು. ಹಿರಿಯ ಜೀವಿಗಳಿಗೆ ಇದು ಅವಶ್ಯ. ತಾತನ ಪೆಟ್ಟಾಗಿ ಸದಾ ಪಕ್ಕದಲ್ಲಿ ಇರಬೇಕು, ಹಿಂದೆ ಮಗನಿಗೆ ಮೂರು ಚಕ್ರದ ಗಾಲಿಯ ಹಿಂದಿನ ನೆನಪಾಗುವುದು. ಅಕಾರದ ವರ್ಣನೆ ಬಳಕೆಯ ನೆನಪಿನ ಸಾಲುಗಳು ಸರಳ ಪದಗಳಲ್ಲಿ ಅಗಾಧ ಅರ್ಥ ನೀಡುವ ಸುಂದರ ಕವನ. ಊರುಗೋಲೀಗ ಎಲ್ಲಿ ಮರೆಯಾಯ್ತು ಎನ್ನುವ ಪ್ರಶ್ನೆ ಕಾಡದೆ ಇರದು. ಹೆಚ್ಚಾಗಿ ಆಶ್ರಮದಲ್ಲಿ ಹಿರಿಯರನ್ನು ನಾವು ಕಾಣುವುದು ದುರಂತ ಎಂದೇ ಹೇಳುವೆ.

ಸುಂದರ ಕವನ ಹಳೆ ಬೇರು ಹೊಸ ಚಿಗುರಿಗೆ ನೆನಪಿನ ಬುತ್ತಿ ಈ ಕವಿತೆ. ಧನ್ಯವಾದ ರಾಧಿಕಾರವರೇ, ಬಳಗಕ್ಕೆ ಅರ್ಥಪೂರ್ಣ ಕವಿತೆ ನೀಡಿರುವಿರಿ.

22. ಶ್ರೀಮತಿ ಶಾಂತಿ ವಾಸು – ಲೇಖನ : ಸೈಕಲ್ಲಿನಿಂದ ಸೈಕಲ್ಲಿಗಾಗಿ

ಲೇಖಕಿ ತಮ್ಮ ಬಾಲ್ಯದ ದಿನಗಳನ್ನು ನೆನಪು ಮಾಡಿಕೊಂಡಿರುವರು. ಅವರು ಸೈಕಲ್ ಕಲಿತ ಪ್ರಸಂಗವನ್ನು ಬರೆದಿದ್ದಾರೆ. ಅದರಲ್ಲೂ "ರಾಘವೇಂದ್ರ ಸೈಕಲ್ ಶಾಪ್"ನಲ್ಲಿ ಕಲಿತರಂತೆ. ಚೆಂದವಾಗಿ ಹೆಸರು ಮರೆತಿಲ್ಲ, ಆತ ಕಪ್ಪು ಮನುಷ್ಯ ಅಂತೇ ನೆನಪಿನ ಶಕ್ತಿ ಚೆಂದವಿದೆ. ಸೈಕಲ್ ಕಲಿಕೆಯಲ್ಲಿ ಅಂದು ನಡೆದ ಘಟನೆಯನ್ನು ಮೆಲುಕು ಹಾಕುವುದರಲ್ಲಿ ಯಶಸ್ವಿಯಾಗಿದ್ದಾರೆ. ಕೆಂಪು ಸೈಕಲ್ ಕಲಿತಾಗ ಸೈಕಲ್ ಶಾಪ್ ಅವನು ಬ್ರೇಕ್ ಇಲ್ಲದ ಸೈಕಲ್ ತಾನಾಗಿ ಹೋಗುವ, ಪೇಡಲ್ ಸರಿ ಇಲ್ಲದ ಸೈಕಲ್ ಕೊಟ್ಟು ಅವರು ಪರದಾಡಿದ ಇವರ ಅನುಭವಗಳೆಲ್ಲವನ್ನು ಓದುಗರ ಮನ ಮುಟ್ಟುವಂತೆ ರಚಿಸಿದ್ದಾರೆ. ಮುಂದುವರೆದ ಭಾಗದಲ್ಲಿ ಇವರ ಬಾಲ್ಯದ ನೆನಪಿನಲ್ಲಿ ಇವರ ಸಂಸಾರದಲ್ಲಿ ಸಿಕ್ಕ ಮೂವರು ರಾಜೇಶ್ವರಿ ಅವರನ್ನು ನೆನಪಿಸಿಕೊಳ್ಳುವರು. ಈ ಮೂವರು ಇವರ ಬದುಕನ್ನು ರೂಪಿಸಲು ಬಂದವರೆಂದು ತಿಳಿಯುತ್ತದೆ. ಒಬ್ಬ ರಾಜೇಶ್ವರಿಯವರು ಇವರನ್ನು ಗಂಡುಬೀರಿ ಅಂತಿದ್ರಂತೆ. ಹಾಸ್ಯಾಸ್ಪದವಾಗಿ ತೆಗೆದುಕೊಂಡ ಆ ಮೂರು ಸುಂದರ ಮನಸ್ಸುಗಳನ್ನು ಸ್ಮರಿಸಿ ಸಂಬಂಧಗಳೆಂದರೆ ಅದೊಂದು ಅನುಭವ ಅನುಭಾವ.. ಅವರೊಟ್ಟಿಗೆ ಕಾಲ ಕಳೆಯುವುದು ನೆನಸಿಕೊಂಡರೆ ಇಂತಹ ಜನರ ಸಂಪರ್ಕವಿತ್ತು. ಪುಣ್ಯವಂತರು ಅನಿಸಿತು. ಸೈಕಲ್ ಕಲಿಯುವಾಗ ಬಿದ್ದ ಪ್ರಸಂಗದಲ್ಲಿ ಏಳದೆ ಬೀಳದೆ ಸೈಕಲ್ ಕಲಿಕೆ ಸಾಧ್ಯವೇ, ಬಿದ್ದಾಗ ಆ ಸಮಯದಲ್ಲಿ ನೋಡಿಕೊಂಡವರನ್ನು ವಿರೋಧಿಸಿದ ದಿನಗಳನ್ನು ನೆನಸಿಕೊಂಡರೂ ನಿಸ್ವಾರ್ಥ ಸೇವೆ

ಮರೆಯಲು ಸಾಧ್ಯವಿಲ್ಲ. ಅವರು ದೂರಾಗಿದ್ದರೂ ಇಂದಿಗೂ ರಾಜೇಶ್ವರಿ ಅವರುಗಳು ನೆನಪಿನಲ್ಲಿದ್ದಾರೆ. ಉತ್ತಮ ಲೇಖನ. ಧನ್ಯವಾದಗಳು.

ಸಾಹಿತ್ಯ ದಾಸೋಹದ 226ನೇ ಕಾರ್ಯಕ್ರಮದಲ್ಲಿ ನನಗೆ ಅಧ್ಯಕ್ಷತೆಯನ್ನು ವಹಿಸಲು ಅವಕಾಶ ನೀಡಿದ ವೇದಿಕೆಯ ಎಲ್ಲಾ ಹಿರಿಯ ಸದಸ್ಯರಿಗೂ ಹಾಗೂ ಸಂಚಾಲಕ ಸಮಿತಿಯ ಸದಸ್ಯರಿಗೂ ಧನ್ಯವಾದಗಳು. ಕಾರ್ಯಕ್ರಮದ ಆರಂಭದಲ್ಲಿ ಶ್ರೀ ರವೀಂದ್ರ ಸರ್ ಅವರಿಂದ ಪ್ರಾಸ್ತಾವಿಕ ನುಡಿ ಕೇಳಿ ಸಂತೋಷವಾಯಿತು. ನಾನು ನಿಮ್ಮೊಂದಿಗೆ ಸಾಹಿತ್ಯ ಸೇವೆಗೆ ಸದಾ ಇರುವೆ ಎಂದು ತಿಳಿಸಲು ಹರ್ಷಿಸುತ್ತೇನೆ..

***

ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ, 1ನೆಯ ಹಂತ, ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061

ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com

ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ –
ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com

ಸಾಹಿತ್ಯ ದಾಸೋಹ 226 ನಡೆದ ದಿನಾಂಕ: 08 ಜೂನ್ 2024
ಸಂಚಿಕೆಯ ಬಿಡುಗಡೆ ದಿನಾಂಕ: 14 ಜುಲೈ 2024 – ಭಾನುವಾರ

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ವೇದಿಕೆ

ಇದೀಗ ...

ನಮ್ಮದೇ ಜಾಲತಾಣ

ಅನಾವರಣಗೊಂಡಿದೆ

ನಮ್ಮ ಜಾಲತಾಣದಲ್ಲಿ (ವೆಬ್‌ಸೈಟ್) ವೀಕ್ಷಿಸಿ:

- ಸಾಹಿತ್ಯ ದಾಸೋಹದ ಎಲ್ಲಾ ಸಂಚಿಕೆಗಳು
- ಸಾಹಿತ್ಯ ದಾಸೋಹದ ಯುಟ್ಯೂಬ್ ಕೊಂಡಿಗಳು
- ವೇದಿಕೆಯ ಇತರ ಕಾರ್ಯಕ್ರಮಗಳ ಯುಟ್ಯೂಬ್ ಕೊಂಡಿಗಳು
- ಧ್ವನಿ ಕಡತಗಳು
- ಛಾಯಾಚಿತ್ರಗಳು
- ಆಲಿಸಿ – ನಮ್ಮ ಸದಸ್ಯರು ಬರೆದ ಕತೆಗಳು ಇತ್ಯಾದಿ,,, ಇತ್ಯಾದಿ...

ನಮ್ಮ ಜಾಲತಾಣ ಪ್ರವೇಶಿಸಲು ಈ ಕೊಂಡಿ ಬಳಸಿ: https://sahithyadasoha.com